# ಪ್ರಾರ್ಥನೆ

## ಪರಲೋಕವನ್ನು ಭೂಲೋಕಕ್ಕೆ ತರುವುದು

ಎ. ಎಲ್ ಮತ್ತು ಜಾಯ್ಸ್ ಗಿಲ್

# ಪ್ರಾರ್ಥನೆ

## ಪರಲೋಕವನ್ನು ಭೂಲೋಕಕ್ಕೆ ತರುವುದು

ಎ. ಎಲ್ ಮತ್ತು ಜಾಯ್ಸ್ ಗಿಲ್

www.gillministries.com

## ಈ ಸರಣಿಮಾಲೆಯ ಕೈಪಿಡಿಗಳು

**ಸಭೆಯ ವಿಜಯೋತ್ಸವ**

ಅಪೊಸ್ತಲರ ಕೃತ್ಯಗಳ ಪುಸ್ತಕದಾದ್ಯಂತ

**ಸ್ವಸ್ಥತೆಗೆ ದೇವರ ಒದಗಿಸುವಿಕೆ**

ದೇವರ ಗುಣಪಡಿಸುವ ಶಕ್ತಿಯನ್ನು ಹೊಂದಿಕೊಳ್ಳುವುದು ಮತ್ತು
ಅದರಿಂದ ಸೇವೆಯನ್ನು ಮಾಡುವುದು

**ಸೇವೆಯ ವರಗಳು**

ಅಪೊಸ್ತಲ, ಪ್ರವಾದಿ, ಸೌವಾರ್ತಿಕ, ಸಭಾಪಾಲಕ, ಬೋಧಕ

**ಅದ್ಭುತಕರವಾದ ಸುವಾರ್ತಾಬೋಧನೆ**

ಲೋಕವನ್ನು ತಲುಪುವ ದೇವರ ಯೋಜನೆ

**ನೂತನ ಸೃಷ್ಟಿಯ ಸ್ವರೂಪ**

ನೀವು ಕ್ರಿಸ್ತನಲ್ಲಿ ಯಾರೆಂದು ತಿಳಿದುಕೊಳ್ಳುವುದು

**ಜೀವನದ ಮಾದರಿಗಳು**

ಹಳೆಯ ಒಡಂಬಡಿಕೆಯಿಂದ

**ಸ್ತುತಿ ಮತ್ತು ಆರಾಧನೆ**

ದೇವರ ಆರಾಧಕರಾಗುವುದು

**ಪ್ರಾರ್ಥನೆ**

ಸ್ವರ್ಗವನ್ನು ಭೂಮಿಗೆ ತರುವುದು

**ಅತಿಮಾನುಷ ಜೀವನ**

ಪವಿತ್ರಾತ್ಮನ ವರಗಳ ಮೂಲಕ

## ಅಧ್ಯಯನದ ಮಾರ್ಗದರ್ಶಿಗಳು

***ಪ್ರಾರ್ಥನೆಯು ಯಶಸ್ವಿಯಾದ ಕ್ರೈಸ್ತ ಜೀವನಕ್ಕೆ ಒಂದು ಅದ್ಭುತವಾದ ಸೌಭಾಗ್ಯವೂ ಅತ್ಯವಶ್ಯವಾದ ಸಂಗತಿಯೂ ಆಗಿದೆ!*** ಆದರೂ, ನಾವು ವಿವಿಧ ಜನರೊಂದಿಗೆ ಮಾತನಾಡುತ್ತಾ, ಬೋಧನೆಯ ಟೇಪುಗಳನ್ನು ಆಲಿಸುತ್ತಾ, ಅಥವಾ ಪುಸ್ತಕದ ನಂತರ ಪುಸ್ತಕವನ್ನು ಓದುವಾಗ, ಪ್ರತಿಯೊಬ್ಬ ವ್ಯಕ್ತಿಗೂ ವಿಭಿನ್ನವಾದ ತಿಳುವಳಿಕೆಯಿರುವಂತೆ ತೋರುತ್ತದೆ – ತಿಳುವಳಿಕೆ ಮಾತ್ರವಲ್ಲ ವಿಭಿನ್ನ ವ್ಯಾಖ್ಯಾನಗಳೂ ಸಹ ಇರುವಂತೆ ತೋರುತ್ತದೆ. ಒಬ್ಬ ವ್ಯಕ್ತಿಗೆ ಪ್ರಾರ್ಥನೆ ಎಂದರೆ ಮಧ್ಯಸ್ತಿಕೆ ಪ್ರಾರ್ಥನೆಯಾಗಿದೆ. ಇನ್ನೊಬ್ಬ ವ್ಯಕ್ತಿಗೆ ಅದು ಯುದ್ಧವಾಗಿದೆ. ಮೂರನೆಯವರಿಗೆ ಅದು ದೇವರೊಂದಿಗೆ ಮಾತನಾಡುವುದು ಮತ್ತು ಆತನ ಸ್ವರವನ್ನು ಕೇಳುವುದಾಗಿದೆ. ಇವೆಲ್ಲವೂ ಸಹ ಪ್ರಾರ್ಥನೆಯಾಗಿದೆ

***ಸತ್ಯವೇದದಲ್ಲಿರುವ ಪ್ರತಿಯೊಂದು ಸತ್ಯವು ಇನ್ನೊಂದು ಸತ್ಯದ ಮೇಲೆ ಕಟ್ಟಲ್ಪಟ್ಟಿದೆ*** – ಹಾಗಾಗಿ ಪೂರ್ಣ ಸತ್ಯವು ಬೇಕಾದಲ್ಲಿ ಎಲ್ಲಾ ಸತ್ಯವೂ ಮುಖ್ಯವಾಗುತ್ತದೆ. ದಾವೀದನು ಹೀಗೆ ಬರೆದನು: ನಿನ್ನ ವಾಕ್ಯದ ಸಾರಾಂಶವು ಸತ್ಯವೇ (ಕೀರ್ತನೆ 119:160). ಅಪೋಸ್ತಲನಾದ ಪೌಲನು ಹೀಗೆ ಬರೆದನು: ಒಂದನ್ನೂ ಮರೆಮಾಡದೆ ದೇವರ ಸಂಕಲ್ಪವನ್ನೆಲ್ಲಾ ನಿಮಗೆ ತಿಳಿಸಿದೆನು (ಅ.ಕೃ. 20:27). ಆದರೂ ನಮ್ಮ ಕಲಿಕೆಯ ವಿಧಾನವು ಇನ್ನೂ ಸಣ್ಣ ಸಣ್ಣ ತುಣುಕುಗಳಲ್ಲಿವೆ.

ನಾವು ಈ ವಾಸ್ತವದೊಂದಿಗೆ ಹೆಚ್ಚು ಹೋರಾಡಿರುವುದು ಈ ಅಧ್ಯಯನದಲ್ಲಿಯೇ. ಪ್ರತಿಯೊಂದು ಪಾಠವೂ ಇಡೀ ಪಾಠದ ಒಂದು ಭಾಗವಾಗಿದೆ. ನಾವು ಕೇವಲ ಒಂದು ಭಾಗವನ್ನು ಮಾತ್ರ ಅಧ್ಯಯನ ಮಾಡಿ ನಿಜವಾದ ಪ್ರಾರ್ಥನೆ ಅಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಪ್ರಾರ್ಥನೆ ಎಂದರೆ ಕೇವಲ ಮಧ್ಯಸ್ತಿಕೆ ಪ್ರಾರ್ಥನೆ ಮಾತ್ರವಲ್ಲ. ಪ್ರಾರ್ಥನೆ ಎಂದರೆ ಕೇವಲ ದೇವರು ಹೇಳುವುದನ್ನು ಕೇಳಿಸಿಕೊಳ್ಳುವುದು ಮಾತ್ರವಲ್ಲ. ಪ್ರಾರ್ಥನೆ ಎಂದರೆ ಕೇವಲ ದೇವರ ಚಿತ್ತವನ್ನು ಘೋಷಿಸುವುದು ಮಾತ್ರವಲ್ಲ. ಪ್ರಾರ್ಥನೆ ಎಂದರೆ ಬೇಡಿಕೊಳ್ಳುವುದು ಮಾತ್ರವಲ್ಲ. ಪ್ರಾರ್ಥನೆಯು ಇವೆಲ್ಲವನ್ನೂ ಒಳಗೊಂಡಿದೆ.

ನಾವು ನಮ್ಮ ಜೀವನವನ್ನು ಅಥವಾ ಸಿದ್ಧಾಂತಗಳನ್ನು ನಮಗೆ ಇಷ್ಟವಾಗುವ ಸತ್ಯಗಳ ಮೇಲೆ ಆಧಾರಿಸಿ ಉಳಿದ ಸತ್ಯಗಳನ್ನು ನಿರ್ಲಕ್ಷಿಸಲು ಆಗುವದಿಲ್ಲ. ಉದಾಹರಣೆಗೆ, ನಾವು ದೇವರ ಮಕ್ಕಳು ಮತ್ತು ನಾವು ಏನನ್ನಾದರೂ ಬೇಡಿಕೊಂಡರೆ ಅದನ್ನು ಹೊಂದಿಕೊಳ್ಳುತ್ತೇವೆ ಎಂದು ಯೇಸು ಹೇಳಿದರು. ಆದರೆ, ಒಂದು ವೇಳೆ ನಾವು ಪಾಪದಲ್ಲಿ ಜೀವಿಸುತ್ತಿದ್ದರೆ ನಮ್ಮ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ ಎಂದೂ ಸಹ ಯೇಸು ಹೇಳಿದ್ದಾರೆ. ಒಂದು ಸತ್ಯವು ಇನ್ನೊಂದು ಸತ್ಯಕ್ಕೆ ನೇರವಾದ ಸಂಬಂಧವನ್ನು ಹೊಂದಿದೆ. ಪ್ರಾರ್ಥನೆಯ ಬಗ್ಗೆ ಅಧ್ಯಯನ ಮಾಡುವಾಗ, ನಾವು ಕೇವಲ ಆಶೀರ್ವಾದಗಳನ್ನು ಮಾತ್ರ ನೋಡಲು ಸಾಧ್ಯವಿಲ್ಲ. ನಮ್ಮಿಂದ ಏನನ್ನು ಅಪೇಕ್ಷಿಸಲಾಗಿದೆ ಮತ್ತು ನಮ್ಮ ಜವಾಬ್ದಾರಿಗಳೇನು ಎಂಬುದನ್ನೂ ಸಹ ನಾವು ನೋಡಬೇಕಾಗುತ್ತದೆ. ನಾವು ದೇವರ ಪೂರ್ಣ ಉಪದೇಶವನ್ನು ನಮಗೆ ಸಾಧ್ಯವಾಗುವ ಮಟ್ಟಿಗೆ ಅಧ್ಯಯನ ಮಾಡಬೇಕು.

***ವರ್ಷಾನುವರ್ಷ ಈ ಅಧ್ಯಯನವನ್ನು ಒಟ್ಟಿಗೆ ಸೇರಿಸಲು ನಾವು ಹಿಂದೇಟು ಹಾಕಿದ್ದೇವೆ, ಏಕೆಂದರೆ, ಆವಾಗಲೂ ಈಗಲೂ ಮತ್ತು ಯಾವಾಗಲೂ ಕಲಿಯುವುದು ಇನ್ನೂ ಬಹಳಷ್ಟಿದೆ.*** ನಾವು ಅನೇಕ ವರ್ಷಗಳಿಂದ ಬರೆದಿರುವ ಟಿಪ್ಪಣಿಗಳ ಪುಟಗಳಲ್ಲಿ ಆರಿಸಿ ತೆಗೆದು ಇದನ್ನು ರಚಿಸಿದ್ದೇವೆ, ಆದರೂ ಇದು ಕೇವಲ ಪ್ರಾರ್ಥನೆಯ ಒಂದು ಪರಿಚಯ ಮಾತ್ರ ಆಗಲು ಸಾಧ್ಯ ಎಂಬುದು ನಮಗೆ ಗೊತ್ತಿದೆ – ಒಂದು ಸಮಗ್ರ ದೃಷ್ಟಿಕೋನವಿದ್ದಂತೆ. ಪ್ರಾರ್ಥನೆಯ ಮಹಾಸತ್ಯಗಳ ಬಗ್ಗೆ ಅನೇಕ ಸುಧೀರ್ಘ ಪುಸ್ತಕಗಳು ಬರೆಯಲಾಗಿವೆ ಆದರೆ ಜಾಗ ಹಿಡಿಸಲಾರದ ಕಾರಣದಿಂದ ನಾವು ಒಂದು ಅಥವಾ ಎರಡು ಪರಿಚ್ಛೇಧಗಳಲ್ಲಿ ಅದನ್ನು ತುಂಬಿದ್ದೇವೆ. ಈ ಅಧ್ಯಯನದುದ್ದಕ್ಕೂ ದೇವರು ನಿಮ್ಮನ್ನು ಮುನ್ನಡೆಸಲಿ ಮತ್ತು ಅದಾದ ನಂತರ ಜೀವನದುದ್ದಕ್ಕೂ ಪ್ರಾರ್ಥನೆಯನ್ನು ಅಧ್ಯಯನ ಮಾಡುವಂತೆ ಹಾಗೂ ಅನುಭವಿಸುವಂತೆ ನಿಮ್ಮನ್ನು ನಡೆಸಲಿ ಎಂಬುದು ನಮ್ಮ ಪ್ರಾರ್ಥನೆಯಾಗಿದೆ.

***ನಾವು ಯಾಕೆ ಸತ್ಯವೇದ ವಚನಗಳನ್ನು ನಮ್ಮ ಪಠ್ಯದಲ್ಲಿ ಸೇರಿಸುತ್ತೇವೆ ಎಂದು ಜನರು ಕೇಳುತ್ತಾರೆ*** - ನಾವು ಉಲ್ಲೇಖಗಳನ್ನು ಮಾತ್ರ ಬಳಸಿದರೆ ಇನ್ನೂ ಹೆಚ್ಚಿನ ಸಂಗತಿಗಳನ್ನು ಹೇಳಬಹುದಲ್ಲವೋ ಎಂಬುದಾಗಿ. ಹಲವಾರು ವರ್ಷಗಳಿಂದ ನೂರಾರು ಸತ್ಯವೇದ ವಿದ್ಯಾರ್ಥಿಗಳನ್ನು ಪ್ರಶ್ನಿಸಿದಾಗೆಲ್ಲಾ ನಮಗೆ ಕಂಡುಬಂದಿರುವ ಅಂಶವೇನೆಂದರೆ, ಅವರು ಪುಸ್ತಕವನ್ನು ಅಧ್ಯಯನ ಮಾಡುತ್ತಿರುವಾಗ ಅದರಲ್ಲಿ ನೀಡಲಾದ ವಚನಗಳ ಉಲ್ಲೇಖಗಳನ್ನು ಸತ್ಯವೇದದಲ್ಲಿ ತೆಗೆದು ನೋಡಿರುವುದು ಬಹಳ ವಿರಳ. ನಮ್ಮ ವಾಕ್ಯಗಳಾಗಲಿ ಅಥವಾ ಯಾವುದೇ ಲೇಖಕರ ವಾಕ್ಯಗಳಾಗಲಿ ಜೀವವುಳ್ಳದ್ದಾಗಿಲ್ಲ ಎಂಬುದು ನಮಗೆ ತಿಳಿದಿದೆ. ದೇವರು ಹೇಳಿರುವಂತಹ ಸಂಗತಿಗಳಿಗೆ ನಮ್ಮ ವಾಕ್ಯಗಳು ಕೇವಲ ಮುನ್ನುಡಿಯಷ್ಟೇ ಆಗಲು ಸಾಧ್ಯ. ದೇವರು ತನ್ನ ವಾಕ್ಯವು ಎಂದಿಗೂ ವ್ಯರ್ಥವಾಗಿ ಹಿಂದಿರುಗುವದಿಲ್ಲವೆಂದೂ ಮತ್ತು ತಾನು ಎಚ್ಚರವಾಗಿದ್ದು ತನ್ನ ವಾಕ್ಯವನ್ನು ನೆರವೇರಿಸಲು ಸಕ್ರಿಯನಾಗಿ ನೋಡುತ್ತಿದ್ದಾನೆಂದೂ ನಮಗೆ ವಾಗ್ದಾನ ಮಾಡಿದ್ದಾನೆ.

**ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ**
**ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ.**
**(ಯೆಶಾಯ 55:11)**
**ಆಗ ಯೆಹೋವನು ನನಗೆ - ಸರಿಯಾಗಿ ನೋಡಿದ್ದೀ, ನನ್ನ ಮಾತನ್ನು ನೆರವೇರಿಸುವದಕ್ಕೆ ಎಚ್ಚರಗೊಂಡಿದ್ದೇನೆ ಎಂದು**
**ತಿಳಿದುಕೋ ಎಂಬದಾಗಿ ಹೇಳಿದನು .(ಯೆರೆಮಿಯ 1:12)**
**ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು,**
**ನಿನ್ನ ನುಡಿಗಳು ನನಗೆ ಹರ್ಷವೂ ಹೃದಯಾನಂದವೂ ಆದವು.**
**(ಯೆರೆಮಿಯ 15:16)**



## ಲ◌ೇಖಕರ ಬಗ್ಗೆ

ಎ.ಎಲ್. ಮತ್ತು ಜಾಯ್ಸ್ ಗಿಲ್ ರವರು ಅಂತರರಾಷ್ಟ್ರೀಯ ಭಾಷಣಕಾರರು, ಲೇಖಕರು ಮತ್ತು ಸತ್ಯವೇದ ಬೋಧಕರು. ಎ.ಎಲ್ ರವರ ಅಪೊಸ್ತೊಲಿಕ ಸೇವೆಯ ಪ್ರಯಾಣಗಳು ಅವರನ್ನು ವಿಶ್ವದ ಅರವತ್ತಕ್ಕೂ ಹೆಚ್ಚು ರಾಷ್ಟ್ರಗಳಿಗೆ ಕರೆದೊಯ್ದಿವೆ, ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಮೂಹಕ್ಕೆ ನೇರವಾಗಿ ಮತ್ತು ಅನೇಕ ಲಕ್ಷ ಜನರಿಗೆ ರೇಡಿಯೊ ಮತ್ತು ದೂರದರ್ಶನದ ಮೂಲಕ ಬೋಧಿಸುತ್ತಿದ್ದಾರೆ.

ಅವರ ಅತಿ ಹೆಚ್ಚು ಮಾರಾಟವಾಗುತ್ತಿರುವ ಪುಸ್ತಕಗಳು ಮತ್ತು ಕೈಪಿಡಿಗಳು ಏಳು ದಶಲಕ್ಷಕ್ಕೂ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಅವರ ಬರಹಗಳನ್ನು ಅನೇಕ ಭಾಷೆಗಳಿಗೆ ಅನುವಾದಿಸಲಾಗಿದೆ, ವಿಶ್ವದಾದ್ಯಂತ ಸತ್ಯವೇದ ಅಧ್ಯಯನದ ಶಾಲೆಗಳಲ್ಲಿ ಮತ್ತು ಸೆಮಿನಾರ್‌ಗಳಲ್ಲಿ ಅವುಗಳನ್ನು ಬಳಸಲಾಗುತ್ತಿದೆ.

ಜೀವನವನ್ನು ಬದಲಾಯಿಸುವ ಶಕ್ತಿಯುತವಾದ ದೇವರ ವಾಕ್ಯದ ಸತ್ಯಗಳು ಅವರ ಕ್ರಿಯಾಶಕ್ತವಾದ ಉಪದೇಶ, ಬೋಧನೆ, ದೂರದರ್ಶನದ ಪ್ರಸರಣ, ಬರವಣಿಗೆ, ವಿಡಿಯೋ ಮತ್ತು ಆಡಿಯೊ ಸುರುಳಿಗಳ ಸೇವೆಯ ಮೂಲಕ ಇತರರ ಜೀವನದಲ್ಲಿ ಒಳವ್ಯಾಪಿಸಿವೆ.

ದೇವರ ಪ್ರಸನ್ನತೆಯ ಅದ್ಭುತ ಮಹಿಮೆಯನ್ನು ಅವರ ಉಜ್ಜೀವನದಲ್ಲಿ, ಸ್ತುತಿ ಆರಾಧನೆಯಲ್ಲಿ ಮತ್ತು ಸೆಮಿನಾರ್‌ಗಳಲ್ಲಿ ಅನುಭವಿಸಿದ್ದಾರೆ, ವಿಶ್ವಾಸಿಗಳಾಗಿ ದೇವರ ನಿಜವಾದ ಮತ್ತು ನಿಕಟವಾದ ಆರಾಧಕರಾಗುವುದು ಹೇಗೆ ಎಂದು ಕಂಡುಕೊಂಡಿದ್ದಾರೆ. ವಿಶ್ವಾಸಿಗಳ ಅಧಿಕಾರ ಎಂಬ ಅವರ ಬೋಧನೆಗಳ ಮೂಲಕ ಜಯ ಮತ್ತು ಧೈರ್ಯದ ಕುರಿತಾದ ಹೊಸ ಮತ್ತು ಉತ್ತೇಜಕ ಆಯಾಮವನ್ನು ಅನೇಕರು ಕಂಡುಕೊಂಡಿದ್ದಾರೆ.

ದೇವರ ಗುಣಪಡಿಸುವ ಶಕ್ತಿಯು ಅವರ ಕೈಯಿಂದ ಹರಿಯುವಂತಹ ದೇವರು ಕೊಟ್ಟ ಅಸಾಧಾರಣವಾದ ಸೇವೆಗೆ ಕಾಲಿಡಲು ಗಿಲ್ಸ್ ರವರು ಅನೇಕ ವಿಶ್ವಾಸಿಗಳಿಗೆ ತರಬೇತಿ ನೀಡಿದ್ದಾರೆ. ಅನೇಕರು ತಮ್ಮ ದೈನಂದಿನ ಜೀವನದಲ್ಲಿ ಮತ್ತು ಸೇವೆಗಳಲ್ಲಿ ಪವಿತ್ರಾತ್ಮನ ಎಲ್ಲಾ ಒಂಬತ್ತು ವರಗಳಲ್ಲಿ ಕಾರ್ಯನಿರ್ವಹಿಸಲು ಮುಕ್ತರಾಗುವುದರಿಂದ ಅಸಾಧಾರಣವಾಗಿ ಸ್ವಾಭಾವಿಕರಾಗಿರಲು ಕಲಿತಿದ್ದಾರೆ.

ಎ.ಎಲ್. ಮತ್ತು ಜಾಯ್ಸ್ ಇಬ್ಬರೂ ಮಾಸ್ಟರ್ ಆಫ್ ಥಿಯೊಲಾಜಿಕಲ್ ಅಧ್ಯಯನಗಳಲ್ಲಿ ಪದವಿಗಳನ್ನು ಹೊಂದಿದ್ದಾರೆ. ಎ.ಎಲ್. ವಿಷನ್ ಕ್ರಿಶ್ಚಿಯನ್ ವಿಶ್ವವಿದ್ಯಾಲಯದಿಂದ ಥಿಯೊಲಾಜಿ ಪದವಿಯಲ್ಲಿ ಡಾಕ್ಟರ್ ಆಫ್ ಫಿಲಾಸಫಿ ಪದವಿಯನ್ನು ಗಳಿಸಿದ್ದಾರೆ. ಅವರ ಸೇವೆಯು ದೇವರ ವಾಕ್ಯದಲ್ಲಿ ದೃಢವಾಗಿ ಆಧರಿಸಿದೆ, ಯೇಸುವಿನ ಮೇಲೆ ಕೇಂದ್ರೀಕೃತವಾಗಿದೆ, ಪವಿತ್ರಾತ್ಮನ ಶಕ್ತಿಯ ಕುರಿತಾದ ನಂಬಿಕೆಯಲ್ಲಿ ಮತ್ತು ಪವಿತ್ರಾತ್ಮನಲ್ಲಿದ್ದುಕೊಂಡು ಕಲಿಸುವುದರಲ್ಲಿ ಬಲವಾಗಿದೆ.

ಅವರ ಸೇವೆಯು ತಂದೆಯ ಪ್ರೀತಿಯ ಹೃದಯದ ಪ್ರದರ್ಶನವಾಗಿದೆ. ದೇವರ ಶಕ್ತಿಯ ಅಡಿಯಲ್ಲಿ ಶಕ್ತಿಯುತ ಅಭಿಷೇಕ, ಸೂಚಕಕಾರ್ಯಗಳು, ಅದ್ಭುತಗಳು ಮತ್ತು ಗುಣಪಡಿಸುವ ಅದ್ಭುತಗಳು ಅವರ ಉಪದೇಶ ಮತ್ತು ಬೋಧನೆಯೊಂದಿಗೆ ಉಂಟಾಗುತ್ತವೆ.

ಕರ್ತನ ಮುಂದೆ ಅಳುವುದು ಮತ್ತು ದೇವರ ಮಹಿಮೆ ಮತ್ತು ಶಕ್ತಿಯ ಅದ್ಭುತಕರವಾದ ಪ್ರದರ್ಶನಗಳು ಸೇರಿದಂತೆ ಉಜ್ಜೀವನದ ಗುರುತುಗಳು ಅವರ ಸಭೆಗಳಲ್ಲಿ ಪಾಲ್ಗೊಳ್ಳುವ ಅನೇಕರು ಅನುಭವಿಸುತ್ತಿದ್ದಾರೆ.

# ವಿಷಯಾನುಕ್ರಮಣಿಕೆ


ಪಾಠ ಒಂದು

ಪ್ರಾರ್ಥನೆ ಎಂದರೇನು? 8

ಪಾಠ ಎರಡು

ಮೂಲಭೂತ ವಿಷಯಗಳನ್ನು ಅರ್ಥಮಾಡಿಕೊಳ್ಳುವುದು 22

ಪಾಠ ಮೂರು

ಯೇಸು ಪ್ರಾರ್ಥಿಸಿದನು 38

ಪಾಠ ನಾಲ್ಕು

ಕರ್ತನೇ ಪ್ರಾರ್ಥನೆ ಮಾಡುವುದನ್ನು ನಮಗೆ ಕಲಿಸು 51

ಪಾಠ ಐದು

ಪ್ರಾರ್ಥನೆಯು ಫಲವನ್ನು ಕೊಡುತ್ತದೆ 67

ಪಾಠ ಆರು

ಒಂದು ಯಶಸ್ವಿಯಾದ ಪ್ರಾರ್ಥನಾ ಜೀವಿತವನ್ನು ಪ್ರವೇಶಿಸುವುದು 87

ಪಾಠ ಏಳು

ನಂಬಿಕೆಯ ಧ್ವನಿ 107

ಪಾಠ ಎಂಟು

ಅಧಿಕಾರದಿಂದ ಪ್ರಾರ್ಥಿಸುವುದು 128

ಪಾಠ ಒಂಬತ್ತು

ದೇವರ ಆಳವಾದ ಬಯಕೆ 144

ಪಾಠ ಹತ್ತು

"ನೀವು ನನ್ನಲ್ಲಿ ನೆಲೆಗೊಳ್ಳುವುದಾದರೆ" 159

*ಪಾಠ ಒಂದು*

# ಪ್ರಾರ್ಥನೆ ಎಂದರೇನು?

## ಪೀಠಿಕೆ

### ಅತ್ಯಂತ ಶಕ್ತಿಯುಳ್ಳ ಬಲ

ನಿಜವಾದ ಪ್ರಾರ್ಥನೆಯು ಇಂದು ಜಗತ್ತಿನ ಅತ್ಯಂತ ಶಕ್ತಿಯುಳ್ಳ ಬಲವಾಗಿದೆ. ನಿಜವಾದ ಪ್ರಾರ್ಥನೆಯು ನಮ್ಮ ಸರ್ವಶಕ್ತನಾದ ದೇವರ ಬಲವನ್ನು ಕಾರ್ಯಪ್ರವವಾಗಿಸುತ್ತದೆ. ಆದಾಗ್ಯೂ, ವಿಷಾದಕರವಾಗಿ ನಮ್ಮ ಪೀಳಿಗೆಯಲ್ಲಿ ನಿಜವಾದ ಪ್ರಾರ್ಥನೆಯ ಕೊರತೆ ಇದೆ.

ಬಹುತೇಕ ಕ್ರೈಸ್ತರಿಗೆ ದೇವರ ವಾಕ್ಯದಿಂದ ಹೇಗೆ ಪ್ರಾರ್ಥಿಸಬೇಕೆಂಬುದನ್ನು ಕಲಿಸಲಾಗಿಲ್ಲ, ಆದರೆ, ಅವರು ಇತರೆ ತಪ್ಪಾದ ಉದಾಹರಣೆಗಳನ್ನು ಕೇಳಿಸಿಕೊಳ್ಳುವುದರ ಮೂಲಕ ಅಥವಾ ಅನುಭವಿಸುವದರ ಮೂಲಕ ಕಲಿತಿದ್ದಾರೆ.

ನಮ್ಮ ಸಂಪ್ರದಾಯದ ಚರ್ಚ್-ನಲ್ಲಿ ನಿತ್ಯವೂ ಬುಧವಾರ ದಿನದ ರಾತ್ರಿ ಪ್ರಾರ್ಥನಾ ಕೂಟಗಳು ನಡೆಯುತಿದ್ದವು. ನಾವು ವೃತ್ತಾಕಾರವಾಗಿ ಕುಳಿತುಕೊಳ್ಳುತ್ತಿದ್ದೆವು ಮತ್ತು ಪ್ರತಿಯೊಬ್ಬರೂ ಅವರ ಸಮಸ್ಯೆಗಳನ್ನು ಹಾಗೂ ಅವರ ಕುಟುಂಬ ಮತ್ತು ಸ್ನೇಹಿತರ ಸಮಸ್ಯೆಗಳನ್ನು ಹಂಚಿಕೊಳ್ಳುತ್ತಿದ್ದರು. ನಂತರ ಅವರು ನಮ್ಮ ಪ್ರಾರ್ಥನೆಯ ಫಲವಾಗಿ ಇಂತಿತದ್ದನ್ನು ಹೊಂದಿಕೊಳ್ಳಬೇಕೆಂದು ತಿಳಿಸುತ್ತಿದ್ದರು. ನಾವು ಪ್ರಾರ್ಥನೆಗಾಗಿ ತಲೆ ಬಾಗಿದಾಗ, ನಮ್ಮ ದೊಡ್ಡ ಚಿಂತೆಯು ನಾವು ಯಾವುದೋ ಕೆಲವು ಸಮಸ್ಯೆಗಳನ್ನು ದೇವರಿಗೆ ಹೇಳಲು ಮರೆತುಬಿಟ್ಟಿದ್ದೇವೆ ಎಂಬದಾಗಿತ್ತು. ಮುಂದಿನ ವಾರವೂ ಅದೇ ಸಮಸ್ಯೆಗಳನ್ನು ಮತ್ತು ದೇವರಿಂದ ಬಯಸಿದ ಅದೇ ಉತ್ತರಗಳನ್ನು ನಾವು ಕೇಳುತ್ತಿದ್ದೆವು. ನಾವು ಹದಿಹರೆಯದ ಮಕ್ಕಳ ಅಶಿಸ್ತಿನ ಬಗ್ಗೆ ಅವರು ದೊಡ್ಡವರಾಗುವವರೆಗೂ ಮಾತಾಡಿದೆವು. ನಾವು ಹಿಲ್ಡಾ ಆಂಟಿಯ ಕ್ಯಾನ್ಸರ್-ನ ಬಗ್ಗೆ ಆಕೆ ಮರಣ ಹೊಂದುವವರೆಗೂ ಮಾತಾಡಿದೆವು.

ವಾರದ ನಂತರ ವಾರ ಕಳೆದರೂ ಸಭೆಯ ಪ್ರಕಟನೆಯಲ್ಲಿ ತಿಳಿಸಲಾದ ಪ್ರಾರ್ಥನಾ ಬೇಡಿಕೆಗಳು ಮಾತ್ರ ಹಾಗೆಯೇ ಇರುತ್ತಿದ್ದವು. ನಮ್ಮ ಪ್ರಾರ್ಥನೆಗಳಿಗೆ ಬಹುತೇಕವಾಗಿ ಯಾವ ಉತ್ತರಗಳೂ ದೊರಕಲಿಲ್ಲ ಮತ್ತು ಅನೇಕ ವರ್ಷಗಳ ನಂತರ ಪ್ರಾರ್ಥನಾ ಕೂಟಗಳಿಗೆ ಹೋಗುವುದನ್ನೂ ನಿಲ್ಲಿಸಿಬಿಟ್ಟೆವು. ಅವು ನಿರಾಸಕ್ತಿ ತರುವಂತಹ ರೀತಿಯಲ್ಲಿದ್ದವು, ಕೇವಲ ಎಲ್ಲರ ಜೀವನದಲ್ಲಿದ್ದ ಸಮಸ್ಯೆಗಳ ಬಗ್ಗೆ ಮಾತ್ರವೇ ಚಿಂತಿಸುತ್ತಿದ್ದರಿಂದ ನಕಾರಾತ್ಮಕವಾದ ವಾತಾವರಣವಿತ್ತು. ಹೇಗಿದ್ದರೂ ನಮ್ಮ ಪ್ರಾರ್ಥನೆಯಿಂದ ಏನೂ ನಡೆಯುತ್ತಿರಲಿಲ್ಲ.

ಈ ಅಧ್ಯಯನದ ಮೂಲಕ ನಮ್ಮ ಗುರಿಯೇನೆಂದರೆ ಪ್ರಾರ್ಥನೆಯ ಬಗ್ಗೆ ಒಂದು ಹೊಸದಾದ ಮತ್ತು ನೂತನವಾದ ನೋಟವನ್ನು ಹರಿಸುವುದಾಗಿದೆ. ಸತ್ಯವೇದದಿಂದ ಅನೇಕ ಉದಾಹರಣೆಗಳ ಮೂಲಕ ನಾವು ಪ್ರಾರ್ಥನೆ ಎಂದರೇನು ಮತ್ತು ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ಕಲಿತುಕೊಳ್ಳೋಣ.

**ತುಕ್ಕುಹಿಡಿದ ಮೊಳೆಗಳು**

ಅನೇಕ ವರ್ಷಗಳ ಹಿಂದೆ ನಾವು ನಮ್ಮ ಅಡುಗೆಮನೆಯನ್ನು ನವೀಕರಿಸಿದೆವು. ನಾವು ಮೊದಲು ಹಳೆಯ ಕ್ಯಾಬಿನೆಟ್-ಗಳನ್ನು ಮತ್ತು ಕೌಂಟರ್-ಗಳನ್ನು ಕಿತ್ತು ತೆಗೆಯಬೇಕಾಯಿತು. ಅದು ಮಾತ್ರವಲ್ಲದೆ ಕೆಲವು ಹಳೆಯ ಗೋಡೆಗಳನ್ನು, ಚಾವಣಿಯನ್ನು ಮತ್ತು ನೆಲವನ್ನೂ ಕಿತ್ತು ತೆಗೆಯಬೇಕಾಯಿತು. ಕಟ್ಟಿಗೆಯು ಹಳೆಯದಾದಂತೆ ಬಹಳ ಗಟ್ಟಿಯಾಗುತ್ತದೆ ಮತ್ತು ಅದಕ್ಕೆ ಹೊಡೆಯಲಾಗಿದ್ದ ಕೆಲವು ಮೊಳೆಗಳು ಮೂರರಿಂದ ನಾಲ್ಕು ಇಂಚಿನಷ್ಟು ಉದ್ದವಿದ್ದವು. ಅವುಗಳನ್ನು ಹೊರಗೆ ಎಳೆದು ತೆಗೆಯಲು ಒಂದು ದೊಡ್ಡ ಕ್ರೌಬಾರ್ ಬೇಕಾಯಿತು. ಕೆಲವೊಂದು ಮೊಳೆಗಳನ್ನು ಹೊರತೆಗೆಯುವಾಗ ಅವುಗಳು ಪ್ರತಿಭಟನೆ ಮಾಡುವ ರೀತಿಯಲ್ಲಿ ಕಿರುಚುವ ಶಬ್ದವನ್ನು ಮಾಡಿದವು.

ಈ ನವೀಕರಣವನ್ನು ಮುಗಿಸಿ ವಾರಗಳು ಕಳೆದ ನಂತರ ಒಂದು ಆರಾಧನೆಯ ಪ್ರಾರಂಭದಲ್ಲಿ ದೇವರಿಗೆ ಸ್ತುತಿಮಾಡುತ್ತಿರುವಾಗ ನನ್ನ ಆತ್ಮದಲ್ಲಿ ಒಂದು ಉದ್ದವಾದ ತುಕ್ಕು ಹಿಡಿದ ಮೊಳೆಯು ಹೊರತೆಗೆಯಲ್ಪಡುವುದನ್ನು ನಾನು ನೋಡಿದೆನು. ಆಗ ಅದೇ ರೀತಿಯ ಕಿರುಚುವ ಶಬ್ದವು ಮತ್ತೊಮ್ಮೆ ಕೇಳಿಸಿತು. ಆಗ ನಾನು "ಇದೇನಿದು ಕರ್ತನೇ?" ಎಂದು ಕೇಳಿದೆ.

"ಇವುಗಳು ಅನೇಕ ವರ್ಷಗಳಿಂದ ನಿನಗೆ ತಪ್ಪಾಗಿ ಬೋಧಿಸಲ್ಪಟ್ಟಿರುವ ಸಂಗತಿಗಳು. ಇವುಗಳನ್ನು ಹೊರತೆಗೆಯುವುದು ಬಹಳ ಕಷ್ಟ ಆದರೂ ಇವುಗಳನ್ನು ಹೊರಗೆ ಎಳೆದು ತೆಗೆಯಲೇಬೇಕು!" ಎಂದು ಕರ್ತನು ನನಗೆ ಹೇಳಿದರು.

ಪಾರ್ಥನೆಯ ಬಗ್ಗೆ ನಮಗಿರುವ ಆಲೋಚನೆಯಲ್ಲಿ ಕೆಲವು "ತುಕ್ಕು ಹಿಡಿದಿರುವ ಮೊಳೆಗಳನ್ನು" ನಾವು ಈಗ ಪರಿಶೀಲಿಸೋಣ.

**ಪ್ರಾರ್ಥನೆಯೆಂದರೆ ಇವುಗಳಲ್ಲ:**

✶ **"ಮನಸ್ಸಿಲ್ಲದ" ದೇವರನ್ನು ನಮ್ಮ ಪರವಾಗಿ ಕಾರ್ಯಮಾಡುವಂತೆ ಭಿಕ್ಷೆ ಬೇಡುವುದು**

ಅನೇಕರ ಪ್ರಾರ್ಥನೆಗಳನ್ನು ಗಮನಿಸುವಾಗ ಜನರು "ಮನಸ್ಸಿಲ್ಲದ" ದೇವರನ್ನು ನಮ್ಮ ಪರವಾಗಿ ಕಾರ್ಯಮಾಡಲು ಭಿಕ್ಷೆ ಬೇಡುವಂತೆ ಕೇಳುತ್ತದೆ. ದೇವರು ಕಾರ್ಯ ಮಾಡಲು ಶಕ್ತನು ಎಂಬುದು ಅವರಿಗೆ ಗೊತ್ತಿದೆ, ಆದರೆ ತಾವು ಅಯೋಗ್ಯರಾದ್ದರಿಂದ ದೇವರು ಅವರಿಗಾಗಿ ಕಾರ್ಯ ಮಾಡಲು ಬಯಸುವದಿಲ್ಲ ಎಂದು ಸಂಶಯಪಡುತ್ತಾರೆ.

✶ **ನಮ್ಮ ಸಮಸ್ಯೆಗಳನ್ನು ದೇವರಿಗೆ ಹೇಳುವುದು**

ದೇವರಿಗೆ ತಮ್ಮ ಸಮಸ್ಯೆಗಳು ಗೊತ್ತೇ ಇಲ್ಲವೋ ಎನ್ನುವಂತೆ - ಜನರು ದೇವರಿಗೆ ತಮ್ಮ ಸಮಸ್ಯೆಗಳನ್ನು ಹೇಳುವುದನ್ನು ನಾವು ಕೇಳಿಸಿಕೊಳ್ಳುತ್ತೇವೆ, ನಂತರ ದೇವರು ಅವರಿಗಾಗಿ ಏನು ಮಾಡಬೇಕೆಂಬುದನ್ನು ದೇವರಿಗೆ ಹೇಳುತ್ತಾರೆ. ಅದು ದೇವರು ಏನೇನು ಮಾಡಬೇಕೆಂಬ ನೀಲಿನಕ್ಷೆಯನ್ನು ಆತನಿಗೆ ಕೊಟ್ಟು ಅದರಂತೆಯೇ ಆತನು ಮಾಡಬೇಕೆಂದು ನಿರೀಕ್ಷಿಸುವ ಹಾಗೆ ತೋರುತ್ತದೆ.

ನಾವು ನಮ್ಮ ಸಮಸ್ಯೆಗಳ ಬಗ್ಗೆ ನಿರಂತರವಾಗಿ ಪ್ರಾರ್ಥಿಸಿದರೆ ಅವುಗಳು ನಮ್ಮ ಮನಸ್ಸಿನಲ್ಲಿ ಇನ್ನೂ ದೊಡ್ಡದಾಗುತ್ತಾ ಹೋಗುತ್ತವೆ.

✶ **ನಾವು ಎಷ್ಟು ಯೋಗ್ಯರು ಎಂಬುದನ್ನು ದೇವರಿಗೆ ಮನವರಿಕೆ ಮಾಡಿಸುವುದು**

ಅನೇಕರು ಒಬ್ಬ ವ್ಯಕ್ತಿಯು ಎಷ್ಟು ಯೋಗ್ಯನು ಎಂಬುದನ್ನು ದೇವರಿಗೆ ಮನವರಿಕೆ ಮಾಡಿಸಲು ಪ್ರಯತ್ನಿಸುತ್ತಾರೆ. “ದೇವರೇ, ಮೇರಿ ನಿನ್ನನ್ನು ಯಾವಾಗಲೂ ಪ್ರೀತಿಸಿದ್ದಾಳೆ ಕರ್ತನೇ. ಅವಳು ಇಪ್ಪತ್ತು ವರ್ಷದಿಂದ ಸಂಡೇ ಸ್ಕೂಲ್-ನಲ್ಲಿ ಮಕ್ಕಳಿಗೆ ದೇವರ ವಾಕ್ಯವನ್ನು ಬೋಧಿಸಿದ್ದಾಳೆ. ಅವಳು ಒಬ್ಬ ಒಳ್ಳೆಯ ಹೆಂಡತಿಯಾಗಿಯೂ ತಾಯಿಯಾಗಿಯೂ ಜೀವಿಸಿದ್ದಾಳೆ. ನಮಗೆ ಅವಳ ಅವಶ್ಯವಿದೆ ಕರ್ತನೇ, ದಯವಿಟ್ಟು ಅವಳಿಗೆ ..." ಹೀಗೆ ಮಾಡುವಾಗ ನಮ್ಮ ಪ್ರಾರ್ಥನೆಯನ್ನು ಹಾಗೂ ನಂಬಿಕೆಯನ್ನು ಒಬ್ಬ ವ್ಯಕ್ತಿಯ ಒಳ್ಳೆತನದ ಮೇಲೆ ಆಧಾರಿಸಿದಂತಾಗುತ್ತದೆ.

✶ **ದೇವರೊಂದಿಗೆ ನಾವು ಹೊಂದಿರುವ ಸಂಬಂಧದ ಕುರಿತು ಜನರನ್ನು ಮನವೊಲಿಸುವುದು**

ಕೆಲವು ಪ್ರಾರ್ಥನೆಗಳು ಒಬ್ಬ ವ್ಯಕ್ತಿಯು ತಾನು ದೇವರೊಂದಿಗೆ ಅತ್ಯುತ್ತಮವಾದ ಸಂಬಂಧ ಹೊಂದಿದ್ದೇನೆಂಬುದನ್ನು ಜನರಿಗೆ ಮನವೊಲಿಸುವುದಕ್ಕಾಗಿ ಮಾಡಿದಂತೆ ತೋರುತ್ತವೆ.

✶ **ಸಂಶಯ ಮತ್ತು ಅಪನಂಬಿಕೆಯನ್ನು ವ್ಯಕ್ತಪಡಿಸುವುದು**

ನಮ್ಮ ಸಂಪ್ರದಾಯದ ಸಭೆಯಲ್ಲಿನ ಅನೇಕ ಪ್ರಾರ್ಥನೆಗಳು ಸಂಶಯ ಮತ್ತು ಅಪನಂಬಿಕೆಯನ್ನು ವ್ಯಕ್ತಪಡಿಸುವಂತವುಗಳಾಗಿದ್ದವು. ಪರಿಸ್ಥಿತಿಗಳು ಎಷ್ಟು ಕೆಟ್ಟದ್ದಾಗಿವೆ ಎಂದು ನಾವು ಇತರರಿಗೆ ಹೇಳುವಾಗ ವಾಸ್ತವಿಕವಾಗಿ ನಮ್ಮ ಪ್ರಿಯಪಾತ್ರರನ್ನು ನಾವು ಶಪಿಸುತ್ತಿದ್ದೆವು.ಈ ವಿಷಯಕ್ಕಾಗಿ ಅಥವಾ ಆ ವಿಷಯಕ್ಕಾಗಿ ಪ್ರಾರ್ಥಿಸಿರಿ ಎಂದು ಜನರಿಗೆ ಹೇಳುವಾಗ ಚಾಡಿ ಹೇಳುತ್ತಿದ್ದೆವು. ಜನರೊಂದಿಗೆ ಮಾತನಾಡುವಾಗ ಅನೇಕ ಬಾರಿ “ನೀವು ಈ ವಿಷಯಕ್ಕೋಸ್ಕರ ಪ್ರಾರ್ಥನೆ ಮಾಡಲಿ ಅಂತ ಅಷ್ಟೇ ನಾನು ನಿಮಗೆ ಇದನ್ನ ಹೇಳ್ತಿರೋದು” ಎಂಬ ಸಾಲಿನಿಂದಲೇ ಪ್ರಾರಂಭಗೊಳ್ಳುತ್ತಿತ್ತು.

ನಾವು ಪ್ರಾರ್ಥನೆ ಎಂದು ಕರೆದ ಸಂಗತಿಯು ನಮ್ಮ ಸುತ್ತಮುತ್ತಲು ನಾವು ಕಂಡ ಕೇಡಿನ ಒಂದು ಪಟ್ಟಿಯಾಗಿತ್ತು. ನಾವು ಪ್ರಾರ್ಥನೆ ಮಾಡುವುದರ ಬದಲಾಗಿ ಗಂಟೆಗಟ್ಟಲೆ ಸಮಯವನ್ನು ಅತಿಯಾದ ಚಿಂತೆಯಲ್ಲಿ ಕಳೆದೆವು!

## ಪ್ರಾರ್ಥನೆಯೆಂದರೆ ಇವುಗಳು:

ಪ್ರಾರ್ಥನೆಯ ಹಲವು ರೂಪಗಳಿವೆ. ಹಲವಾರು ರೀತಿಯ ಕ್ರೈಸ್ತರು ಹಾಗೂ ಸನ್ನಿವೇಶಗಳಿದ್ದಂತೆ ಹಲವಾರು ರೂಪದ ಪ್ರಾರ್ಥನೆಗಳಿವೆ. ಒಂದು ರೂಪವು “ಸರಿ” ಎಂದಾಗಲಿ ಅಥವಾ ಇನ್ನೊಂದು ರೂಪವು “ತಪ್ಪು” ಎಂದಾಗಲಿ ಅಲ್ಲ. ಒಂದು ರೂಪವು ಇನ್ನೊಂದಕ್ಕಿಂತ ಉತ್ತಮವೆಂತಲೂ ಅಲ್ಲ. ನಾವು ದೇವರ ನಡೆಸುವಿಕೆಗೆ ಅನುಸಾರವಾಗಿ ವಿವಿಧ ಸಮಯಗಳಲ್ಲೂ ಎಲ್ಲಾ ರೂಪಗಳಲ್ಲೂ ಕಾರ್ಯನಿರ್ವಹಿಸಬೇಕೆಂದು ದೇವರು ಬಯಸುತ್ತಾರೆ.

ಸತ್ಯವೇದದಲ್ಲಿ ಪ್ರಾರ್ಥನೆಯ ಬಗ್ಗೆ ವಿವಿಧ ಪದಗಳನ್ನು ಬಳಸಲಾಗಿದೆ.

### ದೇವರೊಂದಿಗೆ ಮಾತನಾಡುವುದು

ಪ್ರಾರ್ಥನೆಯು ಕ್ರಿಸ್ತೀಯ ಜೀವನದ ಸರಳವಾದ ಅಭಿವ್ಯಕ್ತಿಯ ರೂಪವಾಗಿದೆ. ಅದು ದೇವರೊಂದಿಗೆ ಮಾತನಾಡುವುದಾಗಿದೆ. ಅದು ಒಬ್ಬ ವಿಶ್ವಾಸಿಯು ಮಗುವಿನಂತಹ ನಂಬಿಕೆಯಿಂದ ತನ್ನ ಅಂತರಾತ್ಮದಲ್ಲಿ ತಂದೆಯ ಹೆಸರನ್ನು ಕೂಗಿ ಕರೆಯುವುದಾಗಿದೆ.

**ಗಲಾತ್ಯದವರಿಗೆ 4:6 ನೀವು ಪುತ್ರರಾಗಿರುವದರಿಂದ ದೇವರು “ಅಪ್ಪಾ ತಂದೆಯೇ” ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು.**

### ಕೇಳಿಕೊಳ್ಳುವುದು ಅಥವಾ ಬೇಡಿಕೊಳ್ಳುವುದು

ಪ್ರಾರ್ಥನೆಯೆಂದರೆ ನಮಗೆ ಅಗತ್ಯವಿರುವ ಆಶೀರ್ವಾದಗಳನ್ನು ದೇವರಲ್ಲಿ ಕೇಳಿಕೊಳ್ಳುವುದಾಗಿದೆ ಅಥವಾ ನಮ್ಮ ಬಯಕೆ ಹಂಬಲಗಳನ್ನು ಆತನಿಗೆ ವ್ಯಕ್ತಪಡಿಸುವುದಾಗಿದೆ.

**1 ಪೂರ್ವಕಾಲವೃತ್ತಾಂತ 4:10 ಯಾಬೇಚನು ಇಸ್ರಾಯೇಲ್ ದೇವರಿಗೆ - ನೀನು ನನ್ನನ್ನು ವಿಶೇಷವಾಗಿ ಆಶೀರ್ವದಿಸಿ ನನ್ನ ಪ್ರಾಂತವನ್ನು ವಿಸ್ತರಿಸಿ ನಿನ್ನ ಹಸ್ತದಿಂದ ನನ್ನನ್ನು ಹಿಡಿದು ಯಾವ ವೇದನೆಯೂ ಉಂಟಾಗದಂತೆ ನನ್ನನ್ನು ರಕ್ಷಿಸಬಾರದೇ ಎಂದು ಮೊರೆಯಿಡಲು ದೇವರು ಅವನ ಮೊರೆಯನ್ನು ಲಾಲಿಸಿದನು.**

ನಾವು ಕೇಳಿಕೊಳ್ಳಬೇಕೆಂದು ಯೇಸು ಹೇಳಿದರು.

**ಮತ್ತಾಯ 21:22 ನೀವು ನಂಬಿಕೊಂಡು ಪ್ರಾರ್ಥನೆಯಲ್ಲಿ ಏನೇನು ಬೇಡಿಕೊಳ್ಳುವಿರೋ ಅದನ್ನೆಲ್ಲಾ ಹೊಂದುವಿರಿ ಅಂದನು.**

**ಯೋಹಾನ 16:23-24 ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ತಂದೆಯನ್ನು ಏನಾದರೂ ಬೇಡಿಕೊಂಡರೆ ಅದನ್ನು ಆತನು ನನ್ನ ಹೆಸರಿನ ಮೇಲೆ ನಿಮಗೆ ಕೊಡುವನು. ನೀವು ಇದುವರೆಗೆ ನನ್ನ ಹೆಸರಿನ ಮೇಲೆ ಯಾವದೊಂದನ್ನೂ ಬೇಡಿಕೊಂಡಿಲ್ಲ; ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು; ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು.**

## ಬಿನ್ನಹ ಮಾಡುವುದು

''ಬಿನ್ನಹ'' ಎಂಬ ಪದದ ಅರ್ಥವು ಸಹಾಯಕ್ಕಾಗಿ ಕೂಗಿಕೊಳ್ಳುವುದಾಗಿದೆ. ನಾವು ದೇವರ ಬಳಿಯಲ್ಲಿ ಬಿನ್ನಹಿಸುವಾಗ ನಾವು ನಮ್ಮ ಸ್ವಂತ ಅಗತ್ಯತೆಗಳನ್ನು ಸಂಧಿಸಲು ಅಶಕ್ತರಾಗಿದ್ದೇವೆ ಎಂಬುದನ್ನು ಅರಿತವರಾಗಿ ದೇವರ ಸಹಾಯದ ಮೇಲೆ ಆತುಕೊಂಡಿದ್ದೇವೆ ಎಂಬುದನ್ನು ವ್ಯಕ್ತಪಡಿಸುತ್ತೇವೆ.

**1 ಸಮುವೇಲನು 1:17 ಆಗ ಏಲಿಯು ಆಕೆಗೆ - ಸಮಾಧಾನದಿಂದ ಹೋಗು; ಇಸ್ರಾಯೇಲ್ ದೇವರು ನಿನ್ನ ಪ್ರಾರ್ಥನೆಯನ್ನು ನೆರವೇರಿಸಲಿ...ವಿಜ್ಞಾಪನೆ ಮಾಡುವುದು**

ಪ್ರಾರ್ಥನೆಯೆಂದರೆ ವಿಜ್ಞಾಪನೆ ಮಾಡುವುದಾಗಿದೆ, ಅಂದರೆ ದೀನತೆಯಿಂದ ಅಥವಾ ಶ್ರದ್ಧೆಯಿಂದ ಬೇಡಿಕೊಳ್ಳುವುದಾಗಿದೆ.

**1 ಅರಸುಗಳು 8:33 ತಮ್ಮ ಪಾಪಗಳ ಸಲುವಾಗಿ ಶತ್ರುಗಳಿಂದ ತಗ್ಗಿಸಲ್ಪಟ್ಟ ನಿನ್ನ ಪ್ರಜೆಗಳಾದ ಇಸ್ರಾಯೇಲ್ಯರು ನಿನ್ನ ಕಡೆಗೆ ತಿರುಗಿಕೊಂಡು ನಿನ್ನ ನಾಮವನ್ನು ಎತ್ತಿ ಈ ಆಲಯದಲ್ಲಿ ನಿನಗೆ ವಿಜ್ಞಾಪನೆಯನ್ನೂ ಪ್ರಾರ್ಥನೆಯನ್ನೂ ಮಾಡುವದಾದರೆ...**

## ಮನವಿ ಮಾಡುವುದು

ಪ್ರಾರ್ಥನೆಯನ್ನು ಮನವಿಯ ರೂಪದಲ್ಲೂ ಮಾಡಬಹುದು. ಮನವಿ ಅಂದರೆ ಶ್ರದ್ಧೆಯಿಂದ ಕೇಳಿಕೊಳ್ಳುವುದು ಅಥವಾ ಬೇಡಿಕೊಳ್ಳುವುದು.

**ವಿಮೋಚನಕಾಂಡ 8:8 ಆಗ ಫರೋಹನು ಮೋಶೆ ಆರೋನರನ್ನು ಕರಿಸಿ - ನೀವು ಯೆಹೋವನನ್ನು ಬೇಡಿಕೊಂಡು ಈ ಕಪ್ಪೆಗಳನ್ನು ನನ್ನ ಬಳಿಯಿಂದಲೂ ನನ್ನ ಪ್ರಜೆಗಳ ಬಳಿಯಿಂದಲೂ ತೊಲಗಿಸಬೇಕು...**

## ಮಧ್ಯಸ್ತಿಕೆ ಪ್ರಾರ್ಥನೆ ಮಾಡುವುದು

ಪ್ರಾರ್ಥನೆಯಲ್ಲಿ ಮಧ್ಯಸ್ತಿಕೆ ವಹಿಸಬಹುದ, ಅಂದರೆ ಮತ್ತೊಬ್ಬರ ಪರವಾಗಿ ಪ್ರಾರ್ಥಿಸಬಹುದು.

**ಯೆಶಾಯ 53:12 ಇವನು ಇಂಥವನಾಗಿರುವದರಿಂದ ನಾನು ಇವನಿಗೆ ದೊಡ್ಡವರ ಸಂಗಡ ಪಾಲು ಕೊಡುವೆನು, ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು; ತನ್ನ ಪ್ರಾಣವನ್ನು ಧಾರೆಯೆರೆದು ಮರಣಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆಮಾಡಿದನಲ್ಲಾ.**

## ಆರಾಧನೆಯ ಒಂದು ಕ್ರಿಯೆ

ಪ್ರಕಟನೆಯ ಪುಸ್ತಕದಲ್ಲಿ ಪ್ರಾರ್ಥನೆಯನ್ನು ಧೂಪವಾಗಿ ಮಾತ್ರವಲ್ಲ ಧೂಪದೊಂದಿಗೆ ಅರ್ಪಿಸಲ್ಪಡುವಂತಹ ಸಂಗತಿಯಾಗಿಯೂ ಉಲ್ಲೇಖಿಸಲಾಗಿದೆ.

ಧೂಪವನ್ನು ಸುಡುವುದು ಭಕ್ತರ ಪ್ರಾರ್ಥನೆಗಳನ್ನು ಪ್ರತಿನಿಧಿಸುವಂತಹ ಒಂದು ಆರಾಧನಾ ಕ್ರಿಯೆಯಾಗಿದೆ.

**ಪ್ರಕಟನೆ 5:8 ಆ ನಾಲ್ಕು ಜೀವಿಗಳೂ ಇಪ್ಪತ್ತುನಾಲ್ಕು ಮಂದಿ ಹಿರಿಯರೂ ಯಜ್ಞದ ಕುರಿಯಾದಾತನ ಪಾದಕ್ಕೆ ಬಿದ್ದರುಹಿರಿಯರ ಕೈಗಳಲ್ಲಿ ವೀಣೆಗಳೂ ., ದೇವಜನರ ಪ್ರಾರ್ಥನೆಗಳೆಂಬ ಧೂಪದಿಂದ ತುಂಬಿದ್ದ ಚಿನ್ನದ ಧೂಪಾರತಿಗಳೂ ಇದ್ದವು.**

ಪರಲೋಕದಲ್ಲಿರುವ ಚಿನ್ನದ ಪಾತ್ರೆಗಳಲ್ಲಿ ಭಕ್ತರ ಪ್ರಾರ್ಥನೆಗಳನ್ನು ಸಂಗ್ರಹಿಸಿಡಲಾಗಿದೆ ಎಂಬುದು ಎಂತಹ ಅಮೋಘವಾದ ಸಂಗತಿಯಾಗಿದೆ! ಯಾವ ಪ್ರಾರ್ಥನೆಗಳು ಸಂಗ್ರಹಿಸಲ್ಪಡಲು ಯೋಗ್ಯವಾದದ್ದು? ನಿಶ್ಚಯವಾಗಲೂ ತಪ್ಪುಗಳ, ಪಾಪಗಳ, ದೂರುಗಳ, ಚಿಂತೆಗಳ ಮತ್ತು ಸ್ವಾರ್ಥತೆಗಳ ಒಂದು ಪಟ್ಟಿಯಲ್ಲ. ಅದಕ್ಕೆ ಬದಲಾಗಿ ಯೇಸು ಶಿಲುಬೆಯ ಮೇಲೆ ತೂಗುತ್ತಿರುವಾದ ಮಾಡಿದಂತಹ ಪ್ರಾರ್ಥನೆಗಳು ಯೋಗ್ಯವಾದದ್ದು.

23:34 ಆಗ ಯೇಸು ತಂದೆಯೇ -, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು ಅಂದನು.

ನಿಶ್ಚಯವಾಗಲೂ ಸ್ತೆಫನನು ರಕ್ತಸಾಕ್ಷಿಯಾಗಿ ಕೊಲ್ಲಲ್ಪಡುತ್ತಿರುವಾಗ ಮಾಡಿದ ಪ್ರಾರ್ಥನೆಯು ಒಂದು ಆರಾಧನಾ ಕ್ರಿಯೆಯಾಗಿ ಪರಲೋಕದಲ್ಲಿ ಸಂಗ್ರಹಿಸಲ್ಪಟ್ಟಿರಬಹುದು.

**ಅ. ಕೃ. 7:59, 60 ಅವರು ಸ್ತೆಫನನ ಮೇಲೆ ಕಲ್ಲೆಸೆಯುತ್ತಾ ಇರಲು ಅವನು ಕರ್ತನ ಹೆಸರನ್ನು ಹೇಳಿ - ಯೇಸುಸ್ವಾಮಿಯೇ, ನನ್ನಾತ್ಮವನ್ನು ಸೇರಿಸಿಕೋ ಎಂದು ಪ್ರಾರ್ಥಿಸಿ ಮೊಣಕಾಲೂರಿ ಕರ್ತನೇ -, ಈ ಪಾಪವನ್ನು ಅವರ ಮೇಲೆ ಹೊರಿಸಬೇಡವೆಂದು ಮಹಾಶಬ್ದದಿಂದ ಕೂಗಿದನು.**

### ಒಂದು ಸೇವೆ

ದೇವಜನರಿಗಾಗಿ ಪ್ರಾರ್ಥಿಸುವುದು ದೇವರಿಗೆ ಸಲ್ಲಿಸುವ ಒಂದು ನಿಜವಾದ ಸೇವೆಯಾಗಿದೆ.

**ಲೂಕ 2:37 ಆಕೆ ದೇವಾಲಯವನ್ನು ಬಿಟ್ಟುಹೋಗದೆ ಉಪವಾಸ ವಿಜ್ಞಾಪನೆಗಳಿಂದ ರಾತ್ರಿ ಹಗಲೂ ದೇವರ ಸೇವೆಯನ್ನು ಮಾಡುತ್ತಿದ್ದಳು.**

ಎಪಫ್ರನು ಪ್ರಾರ್ಥನೆಯಲ್ಲಿ ಹೋರಾಡುವುದರ ಬಗ್ಗೆ ಅಪೋಸ್ತಲನಾದ ಪೌಲನು ಬರೆಯುತ್ತಾನೆ.

**ಕೊಲೊಸ್ಸೆಯವರಿಗೆ 4:12 ಕ್ರಿಸ್ತ ಯೇಸುವಿನ ದಾಸನಾಗಿರುವ ನಿಮ್ಮ ಊರಿನ ಎಪಫ್ರನು ನಿಮಗೆ ವಂದನೆ ಹೇಳುತ್ತಾನೆ; ಇವನು ಪ್ರಾರ್ಥನೆ ಮಾಡುವಾಗೆಲ್ಲಾ ನಿಮಗೋಸ್ಕರ ಹೋರಾಡಿ ನೀವು ಪ್ರವೀಣರಾಗಿಯೂ ಎಲ್ಲಾ ವಿಷಯಗಳಲ್ಲಿ ದೇವರ ಚಿತ್ತವನ್ನು ಕುರಿತು ಪೂರ್ಣ ನಿಶ್ಚಯವುಳ್ಳವರಾಗಿಯೂ ನಿಂತಿರಬೇಕೆಂದು ವಿಜ್ಞಾಪನೆ ಮಾಡುತ್ತಾನೆ.**

### ದೇವರೊಂದಿಗೆ ಅನ್ಯೋನ್ಯತೆ

ದೇವರು ಆದಾಮ್ ಮತ್ತು ಹವ್ವಳನ್ನು ತನ್ನೊಂದಿಗೆ ಅನ್ಯೋನ್ಯತೆಯಲ್ಲಿರುವುದಕ್ಕಾಗಿ ಸೃಷ್ಟಿಸಿದರು. ಪಾಪವು ಚಿತ್ರದಲ್ಲಿ ಪ್ರವೇಶಿಸುವವರೆಗೂ ದೇವರು ಸಂಜೆಯ ತಂಗಾಳಿಯಲ್ಲಿ ಇಳಿದುಬಂದು ಅವರೊಂದಿಗೆ ಸಂಚರಿಸುತ್ತಿದ್ದನು. ಪಾಪವು ಪ್ರವೇಶಿಸಿದ ದಿನದಿಂದ ಇಂದಿನವರೆಗೂ ಪ್ರತಿಯೊಬ್ಬ ಮನುಷ್ಯನಲ್ಲಿಯೂ ದೇವರೊಂದಿಗೆ ನಡೆದಾಡಬೇಕೆಂಬ ಮತ್ತು ಮಾತನಾಡಬೇಕೆಂಬ ಒಂದು ಆಳವಾದ ಹಂಬಲವಿದೆ.

ಪ್ರಾರ್ಥನೆಯೆಂದರೆ ದೇವರೊಂದಿಗೆ ಅನ್ಯೋನ್ಯತೆಯಲ್ಲಿರುವುದು. ದೇವರು ಮನುಷ್ಯನೊಂದಿಗೆ ತನ್ನ ವಾಕ್ಯದ ಮೂಲಕ ಹಾಗೂ ತನ್ನ ಪರಿಶುದ್ಧಾತ್ಮನ ಮೂಲಕ ಮಾತನಾಡುವಂತೆಯೇ, ಮನುಷ್ಯನು ಪ್ರಾರ್ಥನೆಯ ಮೂಲಕ ದೇವರೊಂದಿಗೆ ಮಾತನಾಡುತ್ತಾನೆ.

"ಅನ್ಯೋನ್ಯತೆ" ಎಂದರೆ ನಮ್ಮ ಆಳವಾದ ಯೋಚನೆಗಳನ್ನು, ಹಂಬಲಗಳನ್ನು ಮತ್ತು ಭಾವನೆಗಳನ್ನು ಪರಸ್ಪರ ಹಂಚಿಕೊಳ್ಳುವುದಾಗಿದೆ. ಅದು ದ್ವಿಮುಖ ಸಂಭಾಷಣೆಯಾಗಿದೆ – ಇಬ್ಬರೂ ಪರಸ್ಪರ ಮಾತನಾಡುವಂತದ್ದು.

ಇನ್ನೊಬ್ಬರಿಗೆ ಮಾತನಾಡಲು ಅವಕಾಶ ಕೊಡದೆ ತಮ್ಮ ಬಗ್ಗೆಯೇ ಉದ್ದವಾಗಿ ಮಾತನಾಡುವ ವ್ಯಕ್ತಿಯೊಂದಿಗೆ ನೀವು ಎಂದಾದರೂ ಸಮಯ ಕಳೆದಿದ್ದೀರೋ? ಅವರು ತಮ್ಮ ಕೆಲಸ, ಕುಟುಂಬ, ಮನೆ, ಕಾರ್, ಈ ಸಮಸ್ಯೆ ಆ ಸಮಸ್ಯೆಗಳ ಬಗ್ಗೆ ಹೇಳುತ್ತಾ ನಿಮ್ಮ ಮನಸ್ಸಿನಲ್ಲಿರುವ ಒಂದು ಆಲೋಚನೆಯನ್ನೂ ಅಥವಾ ಭಾವನೆಯನ್ನೂ ತಿಳಿದುಕೊಳ್ಳಲು ಬಯಸುವುದಿಲ್ಲ. ಸ್ವಲ್ಪ ಸಮಯವಾದ ಮೇಲೆ ನೀವು ಯಾಕಾದರೂ ಆ ಸ್ಥಳದಲ್ಲಿ ಸಿಕ್ಕಿಕೊಂಡಿರೆಂದು ನಿಮಗೆ ಬೇಸರವಾಗುತ್ತದೆ.

ನಮ್ಮಲ್ಲಿ ಅನೇಕರು ಇದೇ ರೀತಿಯಲ್ಲಿ ದೇವರೊಂದಿಗೆ ನಡೆದುಕೊಳ್ಳುತ್ತೇವೆ. ನಾವು ಉದ್ದವಾದ ಪಟ್ಟಿಯನ್ನು ಹೇಳುವುದರಲ್ಲಿ ಸಮಯ ಕಳೆಯುತ್ತಾ ಒಬ್ಬರೇ ಮಾತನಾಡುತ್ತೇವೆ. ನಂತರ, ದೇವರು ಇನ್ನೇನು ಮಾತನಾಡಬೇಕೆಂದಿರುವಾಗ, ಈಗಾಗಲೇ ಬಹಳ ಸಮಯ ಕಳೆದು ಹೋಗಿದೆ ಎಂಬುದನ್ನು ನಾವು ಅರಿತು ಅಲ್ಲಿಂದ ಅವಸರವಾಗಿ ಹೋಗಿಬಿಡುತ್ತೇವೆ. ದೇವರೊಂದಿಗೆ ಅನ್ಯೋನ್ಯತೆಯ ಸಮಯವನ್ನು ಕಳೆಯಬೇಕಾದರೆ ನಾವು ಅವರೊಂದಿಗೆ ಮಾತನಾಡಬೇಕು ಮತ್ತು ಅವರು ನಮ್ಮೊಂದಿಗೆ ಮಾತನಾಡಲು ನಾವು ಅನುಮತಿಸಬೇಕು.

**ಕೊನೆಯಿಲ್ಲದ ಪಟ್ಟಿ**

ನಮ್ಮ ದೇವರು ಸೃಷ್ಟಿಯಲ್ಲಿಟ್ಟಿರುವ ವೈವಿಧ್ಯತೆಗೆ ಕೊನೆಯೇ ಇಲ್ಲ. ಹಾಗೆಯೇ ನಾವು ಪ್ರಾರ್ಥನೆ ಮಾಡಬಹುದಾದ ರೀತಿಗಳಿಗೂ ಯಾವ ಕೊನೆಯಿಲ್ಲ.

ಕೀರ್ತನೆಗಳ ಪುಸ್ತಕವು ಪ್ರಾರ್ಥನೆಯ ಬಗ್ಗೆ ಇರುವ ಒಂದು ಅದ್ಭುತವಾದ ಪುಸ್ತಕವಾಗಿದೆ ಮತ್ತು ಅದು ಪ್ರಾರ್ಥನೆಯನ್ನು ದೇವರಿಗೆ ಮೊರೆಯಿಡುವುದು, ದೇವರಿಗೆ ಕೂಗಿಕೊಳ್ಳುವುದು, ದೇವರಲ್ಲಿ ಕಾದುಕೊಂಡಿರುವುದು ಮತ್ತು ದೇವರಿಗೆ ಕೈಗಳನ್ನೆತ್ತುವುದು ಎಂದು ಹೇಳುತ್ತದೆ.

ಒಮ್ಮನಸ್ಸಿನಿಂದ ಮಾಡುವ ಪ್ರಾರ್ಥನೆಯಿದೆ, ನಂಬಿಕೆಯ ಪ್ರಾರ್ಥನೆಯಿದೆ, ಬಿಡುಗಡೆಯ ಪ್ರಾರ್ಥನೆಯಿದೆ, ಯುದ್ಧ ಹೋರಾಟದ ಪ್ರಾರ್ಥನೆಯಿದೆ, ಅಧಿಕಾರದ ಪ್ರಾರ್ಥನೆಯಿದೆ... ಹೀಗೆ ಇನ್ನೂ ಅನೇಕ ಪ್ರಾರ್ಥನೆಯಿದೆ. ಎಲ್ಲಾ ನಿಜವಾದ ಪ್ರಾರ್ಥನೆಗಳು ದೇವರಿಗೆ ಸಂತೋಷವನ್ನು ಕೊಡುತ್ತದೆ.

**ಜ್ಞಾನೋಕ್ತಿ 15:8b ...ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ.**

## ಒಂದು ಸರಳವಾದ ವ್ಯಾಖ್ಯಾನ

ನಾವು ಈಗ ಪ್ರಾರ್ಥನೆಯ ಒಂದು ಸರಳವಾದ ವ್ಯಾಖ್ಯಾನವನ್ನು ಪರಿಗಣಿಸೋಣ.

**ಪ್ರಾರ್ಥನೆಯೆಂದರೆ ದೇವರ ಮುಂದೆ ಒಂದು ಸನ್ನಿವೇಶವನ್ನು ತೆಗೆದುಕೊಂಡು ಹೋಗುವುದು, ಆತನ ಉತ್ತರವನ್ನು ಕೇಳುವುದು, ಮತ್ತು ಆ ಸನ್ನಿವೇಶಕ್ಕೆ ದೇವರ ಚಿತ್ತವನ್ನು ಹೇಳುವುದು.**

## ಪ್ರಾರ್ಥನೆಯ ಎರಡು ಭಾಷೆಗಳು

### ಆತ್ಮ - ಬುದ್ಧಿ

ಅಪೋಸ್ತಲನಾದ ಪೌಲನು ಪ್ರಾರ್ಥನೆಯ ಎರಡು ಭಾಷೆಗಳ ಬಗ್ಗೆ ಬರೆಯುತ್ತಾನೆ – ಆತ್ಮದಿಂದ, ಬುದ್ಧಿಯಿಂದ.

**1 ಕೊರಿಂಥದವರಿಗೆ 14:14-15 ಯಾಕಂದರೆ ನಾನು ವಾಣಿಯನ್ನಾಡುತ್ತಾ ದೇವರನ್ನು ಪ್ರಾರ್ಥಿಸಿದರೆ ನನ್ನಾತ್ಮವು ಪ್ರಾರ್ಥಿಸುವದೇ ಹೊರತು ನನ್ನ ಬುದ್ಧಿ ನಿಷ್ಫಲವಾಗಿರುವದು. ಹಾಗಾದರೇನು? ನಾನು ಆತ್ಮದಿಂದ ಪ್ರಾರ್ಥಿಸುವೆನು, ಬುದ್ಧಿಯಿಂದಲೂ ಪ್ರಾರ್ಥಿಸುವೆನು...**

ಪೌಲನು ಆತ್ಮದಿಂದ ಪ್ರಾರ್ಥಿಸಿದನು, ನಂತರ ಬುದ್ಧಿಯಿಂದಲೂ ಪ್ರಾರ್ಥಿಸಿದನು. ಆತನು ಈ ರೀತಿಯಲ್ಲಾಗಲಿ ಅಥವಾ ಇನ್ನೊಂದು ರೀತಿಯಲ್ಲಾಗಲಿ ಹೇಗೂ ಪ್ರಾರ್ಥಿಸಿದನು ಎಂಬುದು ಇದರ ಅರ್ಥವೋ? ಅಥವಾ ಆತನು ಮೊದಲು ಆತ್ಮದಲ್ಲಿ ಪ್ರಾರ್ಥಿಸಿ ನಂತರ ಬುದ್ಧಿಯಿಂದ ಪ್ರಾರ್ಥಿಸಿದನು ಎಂದು ಇದರ ಅರ್ಥವೋ?

ಎಫೆಸದವರಿಗೆ ಬರೆದ ಪತ್ರದಲ್ಲಿ ಪೌಲನು ನಮ್ಮ ಆಯುಧಗಳ ಬಗ್ಗೆ ಬರೆದನು ಮತ್ತು ನಾವು ಅನೇಕ ಬಾರಿ ಆ ತಿಳುವಳಿಕೆಯೊಂದಿಗೆ ಮುಕ್ತಾಯಗೊಳಿಸುತ್ತೇವೆ. ಆದರೆ ಅದೇ ವಾಕ್ಯಭಾಗವು ಪ್ರಾರ್ಥನೆಯ ಬಗ್ಗೆ ಇನ್ನೂ ಎಷ್ಟೋ ವಿಷಯಗಳನ್ನು ನಮಗೆ ಹೇಳುತ್ತದೆ.

**ಎಫೆಸದವರಿಗೆ 6:17-20 ಇದಲ್ಲದೆ ರಕ್ಷಣೆಯೆಂಬ ಶಿರಸ್ತ್ರಾಣವನ್ನು ಇಟ್ಟುಕೊಂಡು ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿಯನ್ನು ಹಿಡಿಯಿರಿ. ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರ್ರಿ. ನನಗೋಸ್ಕರ ಸಹ ಪ್ರಾರ್ಥನೆಮಾಡಿರಿ.**

**ನಾನು ಬಾಯಿ ತೆರೆಯುವಾಗ ಪೂರ್ವಕಾಲದಲ್ಲಿ ಗುಪ್ತವಾಗಿದ್ದ ಸುವಾರ್ತಾಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ. ಆ ಸತ್ಯಾರ್ಥದ ನಿಮಿತ್ತವೇ ರಾಯಭಾರಿಯಾದ ನಾನು ಬೇಡಿಯಲ್ಲಿ ಬಿದ್ದಿದ್ದೇನಲ್ಲಾ, ಅದರ ವಿಷಯದಲ್ಲಿ ಧೈರ್ಯವಾಗಿ ಮಾತಾಡುವ ಹಂಗಿನಲ್ಲಿದ್ದೇನೆ; ಹಾಗೆಯೇ ನಾನು ಮಾತಾಡಬೇಕೆಂದು ನನಗೋಸ್ಕರ ಬೇಡಿಕೊಳ್ಳಿರಿ.**

ನಾವು ರಕ್ಷಣೆಯೆಂಬ ಶಿರಸ್ತ್ರಾಣವನ್ನು ಮತ್ತು ದೇವರ ವಾಕ್ಯವೆಂಬ ಕತ್ತಿಯನ್ನು ನಮ್ಮೊಂದಿಗೆ ತೆಗೆದುಕೊಂಡು ಪವಿತ್ರಾತ್ಮಪ್ರೇರಿತರಾಗಿ ಪ್ರಾರ್ಥಿಸಬೇಕೆಂದು ಅಪೋಸ್ತಲನಾದ ಪೌಲನು ಹೇಳಿದನು. ಯಾಕೆ? ಆತನು ಅದನ್ನು ವೈಯಕ್ತೀಕರಿಸಿದನು.

‘‘ಅದರ ವಿಷಯದಲ್ಲಿ ಧೈರ್ಯವಾಗಿ ಮಾತಾಡುವ ಹಂಗಿನಲ್ಲಿದ್ದೇನೆ; ಹಾಗೆಯೇ ನಾನು ಮಾತಾಡಬೇಕೆಂದು ನನಗೋಸ್ಕರ ಬೇಡಿಕೊಳ್ಳಿರಿ.’’

ನಾವು ದೇವರ ವಾಕ್ಯವನ್ನು ತೆಗೆದುಕೊಂಡು ಪರಿಶುದ್ಧಾತ್ಮನಲ್ಲಿ ಪ್ರಾರ್ಥಿಸುವಾಗ ನಮ್ಮ ತಿಳುವಳಿಕೆ ಅಥವಾ ಬುದ್ಧಿಯು ಫಲದಾಯಕವಾಗುತ್ತದೆ. ನಮ್ಮ ಬುದ್ಧಿಯು ದೇವರಿಂದ ಪ್ರಕಟನೆಯನ್ನು ಹೊಂದಿಕೊಳ್ಳುತ್ತದೆ. ನಮ್ಮ ಬುದ್ಧಿಯು ಜ್ಞಾನೋದಯಗೊಳ್ಳುತ್ತದೆ. ಆಗ ನಾವು ಬುದ್ಧಿಯಿಂದ ಧೈರ್ಯವಾಗಿಯೂ ಸರಿಯಾಗಿಯೂ ಪ್ರಾರ್ಥಿಸಲು ಸಾಧ್ಯವಾಗುವುದು.

### ನಮ್ಮೊಳಗಿರುವ ಪರಿಶುದ್ಧಾತ್ಮನು

* *ಕೃಪೆ ಮತ್ತು ವಿಜ್ಞಾಪನೆ*

ಜೆಕರ್ಯನು ಪರಿಶುದ್ಧಾತ್ಮನ ಬರುವಿಕೆಯನ್ನು ಪ್ರವಾದಿಸಿದಾಗ ಆತನು ಪರಿಶುದ್ಧಾತ್ಮನನ್ನು ಕೃಪೆಯ ಮತ್ತು ವಿಜ್ಞಾಪನೆಯ ಆತ್ಮನಾಗಿ ಉಲ್ಲೇಖಿಸುತ್ತಾನೆ. ಯೋಗ್ಯಪಾತ್ರರಲ್ಲದಿದ್ದರೂ ನಮಗೆ ದೊರಕುವ ದಯೆ ಮತ್ತು ಪ್ರಾರ್ಥನೆ.

**ಜೆಕರ್ಯ 12:10 ದಾವೀದ ವಂಶದವರಲ್ಲಿಯೂ ಯೆರೂಸಲೇಮಿನವರಲ್ಲಿಯೂ ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು [ಆತ್ಮನನ್ನು] ಸುರಿಸುವೆನು.**

* *ನಾವು ತಿಳಿದುಕೊಳ್ಳುವುದಕ್ಕಾಗಿ*

ಅಪೋಸ್ತಲನಾದ ಪೌಲನು ಹೀಗೆ ಬರೆದನು:

**1 ಕೊರಿಂಥ 2:12, 14 ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು.**

**ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.**

ಅಪೋಸ್ತಲನಾದ ಯೋಹಾನನು ಹೀಗೆ ಬರೆದನು:

**ಯೋಹಾನ 16:13 ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನುಆತನು . ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು.**

✳ *ಪರಿಶುದ್ಧಾತ್ಮನಲ್ಲಿ ಪ್ರಾರ್ಥಿಸಿರಿ*

ಯೂದನ ಪುಸ್ತಕದಲ್ಲಿ ನಾವು ಹೀಗೆ ಬರೆದಿರುವುದನ್ನು ನೋಡುತ್ತೇವೆ:
**ಯೂದ 1:20 ಪ್ರಿಯರೇ, ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತ ನಂಬಿಕೆಯನ್ನು ಆಧಾರಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆಮಾಡುತ್ತಾ...**

ಪೌಲನು ಹೀಗೆ ಬರೆದನು,
**ಎಫೆಸದವರಿಗೆ 6:18 ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ . .ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರಿ**

ಈಗ ಈ ಪ್ರಶ್ನೆ ಉದ್ಭವಿಸುತ್ತದೆ – ನಾವು ನಮ್ಮ ಸ್ವಾಭಾವಿಕ ಭಾಷೆಯೊಂದಿಗೆ ಆತ್ಮನಲ್ಲಿ ಪ್ರಾರ್ಥಿಸಲು ಸಾಧ್ಯವೇ? ಹೌದು, ಸಾಧ್ಯ. ನಾವು ಅರಿಯದ ಸಂಗತಿಗಳನ್ನು ಪ್ರಾರ್ಥಿಸುವುದನ್ನು ನಮ್ಮ ಕಿವಿಯಿಂದ ಕೇಳುವಾಗ ಇದನ್ನೇ ಮಾಡುತ್ತಿದ್ದೇವೆ.

ನನಗೆ ಇದರ ಮೊದಲ ಅನುಭವವಾಗಿದ್ದು ಯಾವಾಗೆಂದರೆ, ನಾನು ನನ್ನ ಸಹುದ್ಯೋಗಿಯೊಂದಿಗೆ ಪ್ರಾರ್ಥಿಸುತ್ತಿದ್ದಾಗ ಹಾಗೆಯೇ ದಿವಾಳಿತನದ ಗಾಯದ ಗುರುತುಗಳು ಮಾಯವಾಗಲಿ ಎಂದು ಬಲವಾಗಿ ಆಜ್ಞಾಪಿಸಲಾರಂಭಿಸಿದೆ. ಆಕೆಯು ಎಂದಾದರೂ ದಿವಾಳಿಯಾಗಿದ್ದಳೋ ಇಲ್ಲವೋ ಎಂಬುದನ್ನು ನಾನು ಪ್ರಾಕೃತಿಕವಾಗಿ ಅರಿತಿರಲಿಲ್ಲ. ನಾನು ಪ್ರಾರ್ಥಿಸಿ ಮುಗಿಸಿದಾಗ ನಾವು ಒಬ್ಬರ ಮುಖವನ್ನು ಇನ್ನೊಬ್ಬರು ನೋಡಿದೆವು. ನಾನು ಯೋಚಿಸಲಾರಂಭಿಸಿದೆ, "ಒಂದು ವೇಳೆ ಆಕೆಗೆ ಯಾವ ದಿವಾಳಿತನದ ಅನುಭವವಿಲ್ಲದಿದ್ದರೆ ಹೇಗಪ್ಪಾ", ಆಕೆಯ ಮೊದಲ ಮಾತುಗಳೇ "ನಿಮಗೆ ದಿವಾಳಿತನದ ವಿಷಯವು ಗೊತ್ತಿದೆ ಅಂತ ನನಗೆ ಗೊತ್ತಿರಲಿಲ್ಲ".

✳ *ಪ್ರಾರ್ಥನೆ ಮತ್ತು ಪರಿಶುದ್ಧಾತ್ಮನ ವರಗಳು*

ನಾವು ಪ್ರಾರ್ಥಿಸುವಾಗ ಮತ್ತು ಪರಿಶುದ್ಧಾತ್ಮನ ವರಗಳು ನಮ್ಮೊಳಗೆ ಸರಾಗವಾಗಿ ಹರಿಯಲು ಅನುಮತಿಸುವಾಗ ಅದು ಬಹಳ ಬಲವುಳ್ಳದ್ದಾಗಿದೆ! ಸಾಧಾರಣವಾಗಿ, ನಾವು ಆತ್ಮದಲ್ಲಿ – ಅನ್ಯಭಾಷೆಯಲ್ಲಿ, ಸ್ವಲ್ಪ ಸಮಯ ಪ್ರಾರ್ಥಿಸಿದ ನಂತರವೇ ನಾವು ಪ್ರಾಕೃತವಾಗಿ ಅರಿಯದ ಸಂಗತಿಗಳನ್ನು ಪ್ರಾರ್ಥಿಸುತ್ತೇವೆ. ಅನ್ಯಭಾಷೆಯ ಮತ್ತು ಅದರ ಅರ್ಥವನ್ನು ಹೇಳುವ ವರ, ಜ್ಞಾನವಾಕ್ಯ ಅಥವಾ ವಿದ್ಯಾವಾಕ್ಯದ ವರದ ಮೂಲಕ ಅದರ ಅರಿವು ಉಂಟಾಗಬಹುದು.

ನಾವು ಇದುವರೆಗೂ ತಿಳಿಯದ ಸಂಗತಿಯನ್ನು ತಕ್ಷಣವಾಗಿ ಅರಿಯುವಾಗ ಪರಿಶುದ್ಧಾತ್ಮನ ವರಗಳು ಕಾರ್ಯಾಚರಣೆಯಲ್ಲಿವೆ. ನಾವು ನಿರ್ಧಿಷ್ಟವಾಗಿ ಹೇಗೆ ಪ್ರಾರ್ಥಿಸಬೇಕು ಎಂಬುದನ್ನು ತಿಳಿದುಕೊಳ್ಳುತ್ತೇವೆ ಮತ್ತು ಆ ಸನ್ನಿವೇಶದ ಬಗ್ಗೆ ವೈಯಕ್ತಿಕವಾಗಿ ದೇವರಿಂದ ಈಗಲಷ್ಟೇ ಕೇಳಿರುವುದರಿಂದ ನಮ್ಮ ನಂಬಿಕೆಯು ಅಸಾಧಾರಣವಾದ ಬಲವನ್ನು ಹೊಂದಿರುತ್ತದೆ. ನಾವು ನಂಬಿಕೆಯ ವರದಲ್ಲಿ ಕಾರ್ಯನಿರ್ವಹಿಸುವಾಗ ಅದ್ಭುತಗಳು ಸಂಭವಿಸುತ್ತವೆ.

✱ *ಮಾತಿಲ್ಲದಂಥ ನರಳಾಟ*

ಅಪೋಸ್ತಲನಾದ ಪೌಲನು ಹೀಗೆ ಬರೆದನು,

**ರೋಮಾಪುರದವರಿಗೆ 8:26,27 ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆಹೇಗಂದರೆ ನಾವು ತಕ್ಕ ಪ್ರಕಾರ . ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

ನೀವು ಎಂದಾದರೂ ಮಾತಿನಲ್ಲಿ ವರ್ಣಿಸಲಾಗದಂತಹ ನೋವನ್ನು ಅನುಭವಿಸಿದ್ದೀರೋ? ಶಾರೀರಿಕವಾಗಿ ನೀವು ಕುರ್ಚಿಯ ಮೇಲಾಗಲಿ, ಮೊಣಕಾಲಿನ ಮೇಲಾಗಲಿ ಅಥವಾ ನೆಲದ ಮೇಲಾಗಲಿ ಕುಸಿದು ಬೀಳಬಹುದು. ನಿಮ್ಮ ಅಂತರಾತ್ಮದಲ್ಲಿ ಪ್ರಾರ್ಥಿಸಬೇಕೆಂಬ ಬಯಕೆಯಿದ್ದರೂ ಅತಿಯಾದ ನೋವನ್ನು ಅನುಭವಿಸುತ್ತಿರುವುದರಿಂದ ಮಾತು ಬಾರದೆ ಹೋಗುತ್ತದೆ. ಕೆಲಕಾಲದ ನಂತರ ನಿಮ್ಮ ಮಾನವ ತಿಳುವಳಿಕೆಗೂ ನಿಮ್ಮ ಮಾತುಗಳಿಗೂ ಮೀರಿದ ಒಂದು ಸಂಭಾಷಣೆಯು ನಿಮ್ಮ ಹಾಗೂ ದೇವರ ನಡುವೆ ನಡೆದಿದೆ ಎಂಬುದು ಅರಿವಾಗುತ್ತದೆ. ಇದೇ ಮಾತಿಲ್ಲದಂಥ ನರಳಾಟವಾಗಿದೆ. ಪರಿಶುದ್ಧಾತ್ಮನು ನಿಮ್ಮ ಪರವಾಗಿ ಮಾತನಾಡುತ್ತಾನೆ, ಆಗ ನಿಮ್ಮ ಅಂತರಾತ್ಮದಿಂದ ಶಾಂತಿಯು ಹೊರಹೊಮ್ಮುವುದನ್ನು ನೀವು ಅನುಭವಿಸುತ್ತೀರಿ.

✱ *ಜೀವಕರವಾದ ನೀರಿನ ಹೊಳೆಗಳು ಮತ್ತು ಬುಗ್ಗೆಗಳು*

ಇದು ವಿಶ್ವಾಸಿಗಳ ಮೂಲಕ ಪರಿಶುದ್ಧಾತ್ಮನು ಹರಿಯುವುದನ್ನು ಉಲ್ಲೇಖಿಸುವುದಾಗಿದ್ದು ಯೋಹಾನನು ಈ ಕೆಳಗಿನ ವಚನವನ್ನು ಬರೆಯುತ್ತಿದ್ದಾಗ ಇದರ ಬಗ್ಗೆ ಮಾತನಾಡಿದನು,

**ಯೋಹಾನ 7:38, 39 ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನುಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ . ಪವಿತ್ರಾತ್ಮವರವನ್ನು ಕುರಿತು ಹೇಳಿದನು...**

**ನನ್ನಲ್ಲಿ ನಂಬಿಕೆಯಿಡುವವನು – ಅಂದರೆ ನನ್ನನ್ನು ಬಿಡದೆ ಅಂಟಿಕೊಳ್ಳುವವನು, ನನ್ನಲ್ಲಿ ಭರವಸವಿಡುವವನು, ನನ್ನ ಮೇಲೆ ಆತುಕೊಳ್ಳುವವನು – ಶಾಸ್ತ್ರದಲ್ಲಿ**

**ಹೇಳಿರುವ ಪ್ರಕಾರ, ಅವನ ಹೊಟ್ಟೆಯೊಳಗಿಂದ ಜೀವಕರವಾದ ನೀರಿನ ಹೊಳೆಗಳು ಮತ್ತು ಬುಗ್ಗೆಗಳು ಹರಿಯುವವು (AMP)**

## ಪ್ರಾರ್ಥನೆಯ ಪ್ರಾಮುಖ್ಯತೆ

### ಅತ್ಯಂತ ಶ್ರೇಷ್ಠವಾದ ಸೌಭಾಗ್ಯ

ಪ್ರಾರ್ಥನೆಯು ಕ್ರಿಸ್ತೀಯ ಜೀವನಕ್ಕಿರುವ ಅತ್ಯಂತ ಶ್ರೇಷ್ಠವಾದ ಸೌಭಾಗ್ಯವಾಗಿದೆ ಮತ್ತು ಸೌಭಾಗ್ಯಗಳು ಯಾವಾಗಲೂ ಜವಾಬ್ದಾರಿಗಳನ್ನು ತರುತ್ತದೆ. ಪ್ರಾರ್ಥನೆಗೆ ಉತ್ತರವಾಗಿ ಆಶೀರ್ವಾದಗಳು ಬರುತ್ತವೆ ಮತ್ತು "ಏನನ್ನಾದರೂ", "ಯಾವುದನ್ನಾದರೂ" ಮತ್ತು "ಎಲ್ಲವೂ" ಎಂಬ ವಾಗ್ದಾನಗಳು ಪ್ರಾರ್ಥಿಸುವವರಿಗಾಗಿ ಇರುವಂತದ್ದಾಗಿದೆ. ದೇವರು ತನ್ನ ಜನರಿಗೆ ಇತರರ ಮೇಲೆಯೂ ತಮ್ಮ ಮೇಲೆಯೂ ಅಶೀರ್ವಾದ ಇಳಿದು ಬರುವಂತೆ ಆಜ್ಞಾಪಿಸುವ ಅದ್ಭುತ ಅವಕಾಶವನ್ನು ಕೊಟ್ಟಿದ್ದಾರೆ. ದೇವರು ನಮಗೆ ಎಂತಹ ಜವಾಬ್ದಾರಿಯನ್ನು ಕೊಟ್ಟಿದ್ದಾರೆ ಮತ್ತು ನಾವು ಪ್ರಾರ್ಥಿಸದಿರುವಾಗ ಇತರರಿಗೂ ನಮಗೂ ಎಂತಹ ನಷ್ಟವಾಗುತ್ತದೆ!

### ಯೇಸು ಪ್ರಾರ್ಥಿಸಲು ಹೇಳಿದರು

ನಾವು ಪ್ರಾರ್ಥಿಸಬೇಕೆಂದು ಯೇಸು ನಮಗೆ ಹೇಳಿದರು,
**ಮತ್ತಾಯ 6:6 ಆದರೆ ನೀನು ಪ್ರಾರ್ಥನೆಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.**

"ನೀವು ಪ್ರಾರ್ಥಿಸಿದರೆ" ಎಂದು ಯೇಸು ಹೇಳಲಿಲ್ಲ, ಬದಲಾಗಿ "ನೀವು ಪ್ರಾರ್ಥಿಸುವಾಗ" ಎಂದು ಹೇಳಿದರು. ಅವರ ಶಿಷ್ಯರು ಮತ್ತು ನಾವು ಪ್ರಾರ್ಥಿಸುತ್ತೇವೆಂದು ಅವರು ಪರಿಗಣಿಸಿದರು.

### ಶ್ರೇಷ್ಠ ವ್ಯಕ್ತಿಗಳು ಪ್ರಾರ್ಥಿಸಿದರು

ಸತ್ಯವೇದದಲ್ಲಿರುವ ಪ್ರತಿಯೊಂದು ವಚನವು ಅಥವಾ ಘಟನೆಯು ಒಂದು ಕಾರಣಕ್ಕಾಗಿ ಇದೆ ಮತ್ತು ನಮಗೆ ಅಬ್ರಹಾಮನ, ಮೋಶೆಯ, ಎಲೀಯನ, ಎಲಿಷನ, ಹಿಜ್ಕೀಯನ, ಯೆರೆಮೀಯನ, ದಾನಿಯೇಲನ, ಯೋನನ, ಮನಸ್ಸೆಯ, ನೆಹೆಮೀಯನ, ಯಾಬೇಚನ, ಎಪಫ್ರನ, ಪೌಲನ ಮತ್ತು ಎಲ್ಲರಿಗಿಂತಲೂ ಮುಖ್ಯವಾಗಿ ಯೇಸುವಿನ ಪ್ರಾರ್ಥನೆಗಳ ದಾಖಲೆಗಳಿವೆ.

### ಆದಿಸಭೆಯು ಪ್ರಾರ್ಥಿಸಿತು

ಆದಿಸಭೆಯಲ್ಲಿ ಪ್ರಾರ್ಥನೆಗೆ ಬಹಳ ಮುಖ್ಯವಾದ ಪಾತ್ರವಿತ್ತು.

**ಅ. ಕೃ. 1:14 ಇವರೆಲ್ಲರು ಏಕಮನಸ್ಸಾಗಿ ದೇವರ ಪ್ರಾರ್ಥನೆಯಲ್ಲಿ ನಿರತರಾಗಿದ್ದರು...**

**ಅ. ಕೃ. 2:42 ಇವರು ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯಲ್ಲಿಯೂ ರೊಟ್ಟಿ ಮುರಿಯುವದರಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.**

**ಅ. ಕೃ. 12:5,12 ಪೇತ್ರನು ಸೆರೆಮನೆಯೊಳಗೆ ಕಾವಲಲ್ಲಿದ್ದಾಗ ಸಭೆಯವರು ಆತನಿಗೋಸ್ಕರ ಆಸಕ್ತಿಯಿಂದ ದೇವರಿಗೆ ಪ್ರಾರ್ಥನೆಮಾಡುತ್ತಿದ್ದರು.**

**ತರುವಾಯ ಅವನು ಯೋಚನೆಮಾಡಿಕೊಂಡು ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾದ ಮರಿಯಳ ಮನೆಗೆ ಬಂದನುಅಲ್ಲಿ ಅನೇಕರು . .ಕೂಡಿಬಂದು ಪ್ರಾರ್ಥನೆಮಾಡುತ್ತಿದ್ದರು**

**ಅ. ಕೃ. 13:1,3 ಅಂತಿಯೋಕ್ಯದಲ್ಲಿದ್ದ ಸಭೆಯೊಳಗೆ ಪ್ರವಾದಿಗಳೂ ಬೋಧಕರೂ ಇದ್ದರು... ಆಗ ಅವರು ಉಪವಾಸವಿದ್ದು ಪ್ರಾರ್ಥನೆಮಾಡಿ ಆ ಇಬ್ಬರ ಮೇಲೆ ಹಸ್ತಾರ್ಪಣ ಮಾಡಿ ಅವರನ್ನು ಕಳುಹಿಸಿಕೊಟ್ಟರು.**

## ✌ ಸಾರಾಂಶ – ಪ್ರಾರ್ಥನೆ ಎಂದರೇನು?

ಪ್ರಾರ್ಥನೆಯೆಂದರೆ ಮನಸ್ಸಿಲ್ಲದ ದೇವರಿಗೆ ನಮ್ಮ ಪರವಾಗಿ ಕಾರ್ಯಮಾಡುವಂತೆ ಭಿಕ್ಷೆ ಬೇಡುವುದಲ್ಲ. ದೇವರಿಗೆ ನಮ್ಮ ಎಲ್ಲಾ ಸಮಸ್ಯೆಗಳನ್ನು ಹೇಳುವ ಸಮಯವಲ್ಲ. ನಮ್ಮ ಯೋಗ್ಯತೆಯ ಅಥವಾ ಇತರರ ಯೋಗ್ಯತೆಯ ಬಗ್ಗೆ ದೇವರಿಗೆ ಮನವರಿಕೆ ಮಾಡಿಸುವದಲ್ಲ. ಇತರರಿಗೆ ನಾವು ಎಷ್ಟು ಆತ್ಮಿಕ ವ್ಯಕ್ತಿಗಳು ಎಂಬುದನ್ನು ತೋರಿಸಿಕೊಳ್ಳುವುದೂ ಅಲ್ಲ.

ಪ್ರಾರ್ಥನೆಯೆಂದರೆ ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಸಮಯ ಕಳೆಯುವುದಾಗಿದೆ – ಆತನೊಂದಿಗೆ ಮಾತನಾಡುವುದು ಮತ್ತು ಒಬ್ಬ ಅತ್ಯಂತ ಕೃಪೆಯುಳ್ಳ ಅದ್ಭುತ ಸ್ನೇಹಿತನಿದ್ದರೆ ಅವನು ಹೇಳುವುದನ್ನು ಕೇಳುವಂತೆಯೇ ದೇವರ ಉತ್ತರವನ್ನು ಕೇಳಿಸಿಕೊಳ್ಳುವುದು. ಪ್ರಾರ್ಥನೆಯೆಂದರೆ ನಮ್ಮ ಅಗತ್ಯತೆಗಳನ್ನು ಮತ್ತು ಇತರರ ಅಗತ್ಯತೆಗಳನ್ನು ದೇವರ ಮುಂದೆ ತರುವ ಸಮಯವಾಗಿದೆ.

ದೇವರು ನಮಗೆ ಪ್ರಾರ್ಥನೆ ಮಾಡುವುದಕ್ಕಾಗಿ ಎರಡು ಮಾರ್ಗಗಳನ್ನು ಒದಗಿಸಿದ್ದಾರೆ – ಆತ್ಮದಲ್ಲಿ ಮತ್ತು ಬುದ್ಧಿಯಲ್ಲಿ. ನಮ್ಮ ಬುದ್ಧಿ/ತಿಳುವಳಿಕೆಯು ಜ್ಞಾನೋದಯವಾಗುವವರೆಗೆ ನಾವು ಆತ್ಮದಿಂದ ಪ್ರಾರ್ಥಿಸುವಂತೆ ದೇವರು ನಮಗೆ ಸಾಮರ್ಥ್ಯವನ್ನು ನೀಡಿದ್ದಾರೆ. ಯಾಕೆಂದರೆ ಆಗ ನಾವು ನಮ್ಮ ಸನ್ನಿವೇಶಗಳಲ್ಲಿ ದೇವರ ಚಿತ್ತವು ನೆರವೇರುವಂತೆ ಪ್ರಾರ್ಥಿಸುವುದಕ್ಕಾಗುವುದು.

ಪ್ರಾರ್ಥನೆಯು ಪ್ರತಿಯೊಬ್ಬ ವಿಶ್ವಾಸಿಯ ಸೌಭಾಗ್ಯವೂ ಹಾಗೂ ಜವಾಬ್ದಾರಿಯೂ ಆಗಿದೆ.

**ವಿಮರ್ಶೆಗಾಗಿ ಪ್ರಶ್ನೆಗಳು**

1. ಪ್ರಾರ್ಥನೆಯ ಬಗ್ಗೆ ನಿಮ್ಮ ಸ್ವಂತ ವ್ಯಾಖ್ಯಾನವನ್ನು ಬರೆಯಿರಿ. ನಿಮ್ಮ ನಿಲುವನ್ನು ಸಮರ್ಥಿಸಲು ದೇವರ ವಾಕ್ಯದಿಂದ ಕನಿಷ್ಠ ಎರಡು ವಚನಭಾಗಗಳನ್ನು ಬಳಸಿರಿ.

2. ಅಪೋಸ್ತಲ ಪೌಲನು ತಿಳಿಸಿರುವ ಪ್ರಾರ್ಥನೆಯ ಎರಡು ಭಾಷೆಗಳು ಯಾವವು? ಅವೆರಡೂ ಹೇಗೆ ಒಟ್ಟಾಗಿ ಹರಿಯುತ್ತವೆ ಎಂಬುದನ್ನು ವಿವರಿಸಿರಿ.

3. ಪ್ರಾರ್ಥನೆಯು ನಿಮಗೆ ಯಾಕೆ ಮುಖ್ಯವಾದದ್ದು?

*ಪಾಠ ಎರಡು*

# ಮೂಲಭೂತ ಅಂಶಗಳನ್ನು ಅರ್ಥಮಾಡಿಕೊಳ್ಳುವುದು

ನಾವು ಪರಿಣಾಮಕಾರಿಯಾಗಿ ಪ್ರಾರ್ಥಿಸುವ ಮುನ್ನ, ಯಾರು ಪ್ರಾರ್ಥಿಸಬಹುದು – ಅಂದರೆ ಕ್ರಿಸ್ತನಲ್ಲಿ ನಮ್ಮ ಸ್ಥಾನವೇನು ಮತ್ತು ನಮ್ಮ ಅಧಿಕಾರವೇನು - ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

**ಯಾರು ಪ್ರಾರ್ಥಿಸಬಹುದು?**

ರಕ್ಷಣೆಗಾಗಿ – ಅಂದರೆ ಯೇಸು ದೇವರ ಮಗನಾಗಿದ್ದಾನೆ ಎಂದು ನಂಬಿ – ಮಾಡುವ ಪ್ರಾರ್ಥನೆಗೆ ಯಾವಾಗಲೂ ಉತ್ತರ ಸಿಗುತ್ತದೆ. ಕ್ರೂಜೆಯ ಮೇಲೆ ಸಾಯುತ್ತಿದ್ದ ಕಳ್ಳನು ಪ್ರಾರ್ಥಿಸಿದನು ಮತ್ತು ಅವನ ಪ್ರಾರ್ಥನೆಗೆ ಉತ್ತರ ಸಿಕ್ಕಿತು.

ಲೂಕ 23:42,43

ತೆರಿಗೆ ವಸೂಲಿಮಾಡುವವನು ಪ್ರಾರ್ಥಿಸಿದನು ಮತ್ತು ಅವನ ಪ್ರಾರ್ಥನೆಗೆ ಉತ್ತರ ಸಿಕ್ಕಿತು.

ಪ್ರಾರ್ಥನೆಯು ದೇವರ ಮಕ್ಕಳಿಗಿರುವ ಅದ್ಭುತವಾದ ಸೌಭಾಗ್ಯವಾಗಿದೆ. ನಾವು ಪ್ರಾರ್ಥನೆಯಲ್ಲಿ ದೇವರ ಸಮೀಪಕ್ಕೆ ಬರುವ ಹಕ್ಕನ್ನು ಹೊಂದಿದ್ದೇವೆ. ಈಗ ನಾವು ದೇವರ ವಾಕ್ಯದಿಂದ ಯಾರು ಪ್ರಾರ್ಥಿಸಬಹುದು ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ನೋಡೋಣ, ನಂತರ ದೇವರು ನಮಗೆ ನೀಡಿರುವ ಸ್ಥಾನ ಮತ್ತು ಅಧಿಕಾರದ ಬಗ್ಗೆ ಅಧ್ಯಯನ ಮಾಡೋಣ.

**ದೇವರ ವಾಕ್ಯದಿಂದ ಉದಾಹರಣೆಗಳು**

ಕುಲವೆಂಬ ವ್ಯತ್ಯಾಸವಿಲ್ಲ. ಹಣಕಾಸಿನ ಯಶಸ್ಸು ಯಾವುದೇ ವ್ಯತ್ಯಾಸವನ್ನುಂಟು ಮಾಡುವುದಿಲ್ಲ. ದೇವರು ತನ್ನ ಹೆಸರನ್ನು ಕರೆಯುವ, ತಮ್ಮನ್ನು ತಗ್ಗಿಸಿಕೊಳ್ಳುವ, ತನ್ನಲ್ಲಿ ಉಲ್ಲಾಸಿಸುವ, ಅವರ ಮಾರ್ಗವನ್ನು ತನಗೆ ಒಪ್ಪಿಸುವ ಜನರ ಪ್ರಾರ್ಥನೆಯನ್ನು ಕೇಳುತ್ತಾನೆ.

✳ *ದೇವರ ಜನರು*

**2 ಪೂರ್ವ 7:14 ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು.**

✳ *ಯೆಹೋವನಲ್ಲಿ ಸಂತೋಷಿಸುವವರು*

**ಕೀರ್ತನೆ 37:4 ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು.**

* *ಆತನಲ್ಲಿ ಭರವಸವಿಡುವವರು*

**ಕೀರ್ತನೆ 37:5 ನಿನ್ನ ಭೂಯಾತ್ರೆಯ ಚಿಂತೆಯನ್ನು ಯೆಹೋವನಿಗೆ ವಹಿಸಿಬಿಟ್ಟು ಭರವಸದಿಂದಿರು; ಆತನೇ ಅದನ್ನು ಸಾಗಿಸುವನು.**

* *ದೀನರು*

**ಕೀರ್ತನೆ 10:17 ಯೆಹೋವನೇ, ನೀನು ದೀನರ ಕೋರಿಕೆಯನ್ನು ನೆರವೇರಿಸುವವನೇ ಆಗಿದ್ದೀ; ಅವರ ಹೃದಯವನ್ನು ಧೈರ್ಯಪಡಿಸುತ್ತೀ; ಅವರ ಮೊರೆಗೆ ಕಿವಿಗೊಡುತ್ತೀ.**

* *ಬಡವರು ಮತ್ತು ಗತಿಹೀನರು*

**ಕೀರ್ತನೆ 69:33a ಯೆಹೋವನು ಬಡವರ ಮೊರೆಗೆ ಲಕ್ಷ್ಯಕೊಡುವನು...**

**ಕೀರ್ತನೆ 102:15 ಯೆಹೋವನು ಗತಿಹೀನರ ಮೊರೆಯನ್ನು ತಿರಸ್ಕರಿಸದೆ ನೆರವೇರಿಸಿದನೆಂದೂ...**

* *ಬಾಧೆಪಡುವವರು*

**ಯಾಕೋಬ 5:13a ನಿಮ್ಮಲ್ಲಿ ಬಾಧೆಪಡುವವನು ಇದ್ದಾನೋ? ಅವನು ದೇವರನ್ನು ಪ್ರಾರ್ಥಿಸಲಿ .**

* *ತುಳಿತಕ್ಕೊಳಗಾದವರು*

**ಯೆಶಾಯ 19:20 ಅವು ಐಗುಪ್ತದೇಶದಲ್ಲಿ ಸೇನಾಧೀಶ್ವರನಾದ ಯೆಹೋವನ ಗುರುತಾಗಿಯೂ ಸಾಕ್ಷಿಯಾಗಿಯೂ ಇರುವವು; ಹಿಂಸಕರ ದೆಸೆಯಿಂದ ಯೆಹೋವನನ್ನು ಕೂಗಿಕೊಳ್ಳಲು ಆತನು ಅವರಿಗಾಗಿ ಹೋರಾಡುವ ಶೂರನಾದ ರಕ್ಷಕನನ್ನು ಕಳುಹಿಸಿ ಅವರನ್ನುದ್ಧರಿಸುವನು**

**ಯಾಕೋಬ 5:4 ನಿಮ್ಮ ಹೊಲಗಳನ್ನು ಕೊಯಿದವರ ಕೂಲಿಯನ್ನು ನೀವು ಅನ್ಯಾಯವಾಗಿ ಹಿಡಿದುಕೊಂಡಿದ್ದೀರಿಅಗೋ ., ಆ ಕೂಲಿ ನಿಮ್ಮ ಮೇಲೆ ಕೂಗಿಕೊಳ್ಳುತ್ತದೆ; ಮತ್ತು ಕೊಯಿದವರ ಕೂಗು ಸಕಲಸೇನಾಧಿಪತಿಯಾಗಿರುವ ಕರ್ತನ ಕಿವಿಗಳಲ್ಲಿ ಬಿದ್ದಿದೆ.**

* *ವಿಧವೆಯರು ಮತ್ತು ತಂದೆಯಿಲ್ಲದವರು*

**ವಿಮೋಚನಕಾಂಡ 22:22,23 ವಿಧವೆಯರನ್ನಾಗಲಿ ದಿಕ್ಕಿಲ್ಲದ ಮಕ್ಕಳನ್ನಾಗಲಿ ಬಾಧಿಸಬಾರದು. ನೀವು ಇಂಥವರನ್ನು ಬಾಧಿಸಿದರೆ ಅವರು ನನಗೆ ಮೊರೆಯಿಡುವರು; ಆ ಮೊರೆಗೆ ನಾನು ಕಿವಿಗೊಡುವೆನೆಂದು ತಿಳಿದುಕೊಳ್ಳಿರಿ.**

* *ಜ್ಞಾನ ಕಡಿಮೆಯುಳ್ಳವರು*

**ಯಾಕೋಬ 1:5 ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ.**

✱ *ಸತ್ಯವನ್ನು ಹುಡುಕುವವರು*

**ಅ.ಕೃ. 10:30,31 ಅದಕ್ಕೆ ಕೊರ್ನೇಲ್ಯನು - ನಾನು ನಾಲ್ಕು ದಿವಸಗಳ ಹಿಂದೆ ಮಧ್ಯಾಹ್ನದ ಮೇಲೆ ಮೂರು ಗಂಟೆಗೆ ನಡೆಯತಕ್ಕ ದೇವರ ಪ್ರಾರ್ಥನೆಯನ್ನು ಇಷ್ಟು ಹೊತ್ತಿನವರೆಗೂ ನನ್ನ ಮನೆಯಲ್ಲಿ ಮಾಡುತ್ತಿದ್ದಾಗ ಹೊಳೆಯುವ ವಸ್ತ್ರವನ್ನು ಧರಿಸಿಕೊಂಡಿದ್ದ ಒಬ್ಬ ಮನುಷ್ಯನು ನನ್ನೆದುರಿಗೆ ನಿಂತುಕೊಂಡು - ಕೊರ್ನೇಲ್ಯನೇ, ನಿನ್ನ ಪ್ರಾರ್ಥನೆಯು ಕೇಳಿಬಂತು, ನಿನ್ನ ದಾನಧರ್ಮಗಳು ದೇವರ ಸನ್ನಿಧಾನದಲ್ಲಿ ನೆನಪಿಗೆ ಬಂದವು.**

✱ *ನೀತಿವಂತರು*

**ಜ್ಞಾನೋಕ್ತಿ 15:29 ಯೆಹೋವನು ದುಷ್ಟರಿಗೆ ದೂರ, ಶಿಷ್ಟರ ಬಿನ್ನಹಕ್ಕೆ ಹತ್ತಿರ.**

## ಕ್ರಿಸ್ತನಲ್ಲಿ ನಮ್ಮ ಸ್ಥಾನ

ನಾವು ಹೇಗೆ ಪ್ರಾರ್ಥಿಸಬೇಕೆಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ, ಮೊದಲು ಕ್ರಿಸ್ತನಲ್ಲಿರುವ ನಮ್ಮ ಸ್ಥಾನವನ್ನು ಅರ್ಥಮಾಡಿಕೊಳ್ಳಬೇಕು. ನಾವು ಅನೇಕಾನೇಕ ವರ್ಷಗಳಿಂದ ದೇವರ ಮುಂದೆ "ಕಳೆದುಹೋಗಿರುವ ಬಡ ಪಾಪಿಯಾಗಿ" ಬಂದಿದ್ದೇವೆ. ನಾವು ಅಯೋಗ್ಯತನದ ಹಾಗೂ ಅಪರಾಧದ ಮನೋಭಾವನೆಗಳಿಂದ ಆತನ ಮುಂದೆ ಬಂದಿದ್ದೇವೆ. ದೇವರು ನಮ್ಮ ಬಗ್ಗೆ ಚಿಂತಿಸುತ್ತಾನೆ, ನಮ್ಮ ಪ್ರಾರ್ಥನೆಯನ್ನು ಕೇಳುತ್ತಾನೆ ಮತ್ತು ನಮ್ಮ ಮೂಲಕ ಕಾರ್ಯಮಾಡುತ್ತಾನೆ ಎಂಬುದನ್ನು ನಂಬಲು ಸಾಧ್ಯವೇ ಇಲ್ಲದವರಂತೆ ನಮ್ಮನ್ನು ನಾವೇ ಅಷ್ಟರ ಮಟ್ಟಿಗೆ ನಿರ್ಗತಿಕರಾಗಿ ಕಂಡಿದ್ದೇವೆ. ಆದರೆ ದೇವರು ನಮ್ಮನ್ನು ಹಾಗೆ ಕಾಣುವುದಿಲ್ಲ.

ನಾವು ಕಳೆದುಹೋದ ಬಡ ಪಾಪಿಗಳಾಗಿದ್ದೆವು, ಆದರೆ ನಾವು ಪಾಪವೆಂಬ ಗುಲಾಮರ ಮಾರುಕಟ್ಟೆಯಿಂದ ಕ್ರಿಸ್ತನ ಮೂಲಕ ಕೊಂಡುಕೊಳ್ಳಲ್ಪಟ್ಟಿದ್ದೇವೆ. ನಾವು ಆಯ್ದ ಜನಾಂಗವಾಗಿಯೂ ರಾಜಯೋಗ್ಯ ಯಾಜಕವರ್ಗದವರಾಗಿಯೂ ಮಾಡಲ್ಪಟ್ಟಿದ್ದೇವೆ. ನಾವು ಪ್ರಾರ್ಥಿಸುವಾಗ ನಮ್ಮನ್ನು ಈ ಸ್ಥಾನದಲ್ಲಿರಿಸಿಕೊಳ್ಳಬೇಕು.

## ಪಾಪವು ಯಾವಾಗಲೂ ಒಂದು ಅಡ್ಡಿಯಾಗಿದೆ

✱ *ಯಜ್ಞಬಲಿಗಳ ಸ್ಥಾಪನೆ*

ಆದಾಮ ಮತ್ತು ಹವ್ವರು ಪಾಪ ಮಾಡಿದಾಗ ಅವರು ಇನ್ನು ಮುಂದೆ ದೇವರೊಂದಿಗೆ ಮುಕ್ತವಾದ ಅನ್ಯೋನ್ಯತೆಯನ್ನು ಹೊಂದಿರಲಿಲ್ಲ. ಅವರು ದೇವರೊಂದಿಗೆ ಮುಖಾಮುಖಿಯಾಗಿ ಮಾತನಾಡಲು ಮತ್ತು ನಡೆಯಲು ಸಾಧ್ಯವಿದ್ದ ಏದೆನ್ ತೋಟವನ್ನು ಬಿಟ್ಟು ಹೊರಬರಬೇಕಾಯಿತು. ದೇವರು ಅವರಿಗೆ ಹೊದಿಕೆಯನ್ನು ನೀಡುವದಕ್ಕಾಗಿ ಮೊದಲ ರಕ್ತ ಬಲಿಯನ್ನು ಮಾಡಿದರು.

**ಆದಿಕಾಂಡ 3:8-10,21 ತರುವಾಯ ಯೆಹೋವದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀಪುರುಷರು ಆತನ ಸಪ್ಪಳವನ್ನು ಕೇಳಿ ಆತನಿಗೆ ಕಾಣಿಸಬಾರದೆಂದು ತೋಟದ ಮರಗಳ ಹಿಂದೆ ಅಡಗಿಕೊಂಡರು. ಯೆಹೋವದೇವರು ಮನುಷ್ಯನನ್ನು - ನೀನು ಎಲ್ಲಿರುತ್ತೀ ಎಂದು**

**ಕೂಗಿ ಕೇಳಲು ಅವನು ನೀನು ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ನಾನು -**
**.ಕೇಳಿ ಬೆತ್ತಲೆಯಾಗಿದ್ದೇನಲ್ಲಾ ಎಂದು ಹೆದರಿ ಅಡಗಿಕೊಂಡೆನು ಅಂದನು**

**ಯೆಹೋವದೇವರು ಆದಾಮನಿಗೂ ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು.**

ಆದಿಕಾಂಡ ನಾಲ್ಕನೆ ಅಧ್ಯಾಯದಲ್ಲಿ, ನಾವು ಕಾಯಿನ ಮತ್ತು ಹೇಬೆಲರು ಕಾಣಿಕೆಗಳನ್ನು – ಯಜ್ಞಬಲಿಗಳನ್ನು – ಕರ್ತನಿಗೆ ಅರ್ಪಿಸಿದ ಕಥೆಯನ್ನು ನೋಡುತ್ತೇವೆ. ಒಂದು ಕಾಣಿಕೆಯನ್ನು ದೇವರು ಅಂಗೀಕರಿಸಿದರು ಇನ್ನೊಂದನ್ನು ಅಂಗೀಕರಿಸಲಿಲ್ಲ. ಯಾಕೆ? ಕಾಯಿನನು ರಕ್ತಧಾರೆಯಿಲ್ಲದೆ ಯೆಹೋವನ ಸನ್ನಿಧಾನದಲ್ಲಿ ಪ್ರವೇಶಿಸಿದನು.

**ಆದಿಕಾಂಡ 4:2b-5a ತರುವಾಯ ಅವನ ತಮ್ಮನಾದ ಹೇಬೆಲನನ್ನು ಹೆತ್ತಳು. ಹೇಬೆಲನು ಕುರಿಕಾಯುವವನಾದನು; ಕಾಯಿನನು ವ್ಯವಸಾಯ ಮಾಡುವವನಾದನು.**

**ಕಾಲಾಂತರದಲ್ಲಿ ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಸಮರ್ಪಿಸಿದನು.**

**ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮಮಾಡಿದನು.**

**ಯೆಹೋವನು ಹೇಬೆಲನನ್ನೂ ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನನ್ನೂ ಅವನ ಕಾಣಿಕೆಯನ್ನೂ ಮೆಚ್ಚಲಿಲ್ಲ. ಇದರಿಂದ ಕಾಯಿನನು ಬಹು ಕೋಪಗೊಂಡನು; ಅವನ ಮುಖವು ಕಳೆಗುಂದಿತು.**

**ಮೋಶೆಯ ಮೂಲಕ ಧರ್ಮಶಾಸ್ತ್ರವು ಕೊಡಲ್ಪಟ್ಟಿತು ಮತ್ತು ದೇವರು ವ್ಯತ್ಯಾಸವಾದ ಪಾಪಗಳಿಗೆ ವ್ಯತ್ಯಾಸವಾದ ಯಜ್ಞಬಲಿಗಳನ್ನು ನೇಮಿಸಿದರು. ಆದರೆ ಹಳೆ ಒಡಂಬಡಿಕೆಯ ಕಾಲದುದ್ದಕ್ಕೂ ಯಾವಾಗಲೂ ಪುರುಷರು ಮತ್ತು ಸ್ತ್ರೀಯರು ಯಜ್ಞಬಲಿಗಳ ಮೂಲಕ – ನಿರ್ದೋಷ ಪ್ರಾಣಿಗಳ ರಕ್ತಧಾರೆಯ ಮೂಲಕ – ತನ್ನ ಸಮೀಪಕ್ಕೆ ಬರುವಂತೆ ಮಾರ್ಗ ಮಾಡಿದರು.**

**ಎಲ್ಲಾ ತ್ಯಾಗಬಲಿಗಳು ಪರಿಪೂರ್ಣವಾದ ತ್ಯಾಗಬಲಿಯ ಕಡೆಗೆ – ಅಂದರೆ ಬರಲಿದ್ದ ದೇವರ ಕುರಿಮರಿಯ ತ್ಯಾಗಬಲಿಯ ಕಡೆಗೆ ಬೆರಳು ಮಾಡಿ ತೋರಿಸಿದವು.**

* *ಯಾಜಕರು ಸ್ಥಾಪಿಸಲ್ಪಟ್ಟದ್ದು*

ದೇವರು ಜನರ ಹಾಗೂ ತನ್ನ ನಡುವೆ ಮಧ್ಯವರ್ತಿಗಳಾಗಿರಲು ಯಾಜಕರನ್ನು ನೇಮಿಸಿದನು. ಅವರು ಜನರಿಗಾಗಿ ಬಲಿಗಳನ್ನು ಅರ್ಪಿಸಿದರು. ದೇವರು ಪ್ರಧಾನ ಯಾಜಕನನ್ನು ನೇಮಿಸಿದರು, ಆ ಪ್ರಧಾನ ಯಾಜಕನು ವರ್ಷಕ್ಕೆ ಒಂದು ಬಾರಿ ಅತೀ ಪವಿತ್ರ ಸ್ಥಳವನ್ನು ಪ್ರವೇಶಿಸಿ ಕೃಪಾ ಸಿಂಹಾಸನದ ಸಮೀಪಕ್ಕೆ ಬರಬಹುದಾಗಿತ್ತು. ಅವನು ನೇಮಿಸಲ್ಪಟ್ಟ ಬಲಿಯನ್ನು ಅರ್ಪಿಸಿದ ನಂತರ ಜನರ ಪರವಾಗಿ ದೇವರ ಸನ್ನಿಧಾನವನ್ನು ಪ್ರವೇಶಿಸಬಹುದಾಗಿತ್ತು.

**ವಿಮೋಚನಕಾಂಡ 25:17,21,22a ಅದಲ್ಲದೆ ಚೊಕ್ಕ ಬಂಗಾರದ ಕೃಪಾಸನವನ್ನು ಮಾಡಿಸಬೇಕುಅದು ಎರಡುವರೆ ಮೊಳ ಉದ್ದವೂ ಒಂದುವರೆ . .ಮೊಳ ಅಗಲವೂ ಆಗಿರಬೇಕು**

**ಆ ಕೃಪಾಸನವನ್ನು ಮಂಜೂಷದ ಮೇಲಿಡಬೇಕುನಾನು ನಿನಗೆ ಕೊಡುವ . .ಆಜ್ಞಾಶಾಸನಗಳನ್ನು ಆ ಮಂಜೂಷದೊಳಗೆ ಇಡಬೇಕು ಅಲ್ಲಿಯೇ ನಾನು ನಿನಗೆ ದರ್ಶನವನ್ನು ಕೊಡುವೆನು; ಕೃಪಾಸನದ ಮೇಲೆ ಆಜ್ಞಾಶಾಸನಗಳನ್ನು ಇಟ್ಟಿರುವ ಮಂಜೂಷದ ಮೇಲಣ ಎರಡು ಕೆರೂಬಿಗಳ ನಡುವೆಯೇ ನಾನು ಇದ್ದು ನಿನ್ನ ಸಂಗಡ ಮಾತಾಡಿ ನೀನು ಇಸ್ರಾಯೇಲ್ಯರಿಗೆ ಆಜ್ಞಾಪಿಸಬೇಕಾಗಿರುವ ಎಲ್ಲಾ ಸಂಗತಿಗಳನ್ನು ತಿಳಿಸುವೆನು.**

ಯಾಜಕನ ಕಾರ್ಯಗಳು ಯೇಸುವಿನ ಕಡೆಗೆ ಬೆರಳು ಮಾಡಿ ತೋರಿಸಿದವು. ಆತನು ನಮ್ಮ ಪ್ರಧಾನ ಯಾಜಕನಾದನು.

**ಯೇಸು -**

✳ *ನಮ್ಮ ಯಜ್ಞವಾದರು*

ಯೇಸು ಶಿಲುಬೆಯ ಮೇಲೆ ಪ್ರಾಣ ಬಿಟ್ಟಾಗ ನಮ್ಮ ಪಾಪಗಳಿಗಾಗಿ ಪರಿಪೂರ್ಣವಾದ ಯಜ್ಞವಾದರು. ಅವರು ಪಾಪದ ದಂಡನೆಯನ್ನು ಇಲ್ಲದಂತೆ ಮಾಡಿದರು.

**ಇಬ್ರಿಯರಿಗೆ 9:26b-27 ... ಆದರೆ ಒಂದೇ ಸಾರಿ ಯುಗಗಳ ಸಮಾಪ್ತಿಯಲ್ಲೇ ಆತನು ಪಾಪನಿವಾರಣೆ ಮಾಡಬೇಕೆಂಬ ಉದ್ದೇಶದಿಂದ ತನ್ನನ್ನು ಯಜ್ಞಮಾಡಿಕೊಳ್ಳುವವನಾಗಿ ಪ್ರತ್ಯಕ್ಷನಾದನು. ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪೂ ಮನುಷ್ಯರಿಗೆ ಹೇಗೆ ನೇಮಕವಾಗಿದೆಯೋ ಹಾಗೆಯೇ ಕ್ರಿಸ್ತನು ಸಹ ಬಹುಜನರ ಪಾಪಗಳನ್ನು ಹೊತ್ತುಕೊಳ್ಳುವದಕ್ಕೋಸ್ಕರ ಒಂದೇ ಸಾರಿ ಸಮರ್ಪಿತನಾದನು...**

**ಇಬ್ರಿಯರಿಗೆ 10:12-14 ಆದರೆ ಈ ಯಾಜಕನು ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೊಂಡನು. ಅಂದಿನಿಂದ ತನ್ನ ವಿರೋಧಿಗಳು ತನ್ನ ಪಾದಪೀಠವಾಗಿ ಹಾಕಲ್ಪಡುವ ತನಕ ಆತನು ಕಾದಿರುವನು. ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.**

✳ *ನಮ್ಮ ಪ್ರಧಾನ ಯಾಜಕರಾದರು*

ಇಬ್ರಿಯರಿಗೆ ಬರೆದ ಪತ್ರವು ಕ್ರಿಸ್ತನು ಹೇಗೆ ತನ್ನ ಸ್ವಂತ ರಕ್ತದಿಂದ ನಮ್ಮ ಪ್ರಧಾನ ಯಾಜಕನಾಗಿ ಪ್ರತಿಯೊಬ್ಬ ವಿಶ್ವಾಸಿಯೂ ದೇವರ ಸನ್ನಿಧಾನಕ್ಕೆ ಬರುವಂತೆ ಮಾರ್ಗವನ್ನು ತೆರೆದರು ಎಂಬುದನ್ನು ತೋರಿಸುತ್ತದೆ.

**ಇಬ್ರಿಯರಿಗೆ 2:17 ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತುಹೀಗೆ ಆತನು ಜನರ . ಪಾಪಗಳನ್ನು ನಿವಾರಣಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು.**

**ಇಬ್ರಿಯರಿಗೆ 9:11,14  ಆದರೆ ಕ್ರಿಸ್ತನು ಈಗ ದೊರೆತಿರುವ ಮೇಲುಗಳನ್ನು ಕುರಿತು ಮಹಾಯಾಜಕನಾಗಿ ಬಂದು ಕೈಯಿಂದ ಕಟ್ಟಲ್ಪಡದಂಥ ಅಂದರೆ ಈ ಸೃಷ್ಟಿಗೆ ಸಂಬಂಧಪಡದಂಥ ಘನವಾಗಿಯೂ ಉತ್ಕೃಷ್ಟವಾಗಿಯೂ ಇರುವ ಗುಡಾರದಲ್ಲಿ ಸೇವೆಯನ್ನು ಮಾಡುವವನಾಗಿ...**

**ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವದಲ್ಲವೇ.**

✳ *ನಮ್ಮ ಮಾರ್ಗವಾದರು*

**ಯೋಹಾನ 14:6  ಯೇಸು ಅವನಿಗೆ ನಾನೇ ಮಾರ್ಗವೂ ಸತ್ಯವೂ ಜೀವವೂ - ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ.**

ದೇವಾಲಯದಲ್ಲಿ ಯಾಜಕರು ಸೇವೆ ಸಲ್ಲಿಸುತ್ತಿದ್ದ ಪರಿಶುದ್ಧ ಸ್ಥಳವಿತ್ತು ಹಾಗೂ ಪ್ರಧಾನ ಯಾಜಕನು ಮಾತ್ರ ಸೇವೆ ಸಲ್ಲಿಸಬಹುದಾದ ಅತೀ ಪರಿಶುದ್ಧ ಸ್ಥಳವಿತ್ತು ಮತ್ತು ಅತೀ ಪರಿಶುದ್ಧ ಸ್ಥಳವನ್ನು ಪರಿಶುದ್ಧ ಸ್ಥಳದಿಂದ ಬೇರ್ಪಡಿಸಿದ ಒಂದು ಭಾರವಾದ ತೆರೆಯಿತ್ತು. ಅದು ದೇವರ ಸನ್ನಿಧಾನದಿಂದ ಮಾನವಕುಲವು ಬೇರ್ಪಟ್ಟಿರುವುದರ ಸಂಕೇತವಾಗಿತ್ತು. ಪ್ರಧಾನ ಯಾಜಕನು ವರ್ಷಕ್ಕೆ ಒಂದು ಬಾರಿ ದೇವರ ಸನ್ನಿಧಾನವನ್ನು ಪ್ರವೇಶಿಸಬೇಕಾದಾಗ ಈ ತೆರೆಯನ್ನು ಹಾದು ಬರಲೇ ಬೇಕಾಗಿತ್ತು.

ಯೇಸು ಶಿಲುಬೆಯ ಮೇಲೆ ಪ್ರಾಣ ಬಿಟ್ಟ ಕ್ಷಣದಲ್ಲಿ ಈ ತೆರೆಯು ಅಲೌಕಿಕವಾಗಿ ಮೇಲಿನಿಂದ ಕೆಳಗೆ ಹರಿದು ಹೋಯಿತು.

**ಮತ್ತಾಯ 27:50,51a  ಯೇಸು ತಿರಿಗಿ ಮಹಾಧ್ವನಿಯಿಂದ ಕೂಗಿ ಪ್ರಾಣಬಿಟ್ಟನು. ಆಗ ಇಗೋ ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು...**

ಇಂದಿಗೂ ನಾವು ದೇವರ ಸನ್ನಿಧಾನವನ್ನು ಪ್ರವೇಶಿಸುವಾಗ ತೆರೆಯ ಮುಖಾಂತರವೇ ಬರುತ್ತೇವೆ – ಅಂದರೆ ಯೇಸುವಿನ ಮುಖಾಂತರ, ಪರಿಶುದ್ಧಾತ್ಮನಿಂದ ಬರುತ್ತೇವೆ. ನಾವು ಪ್ರಾಯಶ್ಚಿತ್ತ ದಿನಕ್ಕಾಗಿ ಕಾಯಬೇಕಾಗಿಲ್ಲ. ನಾವು ನಮ್ಮ ಪಾಪಕ್ಕಾಗಿ ಯಜ್ಞಬಲಿಯನ್ನು ತೆಗೆದುಕೊಂಡು ಅದನ್ನು ಯಾಜಕನ ಬಳಿಗೆ ಕೊಟ್ಟು ಅವನು ನಮ್ಮ ಪರವಾಗಿ ದೇವರ ಸನ್ನಿಧಾನಕ್ಕೆ ಹೋಗಬೇಕಾಗಿಲ್ಲ. ನಾವು ಆಗಿನ ಕಾಲದ ಯಾಜಕರಂತೆಯೇ ಶುದ್ಧಹೃದಯದೊಂದಿಗೆ ನಂಬಿಕೆಯಿಂದ ಬಂದರೆ ಸಾಕು.

**ಇಬ್ರಿಯರಿಗೆ 10:18-22 ಪಾಪಗಳು ಪರಿಹಾರವಾದಲ್ಲಿ ಇನ್ನೂ ಅವುಗಳ**

**ವಿಷಯದಲ್ಲಿ ಸಮರ್ಪಣೆಮಾಡುವದು ಅವಶ್ಯವಿಲ್ಲ.**

**ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ**

**ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ**

**ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ. ಆದಕಾರಣ ನೀನಪರಾಧಿಯೆಂದು ನಮ್ಮ ಮನಸ್ಸು ನಮಗೆ ಸಾಕ್ಷಿಹೇಳದಂತೆ ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ.**

**ಯೇಸುವಿನ ತ್ಯಾಗಬಲಿಯಿಂದಾಗಿ ನಾವು -**

ಯೇಸು ನಮಗಾಗಿ ತ್ಯಾಗಬಲಿಯಾಗಿ ತನ್ನನ್ನು ಅರ್ಪಿಸಿಕೊಂಡದ್ದನ್ನು ಅರ್ಥಮಾಡಿಕೊಳ್ಳಲು ನಮ್ಮ ಇಡೀ ಜೀವಮಾನಕಾಲವೇ ಬೇಕಾಗುತ್ತದೆ. ಅವರು ನಮ್ಮ ಅವಮಾನವನ್ನು ತನ್ನ ಮೇಲೆ ತೆಗೆದುಕೊಂಡರು. ನಮ್ಮ ಶಾಪವನ್ನು ಹೊತ್ತರು. ನಮ್ಮ ಪಾಪದ ದಂಡವನ್ನು ಕಟ್ಟಿದರು. ನಮ್ಮನ್ನು ನೂತನ ಸೃಷ್ಟಿಗಳಾಗಿ ಮಾಡಿದರು! ಈಗ ನಾವು ದೇವರ ಮಗನಾಗಿ ಅಥವಾ ಮಗಳಾಗಿ ಧೈರ್ಯದಿಂದ ಆತನ ಸನ್ನಿಧಾನವನ್ನು ಪ್ರವೇಶಿಸಬಹುದಾಗಿದೆ.

✱ *ಕೊಂಡುಕೊಳ್ಳಲ್ಪಟ್ಟಿದ್ದೇವೆ*

ನಾವು ದೇವರಿಗೆ ಮಹಿಮೆಯನ್ನು ತರುವುದಕ್ಕಾಗಿ ಒಂದು ದೊಡ್ಡ ಕ್ರಯವನ್ನು ಕೊಟ್ಟು ಕೊಂಡುಕೊಳ್ಳಲ್ಪಟ್ಟಿದ್ದೇವೆ.

**1 ಕೊರಿಂಥ 6:19,20 ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪವಿತ್ರಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ.**

✱ *ದೇವರಾದುಕೊಂಡ ಜನಾಂಗವಾಗಿದ್ದೇವೆ*

ನಾವು "ಕಳೆದುಹೋಗಿರುವ ಬಡ ಪಾಪಿಗಳಾಗಿ" ದೇವರ ಸಮೀಪಕ್ಕೆ ಬರಬಾರದು. ನಾವು ಒಮ್ಮೆ ನಿಜವಾಗಲೂ ಹಾಗಿದ್ದೆವು. ಆದರೆ ಈಗ ಪ್ರತಿಯೊಬ್ಬ ವಿಶ್ವಾಸಿಯೂ ಸಹ ದೇವರಾದುಕೊಂಡ ಜನಾಂಗದ ಒಂದು ಭಾಗವಾಗಿದ್ದಾರೆ; ರಾಜವಂಶಸ್ಥರಾದ ಯಾಜಕರಾಗಿದ್ದಾರೆ - ಮೀಸಲಾದ ಜನರಾಗಿದ್ದಾರೆ - ದೇವರ ಸ್ವಕೀಯ ಪ್ರಜೆಯಾಗಿದ್ದಾರೆ.

**1 ಪೇತ್ರ 2:9 ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ ಸೇರಿಸಿದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗುವಂತೆ ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ.**

ಪೇತ್ರನು ವಿಶ್ವಾಸಿಗಳನ್ನು ಒಂದು ಆಯ್ದ ಜನಾಂಗವಾಗಿಯೂ ರಾಜವಂಶಸ್ಥ ಯಾಜಕರಾಗಿಯೂ ಉಲ್ಲೇಖಿಸುತ್ತಾನೆ.

**1 ಪೇತ್ರ 2:9 ನೀವಾದರೋ… ದೇವರಾದುಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ… ಆಗಿದ್ದೀರಿ.**

ಯೇಸು ನಮ್ಮನ್ನು ತನ್ನ ತಂದೆಯಾದ ದೇವರಿಗೆ ರಾಜರನ್ನಾಗಿಯೂ ಯಾಜಕರನ್ನಾಗಿಯೂ ಮಾಡಿದ್ದಾರೆ ಎಂದು ಅಪೋಸ್ತಲನಾದ ಯೋಹಾನನು ಪ್ರಕಟನೆಯಲ್ಲಿ ಬರೆದನು.

**ಪ್ರಕಟನೆ 1:5b,6 ನಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ನಮ್ಮನ್ನು ರಾಜ್ಯವನ್ನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್.**

ನಾವು ಯಾಜಕರೆಂದು ಹಾಗೂ ರಾಜರುಗಳೆಂದು ಕರೆಯಲ್ಪಡುವುದು ಮುಖ್ಯವಾದದ್ದು.

- ಯಾಜಕನು ಮಧ್ಯಸ್ತಿಕೆ ಪ್ರಾರ್ಥನೆಯನ್ನು ಮಾಡುತ್ತಾನೆ ಮತ್ತು ರಾಜನು ಆಳ್ವಿಕೆ ನಡೆಸುತ್ತಾನೆ.
- ಒಂದು ಅಪವಿತ್ರ ಜನರ ಹಾಗೂ ಒಂದು ನೀತಿವಂತ ದೇವರ ನಡುವೆ ಒಬ್ಬ ಯಾಜಕನು ನಿಂತುಕೊಂಡು ಅವರ ಪರವಾಗಿ ಬೇಡಿಕೊಳ್ಳುತ್ತಾನೆ.
- ಒಬ್ಬ ರಾಜನು ಅಧಿಕಾರವುಳ್ಳ ಮತ್ತು ಆಳ್ವಿಕೆ ನಡೆಸುವ ಪ್ರಾರ್ಥನೆಗಳನ್ನು ಮಾಡುತ್ತಾನೆ.

ಯೇಸು ಯೆರುಸಲೇಮಿನ ಪಾಪಗಳ ಬಗ್ಗೆ ಅತ್ತಾಗ ಅವರು ಯಾಜಕನಾಗಿ ಕಾರ್ಯನಿರ್ವಹಿಸಿದರು ಮತ್ತು ಯಾಜಕರುಗಳಾದ ನಮಗೆ ಅವರು ಒಂದು ಮಾದರಿಯಾಗಿದ್ದಾರೆ.

**ಮತ್ತಾಯ 23:37 ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು.**

ಯೇಸು ಬಿರುಗಾಳಿಯ ಮಧ್ಯೆ ನಿಂತುಕೊಂಡು “ಸುಮ್ಮನಿರು, ಮೊರೆಯಬೇಡ” ಎಂದು ಹೇಳಿದಾಗ ಅವರು ಒಬ್ಬ ರಾಜನಾಗಿ ಕಾರ್ಯನಿರ್ವಹಿಸಿದರು ಮತ್ತು ಈ

ಭೂಲೋಕದ ಮೇಲೆ ರಾಜರುಗಳಾದ ನಮಗೆ ಅವರು ಒಂದು ಮಾದರಿಯಾಗಿದ್ದಾರೆ.

**ಮಾರ್ಕ 4:39 ಆತನು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ – "ಸುಮ್ಮನಿರು, ಮೊರೆಯಬೇಡ" ಎಂದು ಅಪ್ಪಣೆಕೊಟ್ಟನುಕೊಡುತ್ತಲೆ ಗಾಳಿ ನಿಂತು ಹೋಗಿ . .ಎಲ್ಲಾ ಶಾಂತವಾಯಿತು**

✳ *ಧೈರ್ಯವಾಗಿ ಪ್ರವೇಶಿಸಬಹುದು*

ಇಬ್ರಿಯರಿಗೆ ಬರೆದ ಪತ್ರದ ಗ್ರಂಥಕರ್ತನು ನಾವು ಯೇಸುವಿನ ರಕ್ತದ ಮುಖಾಂತರ ಅತೀ ಪರಿಶುದ್ಧ ಸ್ಥಳವನ್ನು ಪ್ರವೇಶಿಸುವಾಗ ಧೈರ್ಯದಿಂದಿರಬೇಕೆಂದು ನಮಗೆ ಹೇಳುತ್ತಾನೆ.

**ಇಬ್ರಿಯರಿಗೆ 10:19 ಹೀಗಿರುವಲ್ಲಿ ಸಹೋದರರೇ... ಆತನ ರಕ್ತದ ಮೂಲಕ... ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು.**

**ನಮ್ಮ ಸ್ಥಾನವೇನು?**

ನಂಬಿಕೆಯಲ್ಲಿ ಹಾಗೂ ವಿಧೇಯತೆಯಲ್ಲಿ ನಡೆಯುವ ಪ್ರತಿಯೊಬ್ಬ ವಿಶ್ವಾಸಿಯು ಯೇಸುವಿನ ರಕ್ತದ ಮೂಲಕ ಉಂಟಾದ ವಿಮೋಚನೆಯ ಆಧಾರದ ಮೇಲೆ ಮತ್ತು ಯೇಸು ನಮ್ಮ ಪ್ರಧಾನ ಯಾಜಕನಾಗಿರುವ ಆಧಾರದ ಮೇಲೆ ದೇವರ ಸನ್ನಿಧಾನವನ್ನು ಪ್ರವೇಶಿಸುವ ಹಕ್ಕನ್ನು ಹೊಂದಿದ್ದಾನೆ/ಳೆ. ಇದೇ ಕಾರಣದಿಂದ ನಾವು ಧೈರ್ಯದಿಂದಲೂ ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಆತನ ಸಮೀಪಕ್ಕೆ ಬರಬೇಕೆಂದು ಹೇಳಲ್ಪಟ್ಟಿದ್ದೇವೆ.

**ಇಬ್ರಿಯರಿಗೆ 10:22 ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ.**

**ಇಬ್ರಿಯರಿಗೆ 4:16 ಆದದರಿಂದ ನಾವು ಕರುಣೆಯನ್ನು ಹೊಂದುವಂತೆಯೂ ಆತನ ದಯೆಯಿಂದ ಸಮಯೋಚಿತವಾದ ಸಹಾಯವು ನಮಗೆ ದೊರೆಯುವಂತೆಯೂ ಧೈರ್ಯದಿಂದ ಕೃಪಾಸನದ ಮುಂದೆ ಬರೋಣ.**

ಕ್ರಿಸ್ತನ ರಕ್ತಕ್ಕೆ ಸರಿಯಾದ ಸ್ಥಾನವನ್ನು ಮತ್ತು ಮೌಲ್ಯವನ್ನು ಕೊಡುವವರು ಮಾತ್ರ ಧೈರ್ಯದಿಂದಲೂ ಭರವಸೆಯಿಂದಲೂ ಪ್ರಾರ್ಥನೆಯಲ್ಲಿ ದೇವರ ಸಮೀಪಕ್ಕೆ ಬರಬಹುದು.

**ಕ್ರಿಸ್ತನಲ್ಲಿ ನಮಗಿರುವ ಅಧಿಕಾರ**

ಅನೇಕರು ಹೀಗೆ ಕೇಳುತ್ತಾರೆ, "ದೇವರು ಸಾರ್ವಭೌಮನು ಮತ್ತು ತಾನು ಬಯಸಿದ್ದನ್ನೆಲ್ಲಾ ಜಗತ್ತಿನಲ್ಲಿ ಮಾಡಲು ಶಕ್ತನಾಗಿದ್ದರೆ, ನಾವು ಯಾಕೆ ಪ್ರಾರ್ಥಿಸಬೇಕು?"

"ದೇವರು ಸ್ವರ್ಗದಲ್ಲಿ ಮಾಡಿದಂತೆಯೇ ಭೂಮಿಯಿಂದ ಕೆಟ್ಟದ್ದನ್ನು ಏಕೆ ಓಡಿಸುವುದಿಲ್ಲ?"

“ಬಹುಶಃ, ನಾವು ಸಾಕಷ್ಟು ಸಮಯದವರೆಗೆ ಪ್ರಾರ್ಥಿಸಿದರೆ, ಅಥವಾ ಸಾಕಷ್ಟು ಕಠಿಣವಾಗಿ, ಅಥವಾ ಇನ್ನೂ ಪ್ರಾಮಾಣಿಕವಾಗಿ ಅಥವಾ ಇನ್ನೂ ಸಾಕಷ್ಟು ಅತ್ತರೆ, ದೇವರು ನಮ್ಮ ಪರವಾಗಿ ಕಾರ್ಯ ಮಾಡುವಂತೆ ನಾವು ಆತನನ್ನು ಮನವೊಲಿಸಬಹುದು.”

“ಕೆಲವು ಕಾರಣಗಳಿಂದಾಗಿ, ದೇವರು ಭೂಮಿಯ ಮೇಲೆ ಕಾರ್ಯ ನಡೆಸಲು ಹಿಂಜರಿಯುತ್ತಾನೆ, ಆದರೆ ನಮ್ಮ ಪ್ರಾರ್ಥನೆಗಳು ಆತನನ್ನು ಕಾರ್ಯಮಾಡುವಂತೆ ಮನವೊಲಿಸಬಹುದು. ನಮ್ಮ ಪರಿಸ್ಥಿತಿಯಲ್ಲಿ ದೇವರು ಏಕೆ ಸಾರ್ವಭೌಮವಾಗಿ ಕಾರ್ಯ ಮಾಡುವುದಿಲ್ಲ?

"ಬಹುಶಃ ಇದು ದೇವರಿಗೆ ಅರ್ಥವಾಗದೆ ಇರಬಹುದು, ಮತ್ತು ನಾವು ಅದರ ಬಗ್ಗೆ ಪದೇ ಪದೇ ಆತನಿಗೆ ಹೇಳಬೇಕು - ನಾವು ಬಯಸುವುದನ್ನು ಆತನು ಮಾಡುವವರೆಗೆ ಆತನಿಗೆ ಅದನ್ನು ನೆನಪಿಸುತ್ತಲೇ ಇರಬೇಕು.”

**ದೇವರು ಯಾರು?**

ಶರ್ಲಿ ಗುಥ್ರಿ-ಯವರು ಹೀಗೆ ಬರೆದಿದ್ದಾರೆ, “ದೇವರು ನಮ್ಮ ಜೀವನವನ್ನು ಸುಗಮವಾಗಿಯೂ ನೋವುರಹಿತವಾಗಿಯೂ ಮತ್ತು ಸುಲಭವಾಗಿಯೂ ಜೀವಿಸುವಂತೆ ನಮಗಾಗಿ ತಾನೇ ಎಲ್ಲಾ ಕೆಲಸವನ್ನು ಮಾಡುವ ಸ್ವರ್ಗೀಯ ಪಿತಾಮಹನಲ್ಲ ಅಥವಾ ಮನಬಂದತಹ ರೀತಿಯಲ್ಲಿ ಮತ್ತು ಅನಿರೀಕ್ಷಿತವಾದ ತನ್ನ ಶಕ್ತಿ ಹಾಗೂ ಮಹಿಮೆಯಿಂದ ನಮ್ಮನ್ನು ಭಯಭೀತಗೊಳಿಸುವ ಮಹಾ ಸ್ವರ್ಗೀಯ ನಿರಂಕುಶಾಧಿಕಾರಿಯೂ ಅಲ್ಲ.”

ಜೀವಿಸುವ ಮತ್ತು ಸಾರ್ವಭೌಮನಾದ ದೇವರ ಬಗ್ಗೆ ಸತ್ಯವೇದವು ಎರಡು ವಿಷಯಗಳನ್ನು ನಮಗೆ ಹೇಳುತ್ತದೆ. ಒಂದೆಡೆ, ಆತನು ವಾಸ್ತವವಾಗಿ ಅನಂತನು, ಸರ್ವಶಕ್ತನು, ಸಾರ್ವಭೌಮನು, ಸ್ವಯಂತೃಪ್ತನು ಮತ್ತು ತನಗೆ ಇಷ್ಟವಾದದ್ದನ್ನು ಮಾಡಲು ಶಕ್ತನಾದವನೂ ಆಗಿದ್ದಾನೆ. ಮತ್ತೊಂದೆಡೆ, ಆತನು ನಿಜಕ್ಕೂ ಮನುಷ್ಯರ ಹತ್ತಿರಕ್ಕೆ ಬರುವ ದೇವರಾಗಿದ್ದಾನೆ ಮತ್ತು ಅವರಿಗೆ ತನ್ನನ್ನು ಒಂದು ನಿಕಟವಾದ ರೀತಿಯಲ್ಲಿ ಪ್ರಕಟಪಡಿಸಿಕೊಂಡು ತಾನು ಸಹಾಯ ಮಾಡಲಿಚ್ಛಿಸುವ ಮತ್ತು ಸಂಗಾತಿಯಾಗಿ ಇರಲು ಬಯಸುವವನಾಗಿ ತೋರಿಸಿಕೊಳ್ಳುತ್ತಾನೆ.

ಆತನು ಒಬ್ಬ ನಿರಂಕುಶಾಧಿಕಾರಿಯೂ ಅಲ್ಲ ಅಥವಾ ಪಿತಾಮಹನೂ ಅಲ್ಲ, ಅಥವಾ ಇವೆರಡರ ಮಿಶ್ರಣವೂ ಅಲ್ಲ. ಆದರೆ ಆತನು ವಾಸ್ತವಿಕವಾಗಿ ಮಾನವಕುಲದಿಂದ ಮುಕ್ತನೂ ಅದೇ ಸಮಯದಲ್ಲಿ ಮಾನವಕುಲಕ್ಕೆ ಬಂಧಿತನೂ ಆಗಿದ್ದಾರೆ; ಅತ್ಯುನ್ನತ ಸ್ಥಳದಲ್ಲಿದ್ದರೂ ಅವರ ಜೊತೆಯಲ್ಲೂ ಸಹ ಇರುವವನಾಗಿದ್ದಾರೆ; ದೂರವಿದ್ದರೂ ಹತ್ತಿರವಿದ್ದಾರೆ; ಶಕ್ತಿಯುಳ್ಳವರಾಗಿದ್ದರೂ ಪ್ರೀತಿಯುಳ್ಳವರಾಗಿದ್ದಾರೆ, ಪ್ರೀತಿಯುಳ್ಳವರಾಗಿದ್ದರೂ ಶಕ್ತಿಯುಳ್ಳವರೂ ಆಗಿದ್ದಾರೆ”.

*ಗಮನಿಸಿ: ಮೇಲಿನ ಉಲ್ಲೇಖಗಳನ್ನು ವರ್ಜೀನಿಯಾದ ರಿಚ್ಮಂಡ್‌ನ ಸಿಎಲ್‌ಸಿ ಪ್ರೆಸ್ ಪ್ರಕಟಿಸಿದ **ಕ್ರಿಶ್ಚಿಯನ್ ಡಾಕ್ಟ್ರಿನ್** ಪುಸ್ತಕದಿಂದ ತೆಗೆದುಕೊಳ್ಳಲಾಗಿದೆ.*

ನಾವು ದೇವರನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವಾಗ, ನಮ್ಮ ಮಾನವ ಮನಸ್ಸುಗಳು ಆತನನ್ನು ಅರ್ಥಮಾಡಿಕೊಳ್ಳಲು ತುಂಬಾ ಚಿಕ್ಕದಾಗಿದೆ

ಎಂಬುದನ್ನು ಅರಿತುಕೊಳ್ಳುತ್ತೇವೆ. ನಾವು ಕೆಲವೇ ಅಂಶಗಳತ್ತ ಗಮನ ಹರಿಸುತ್ತೇವೆ. ನಾವು ದೇವರನ್ನು ಎಷ್ಟು ಹೆಚ್ಚಾಗಿ ಅರ್ಥಮಾಡಿಕೊಂಡರೂ ಆತನು ಅವೆಲ್ಲಾದಕ್ಕಿಂತ ಇನ್ನೂ ಮಿಗಿಲಾದವರಾಗಿದ್ದಾರೆ!

✳ *ದೇವರ ಸಾರ್ವಭೌಮತೆ*

ದೇವರು ಸಾರ್ವಭೌಮನು. ಇದು ದೇವರ ಸರ್ವೋಚ್ಚ ಆಡಳಿತವನ್ನು ವ್ಯಕ್ತಪಡಿಸುವ ಪದವಾಗಿದೆ. ದೇವರು ನಿರಪೇಕ್ಷನು. ಆತನಿಗೆ ಯಾವುದೇ ಬಾಹ್ಯ ನಿರ್ಬಂಧಗಳಿಲ್ಲ. ಎಲ್ಲಾ ರೀತಿಯ ಅಸ್ತಿತ್ವಗಳು ಆತನ ಪ್ರಭುತ್ವದ ವ್ಯಾಪ್ತಿಯಲ್ಲಿ ಬರುತ್ತವೆ.

ದೇವರು ತನ್ನ ಮೇಲೆ ತಾನೇ ಇಟ್ಟಿರುವ ನಿರ್ಬಂಧಗಳನ್ನು ಮಾತ್ರ ಹೊಂದಿದ್ದಾನೆ ಮತ್ತು ಆತನ ಗುಣವು ಆತನ ಮೇಲಿಟ್ಟಿರುವ ನಿರ್ಬಂಧಗಳನ್ನು ಮಾತ್ರ ಹೊಂದಿದ್ದಾನೆ. ಉದಾಹರಣೆಗೆ, ದೇವರು ಪರಿಪೂರ್ಣ ಪ್ರೀತಿಯಾಗಿದ್ದಾನೆ ಹಾಗಾಗಿ ಆತನು ಆ ಪರಿಪೂರ್ಣ ಪ್ರೀತಿಯನ್ನು ಉಲ್ಲಂಘಿಸುವ ಯಾವುದನ್ನೂ ಮಾಡುವುದಿಲ್ಲ.

**ಮಾನವನು ಯಾರು?**

ದಾವೀದನು ಸುಂದರವಾಗಿ ನಮಗೆ ದೇವರ ಹಾಗೂ ಮನುಷ್ಯನ ಬಗ್ಗೆ ವರ್ಣಿಸುತ್ತಾನೆ.

**ಕೀರ್ತನೆ 8:4-9 ಮನುಷ್ಯನು ಎಷ್ಟು ಮಾತ್ರದವನು, ಅವನನ್ನು ನೀನು ಯಾಕೆ**
**ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು?**
**ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ;**
**ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟೆ.**
**ನೀನು ಸೃಷ್ಟಿಸಿದ ಎಲ್ಲಾ ವಸ್ತುಗಳ ಮೇಲೆ ಪ್ರಭುತ್ವವನ್ನು ಅವನಿಗೆ**
**ಅನುಗ್ರಹಿಸಿದಿ;**
**ನೀನು ಎಲ್ಲಾ ಕುರಿದನಗಳನ್ನು ಮಾತ್ರವೇ ಅಲ್ಲದೆ ಕಾಡುಮೃಗಗಳು,**
**ಆಕಾಶಪಕ್ಷಿಗಳು, ಸಮುದ್ರದ ಮೀನುಗಳು, ಅದರಲ್ಲಿ ಸಂಚರಿಸುವ**
**ಸಕಲವಿಧವಾದ ಜೀವಜಂತುಗಳು ಇವೆಲ್ಲವನ್ನೂ ಅವನಿಗೆ**
**ಅಧೀನಮಾಡಿದ್ದೀಯಲ್ಲವೇ.**
**ನಮ್ಮ ಕರ್ತನಾದ ಯೆಹೋವನೇ,**
**ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು.**

**ನಿಯೋಜಿತ ಅಧಿಕಾರ**

ದೇವರು ಆದಾಮ್ ಮತ್ತು ಹವ್ವಳನ್ನು ತನ್ನ ಸ್ವರೂಪದಲ್ಲಿ ಸೃಷ್ಟಿಸಿದಾಗ, ಸೈತಾನ ಮತ್ತು ಅವನ ಎಲ್ಲಾ ದುರಾತ್ಮಗಳನ್ನು ಸ್ವರ್ಗದಿಂದ ದೊಬ್ಬಲ್ಪಟ್ಟ ಅದೇ ಗ್ರಹದಲ್ಲಿ

ಅವರನ್ನು ಸೃಷ್ಟಿಸಿದನು. ಆದಾಮ್ ಮತ್ತು ಹವ್ವಳ ಬಗ್ಗೆ ದೇವರು ಹೇಳಿದ ಮೊದಲ ಮಾತು "ಅವರು ದೊರೆತನ ಮಾಡಲಿ".

**ಆದಿಕಾಂಡ 1:26,27 ಆಮೇಲೆ ದೇವರು - ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು.**

**ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡುಹೆಣ್ಣಾಗಿ ನಿರ್ಮಿಸಿದನು.**

ಭೂಮಿಯ ಮೇಲೆ, ಈ ಸರ್ವಶಕ್ತ ಪರಾಕ್ರಮವುಳ್ಳ ದೇವರು ತನ್ನ ದೊರೆತನವನ್ನು ಮಾನವಕುಲಕ್ಕೆ ವಹಿಸಿದನು. ಆತನು ಈ ಭೂಮಿಯ ಮೇಲಿದ್ದ ತನ್ನ ದೊರೆತನವನ್ನು ಅವರ ಕೈಗೆ ವಹಿಸಿದನು!

ದೊರೆತನ ಎಂದರೆ ಅಧೀನಗೊಳಿಸುವುದು, ನಿಯಂತ್ರಣಕ್ಕೆ ತರುವುದು, ಜಯಿಸುವುದು, ಗುಲಾಮರನ್ನಾಗಿ ಮಾಡುವುದು.

ದೇವರಿಂದ ಮರುಸೃಷ್ಟಿಸಲ್ಪಟ್ಟ ಒಂದು ಪರಿಪೂರ್ಣ ಸ್ಥಿತಿಯಲ್ಲಿದ್ದ ಭೂಮಿಯ ಮೇಲೆ ಯಾವುದನ್ನು ನಿಯಂತ್ರಿಸುವ, ಜಯಿಸುವ ಮತ್ತು ಗುಲಾಮರನ್ನಾಗಿ ಮಾಡುವ ಅವಶ್ಯವಿತ್ತು? ಸೈತಾನನನ್ನು ಮತ್ತು ಅವನ ದುರಾತ್ಮಗಳನ್ನು.

ಆದಾಮ್ ಮತು ಹವ್ವಳು ಪಾಪ ಮಾಡಿದಾಗಲೂ, ದೇವರು ಅವರಿಗೆ ನೀಡಿದ ಅಧಿಕಾರವನ್ನು ಹಿಂತೆಗೆದುಕೊಳ್ಳಲಿಲ್ಲ. ಮಾನವಕುಲವು ಅದನ್ನು ಸೈತಾನನಿಗೆ ಒಪ್ಪಿಸಿತು ಮತ್ತು ಸೈತಾನನು ಈ ಲೋಕದ ದೇವರಾದನು. ನಾಲ್ಕು ಸಾವಿರ ವರ್ಷಗಳಿಂದ, ಸೈತಾನನು ಈ ಅಧಿಕಾರವನ್ನು ಹೊಂದಿದ್ದನು ಮತ್ತು ಪರಿಸ್ಥಿತಿಗಳು ಎಷ್ಟೇ ಭೀಕರವಾದರೂ ದೇವರು ಅದನ್ನು ಹಿಂತೆಗೆದುಕೊಳ್ಳಲಿಲ್ಲ.

ಯಾಕೆ? ಯಾಕೆಂದರೆ ದೇವರು ಅದನ್ನು ಮಾನವಕುಲಕ್ಕೆ ವಹಿಸಿದ್ದರು.

## ಕೊನೆಯ ಆದಾಮನು

ಮೊದಲ ಆದಾಮನು ಯಾರಾಗಿದ್ದನು ಮತ್ತು ಅವನು ಯಾರಾಗಿರಬೇಕೆಂದು ಸೃಷ್ಟಿಸಲ್ಪಟ್ಟನು – ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವಾಗ - ಯೇಸು ಕೊನೆಯ ಆದಾಮನಾಗಿ ಬಂದದ್ದು ನಮಗೆ ಯಾಕೆ ಮುಖ್ಯವಾಗಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಲು ಪ್ರಾರಂಭಿಸಬಹುದು.

ಈ ಭೂಮಿಯ ಮೇಲೆ ಅಧಿಕಾರದಲ್ಲಿ ನಡೆಯಲು ಮೊದಲ ಆದಾಮನು ಸೃಷ್ಟಿಸಲ್ಪಟ್ಟನು. ಅವನು ಸೈತಾನ ಮತ್ತು ಅವನ ದುರಾತ್ಮಗಳ ಮೇಲೆ

ದೊರೆತನ ಸಾಧಿಸಲು ಸೃಷ್ಟಿಸಲ್ಪಟ್ಟನು. ದೇವರೊಂದಿಗೆ ಅನ್ಯೋನ್ಯತೆಯನ್ನು ಹೊಂದಲು ಅವನು ಸೃಷ್ಟಿಸಲ್ಪಟ್ಟನು.

ಯೇಸು ಕೊನೆಯ ಆದಾಮನಾಗಿ – ನಿಷ್ಕಳಂಕ ಮಾನವನಾಗಿ ಬಂದನು, ಪರಿಪೂರ್ಣ ಮಾನವನಾಗಿ ಬಂದನು. ಯೇಸು ಈ ಭೂಮಿಯ ಮೇಲೆ ಅಧಿಕಾರ ನಡೆಸುವದಕ್ಕಾಗಿಯೂ, ಪರಿಪೂರ್ಣವಾದ ಜೀವನ ನಡೆಸುವುದಕ್ಕಾಗಿಯೂ ಮತ್ತು ಪರಿಪೂರ್ಣವಾದ ಯಜ್ಞಬಲಿಯಾಗಿ ನಮ್ಮ ಬದಲಿಗೆ ತನ್ನ ಪ್ರಾಣವನ್ನು ಈಡು ಕೊಡುವುದಕ್ಕಾಗಿಯೂ ಬಂದರು.

**1 ಕೊರಿಂಥ 15:45 ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನೆಂದು ಬರೆದದೆಯಲ್ಲಾ.ಕಡೇ ಆದಾಮನೋ ಬದುಕಿಸುವ ಆತ್ಮನು .**

ಯೇಸು ದೇವರ ಮಗನಾಗಿ ತನ್ನ ಶಕ್ತಿಯಿಂದ ಭೂಮಿಯ ಮೇಲೆ ಕಾರ್ಯನಿರ್ವಹಿಸಲಿಲ್ಲ ಎಂಬುದನ್ನು ನಾವು ಅರಿತುಕೊಳ್ಳಬೇಕು. ಅವರು ಆ ಹಕ್ಕುಗಳನ್ನು ಬದಿಗಿಟ್ಟು ಭೂಮಿಯ ಮೇಲೆ ಮನುಷ್ಯನಾಗಿ - ಒಬ್ಬ ಪರಿಪೂರ್ಣ ಮನುಷ್ಯನಾಗಿ - ದೇವರು ಆದಾಮನನ್ನು ಯಾವುದಕ್ಕಾಗಿ ಸೃಷ್ಟಿಸಿದ್ದರೋ ಆ ಮನುಷ್ಯನಾಗಿ ಕಾರ್ಯನಿರ್ವಹಿಸಿದರು.

**ಫಿಲಿಪ್ಪಿ 2:6-8 ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುವದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು.**

ಯೇಸು ದೋಣಿಯಲ್ಲಿ ನಿಂತು, “ಸುಮ್ಮನಿರು, ಮೊರೆಯಬೇಡ” ಎಂದು ಹೇಳಿದಾಗ ಒಂದು ನಿಶಬ್ದವಾದ ವಾತಾವರಣವಾಯಿತು. ಅದುವೇ ದೊರೆತನವಾಗಿತ್ತು!

ಮರಣದಲ್ಲಿ, ಯೇಸು ಸೈತಾನನನ್ನು ಸೋಲಿಸಿದರು, ಬೀಗದ ಕೈಗಳನ್ನು ಹಿಂತಿರುಗಿ ಕಸಿದುಕೊಂಡರು ಮತ್ತು ಅವುಗಳನ್ನು ವಿಶ್ವಾಸಿಗಳಿಗೆ, ಅಂದರೆ ತನ್ನ ದೇಹಕ್ಕೆ, ಅಂದರೆ ತನ್ನ ಸಭೆಗೆ ಕೊಟ್ಟರು.

**ಮತ್ತಾಯ 16:19 ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು.**

ಯೇಸು ತಾನು ಸಭೆಯನ್ನು ಕಟ್ಟಲಿದ್ದೇನೆ ಮತ್ತು ಪಾತಾಳದ ಶಕ್ತಿಗಳೂ ಅದನ್ನು ಜಯಿಸಲಾರದು ಎಂದು ಹೇಳಿದರು. ಭೂಲೋಕದಲ್ಲಿ ನಾವು ಯಾವದನ್ನು ಕಟ್ಟುತ್ತೇವೋ ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನಾವು ಯಾವದನ್ನು ಬಿಚ್ಚುತ್ತೇವೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಎಂದು ಯೇಸು ಹೇಳಿದರು.

ಯೇಸು ಈ ನಿಯೋಜಿತ ಅಧಿಕಾರವನ್ನು ಮಾರ್ಕನ ಸುವಾರ್ತೆಯಲ್ಲಿ ವಿವರಿಸಿದರು.

**ಮಾರ್ಕ 13:34** ಒಬ್ಬ ಮನುಷ್ಯನು ತನ್ನ ಮನೆಯನ್ನು ಬಿಟ್ಟು ಬೇರೊಂದು ದೇಶಕ್ಕೆ ಹೋಗುವಾಗ ತನ್ನ ಆಳುಗಳಿಗೆ ಮನೇ ಆಡಳಿತವನ್ನು ಒಪ್ಪಿಸಿಕೊಟ್ಟು ಒಬ್ಬೊಬ್ಬನಿಗೆ ಅವನವನ ಕೆಲಸವನ್ನು ನೇಮಿಸಿ ಬಾಗಿಲುಕಾಯುವವನನ್ನು ಕರೆದು ನಾನು ] ನೀನು ಎಚ್ಚರವಾಗಿರಬೇಕೆಂದು ಅಪ್ಪಣೆ ಕೊಡುವ ಪ್ರಕಾರ - .[ನಿಮಗೆ ಅಪ್ಪಣೆ ಕೊಡುತ್ತೇನೆ

ನಾವು ಪ್ರಾರ್ಥಿಸುವಾಗ ದೇವರ ಬಲ ಮತ್ತು ಅಧಿಕಾರವನ್ನು ಈ ಭೂಲೋಕದಲ್ಲಿ ಕಾರ್ಯಮಾಡುವಂತೆ ಬಿಡುಗಡೆಗೊಳಿಸುತ್ತೇವೆ. ಪರಲೋಕದಲ್ಲಿ ದೇವರಿಗೆ ಎಲ್ಲಾ ಅಧಿಕಾರವಿದೆ, ಆದರೆ ಭೂಮಿಯ ಮೇಲೆ ಆತನು ತನ್ನ ಅಧಿಕಾರವನ್ನು ಸಭೆಗೆ – ಅಂದರೆ ನನಗೂ ಮತ್ತು ನಿಮಗೂ – ನೀಡಿದ್ದಾರೆ.

ಈ ಗ್ರಹದಲ್ಲಿ ಚಲಾಯಿಸಬೇಕಾದ ಅಧಿಕಾರವು ಕ್ರಿಸ್ತನಲ್ಲಿರುವವರಿಂದ ಬರಬೇಕು!

## ಸ್ವಚಿತ್ತ

ಈ ಭೂಮಿಯಲ್ಲಿ ದೇವರು ಮಾನವಕುಲಕ್ಕೆ ದೊರೆತನ ಮತ್ತು ಅಧಿಕಾರವನ್ನು ನೀಡಿದಂತೆಯೇ, ಆತನು ಅವರಿಗೆ ಸ್ವಚಿತ್ತವನ್ನೂ ಕೊಟ್ಟನು ಮತ್ತು ದೇವರು ಹೇಗೆ ಮಾನವಕುಲಕ್ಕೆ ಕೊಟ್ಟಿರುವ ಅಧಿಕಾರದ ಕ್ಷೇತ್ರಗಳನ್ನು ತಾನು ಉಲ್ಲಂಘಿಸುವುದಿಲ್ಲವೋ ಹಾಗೆಯೇ ಆತನು ನಮ್ಮ ಸ್ವಚಿತ್ತವನ್ನು ಉಲ್ಲಂಘಿಸುವುದಿಲ್ಲ.

ಸ್ವಚಿತ್ತ ಎಂದರೆ ಆಯ್ಕೆ ಮಾಡುವ ಹಕ್ಕು ಎಂದರ್ಥ. ದೇವರಿಗೆ ವಿಧೇಯರಾಗುವ ಅಥವಾ ಅವಿಧೇಯರಾಗುವ ಆಯ್ಕೆಯ ಹಕ್ಕನ್ನು ಆದಾಮ ಮತ್ತು ಹವ್ವಳಿಗೆ ಕೊಡಲಾಗಿತ್ತು.

ಆದಾಮ ಮತ್ತು ಹವ್ವಳ ಮೂಲಕ ದೇವರು ಎಲ್ಲಾ ಮಾನವಕುಲಕ್ಕೆ ನೀಡಿದ ಈ ಹಕ್ಕನ್ನು ಎಂದಿಗೂ ಹಿಂಪಡೆಯಲಿಲ್ಲ. ಆಯ್ಕೆ ಮಾಡುವ ಹಕ್ಕು ನಮಗಿದೆ. ನಾವು ದೇವರನ್ನು ನಂಬಬಹುದು ಅಥವಾ ಆತನನ್ನು ನಂಬದೆ ಇರಬಹುದು. ನಾವು ಆತನನ್ನು ಪ್ರೀತಿಸಬಹುದು, ಅಥವಾ ಆತನನ್ನು ಪ್ರೀತಿಸದೆ ಇರಬಹುದು. ನಾವು ಆತನ ಸೇವೆ ಮಾಡಬಹುದು, ಅಥವಾ ಆತನ ಸೇವೆ ಮಾಡದೆ ಇರಬಹುದು. ಪ್ರತಿದಿನ ಪ್ರತಿ ನಿಮಿಷ ನಾವು ಏನು ಮಾಡುತ್ತೇವೆ ಎಂಬುದರ ಆಯ್ಕೆಗಳು ನಮ್ಮದಾಗಿದೆ. ಈ ಆಯ್ಕೆಗಳ ಪರಿಣಾಮವಾಗಿ ಏನಾಗುತ್ತದೆ ಎಂಬುದರ ಜವಾಬ್ದಾರಿಯೂ ನಮ್ಮದಾಗಿದೆ.

ನಾವು ವಿಶ್ವಾಸಿಗಳು ಹೀಗೆ ಪ್ರಶ್ನಿಸುವುದನ್ನು ಎಷ್ಟೊಂದು ಬಾರಿ ಕೇಳಿದ್ದೇವೆ - "ದೇವರು ಯಾಕೆ ಇಂತಹ ಭೀಕರವಾದ ಪರಿಸ್ಥಿತಿಯನ್ನು ಬರಗೊಡಿಸಿದನು?"

ದೇವರು ಆ ಪರಿಸ್ಥಿತಿಯನ್ನು ಬರಗೊಡಿಸಲಿಲ್ಲ. ನಾವು ಬರಗೊಡಿಸಿದೆವು.

ನಿಮ್ಮನ್ನು ಖಂಡನೆಗೆ ತಳ್ಳುವುದಕ್ಕಾಗಿ ಈ ಸತ್ಯವನ್ನು ಹೇಳಲಿಲ್ಲ. ಬದಲಾಗಿ ಸ್ವಾತಂತ್ರ್ಯವನ್ನು ತರುವುದಕ್ಕಾಗಿ ಹೇಳದ್ದು. ಒಂದು ಪೀಳಿಗೆಯು ಮತ್ತೊಂದು ಪೀಳಿಗೆಯ ಮೇಲೆ ಪಾಪವನ್ನು ಹೇರುತ್ತಲೇ ಇವೆ. ಸತ್ಯವು ಬಹುತೇಕ ಸಮಾಧಿ

ಮಾಡಲ್ಪಟ್ಟಿದೆ ಎಂದು ತೋರುವ ಮಟ್ಟಿಗೆ ದುಷ್ಟತನವು ಹೆಚ್ಚಾಗಿದೆ. ಆದರೆ ದೇವರ ವಾಕ್ಯವು ಈಗಲೂ ಸತ್ಯವಾದದ್ದು. ಈ ಭೂಮಿಯ ಮೇಲಿನ ಅಧಿಕಾರವು ನಮಗೆ ಸೇರಿದ್ದು. ಯೇಸು ಅದನ್ನು ನಮಗಾಗಿ ಹಿಂತಿರುಗಿ ಪಡೆದುಕೊಂಡನು. ಅವರು ನಮಗೆ ಅಧಿಕಾರದ ಬೀಗದ ಕೈಗಳನ್ನು ನೀಡಿದರು. ಈ ಭೂಮಿಯಲ್ಲಿ ಸೈತಾನನಾಗಲಿ ಅಥವಾ ಅವನ ದುರಾತ್ಮಗಳಾಗಲಿ ಮಾಡಬಹುದಾದ ಕ್ರಿಯೆಗಳು ಮಾನವರು ಅವರಿಗೆ ಕೊಟ್ಟಿರುವ ಅವಕಾಶಗಳಾಗಿವೆ. ಈಗ ನಾವು ಯೇಸು ಕ್ರಿಸ್ತನಲ್ಲಿ ಧೈರ್ಯಶಾಲಿಗಳಾಗುವ ಸಮಯ. ನಾವು ಪ್ರಾರ್ಥಿಸುವುದನ್ನು ಕಲಿತುಕೊಳ್ಳಬೇಕು ಮತ್ತು ನಮ್ಮ ಹಿಂತಿರುಗಿಸಲ್ಪಟ್ಟ ಅಧಿಕಾರದೊಂದಿಗೆ ದೊರೆತನ ಮಾಡಬೇಕು.

**ಆತನ ಹೆಸರಿನಲ್ಲಿ**

ನಮ್ಮ ಸ್ಥಾನ ಮತ್ತು ನಮ್ಮ ಅಧಿಕಾರವು ಸಂಪೂರ್ಣವಾಗಿ ಯೇಸುವಿನಲ್ಲಿದೆ. ಆದ್ದರಿಂದ ನಾವು ಯಾವಾಗಲೂ ಯೇಸುವಿನ ಹೆಸರಿನಲ್ಲಿ ತಂದೆಗೆ ಪ್ರಾರ್ಥಿಸಬೇಕು. ನಾವು ಯೇಸುವಿನಲ್ಲಿ ಸ್ವೀಕರಿಸಲ್ಪಟ್ಟಿದ್ದೇವೆ; ನಾವು ಆತನಲ್ಲಿ ಪ್ರಿಯರಾಗಿದ್ದೇವೆ; ನಾವು ಆತನೊಂದಿಗೆ ಸಹ-ಬಾಧ್ಯಸ್ಥರಾಗಿದ್ದೇವೆ. ನಮಗಿರುವ ಎಲ್ಲವೂ ಯೇಸುವಿನಲ್ಲಿದೆ.

**ಯೋಹಾನ 14:6,13 ಯೇಸು ಅವನಿಗೆ ನಾನೇ ಮಾರ್ಗವೂ ಸತ್ಯವೂ - ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ.**

**ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು.**

**ಸಾರಾಂಶ – ಮೂಲಭೂತ ಅಂಶಗಳನ್ನು ಅರ್ಥಮಾಡಿಕೊಳ್ಳುವುದು**

ಆದಾಮ ಮತ್ತು ಹವ್ವರು ತನ್ನೊಂದಿಗೆ ಅನ್ಯೋನ್ಯತೆಯಲ್ಲಿರಲು ದೇವರು ಅವರನ್ನು ಸೃಷ್ಟಿಸಿದನು. ಆತನು ಸಂಜೆಯ ತಂಗಾಳಿಯಲ್ಲಿ ಅವರೊಂದಿಗೆ ಮಾತನಾಡಲು ಬರುತ್ತಿದ್ದರು, ಆದರೆ ಆದಾಮ ಮತ್ತು ಹವ್ವ ಪಾಪ ಮಾಡಿದಾಗ ಆ ಅದ್ಭುತ ಸಂಬಂಧವು ಕಳೆದುಹೋಯಿತು. ಆತನು ಅವರಿಗೆ ವಹಿಸಿದ್ದ ಅಧಿಕಾರವು ಸೈತಾನನ ಕೈವಶವಾಯಿತು ಮತ್ತು ಸೈತಾನನು ಈ ಲೋಕದ ಅಧಿಪತಿಯಾದನು. ದೇವರು ಹಿಂದಕ್ಕೆ ಸರಿದು ಎಲ್ಲವನ್ನೂ ಸೈತಾನನ ನಿಯಂತ್ರಣದಲ್ಲಿ ಬಿಡಬಹುದಿತ್ತು - ಆದರೆ ಅವರು ಹಾಗೆ ಮಾಡಲಿಲ್ಲ.

ದೇವರ ಮಗನಾದ ಯೇಸು ಮಾನವಕುಲವು ಕಳೆದುಕೊಂಡಿದ್ದೆಲ್ಲವನ್ನು ಸೈತಾನನಿಂದ ಹಿಂತಿರುಗಿ ಪಡೆಯಲು ಬಂದರು. ದೇವರಾಗಿ ತನಗಿದ್ದ ಹಕ್ಕುಗಳನ್ನು ಯೇಸು ಬದಿಗಿಟ್ಟು ಕೊನೆಯ ಆದಾಮನಾಗಿ ಭೂಮಿಗೆ ಬಂದರು. ಪುರುಷರು ಮತ್ತು ಸ್ತ್ರೀಯರು ಹೇಗೆ ಅಧಿಕಾರದಲ್ಲಿ ನಡೆಯುವುದಕ್ಕಾಗಿ ಸೃಷ್ಟಿಸಲ್ಪಟ್ಟರೋ ಹಾಗೆಯೇ ಅವರು ಈ ಭೂಮಿಯ ಮೇಲೆ ಅಧಿಕಾರದಲ್ಲಿ ನಡೆದರು. ಅವರು ಪಾಪದ ದಂಡವನ್ನು ತೀರಿಸುವುದಕ್ಕಾಗಿ ಶಿಲುಬೆಯ ಮೇಲೆ ಪ್ರಾಣ ಕೊಟ್ಟರು. ಅವರ ತ್ಯಾಗದ ಮೂಲಕ ನಾವು ಆಯ್ದ ಜನಾಂಗದ

ಭಾಗವಾಗಿದ್ದೇವೆ - ಅವರಲ್ಲಿ ಆರಿಸಲ್ಪಟ್ಟಿದ್ದೇವೆ. ಅವರಲ್ಲಿ, ನಾವು ರಾಜರು ಮತ್ತು ಯಾಜಕರುಗಳಾಗಿದ್ದೇವೆ. ಅವರು ನಮಗೆ ತನ್ನ ಹೆಸರನ್ನು ಕೊಟ್ಟರು ಮತ್ತು ತನ್ನ ಅಧಿಕಾರವನ್ನು ಕೊಟ್ಟರು.

**ವಿಮರ್ಶೆಗಾಗಿ ಪ್ರಶ್ನೆಗಳು**

1. ನಿಮ್ಮ ಸ್ವಂತ ವಾಕ್ಯಗಳಲ್ಲಿ ಅಧಿಕಾರ, ನಿಯೋಜಿತ ಅಧಿಕಾರ ಮತ್ತು ಸ್ವಚಿತ್ತವನ್ನು ವಿವರಿಸಿರಿ.

2. ಪ್ರತಿಯೊಬ್ಬ ವಿಶ್ವಾಸಿಯು ಯಾವ ಆಧಾರದ ಮೇಲೆ ದೇವರ ಸನ್ನಿಧಾನವನ್ನು ಪ್ರವೇಶಿಸುವ ಮತ್ತು ವಿನಂತಿಗಳನ್ನು ಮಾಡುವ ಹಕ್ಕನ್ನು ಹೊಂದಿದ್ದಾನೆ/ಳೆ?

3. ದೇವರು ಯಾಕೆ ಒಬ್ಬ ವ್ಯಕ್ತಿಯ ಅಗತ್ಯಗಳನ್ನು ನೋಡಿ ಅವರು ಬೇಡಿಕೊಳ್ಳದೆಯೇ ಸರಿಯಾದ ಸಮಯದಲ್ಲಿ ಸರಿಯಾದ ಆಶೀರ್ವಾದವನ್ನು ಕಳುಹಿಸುವುದಿಲ್ಲ?

*ಪಾಠ ಮೂರು*

# ಯೇಸು ಪ್ರಾರ್ಥಿಸಿದರು

ನಮ್ಮ ಕ್ರಿಸ್ತೀಯ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಯೇಸು ನಮಗೆ ಮಾದರಿಯಾಗಿದ್ದಾರೆ. ನಾವು ಏನು ಮಾಡಬೇಕೆಂದು ತಿಳಿಯಬೇಕಾದರೆ, ಅವರು ಏನು ಮಾಡಿದರೆಂಬುದನ್ನು ನಾವು ಅಧ್ಯಯನ ಮಾಡಬೇಕು. ಯೇಸುವಿನ ಇಹಲೋಕದ ಸೇವೆಯ ಸಮಯದಲ್ಲಿ, ಜನರು ಆತನ ಬಳಿಗೆ ಬಂದರು. ಜನರು ಆತನಲ್ಲಿ ಕೇಳಿಕೊಂಡರು ಮತ್ತು ಆತನು ಅವರ ಅಗತ್ಯಗಳನ್ನು ಪೂರೈಸಿದರು. ಆತನು ಅವರನ್ನು ದುರಾತ್ಮಗಳ ಬಂಧನದಿಂದ ಬಿಡಿಸಿದರು. ಆತನು ಅವರ ದೇಹಗಳನ್ನು ಸೌಖ್ಯಪಡಿಸಿದರು.

ಯೇಸು ಪ್ರಾರ್ಥನೆಯ ಮನುಷ್ಯನಾಗಿದ್ದರು. ಅವರು ಪ್ರಾರ್ಥಿಸಿದರು ಮತ್ತು ಅವರು ತನ್ನ ಶಿಷ್ಯರಿಗೆ ಪ್ರಾರ್ಥನೆ ಮಾಡಲು ಕಲಿಸಿದರು.

## ಯೇಸು ಅಗತ್ಯವಿರುವ ಜನರ ಪ್ರಾರ್ಥನೆಗಳಿಗೆ ಉತ್ತರಿಸಿದರು

ಯೇಸು ಈ ಭೂಮಿಯಲ್ಲಿದ್ದಾಗ ತನ್ನ ಸೇವೆಯ ಸಮಯದಲ್ಲಿ ಎಲ್ಲಿ ಹೋದರೂ ಜನರ ಬೇಡಿಕೆಗಳಿಗೆ ಉತ್ತರಿಸಿದರು. ಯೇಸು ಅವರಿಗೆ ನೀಡಿದ ಉತ್ತರಗಳು ನಮಗೆ ಒಂದು ದೊಡ್ಡ ಉತ್ತೇಜನವನ್ನು ಕೊಡುತ್ತವೆ. ನಾವು ಕೆಲವು ಪ್ರಾರ್ಥನೆಗಳನ್ನು ಮತ್ತು ಉತ್ತರಗಳನ್ನು ಮಾತ್ರ ಈಗ ನೋಡಲಿದ್ದೇವೆ.

### ನನಗೆ ಮನಸ್ಸುಂಟು

ಒಬ್ಬ ಕುಷ್ಟರೋಗಿಯು ಯೇಸುವಿನ ಹತ್ತಿರ ಬಂದು, “ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ” ಎಂದು ಹೇಳಿದನು.

ಯೇಸು ಅವನಿಗೆ ನೀಡಿದ ಪ್ರತ್ಯುತ್ತರವು ಎಷ್ಟು ಉತ್ಸಾಹವನ್ನು ಉಂಟುಮಾಡುವಂತದ್ದಾಗಿದೆ: “ನನಗೆ ಮನಸ್ಸುಂಟು!” ಯೇಸು “ನನಗೆ ಮನಸ್ಸುಂಟು” ಎಂದು ಹೇಳಿದಾಗ ತಂದೆಯ ಹೃದಯವನ್ನು ವ್ಯಕ್ತಪಡಿಸಿದರು.

**ಮಾರ್ಕ 1:40-42 ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು ಆತನ ಮುಂದೆ - ಮೊಣಕಾಲೂರಿಕೊಂಡು ನಿನಗೆ ಮನಸ್ಸಿದ್ದರೆ ನನ್ನನ್ನು - ಶುದ್ಧಮಾಡಬಲ್ಲೆ ಎಂದು ಬೇಡಿಕೊಳ್ಳಲು ಆತನು ಕನಿಕರಪಟ್ಟು ಕೈನೀಡಿ ಅವನನ್ನು ಮುಟ್ಟಿ–**

**ನನಗೆ ಮನಸ್ಸುಂಟು; ಶುದ್ಧವಾಗು ಅಂದನು.**

**ಕೂಡಲೆ ಅವನ ಕುಷ್ಠವು ಹೋಗಿ, ಅವನು ಶುದ್ಧವಾದನು.**

ನಾವು ರೋಗಸೌಖ್ಯಕ್ಕಾಗಿ ಪ್ರಾರ್ಥಿಸುತ್ತಿರುವುದಾದರೆ ದೇವರಿಗೆ ಸೌಖ್ಯಪಡಿಸಲು ಈಗಲೂ ಮನಸ್ಸಿದೆ.

## ನಂಬಿಕೆ ಮಾತ್ರ ಇರಲಿ

ರೋಗಸೌಖ್ಯಕ್ಕಾಗಿ ಮಾಡಿದ ಪ್ರಾರ್ಥನೆಗೆ ಉತ್ತರ ಸಿಕ್ಕ ಇನ್ನೊಂದು ಉದಾಹರಣೆ ಇದೆ. ಸಭಾಮಂದಿರದ ಅಧಿಕಾರಿಯೊಬ್ಬನು ಯೇಸುವಿನ ಪಾದಕ್ಕೆ ಬಿದ್ದು ತನ್ನ ಮಗಳ ಪ್ರಾಣವನ್ನು ಉಳಿಸಿಕೊಡಬೇಕೆಂದು ಬೇಡಿದನು. ಅವನು ಇನ್ನೂ ಕೇಳುತ್ತಿರುವಾಗಲೇ ಕೆಟ್ಟ ಸುದ್ದಿ ಬಂದಿತು. “ತಡವಾಯಿತು. ನಿನ್ನ ಮಗಳು ತೀರಿ ಹೋದಳು”.

ಆದರೆ ಯೇಸು ಅವನಿಗೆ, “ಭಯಪಡಬೇಡ, ನಂಬಿಕೆ ಮಾತ್ರ ಇರಲಿ” ಎಂದು ಹೇಳಿದರು. ಇದು ನಮಗೆ ಎಂತದ್ದೊಂದು ಸವಾಲಾಗಿದೆ. ನಾವು ಪ್ರಾರ್ಥನೆ ಮಾಡಿದಾಗಲೂ ಎಲ್ಲಾ ನಿರೀಕ್ಷೆ ಕಳಕೊಂಡರೂ ಇನ್ನೂ ನಂಬುತ್ತಲೇ ಇರಬೇಕು.

**ಮಾರ್ಕ 5:22,23,35-42 ಆಗ ಸಭಾಮಂದಿರದ ಅಧಿಕಾರಿಗಳಲ್ಲಿ ಒಬ್ಬನಾದ ಯಾಯೀರನೆಂಬವನು ಬಂದು ಯೇಸುವನ್ನು ಕಂಡು ಆತನ ಪಾದಗಳಿಗೆ ಬಿದ್ದು - ನನ್ನ ಚಿಕ್ಕ ಮಗಳು ಈಗ ಸಾಯುತ್ತಾಳೆ; ಆಕೆಯು ವಾಸಿಯಾಗಿ ಬದುಕಿಕೊಳ್ಳುವಂತೆ ನೀನು ಬಂದು ಆಕೆಯ ಮೇಲೆ ಕೈಯಿಡಬೇಕು ಎಂದು ಆತನನ್ನು ಬಹಳವಾಗಿ ಬೇಡಿಕೊಂಡನು.**

**ಆತನು ಇನ್ನೂ ಮಾತಾಡುತ್ತಿರುವಲ್ಲಿ ಸಭಾಮಂದಿರದ ಅಧಿಕಾರಿಯ ಕಡೆಯವರು ಬಂದು ನಿನ್ನ ಮಗಳು ತೀರಿಹೋದಳು -; ಇನ್ನೇಕೆ ಗುರುವಿಗೆ ತೊಂದರೆ ಕೊಡುವದು? ಅಂದರು. ಅವರು ಆಡಿದ ಮಾತನ್ನು ಯೇಸು ಲಕ್ಷ್ಯ ಮಾಡದೆ ಸಭಾಮಂದಿರದ ಅಧಿಕಾರಿಗೆ ಅಂಜಬೇಡ -, ನಂಬಿಕೆ ಮಾತ್ರ ಇರಲಿ ಎಂದು ಹೇಳಿದನು.**

**ಮತ್ತು ಆತನು ಪೇತ್ರ, ಯಾಕೋಬ, ಯಾಕೋಬನ ತಮ್ಮನಾದ ಯೋಹಾನ ಇವರನ್ನೇ ಹೊರತು ಬೇರೆ ಯಾರನ್ನೂ ತನ್ನೊಂದಿಗೆ ಬರಗೊಡಲಿಲ್ಲ. ಅವರು ಆ ಸಭಾಮಂದಿರದ ಅಧಿಕಾರಿಯ ಮನೆಗೆ ಬಂದಾಗ ಆತನು ಗದ್ದಲವನ್ನೂ ಕೆಲವರು ಬಹಳವಾಗಿ ಅಳುವದನ್ನೂ ಗೋಳಾಡುವದನ್ನೂ ಕಂಡನು. ಆತನು ಒಳಕ್ಕೆ ಹೋಗಿ ನೀವು ಗದ್ದಲ ಮಾಡುವದೂ ಅಳುವದೂ ಯಾಕೆ -? ಹುಡುಗಿ ಸತ್ತಿಲ್ಲ; ನಿದ್ದೆಮಾಡುತ್ತಾಳೆ ಅನ್ನಲು ಅವರು ಆತನನ್ನು ಹಾಸ್ಯಮಾಡಿದರು .**

**ಆದರೆ ಆತನು ಎಲ್ಲರನ್ನು ಹೊರಕ್ಕೆ ಕಳುಹಿಸಿ ಆ ಹುಡುಗಿಯ ತಂದೆತಾಯಿಗಳನ್ನೂ ತನ್ನೊಂದಿಗಿದ್ದವರನ್ನೂ ಹುಡುಗಿಯಿದ್ದಲ್ಲಿಗೆ ಕರಕೊಂಡು ಹೋಗಿ ಅವಳ ಕೈಹಿಡಿದು - ತಲಿಥಾ ಕೂಮ್ ಅಂದನುಅಮ್ಮಣ್ಣೀ - ಆ ಮಾತಿಗೆ ., ಏಳನ್ನುತ್ತೇನೆ ಎಂದರ್ಥ. ಕೂಡಲೆ ಆ ಹುಡುಗಿ ಎದ್ದು ನಡೆದಾಡಿದಳು; ಆಕೆಯು ಹನ್ನೆರಡು ವರುಷ ವಯಸ್ಸಿನವಳು. ಅವರು ಬಹಳ ಆಶ್ಚರ್ಯದಿಂದ ಬೆರಗಾದರು.**

## ನಿನ್ನ ನಂಬಿಕೆಯಂತೆಯೇ

ಇಬ್ಬರು ಕುರುಡರು ಯೇಸುವಿಗೆ ಕೂಗಿಕೊಳ್ಳಬೇಕೆಂಬುದನ್ನು ತಿಳಿದಿದ್ದರು.

**ಮತ್ತಾಯ 9:27-30a ಯೇಸು ಅಲ್ಲಿಂದ ಹೋಗುವಾಗ ಇಬ್ಬರು ಕುರುಡರು - ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗುತ್ತಾ ಆತನ ಹಿಂದೆ ಹೋದರು.**

**ಆತನು ಮನೆಗೆ ಬಂದಾಗ ಆ ಕುರುಡರು ಆತನ ಬಳಿಗೆ ಬಂದರುಯೇಸು . ನಾನು ಇದನ್ನು ಮಾಡಬಲ್ಲೆನೆಂಬದನ್ನು ನಂಬುತ್ತೀರೋ ಎಂದು - ಅವರನ್ನು ಹೌದು - ಕೇಳಿದ್ದಕ್ಕೆ ಅವರು, ಸ್ವಾಮೀ, ನಂಬುತ್ತೇವೆ ಅಂದರು.**

**ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ ನೀವು ನಂಬಿದಂತೆ ನಿಮಗೆ ಆಗಲಿ - .ಅಂದನು ಆಗ ಅವರಿಗೆ ಕಣ್ಣು ಬಂದವು.**

ನಿರ್ದಿಷ್ಟವಾಗಿರ್ರಿ

ಇಬ್ಬರು ಕುರುಡರು ರಸ್ತೆಬದಿಯಲ್ಲಿ ಭಿಕ್ಷೆ ಬೇಡುತ್ತಿದ್ದರು. ಯೇಸು ಅಲ್ಲಿಗೆ ಬಂದಾಗ ಅವರು "ಕರ್ತನೇ, ನಮ್ಮ ಮೇಲೆ ಕರುಣೆಯಿಡು!" ಎಂದು ಕೂಗಿದರು.

ಯೇಸು ಅವರಿಗೆ "ನಾನು ಏನು ಮಾಡಬೇಕೆಂದು ನೀವು ಅಪೇಕ್ಷಿಸುತ್ತೀರಿ?" ಎಂದು ಕೇಳಿದರು. ಅವರು ಸೌಖ್ಯವನ್ನು ಬೇಡುತ್ತಿದ್ದರೋ ಅಥವಾ ಹಣವನ್ನು ಬೇಡುತ್ತಿದ್ದರೋ?

**ಮತ್ತಾಯ 20:29-34 ಅವರು ಯೆರಿಕೋವಿನಿಂದ ಹೊರಟುಹೋಗುತ್ತಿರುವಾಗ ಜನರ ದೊಡ್ಡ ಗುಂಪು ಆತನ ಹಿಂದೆ ಹೋಯಿತು. ಆಗ ದಾರಿಯ ಮಗ್ಗುಲಲ್ಲಿ ಕೂತಿದ್ದ ಇಬ್ಬರು ಕುರುಡರು, ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು ಕೇಳಿ – ಸ್ವಾಮೀ, ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗಿಕೊಂಡರು.**

**ಆ ಗುಂಪಿನವರುಸ್ವಾಮೀ - ಸುಮ್ಮನಿರಿ ಎಂದು ಅವರನ್ನು ಗದರಿಸಲು ಅವರು - , ದಾವೀದನ ಕುಮಾರನೇ, ನಮ್ಮನ್ನು ಕರುಣಿಸು ಎಂದು ಹೆಚ್ಚಾಗಿ ಕೂಗಿಕೊಂಡರು.**

**ಆಗ ಯೇಸು ನಿಂತು ಅವರನ್ನು ಕರೆದು ನಾನು ನಿಮಗೆ ಏನು ಮಾಡಬೇಕೆಂದು - ಕೋರುತ್ತೀರಿ ಎಂದು ಕೇಳಲು**

**ಅವರು ನಮ್ಮ ಕಣ್ಣುಗಳು ತೆರೆಯಲ್ಪಡಬೇಕು -, ಸ್ವಾಮೀ ಅಂದರು.**

**ಆಗ ಯೇಸು ಕನಿಕರಪಟ್ಟು ಅವರ ಕಣ್ಣುಗಳನ್ನು ಮುಟ್ಟಿದನುಕೂಡಲೆ ಅವರಿಗೆ . ಕಣ್ಣು ಬಂದವು, ಅವರು ಆತನ ಹಿಂದೆ ಹೋದರು.**

ಗಮನಿಸಿರಿ, ಅವರ ಸುತ್ತಲೂ ಇದ್ದ ಜನರು "ಸುಮ್ಮನಿರಿ! ಯೇಸು ತನ್ನ ಪಾಡಿಗೆ ನಡಕೊಂಡು ಹೋಗಲಿ!" ಎಂದು ಹೇಳಿದರೂ ಅವರು ಇನ್ನೂ ಬೇಡುತ್ತಲೇ ಇದ್ದರು. ಆದರೂ ಅವರು ನಿರ್ದಿಷ್ಟವಾಗಿ ಬೇಡಿಕೊಳ್ಳಲಿಲ್ಲ. ಈ ಉದಾಹರಣೆಯಲ್ಲಿ, ನಮಗೆ ಎರಡು ಸತ್ಯಗಳಿವೆ. ಇತರರೂ ನಮಗೆ ಸಾಕು ನಿಲ್ಲಿಸು ಎಂದು ಹೇಳಿದರೂ ನಾವು ನಮ್ಮ ಅವಶ್ಯಕತೆಗಳಿಗಾಗಿ ದೇವರಲ್ಲಿ ಬೇಡುತ್ತಲೇ ಇರಬೇಕು ಮತ್ತು ನಿರ್ದಿಷ್ಟವಾಗಿ ಬೇಡಿಕೊಳ್ಳಬೇಕು.

ದುರಾತ್ಮವನ್ನು ಗದರಿಸಿದನು

**ಮತ್ತಾಯ 17:14-21 ಅವರು ಜನರ ಗುಂಪಿನ ಬಳಿಗೆ ಬಂದಾಗ ಒಬ್ಬನು ಆತನ ಹತ್ತರಕ್ಕೆ ಬಂದು ಆತನ ಮುಂದೆ ಮೊಣಕಾಲೂರಿ ವಂದಿಸಿ - ಸ್ವಾಮೀ, ನನ್ನ ಮಗನನ್ನು ಕರುಣಿಸು; ಅವನು ಮೂರ್ಛಾರೋಗದಿಂದ ಬಹಳ ಕಷ್ಟಪಡುತ್ತಾನೆ;**

**ಆಗಾಗ್ಗೆ ಬೆಂಕಿಯಲ್ಲಿಯೂ ಆಗಾಗ್ಗೆ ನೀರಿನಲ್ಲಿಯೂ ಬೀಳುತ್ತಿರುವನು. ಅವನನ್ನು ನಿನ್ನ ಶಿಷ್ಯರ ಬಳಿಗೆ ಕರಕೊಂಡು ಬಂದಿದ್ದೆನು; ಆದರೆ ಅವನಿಗೆ ವಾಸಿಮಾಡುವದಕ್ಕೆ ಅವರಿಂದ ಆಗದೆಹೋಯಿತು ಅಂದನು.**

**ಅದಕ್ಕೆ ಯೇಸು ಎಲಾ -, ನಂಬಿಕೆಯಿಲ್ಲದಂಥ ಮೂರ್ಖ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ಇಲ್ಲಿ ನನ್ನ ಬಳಿಗೆ ತಕ್ಕೊಂಡು ಬನ್ನಿರಿ ಅಂದನು. ಯೇಸು ಅವನನ್ನು ಗದರಿಸಲು ದೆವ್ವ ಅವನನ್ನು ಬಿಟ್ಟುಹೋಯಿತು; ಆ ಕ್ಷಣವೇ ಆ ಹುಡುಗನಿಗೆ ಸ್ವಸ್ಥವಾಯಿತು.**

**ತರುವಾಯ ಶಿಷ್ಯರು ಏಕಾಂತವಾಗಿ ಯೇಸುವಿನ ಬಳಿಗೆ ಬಂದು ಅದನ್ನು - ಬಿಡಿಸಲಿಕ್ಕೆ ನಮ್ಮಿಂದ ಯಾಕೆ ಆಗಲಿಲ್ಲವೆಂದು ಕೇಳಲು**

**ಆತನು ಅವರಿಗೆ ನಿಮ್ಮ ನಂಬಿಕೆ ಕಡಿಮೆಯಾಗಿರುವದರಿಂದಲೇ ಆಗಲಿಲ್ಲ; ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ - ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ ಅಂದನು.**

ಈ ಪರಿಸ್ಥಿತಿಯಲ್ಲಿ ತಮಗೆ ಯಾಕೆ ಬಲ ಸಾಲಲಿಲ್ಲ ಎಂದು ಶಿಷ್ಯರು ಯೇಸುವನ್ನು ಕೇಳಿದಾಗ, ಯೇಸು ಅವರಿಗೆ ಅದಕ್ಕೆ ಮೂಲ ಕಾರಣ – ಅಪನಂಬಿಕೆ – ಮತ್ತು ಅದಕ್ಕೆ ಪರಿಹಾರ – ಪ್ರಾರ್ಥನೆ ಮತ್ತು ಉಪವಾಸ ಎಂದು ಹೇಳಿದರು.

## ಯೇಸುವಿನ ಪ್ರಾರ್ಥನಾ ಜೀವನ

ನಮ್ಮಲ್ಲಿರುವ ಎಲ್ಲವೂ, ನಾವು ಏನಾಗಿದ್ದೇವೋ ಅವೆಲ್ಲವೂ, ನಾವು ಮಾಡಬೇಕಾಗಿರುವುದೆಲ್ಲವೂ ಯೇಸುವಿನ ಮೂಲಕವೇ. ದೇವರ ಏಕೈಕ ಪುತ್ರನಾದ, ಕೊನೆಯ ಆದಾಮನಾದ, ಪರಿಪೂರ್ಣ ಮನುಷ್ಯನಾದ ಯೇಸು ದೇವರೊಂದಿಗೆ ಏಕಾಂಗಿಯಾಗಿ ಸಮಯ ಕಳೆಯಬೇಕಾದರೆ, ನಾವು ಅದನ್ನು ಎಷ್ಟು ಹೆಚ್ಚಾಗಿ ಮಾಡಬೇಕಾಗಿದೆ.

ಪ್ರಾರ್ಥನೆಯ ಬಗ್ಗೆ ಅಧ್ಯಯನ ಮಾಡುವಾಗ ಯೇಸುವಿನ ಪ್ರಾರ್ಥನೆಗಿಂತ ಹೆಚ್ಚು ಮಹತ್ವದ್ದಾಗಿರಲು ಯಾವುದಕ್ಕೆ ಸಾಧ್ಯ. ಯೇಸುವಿನ ಪ್ರಾರ್ಥನಾ ಜೀವನವನ್ನು ಇತರ ಸುವಾರ್ತೆಗಳಿಗಿಂತ ಹೆಚ್ಚು ಲೂಕನ ಸುವಾರ್ತೆಯಲ್ಲಿ ದಾಖಲಿಸಲಾಗಿದೆ.

## ಯೇಸು ತನ್ನ ದೀಕ್ಷಾಸ್ನಾನದ ಸಮಯದಲ್ಲಿ ಪ್ರಾರ್ಥಿಸಿದರು

ಯೇಸು ತನ್ನ ದೀಕ್ಷಾಸ್ನಾನದ ಸಮಯದಲ್ಲಿ ಪ್ರಾರ್ಥಿಸಿದರು. ಅವರು ಏನು ಪ್ರಾರ್ಥಿಸಿದರು ಎಂಬುದನ್ನು ಹೇಳಲಾಗಿಲ್ಲ, ಕೇವಲ ಅವರು ಪ್ರಾರ್ಥಿಸಿದರು ಮತ್ತು ಅದಕ್ಕೆ ದೇವರು ಪ್ರತಿಕ್ರಿಯಿಸಿದರು ಎಂಬುದನ್ನು ಮಾತ್ರ ಹೇಳಲಾಗಿದೆ.

**ಲೂಕ 3:21,22 ಜನರೆಲ್ಲಾ ದೀಕ್ಷಾಸ್ನಾನ ಮಾಡಿಸಿಕೊಂಡಾಗ ಯೇಸು ಸಹ ಸ್ನಾನ ಮಾಡಿಸಿಕೊಂಡು ಪ್ರಾರ್ಥನೆ ಮಾಡುತ್ತಿರುವಲ್ಲಿ ಆಕಾಶವು ತೆರೆಯಿತು; ಮತ್ತು ಪವಿತ್ರಾತ್ಮನು ದೇಹಾಕಾರವಾಗಿ ಪಾರಿವಾಳದ ಹಾಗೆ ಆತನ**

**ಮೇಲೆ ಇಳಿದನುನೀನು ಪ್ರಿಯನಾಗಿರುವ ನನ್ನ ಮಗನು - ಆಗ ., ನಿನ್ನನ್ನು ನಾನು ಮೆಚ್ಚಿದ್ದೇನೆ ಎಂದು ಆಕಾಶವಾಣಿ ಆಯಿತು.**

ಮುಂಜಾನೆ ಏಕಾಂತವಾಗಿ ಪ್ರಾರ್ಥಿಸಿದರು

ಯೇಸು ಮುಂಜಾನೆ ಇನ್ನೂ ಮೊಬ್ಬಿರುವಾಗ ಏಕಾಂತವಾದ ಸ್ಥಳದಲ್ಲಿ ಪ್ರಾರ್ಥಿಸಿದರು.

**ಮಾರ್ಕ 1:35 ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು.**

ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಪ್ರಾರ್ಥಿಸಿದರು

ಯೇಸು ಮುಖ್ಯವಾದ ತೀರ್ಮಾನಗಳನ್ನು ತೆಗೆದುಕೊಳ್ಳುವುದಕ್ಕಿಂತ ಮುಂಚೆ ಪ್ರಾರ್ಥಿಸಿದರು.

**ಲೂಕ 6:12,13 ಆ ದಿವಸಗಳಲ್ಲಿ ಆತನು ಪ್ರಾರ್ಥನೆ ಮಾಡುವದಕ್ಕಾಗಿ ಬೆಟ್ಟಕ್ಕೆ ಹೋಗಿ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲೇ ಕಳೆದನು. ಬೆಳಗಾದ ಮೇಲೆ ಆತನು ತನ್ನ ಶಿಷ್ಯರನ್ನು ಹತ್ತಿರಕ್ಕೆ ಕರೆದು ಅವರಲ್ಲಿ ಹನ್ನೆರಡು ಮಂದಿಯನ್ನು ಆರಿಸಿಕೊಂಡು ಅವರಿಗೆ ಅಪೊಸ್ತಲರೆಂತ ಹೆಸರಿಟ್ಟನು.**

ಜನರಿಂದ ದೂರವಾಗಿ ಇನ್ನೊಂದು ಸ್ಥಳಕ್ಕೆ ಹೋಗಿ ಪ್ರಾರ್ಥಿಸಿದರು

ಜನಸಮೂಹವು ತನ್ನ ಸುತ್ತಲೂ ಇದ್ದಾಗ, ಮತ್ತು ಅನೇಕರು ರೋಗಸೌಖ್ಯವನ್ನು ಬಯಸಿದಾಗಲೂ ಯೇಸು ಆಗಾಗ್ಗೆ ಜನರಿಂದ ಬೇರ್ಪಟ್ಟು ಹೋಗಿ ಪ್ರಾರ್ಥಿಸುತ್ತಿದ್ದರು. ಜನರ ಅಗತ್ಯತೆಗಳು ಅವರು ಪ್ರಾರ್ಥನೆಯಲ್ಲಿ ಸಮಯ ಕಳೆಯುವುದನ್ನು ತಡೆಯಲಿಲ್ಲ.

**ಲೂಕ 5:15,16 ಆದರೂ ಆತನ ಸುದ್ದಿಯು ಮತ್ತಷ್ಟು ಹಬ್ಬಿತು; ಮತ್ತು ಜನರು ಆತನ ಉಪದೇಶವನ್ನು ಕೇಳುವದಕ್ಕೂ ತಮ್ಮತಮ್ಮ ಜಾಡ್ಯಗಳನ್ನು ವಾಸಿ ಮಾಡಿಸಿಕೊಳ್ಳುವದಕ್ಕೂ ಗುಂಪುಗುಂಪಾಗಿ ನೆರೆದರು. ಆತನಾದರೋ ಅರಣ್ಯಪ್ರದೇಶಗಳಿಗೆ ಹೋಗಿ ದೇವರ ಪ್ರಾರ್ಥನೆಯನ್ನು ಮಾಡುತ್ತಿದ್ದನು.**

**ಮಾರ್ಕ 6:46 ಆತನು ಜನರಿಗೆ ಅಪ್ಪಣೆ ಕೊಟ್ಟ ನಂತರ ಪ್ರಾರ್ಥನೆ ಮಾಡುವದಕ್ಕಾಗಿ ಬೆಟ್ಟಕ್ಕೆ ಹೋದನು.**

ಅದ್ಭುತಕ್ಕೆ ಮುಂಚೆ ಪ್ರಾರ್ಥಿಸಿದರು

ಯೇಸು **ಆಹಾರದ ಮೇಲೆ** ತಂದೆಯ ಆಶೀರ್ವಾದವನ್ನು ಬೇಡಿದ ನಂತರ ಅದನ್ನು ಶಿಷ್ಯರಿಗೆ ಹಂಚಿದರು ಮತ್ತು ಶಿಷ್ಯರು ಅವುಗಳನ್ನು ಜನಸಮೂಹಕ್ಕೆ ಹಂಚಿದರು. 5,000 ಜನರಿಗೆ ಆಹಾರವನ್ನು ನೀಡಿದ ಅದ್ಭುತದ ಮೊದಲ ಹೆಜ್ಜೆಯೇ ಪ್ರಾರ್ಥನೆಯಾಗಿತ್ತು.

**ಲೂಕ 9:16,17 ಆಮೇಲೆ ಆತನು ಆ ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ಅವುಗಳನ್ನು ಆಶೀರ್ವದಿಸಿ ಮುರಿದು ಶಿಷ್ಯರ ಕೈಗೆ ಕೊಟ್ಟು .ಈ ಜನರ ಗುಂಪಿಗೆ ಹಂಚಿರಿ ಅಂದನು - ಅವರೆಲ್ಲರು**

ಊಟಮಾಡಿ ತೃಪ್ತರಾದರು; ಉಳಿದ ತುಂಡುಗಳನ್ನು ಕೂಡಿಸಲಾಗಿ ಅವು ಹನ್ನೆರಡು ಪುಟ್ಟಿ ಆದವು.

ಶಿಷ್ಯರೊಂದಿಗೆ ಪ್ರಾರ್ಥಿಸಿದರು

ಅವರು ತಾನೇ ಪ್ರಾರ್ಥಿಸಿದರು ಮತ್ತು ಇತರರೊಂದಿಗೂ ಸೇರಿ ಪ್ರಾರ್ಥಿಸಿದರು.

**ಲೂಕ 9:18a ಒಂದಾನೊಂದು ದಿವಸ ಆತನು ಏಕಾಂತವಾಗಿ ಪ್ರಾರ್ಥನೆಮಾಡುತ್ತಿರುವಾಗ ಆತನ ಶಿಷ್ಯರು ಆತನ ಸಂಗಡ ಇದ್ದರು .**

ಚಿಕ್ಕ ಮಕ್ಕಳಿಗಾಗಿ ಪ್ರಾರ್ಥಿಸಿದರು

ಅವರು ಮಕ್ಕಳ ಮೇಲೆ ತನ್ನ ಕೈಯನ್ನಿಟ್ಟು ಪ್ರಾರ್ಥಿಸಿದರು.

**ಮತ್ತಾಯ 19:13a ಆಗ ಕೆಲವರು ತಮ್ಮ ಚಿಕ್ಕ ಮಕ್ಕಳನ್ನು ಯೇಸುವಿನ ಬಳಿಗೆ ತಂದು ಆತನು ಅವುಗಳ ಮೇಲೆ ಕೈಯಿಟ್ಟು ಪ್ರಾರ್ಥನೆ ಮಾಡಬೇಕೆಂದು ಕೇಳಲು...**

ಸೀಮೋನನನ್ನು ಹೆಸರಿಡಿದು ಪ್ರಾರ್ಥಿಸಿದರು

ಅವರು ಶಿಷ್ಯನನ್ನು ಹೆಸರಿಡಿದು ಪ್ರಾರ್ಥಿಸಿದರು.

**ಲೂಕ 22:31,32 ಸೀಮೋನನೇ, ಸೀಮೋನನೇ, ನೋಡು, ಸೈತಾನನು ನಿಮ್ಮನ್ನು ಗೋದಿಯಂತೆ ಒನೆಯಬೇಕೆಂದು ಅಪ್ಪಣೆ ಕೇಳಿಕೊಂಡನು; ಆದರೆ ನಿನ್ನ ನಂಬಿಕೆ ಕುಂದಿಹೋಗಬಾರದೆಂದು ನಾನು ನಿನ್ನ ವಿಷಯದಲ್ಲಿ ದೇವರಿಗೆ ವಿಜ್ಞಾಪನೆಮಾಡಿಕೊಂಡೆನುನೀನು ತಿರುಗಿಕೊಂಡ ಮೇಲೆ ನಿನ್ನ . ಸಹೋದರರನ್ನು ದೃಢಪಡಿಸು ಎಂದುಹೇಳಿದನು.**

ಅವರ ಮುಖವು ರೂಪಾಂತರವಾಯಿತು

ಒಮ್ಮೆ ಯೇಸು ಪ್ರಾರ್ಥಿಸಿದಾಗ ಅವರ ಮುಖವು ಮತ್ತು ಬಟ್ಟೆಯು ರೂಪಾಂತರಗೊಂಡವು.

**ಲೂಕ 9:28,29,30 ಯೇಸು ಈ ಮಾತುಗಳನ್ನು ಹೇಳಿ ಸುಮಾರು ಎಂಟು ದಿವಸಗಳಾದ ಮೇಲೆ ಪೇತ್ರ ಯೋಹಾನ ಯಾಕೋಬರನ್ನು ಕರಕೊಂಡು ಪ್ರಾರ್ಥನೆಮಾಡುವದಕ್ಕೆ ಬೆಟ್ಟವನ್ನು ಹತ್ತಿದನು. ಆತನು ಪ್ರಾರ್ಥನೆಮಾಡುತ್ತಿರಲಾಗಿ ಆತನ ಮುಖಭಾವವು ಬೇರೆಯಾಯಿತು. ಆತನ ಉಡುಪು ಬೆಳ್ಳಗಾಗಿ ಮಿಂಚುತ್ತಾ ಬಂತು**

ಉಲ್ಲಾಸದ ಪ್ರಾರ್ಥನೆ

ಲೂಕನ ಸುವಾರ್ತೆಯಲ್ಲಿ ಕೇವಲ ಯೇಸು ಪ್ರಾರ್ಥನೆ ಮಾಡಿದನೆಂದು ಮಾತ್ರವಲ್ಲ ಅವರು ಏನು ಪ್ರಾರ್ಥಿಸಿದರೆಂದೂ ಹೇಳಲ್ಪಟ್ಟಿದೆ.

**ಲೂಕ 10:21 ಅದೇ ಗಳಿಗೆಯಲ್ಲಿ ಆತನು ಪವಿತ್ರಾತ್ಮನ ಪ್ರೇರಣೆಯಿಂದ ಉಲ್ಲಾಸಗೊಂಡು ಹೇಳಿದ್ದೇನಂದರೆ ತಂದೆಯೇ -, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು**

ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ . ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೇದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ.

**ಯೇಸು ನಮಗಾಗಿ ಪ್ರಾರ್ಥಿಸಿದರು!**

ಯೋಹಾನ 17 ರ ಇಡೀ ಅಧ್ಯಾಯವು ನಮಗೆ ಯೇಸುವಿನ ಅಧ್ಭುತವಾದ ಪ್ರಾರ್ಥನೆಯನ್ನು ಕೊಡುತ್ತದೆ. ಯೇಸುವಿನ ಇಹಲೋಕದಲ್ಲಿನ ಸಮಯವು ಮುಗಿಯುತ್ತಾ ಬಂದಾಗ ಅವರು ಶಿಷ್ಯರಿಗಾಗಿ, ಆಗಿನ ಸಮಯದ ವಿಶ್ವಾಸಿಗಳಿಗಾಗಿ ಮತ್ತು ನಂತರ ಬರುವ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿದರು.

**ನನ್ನನ್ನು ಮಹಿಮೆಪಡಿಸು ಆಗ ನಿನ್ನನ್ನು ಮಹಿಮೆಪಡಿಸುವುದಕ್ಕಾಗುವುದು**

ಯೋಹಾನ **17:1-19 ಯೇಸು ಈ ಮಾತುಗಳನ್ನಾಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನಂದರೆ - ತಂದೆಯೇ, ಕಾಲ ಬಂದದೆ; ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು. 2ನೀನು ಅವನಿಗೆ ಯಾರಾರನ್ನು ಕೊಟ್ಟಿದ್ದೀಯೋ ಅವರೆಲ್ಲರಿಗೆ ಅವನು ನಿತ್ಯಜೀವವನ್ನು ಕೊಡಬೇಕೆಂದು ಅವನಿಗೆ ಎಲ್ಲಾ ಮನುಷ್ಯರ ಮೇಲೆ ಅಧಿಕಾರವನ್ನು ಕೊಟ್ಟಿಯಲ್ಲಾ. 3ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು.**

**ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿದ್ದೇನೆ**

**4ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ ನಿನ್ನನ್ನು ಭೂಲೋಕದಲ್ಲಿ ಮಹಿಮೆಪಡಿಸಿದೆನು. 5ಈಗ ತಂದೆಯೇ, ನೀನು ನಿನ್ನ ಬಳಿಯಲ್ಲಿ ನನ್ನನ್ನು ಮಹಿಮೆಪಡಿಸು; ಲೋಕ ಉಂಟಾಗುವದಕ್ಕಿಂತ ಮುಂಚೆ ನಿನ್ನ ಬಳಿಯಲ್ಲಿ ನನಗಿದ್ದ ಮಹಿಮೆಯಿಂದಲೇ ನನ್ನನ್ನು ಮಹಿಮೆಪಡಿಸು.**

**ನಿನ್ನ ಹೆಸರನ್ನು ತಿಳಿಯಪಡಿಸಿದೆನು**

**6ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ ನಿನ್ನ ಹೆಸರನ್ನು ತಿಳಿಯಪಡಿಸಿದೆನು. ಇವರು ನಿನ್ನವರಾಗಿದ್ದರು, ನೀನು ಇವರನ್ನು ನನಗೆ ಕೊಟ್ಟೆ; ಮತ್ತು ಇವರು ನಿನ್ನ ವಾಕ್ಯವನ್ನು ಕೈಕೊಂಡು ನಡೆದಿದ್ದಾರೆ. 7ನೀನು ನನಗೆ ಕೊಟ್ಟದ್ದೆಲ್ಲಾ ನಿನ್ನಿಂದಲೇ ಬಂದದೆ ಎಂದು ಈಗ ಇವರು ತಿಳುಕೊಂಡಿದ್ದಾರೆ.**

**ನಾನು ನಿನ್ನ ವಾಕ್ಯಗಳನ್ನು ಅವರಿಗೆ ಕೊಟ್ಟಿದ್ದೇನೆ**

**8ಹೇಗಂದರೆ ನೀನು ನನಗೆ ಕೊಟ್ಟ ಮಾತುಗಳನ್ನು ನಾನು ಇವರಿಗೆ ಕೊಟ್ಟಿದ್ದೇನೆ; ಇವರು ಆ ಮಾತುಗಳನ್ನು ಕೈಕೊಂಡು ನನ್ನನ್ನು ನಿನ್ನ ಬಳಿಯಿಂದ ಹೊರಟುಬಂದವನೆಂದು ನಿಜವಾಗಿ ತಿಳಿದು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದಾಗಿ ನಂಬಿದ್ದಾರೆ.**

## ನಾನು ಇವರಿಗಾಗಿ ಪ್ರಾರ್ಥಿಸುತ್ತೇನೆ

**9ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ; ಲೋಕಕ್ಕೋಸ್ಕರ ಕೇಳಿಕೊಳ್ಳದೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ; ನಿನ್ನವರಾಗಿದ್ದಾರೆ. 10ನನ್ನದೆಲ್ಲಾ ನಿನ್ನದೇ, ನಿನ್ನದೆಲ್ಲಾ ನನ್ನದೇ; ಮತ್ತು ಇವರಿಂದ ನನಗೆ ಮಹಿಮೆ ಉಂಟಾಗಿದೆ.**

✱ *ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು*

**11ಇನ್ನು ನಾನು ಲೋಕದಲ್ಲಿ ಇರುವದಿಲ್ಲ, ಇವರು ಲೋಕದಲ್ಲಿ ಇರುತ್ತಾರೆ, ನಾನು ನಿನ್ನ ಬಳಿಗೆ ಬರುತ್ತೇನೆ. ಪವಿತ್ರನಾದ ತಂದೆಯೇ, ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು. 12ನಾನು ಇವರ ಸಂಗಡ ಇದ್ದಾಗ ನೀನು ನನಗೆ ಕೊಟ್ಟಿರುವ ನಿನ್ನ ಹೆಸರಿನಲ್ಲಿ ಇವರನ್ನು ಕಾಯುತ್ತಾ ಬಂದೆನು, ಇವರನ್ನು ಕಾಪಾಡಿದೆನು; ಶಾಸ್ತ್ರದ ಮಾತು ನೆರವೇರುವಂತೆ ನಾಶಕ್ಕೆ ಗುರಿಯಾದ ಆ ಮನುಷ್ಯನೇ ಹೊರತು ಇವರಲ್ಲಿ ಮತ್ತಾರೂ ನಾಶವಾಗಲಿಲ್ಲ.**

✱ *ಇವರಲ್ಲಿ ಆನಂದವಿರಬೇಕು*

**13ಆದರೆ ಈಗ ನಿನ್ನ ಬಳಿಗೆ ಬರುವವನಾಗಿದ್ದೇನೆ; ಆದದರಿಂದ ಇವರಲ್ಲಿ ನನ್ನ ಆನಂದವು ಪರಿಪೂರ್ಣವಾಗಿರುವಂತೆ ಲೋಕದಲ್ಲಿದ್ದು ಈ ಮಾತುಗಳನ್ನು ಆಡುತ್ತೇನೆ. 14ನಾನು ನಿನ್ನ ವಾಕ್ಯವನ್ನು ಇವರಿಗೆ ಕೊಟ್ಟಿದ್ದೇನೆ; ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರೂ ಲೋಕದವರಲ್ಲ; ಆದಕಾರಣ ಲೋಕವು ಇವರ ಮೇಲೆ ದ್ವೇಷ ಮಾಡಿ ಅದೆ.**

✱ *ಕೆಡುಕನಿಂದ ತಪ್ಪಿಸಿ ಕಾಪಾಡು*

**15ಇವರನ್ನು ಲೋಕದೊಳಗಿಂದ ತೆಗೆದುಕೊಂಡು ಹೋಗಬೇಕೆಂದು ನಾನು ಕೇಳಿಕೊಳ್ಳುವದಿಲ್ಲ; ಕೆಡುಕನಿಂದ ತಪ್ಪಿಸಿ ಕಾಪಾಡಬೇಕೆಂದು ಕೇಳಿಕೊಳ್ಳುತ್ತೇನೆ. 16ನಾನು ಲೋಕದವನಲ್ಲದೆ ಇರುವ ಪ್ರಕಾರ ಇವರು ಲೋಕದವರಲ್ಲ.**

✱ *ಇವರನ್ನು ಪ್ರತಿಷ್ಠೆಪಡಿಸು*

**17ಇವರನ್ನು ಸತ್ಯದಲ್ಲಿ ಸೇರಿಸಿ ಪ್ರತಿಷ್ಠೆ ಪಡಿಸು; ನಿನ್ನ ವಾಕ್ಯವೇ ಸತ್ಯವು. 18ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ ನಾನೂ ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು. 19ಇವರು ನಿಜವಾಗಿ ಪ್ರತಿಷ್ಠಿತರಾಗಬೇಕೆಂದು ಇವರಿಗೋಸ್ಕರ ನಾನು ನನ್ನನ್ನು ಪ್ರತಿಷ್ಠೆಪಡಿಸಿಕೊಳ್ಳುತ್ತೇನೆ.**

## ಆತನು ನಮಗಾಗಿ ಪ್ರಾರ್ಥಿಸಿದರು!

ಯೇಸು ತನ್ನ ಶಿಷ್ಯರಿಗಾಗಿ ಮತ್ತು ಆಗಿನ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿದ ಮೇಲೆ ನಂತರ ಬರುವ ವಿಶ್ವಾಸಿಗಳಿಗಾಗಿ ಪ್ರಾರ್ಥಿಸಿದರು. ನಾವೂ ಸಹ ಅದರಲ್ಲಿ ಒಳಗೊಂಡಿದ್ದೇವೆ! ಯೇಸು ಈ ಭೂಮಿಯ ಮೇಲಿದ್ದಾಗ ನಮಗಾಗಿ ಪ್ರಾರ್ಥಿಸಿದರು.

✳ *ನಂಬುವವರಿಗೋಸ್ಕರ*

**ಯೋಹಾನ 17:20-26 ಆದರೆ ಇವರಿಗೋಸ್ಕರ ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ ಸಹ ಕೇಳಿಕೊಳ್ಳುತ್ತೇನೆ.**

✳ *ವಿಶ್ವಾಸಿಗಳ ಐಕ್ಯತೆಗಾಗಿ*

21ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ.

✳ *ಮಹಿಮೆ ಹೊಂದುವುದಕ್ಕಾಗಿ*

22ನಾವು ಒಂದಾಗಿರುವ ಪ್ರಕಾರ ಅವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟಿರುವ ಮಹಿಮೆಯನ್ನು ನಾನು ಅವರಿಗೆ ಕೊಟ್ಟಿದ್ದೇನೆ.

✳ *ಪರಿಪೂರ್ಣರಾಗುವುದಕ್ಕಾಗಿ*

23ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದುಬರುವದು.

✳ *ಒಂದು ದಿನ ಆತನೊಂದಿಗೆ ಇರುವುದಕಾಗಿ*

24ತಂದೆಯೇ, ನೀನು ಯಾರನ್ನು ನನಗೆ ಕೊಟ್ಟಿಯೋ ಅವರು ನಾನಿರುವ ಸ್ಥಳದಲ್ಲಿ ನನ್ನ ಕೂಡ ಇದ್ದುಕೊಂಡು ಲೋಕವು ಹುಟ್ಟುವದಕ್ಕಿಂತ ಮುಂಚೆಯೇ ನೀನು ನನ್ನನ್ನು ಪ್ರೀತಿಸಿ ನನಗೆ ಕೊಟ್ಟಿರುವ ಮಹಿಮೆಯನ್ನು ನೋಡಬೇಕೆಂದು ಇಚ್ಛೈಸುತ್ತೇನೆ. 25ನೀತಿಸ್ವರೂಪನಾದ ತಂದೆಯೇ, ಲೋಕವಂತೂ ನಿನ್ನನ್ನು ತಿಳಿಯಲಿಲ್ಲ, ಆದರೆ ನಾನು ನಿನ್ನನ್ನು ತಿಳಿದಿದ್ದೇನೆ; ಮತ್ತು ಇವರು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದಾಗಿ ತಿಳುಕೊಂಡಿದ್ದಾರೆ.

✳ *ಆತನ ಪ್ರೀತಿಯಿಂದ ತುಂಬಲ್ಪಡುವುದಕ್ಕಾಗಿ*

**26ನಾನು ಅವರಿಗೆ ನಿನ್ನ ಹೆಸರನ್ನು ತಿಳಿಸಿದ್ದೇನೆ, ಇನ್ನೂ ತಿಳಿಸುವೆನು. ನೀನು ನನ್ನ ಮೇಲೆ ಇಟ್ಟಂಥ ಪ್ರೀತಿಯು ಅವರಲ್ಲಿ ಇರಬೇಕೆಂದೂ ನಾನೂ ಅವರಲ್ಲಿ ಇರಬೇಕೆಂದೂ ಪ್ರಾರ್ಥಿಸುತ್ತೇನೆ ಅಂದನು.**

ಈ ಪ್ರಾರ್ಥನೆಯ ಸಮಯವನ್ನು ಕಳೆದ ನಂತರ ತಕ್ಷಣವಾಗಿ ಯೇಸು ಮತ್ತು ಅವರ ಶಿಷ್ಯರು ಗೆತ್ಸೆಮನೆ ತೋಟಕ್ಕೆ ಹೋದರು.

**ಯೋಹಾನ 18:1 ಯೇಸು ಇದನ್ನು ಹೇಳಿದ ಮೇಲೆ ತನ್ನ ಶಿಷ್ಯರ ಸಂಗಡ ಕೆದ್ರೋನ್ ಹಳ್ಳದ ಆಚೆಗೆ ಹೊರಟುಹೋದನು. ಅಲ್ಲಿ ಒಂದು ತೋಟವಿತ್ತು; ಅದರೊಳಕ್ಕೆ ಆತನೂ ಆತನ ಶಿಷ್ಯರೂ ಹೋದರು.**

## ಗೆತ್ಸೆಮನೆಯಲ್ಲಿ

ಯೇಸು ಮರಣವನ್ನು ಎದುರಿಸುತ್ತಿದ್ದರು. ಅವರು ದುಃಖದಲ್ಲಿದ್ದರು ಮತ್ತು ಮನಗುಂದಿದವರಾಗಿದ್ದರು. ತಾನು ಈಗ ಪ್ರಾರ್ಥಿಸಬೇಕೆಂಬುದನ್ನು ಅವರು ತಿಳಿದಿದ್ದರು. ತನ್ನ ಶಿಷ್ಯರೂ ತನ್ನೊಂದಿಗೆ ಪ್ರಾರ್ಥಿಸಬೇಕೆಂದು ಅವರು ಬಯಸಿದರು. ಆದರೆ ಅವರ ಶಿಷ್ಯರಿಂದ ಅದು ಸಾಧ್ಯವಾಗಲಿಲ್ಲ. ಅಲ್ಲಿ ಏನಾಯಿತು ಎಂಬುದು ನಮ್ಮಲ್ಲಿ ಬಹುತೇಕ ಜನರಿಗೆ ಗೊತ್ತಿರುವ ವಿಷಯವಾಗಿದೆ.

✳ ಯೋಹಾನನ ದಾಖಲೆ

ಯೇಸು ನೋವಿನಿಂದ ಪ್ರಾರ್ಥಿಸಿದರು.

**ಯೋಹಾನ 12:27,28 ಈಗ ನನ್ನ ಪ್ರಾಣವು ತತ್ತರಿಸುತ್ತದೆ; ಮತ್ತು ನಾನೇನು ಹೇಳಲಿ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು. ತಂದೆಯೇ, ನಿನ್ನ ಹೆಸರನ್ನು ಮಹಿಮೆಪಡಿಸಿಕೋ ಅಂದನು. ಅದಕ್ಕೆ - ಮಹಿಮೆಪಡಿಸಿದ್ದೇನೆ, ತಿರಿಗಿ ಮಹಿಮೆಪಡಿಸುವೆನು ಎಂದು ಆಕಾಶವಾಣಿಯಾಯಿತು.**

✳ *ಮತ್ತಾಯನ ದಾಖಲೆ*

**ಈ ಸಮಯದ ಬಗ್ಗೆ ಮತ್ತಾಯನ ದಾಖಲೆ ನಮಗೆ ತೋರಿಸುವುದು ಯೇಸುವಿನ ಮಾನವ ಗುಣವಾಗಿದೆ. ಯೇಸು ಇತರರು ತನ್ನನ್ನು ಪ್ರಾರ್ಥನೆಯಲ್ಲಿ ಎತ್ತಿಹಿಡಿಯುವ ನಿಕಟವಾದ ಸಂಬಂಧವನ್ನು ಬಯಸಿದರು. ಅವರು ತಮ್ಮ ಮಾನವಸ್ವರೂಪದಲ್ಲಿ ದೇವರ ಚಿತ್ತವನ್ನು ಮಾಡುವಂತೆ, ಕ್ರೂಜೆಯ ಮೇಲಿನ ಮರಣವನ್ನಾದರೂ ಅನುಭವಿಸುವಂತೆ ತನ್ನ ಚಿತ್ತವನ್ನು ಸ್ಥಿರಪಡಿಸಿಕೊಳ್ಳುತ್ತಿದ್ದರು.**

**ಮತ್ತಾಯ 26:36-46 ಅನಂತರ ಯೇಸು ತನ್ನ ಶಿಷ್ಯರ ಸಂಗಡ ಗೆತ್ಸೇಮನೆ ಎಂಬ ತೋಟಕ್ಕೆ ಬಂದು ಅವರಿಗೆ - ಇಲ್ಲೇ ಕೂತುಕೊಳ್ಳಿರಿ, ನಾನು ಅತ್ತಲಾಗಿ ಹೋಗಿ ಪ್ರಾರ್ಥನೆ ಮಾಡಿ ಬರುತ್ತೇನೆ ಎಂದು ಹೇಳಿ 37ಪೇತ್ರನನ್ನೂ ಜೆಬೆದಾಯನ ಇಬ್ಬರು ಮಕ್ಕಳನ್ನೂ ಕರಕೊಂಡು ಹೋಗಿ ದುಃಖಪಟ್ಟು ಮನಗುಂದಿದವನಾದನು. 38ಮತ್ತು ಅವರಿಗೆ - ನನ್ನ ಪ್ರಾಣವು ಸಾಯುವಷ್ಟು ದುಃಖಕ್ಕೆ ಒಳಗಾಗಿದೆ; ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ ಎಂದು ಹೇಳಿ**

✶ ಮೊದಲ ಪ್ರಾರ್ಥನೆ

**ಸ್ವಲ್ಪ ಮುಂದೆ ಹೋಗಿ ಬೋರಲಬಿದ್ದು - ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯ ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ ಎಂದು ದೇವರನ್ನು ಪ್ರಾರ್ಥಿಸಿದನು.**

"ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" ಎಂದು ಯೇಸು ಪ್ರಾರ್ಥಿಸಿದರು.

**ಆಮೇಲೆ ಆ ಶಿಷ್ಯರ ಬಳಿಗೆ ಬಂದು ಅವರು ನಿದ್ದೆ ಮಾಡುವದನ್ನು ಕಂಡು ಪೇತ್ರನಿಗೆ - ಹೀಗೋ? ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ? ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸುಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಸಾಲದು ಎಂದು ಹೇಳಿದನು.**

ಯೇಸು ಅವರು ಮಲಗಿರುವುದನ್ನು ಕಂಡಾಗ "ನನ್ನೊಂದಿಗೆ ಒಂದು ಗಂಟೆಯಾದರೂ ಎಚ್ಚರವಾಗಿರಲಾರಿರೋ?" ಎಂದು ಕೇಳಿದರು. ನಂತರ ಅವರು ಯಾಕೆ ಪ್ರಾರ್ಥಿಸಬೇಕೆಂಬುದನ್ನು ಅವರಿಗೆ ಹೇಳಿದರು – ಶೋಧನೆಯೊಳಗೆ ಸೇರದಂತೆ ಇರಲು - ಸೇರಿದರೆ ಅವರು ತಮ್ಮ ಚಿತ್ತವನ್ನೇ ಹಿಂಬಾಲಿಸುವರು.

✶ **ಎರಡನೆಯ ಪ್ರಾರ್ಥನೆ**

ತಿರಿಗಿ ಎರಡನೆಯ ಸಾರಿ ಹೋಗಿ - ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ ಎಂದು ಪ್ರಾರ್ಥನೆಮಾಡಿದನು.

✶ **ಮೂರನೆಯ ಪ್ರಾರ್ಥನೆ**

ಗಮನಿಸಿರಿ, ಯೇಸು ಎರಡನೆಯ ಸಲ ಬಂದಾಗ ಅವರು ಮಲಗಿರುವುದನ್ನು ಕಂಡು – ಅವರನ್ನು ಮಲಗುವುದಕ್ಕೆ ಬಿಟ್ಟರು. ಎರಡನೆಯ ಸಲ ಅವರಿಗೆ ಎಚ್ಚರಿಕೆ ನೀಡಲಿಲ್ಲ.

**ಆತನು ತಿರಿಗಿ ಬಂದಾಗ ಅವರು ನಿದ್ದೆಮಾಡುವದನ್ನು ಕಂಡನು; ಅವರ ಕಣ್ಣುಗಳು ಭಾರವಾಗಿದ್ದವು ಆಮೇಲೆ ತಿರಿಗಿ ಅವರನ್ನು ಬಿಟ್ಟುಹೋಗಿ ತಿರಿಗಿ ಅದೇ ಮಾತನ್ನು ಹೇಳುತ್ತಾ ಮೂರನೆಯ ಸಾರಿ ಪ್ರಾರ್ಥಿಸಿದನು.**

ಯೇಸು ಮೂರನೆಯ ಬಾರಿ ಪ್ರಾರ್ಥಿಸಿದರು, "ನಿನ್ನ ಚಿತ್ತದಂತೆಯೇ ಆಗಲಿ."

**ತರುವಾಯ ಶಿಷ್ಯರ ಬಳಿಗೆ ಬಂದು ಅವರಿಗೆ - ನೀವು ಇನ್ನೂ ನಿದ್ದೆಮಾಡಿ ದಣುವಾರಿಸಿಕೊಳ್ಳಿರಿ; ಇಗೋ, ಗಳಿಗೆ ಸಮೀಪಿಸಿತು, ಈಗ ಮನುಷ್ಯಕುಮಾರನು ದುರ್ಜನರ ಕೈಗೆ ಒಪ್ಪಿಸಲ್ಪಡುತ್ತಾನೆ. ಏಳಿರಿ, ಹೋಗೋಣ; ನನ್ನನ್ನು ಹಿಡುಕೊಡುವವನು ಹತ್ತಿರಕ್ಕೆ ಬಂದಿದ್ದಾನೆ ನೋಡಿರಿ ಎಂದು ಹೇಳಿದನು.**

✳ *ಲೂಕನ ದಾಖಲೆ*

ವೈದ್ಯನಾದ ಲೂಕನು ಈ ಪ್ರಾರ್ಥನೆಯ ಸಮಯದ ಬಗ್ಗೆ ಒಂದು ಜೀವಂತ ಚಿತ್ರಣವನ್ನು ನಮಗೆ ಕೊಡುತ್ತಾನೆ.

**ಲೂಕ 22:43,44 ಆಗ ಪರಲೋಕದಿಂದ ಬಂದ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಆತನನ್ನು ಬಲಪಡಿಸಿದನು. ಆತನು ಮನೋವ್ಯಥೆಯುಳ್ಳವನಾಗಿ ಇನ್ನೂ ಆಸಕ್ತಿಯಿಂದ ಪ್ರಾರ್ಥಿಸುತ್ತಿರಲಾಗಿ ಆತನ ಬೆವರು ಭೂಮಿಗೆ ಬೀಳುತ್ತಿರುವ ರಕ್ತದ ದೊಡ್ಡ ಹನಿಗಳೋಪಾದಿಯಲ್ಲಿತ್ತು.**

**ಶಿಲುಬೆಯ ಮೇಲೆ**

* *ತಂದೆಯೇ ಅವರನ್ನು ಕ್ಷಮಿಸು*

ಯೇಸು ಶಿಲುಬೆಯ ಮೇಲೆ ತೂಗಾಡುತ್ತಿದ್ದಾಗ ಮಾಡಿದ ಪ್ರಾರ್ಥನೆಯು ದೇವರ ವಾಕ್ಯದಲ್ಲಿರುವ ಅತ್ಯಂತ ಅದ್ಭುತವಾದ ಪ್ರಾರ್ಥನೆಯಾಗಿದೆ. ತನ್ನ ಸ್ವಂತ ಸೃಷ್ಟಿಯೇ ಅವರಿಗೆ ದ್ರೋಹ ಬಗೆದಿತ್ತು. ತಾನು ಸೃಷ್ಟಿಸಿದ ಜನರೇ ಅವರನ್ನು ನಿಂದಿಸಿದರು, ದ್ವೇಷಿಸಿದರು ಮತ್ತು ಶಿಲುಬೆಗೇರಿಸಿದರು. ತಾನು ಯಾರಿಗೋಸ್ಕರ ರಕ್ಷಣೆಯನ್ನು ತರಲು ಬಂದರೋ ಅವರಿಂದಲೇ ಕೊಲ್ಲಲ್ಪಟ್ಟನು. ಈ ಭೂಮಿಯ ಮೇಲೆ ಯಾರಿಗಾದರೂ ಕ್ಷಮಿಸದಿರಲು ಅತ್ಯಂತ ನ್ಯಾಯವಾದ ಕಾರಣವಿದ್ದರೆ, ಅದು ಇನ್ನಾರಿಗೂ ಅಲ್ಲ ಯೇಸುವಿಗೇ. ಆದರೂ ಸಹ ಆತನು ಪ್ರಾಣ ಹೋಗುವಷ್ಟು ನೋವಿನಿಂದ ತೂಗುತ್ತಿದ್ದಾಗ, ಸಾವಿನಂಚಿನಲ್ಲಿಯೂ "ತಂದೆಯೇ ಇವರನ್ನು ಕ್ಷಮಿಸು…" ಎಂದು ಪ್ರಾರ್ಥಿಸಿದರು.

**ಲೂಕ 23:34a ಆಗ ಯೇಸು - ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು ಅಂದನು.**

* *ಆತನ ಕೊನೆಯ ಕೂಗು*

**ಲೂಕ 23:46 ಆಮೇಲೆ ಯೇಸು - ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ ಎಂದು ಮಹಾಧ್ವನಿಯಿಂದ ಕೂಗಿದನು; ಇದನ್ನು ಹೇಳಿದ ಮೇಲೆ ಪ್ರಾಣಬಿಟ್ಟನು.**

ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.

ಯೇಸು ಪ್ರಾರ್ಥನಾ ವ್ಯಕ್ತಿಯಾಗಿದ್ದರು. ನಾವು ಸತತವಾಗಿ ಪ್ರಾರ್ಥಿಸುವಂತೆ ಅವರು ನಮಗೆ ಉದಾಹರಣೆಯಾಗಿದ್ದಾರೆ. ಇಂದಿಗೂ ಅವರು ಪ್ರಾರ್ಥಿಸುತ್ತಿದ್ದಾರೆ – ಪರಲೋಕದಲ್ಲಿ ನಮ್ಮ ಪರವಾಗಿ ಪ್ರಾರ್ಥಿಸುತ್ತಿದ್ದಾರೆ.

**ಇಬ್ರಿಯರಿಗೆ 7:25 ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.**

## ಸಾರಾಂಶ – ಯೇಸು ನಮ್ಮ ಶ್ರೇಷ್ಠ ಮಾದರಿ

ಯೇಸು ನಮ್ಮ ಸರ್ವಸೈನ್ಯಾಧಿಪತಿಯಾಗಿರುವುದು ಮಾತ್ರವಲ್ಲದೆ ನಮಗೆ ಪ್ರಾರ್ಥನೆ ಮತ್ತು ವಿಧೇಯತೆಯ ಜಯಭರಿತ ಜೀವನವನ್ನು ಹೇಗೆ ನಡೆಸಬೇಕೆಂಬುದಕ್ಕೂ ಸಹ ನಮ್ಮ ಉದಾಹರಣೆಯಾಗಿದ್ದಾರೆ. ನಾಲ್ಕೂ ಸುವಾರ್ತೆಗಳು ಅವರ ಪ್ರಾರ್ಥನೆಯ ಜೀವನದ ಕುರಿತಾದ ಉಲ್ಲೇಖಗಳಿಂದ ತುಂಬಿವೆ ಮತ್ತು ನಮ್ಮ ಸ್ವರ್ಗೀಯ ತಂದೆಯೊಂದಿಗಿನ ನಮ್ಮ ಸಂಬಂಧದ ಬಗ್ಗೆ ಒಳನೋಟವನ್ನು ನೀಡುತ್ತದೆ. ದೇವರ ಮಗನಾದ ಯೇಸು ಪ್ರತಿಯೊಂದು ಸಂದರ್ಭದಲ್ಲೂ, ಪರಿಸ್ಥಿತಿಯಲ್ಲೂ ಪ್ರಾರ್ಥಿಸಿದರು ಎಂಬುದು ನಮಗೆ ಒಂದು ಸವಾಲಾಗಿದೆ. ನಾವು ನಮ್ಮ ಜೀವನವನ್ನು ನಡೆಸಬೇಕಾದ ರೀತಿಯಲ್ಲಿ

ನಡೆಸುತ್ತಿದ್ದೇವೆಯೇ ಅಥವಾ ಇನ್ನೊಂದು ಮಾತಲ್ಲಿ, ನಾವು ನಿರಂತರವಾಗಿ ನಮ್ಮ ತಂದೆಯ ಬಳಿಗೆ ಮಾರ್ಗದರ್ಶನಕ್ಕಾಗಿ ಹೋಗುತ್ತಿದ್ದೇವೆಯೇ?

ನಾವು ಪ್ರೀತಿಯಲ್ಲಿ ಮತ್ತು ಐಕ್ಯತೆಯಲ್ಲಿ ನಡೆಯಬೇಕೆಂದು, ಪರಿಪೂರ್ಣರಾಗಬೇಕೆಂದು, ತನ್ನ ಮಹಿಮೆ ನಮ್ಮಲ್ಲಿ ಕಾಣಿಸಬೇಕೆಂದು, ಮತ್ತು ಒಂದು ದಿನ ನಾವು ಆತನೊಂದಿಗೆ ಇರಬೇಕೆಂದು ಯೇಸು ನಂಬುವವರಾದ ನಮಗಾಗಿ ಪ್ರಾರ್ಥಿಸಿದರು.

**ವಿಮರ್ಶೆಗಾಗಿ ಪ್ರಶ್ನೆಗಳು**

1.ಮತ್ತಾಯ 20:27 ರಲ್ಲಿ ಕರುಣಿಸು ಎಂದು ಬೇಡಿಕೊಂಡ ಕುರುಡರಿಗೆ ಪ್ರತ್ಯುತ್ತರವಾಗಿ ಯೇಸು ನಾನು ನಿಮಗಾಗಿ ಏನು ಮಾಡಬೇಕೆಂದು ನೀವು ಬಯಸುತ್ತೀರಿ ಎಂದು ಯಾಕೆ ಕೇಳಿದರು? ಈ ವಾಕ್ಯಭಾಗದಿಂದ ಪ್ರಾರ್ಥನೆಯ ಬಗ್ಗೆ ನೀವು ಏನನ್ನು ಕಲಿತುಕೊಂಡಿರಿ?

2.ಮತ್ತಾಯ 17:14 ರಲ್ಲಿ, ಅಪಸ್ಮಾರದಿಂದ ನರಳುತ್ತಿದ್ದ ಮಗನ ತಂದೆಯು ಯೇಸುವಿನ ಬಳಿಗೆ ಬಂದು ಅವರ ಶಿಷ್ಯರು ಅವನನ್ನು ಗುಣಪಡಿಸಲು ಸಾಧ್ಯವಾಗಲಿಲ್ಲ ಎಂದು ಹೇಳಿದಾಗ, ಶಿಷ್ಯರು ಯಾವ ಕಾರಣಗಳಿಂದ ಅದನ್ನು ಮಾಡಲಾಗಲಿಲ್ಲ ಎಂದು ಯೇಸು ವೈಯಕ್ತಿಕವಾಗಿ ಶಿಷ್ಯರಿಗೆ ಹೇಳಿದರು? ಈ ವಾಕ್ಯಭಾಗದಿಂದ ಪ್ರಾರ್ಥನೆಯ ಬಗ್ಗೆ ನೀವು ಏನನ್ನು ಕಲಿತುಕೊಂಡಿರಿ?

3.ಯೇಸುವಿನ ಪ್ರಾರ್ಥನೆಯ ಇತರ ಮೂರು ಉದಾಹರಣೆಗಳನ್ನು ನೀಡಿರಿ ಮತ್ತು ಈ ಉದಾಹರಣೆಗಳಿಂದ ನೀವು ಕಲಿತದ್ದನ್ನು ವಿವರಿಸಿ. ಈ ಪಾಠದಲ್ಲಿ ಕಲಿತ ಸತ್ಯಗಳಿಂದ ನಿಮ್ಮ ಪ್ರಾರ್ಥನಾ ಜೀವನದಲ್ಲಿ ನೀವು ಯಾವ ಬದಲಾವಣೆಗಳನ್ನು ಮಾಡುವಿರಿ ಎಂದು ವಿವರಿಸಿರಿ.

*ಪಾಠ ನಾಲ್ಕು*

# “ಸ್ವಾಮೀ, ನಮಗೆ ಪ್ರಾರ್ಥನೆ ಮಾಡುವುದನ್ನು ಕಲಿಸು”

ಯೇಸುವಿನ ಜೀವನವು ಪ್ರಾರ್ಥನಾ ಜೀವಿತವಾಗಿತ್ತು ಎಂಬುದನ್ನು ಶಿಷ್ಯರು ಕಂಡು, ಒಂದು ದಿನ ಅವರು "ಕರ್ತನೇ ನಮಗೆ ಪ್ರಾರ್ಥಿಸುವುದನ್ನು ಕಲಿಸು" ಎಂದು ಹೇಳಿದರು. ಯೇಸುವಿನ ಜೀವನದಲ್ಲಿ ಏನೋ ಒಂದು ವಿಭಿನ್ನತೆಯಿತ್ತು – ಅವರಿಗೆ ಅವಶ್ಯವಾದ ಯಾವುದೋ ಒಂದು ಸಂಗತಿಯಿತ್ತು.

**ಲೂಕ 11:1 ಆತನು ಒಂದಾನೊಂದು ಸ್ಥಳದಲ್ಲಿ ಪ್ರಾರ್ಥನೆಮಾಡಿ ಮುಗಿಸಿದಾಗ ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ - ಸ್ವಾಮೀ, ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆಮಾಡುವದನ್ನು ಕಲಿಸು ಎಂದು ಕೇಳಿದನು.**

ಇದು ಪ್ರತಿನಿತ್ಯವೂ ನಮ್ಮ ಹೃದಯದ ಪ್ರಾರ್ಥನೆಯಾಗಿರಲಿ,

“ಸ್ವಾಮೀ, ನಮಗೆ ಪ್ರಾರ್ಥನೆ ಮಾಡುವುದನ್ನು ಕಲಿಸು!”

## ಕರ್ತನ ಪ್ರಾರ್ಥನೆ

ಶಿಷ್ಯರು ತಮ್ಮ ಪ್ರಾರ್ಥನೆಯನ್ನು ರೂಪಿಸುವುದಕ್ಕಾಗಿ ಒಂದು ಮಾದರಿಯಂತೆ ಕರ್ತನ ಪ್ರಾರ್ಥನೆಯನ್ನು ಹೇಳಿಕೊಡಲಾಗಿತ್ತು. ಅನೇಕ ಶತಮಾನಗಳಿಂದ ನಡೆಯುತ್ತಾ ಬಂದಂತೆ ಧಾರ್ಮಿಕ ಆಚರಣೆಗಳಲ್ಲಿ ಇದನ್ನು ಪುನರಾವರ್ತಿಸುವುದಕ್ಕಾಗಿ ಇದು ಹೇಳಿಕೊಡಲ್ಪಡಲಿಲ್ಲ.

ಯೇಸು ತನ್ನ ಉದಾಹರಣೆಯಾಗಿ ಬಳಸಿದ ಪ್ರಾರ್ಥನೆಯು ಎಷ್ಟು ಚಿಕ್ಕದಾಗಿದೆ ಎಂಬುದನ್ನು ಗಮನಿಸಿರಿ – ಲೂಕನ ಸುವಾರ್ತೆಯಲ್ಲಿ ಕೇವಲ ಮೂರು ವಚನಗಳು - ಅಥವಾ ಮತ್ತಾಯನ ಸುವಾರ್ತೆಯಲ್ಲಿ ಐದು ವಚನಗಳು (ಮತ್ತಾಯ 6:9-13).

**ಅದಕ್ಕಾತನು - ನೀವು ಪ್ರಾರ್ಥಿಸುವಾಗ -**

**ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ.**

**ನಿನ್ನ ರಾಜ್ಯವು ಬರಲಿ.**

**ನಮ್ಮ ಅನುದಿನದ ಆಹಾರವನ್ನು ಪ್ರತಿದಿನವೂ ದಯಪಾಲಿಸು.**

**ನಮಗೆ ತಪ್ಪುಮಾಡಿರುವ ಪ್ರತಿಯೊಬ್ಬನನ್ನು**

**ನಾವು ಕ್ಷಮಿಸುತ್ತೇವಾದ್ದರಿಂದ ನಮ್ಮ ಪಾಪಗಳನ್ನು ಕ್ಷಮಿಸು.**

**ನಮ್ಮನ್ನು ಶೋಧನೆಯೊಳಗೆ ಸೇರಿಸಬೇಡ**

**ಎಂದು ಹೇಳಿರಿ ಅಂದನು.**

**ಲೂಕ 11:2-4**

ಈ ಕೆಲವು ವಚನಗಳ ಮೇಲೆ ಅನೇಕ ಅದ್ಭುತವಾದ ಪುಸ್ತಕಗಳು ಬರೆಯಲ್ಪಟ್ಟಿವೆ, ಆದರೆ ನಾವು ಮೊದಲ ವಚನದ ಮೇಲೆ ಮಾತ್ರ ನಮ್ಮ ಗಮನವಿಡೋಣ.

**"ನೀವು ಪ್ರಾರ್ಥಿಸುವಾಗ - ಹೇಳಿರಿ!"**

ಈ ಪ್ರಾರ್ಥನೆಯಲ್ಲಿ, ನೀವು ಪ್ರಾರ್ಥಿಸುವಾಗ ಒಬ್ಬ ಮನಸ್ಸಿಲ್ಲದ ದೇವರನ್ನು ಒಲಿಸಿಕೊಳ್ಳುವಂತ ರೀತಿಯಲ್ಲಿ ಪ್ರಾರ್ಥಿಸಿರಿ ಎಂದು ಯೇಸು ಹೇಳಲಿಲ್ಲ, ಇಲ್ಲವೇ ನೋವಿನಿಂದ ಬೇಡಿಕೊಳ್ಳಿರಿ ಎಂದು ಹೇಳಲಿಲ್ಲ. ಅವರು ಹೇಳಿದ್ದೇನೆಂದರೆ ನೀವು ಪ್ರಾರ್ಥಿಸುವಾಗ – ಹೀಗೆ ಹೇಳಿರಿ ಎಂದು ಹೇಳಿದರು.

ಯೇಸು ಇನ್ನೊಂದು ಸ್ಥಳದಲ್ಲೂ "ಹೇಳಿರಿ" ಎಂಬ ಇದೇ ಪದವನ್ನು ಬಳಸಿದರು.

**ಮಾರ್ಕ 11:23 ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ - ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು.**

ನಾವು ಪ್ರಾರ್ಥಿಸುವಾಗ "ಹೇಳಬೇಕು". ನಾವು ಬೆಟ್ಟಕ್ಕೆ ಹೇಳಬೇಕು - ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು. ಯೇಸು ಹೇಳಿದರು ನಾವು ಸಂಶಯಪಡದೆ ನಂಬಿದರೆ ನಾವು ಹೇಳಿದ್ದನ್ನೇ ಹೊಂದಿಕೊಳ್ಳುತ್ತೇವೆ. ನಾವು ಹೇಳಿದಂತೆಯೇ ಆಗುವುದು.

ಪ್ರಾರ್ಥನೆಯ ಬಗ್ಗೆ ನಮ್ಮ ಸರಳ ವ್ಯಾಖ್ಯಾನವನ್ನು ನೆನಪಿಸಿಕೊಳ್ಳಿರಿ:

**ಪ್ರಾರ್ಥನೆಯೆಂದರೆ ದೇವರ ಮುಂದೆ ಒಂದು ಸನ್ನಿವೇಶವನ್ನು ತೆಗೆದುಕೊಂಡು ಹೋಗುವುದು, ಆತನ ಉತ್ತರವನ್ನು ಕೇಳುವುದು, ಮತ್ತು ಆ ಸನ್ನಿವೇಶಕ್ಕೆ ದೇವರ ಚಿತ್ತವನ್ನು ಹೇಳುವುದು.**

**ಪ್ರಾರ್ಥನೆಯೆಂದರೆ ಪರಲೋಕವನ್ನು ಭೂಲೋಕಕ್ಕೆ ತರುವುದಾಗಿದೆ.**

**"ಪರಲೋಕದಲ್ಲಿರುವ ನಮ್ಮ ತಂದೆಯೇ"**

**✳ ನಮ್ಮ ಸ್ಥಾನ**

ಯೇಸು ತನ್ನ ಶಿಷ್ಯರಿಗೆ ಅವರ ಸ್ಥಾನವನ್ನು ನೆನಪಿಸಿದರು. ನಾವು ಪ್ರಾರ್ಥನೆಯಲ್ಲಿ ದೇವರ ಮೂಮ್ದೆ ಬರುವಾಗ, ಮಹೋನ್ನತ ದೇವರ ಮಕ್ಕಳಾಗಿ ಬರಬೇಕು. ಸ್ವಾಭಾವಿಕವಾಗಿ ಮಕ್ಕಳು ಹೇಗೆ ತಮ್ಮ ಲೌಕಿಕ ಪೋಷಕರ ಹತ್ತಿರಕ್ಕೆ ಓಡಿ ಬರುತ್ತಾರೋ ಅದರಂತೆಯೇ ನಾವೂ ಸಹ ಆತನ ಹತ್ತಿರ ಬರುವ ಒಡಂಬಡಿಕೆಯ ಹಕ್ಕನ್ನು ಹೊಂದಿದ್ದೇವೆ.

**ರೋಮಾ 8:15,16 ನಾವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ. ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**

ನಮ್ಮ ಪರಲೋಕದ ತಂದೆಯು ನಮ್ಮ ಲೌಕಿಕ ತಂದೆಗಿಂತ ಸಂಪೂರ್ಣವಾಗಿ ವ್ಯತ್ಯಾಸವಾಗಿದ್ದಾರೆ ಎಂಬುದನ್ನು ಅರಿತವರಾಗಿ ಆತನಿಗೆ ಪ್ರಾರ್ಥಿಸಬೇಕು.

ನಾವು ಪರಲೋಕದಲ್ಲಿರುವ ನಮ್ಮ ತಂದೆಗೆ ಪ್ರಾರ್ಥಿಸಬೇಕು – ಕೆಲವರು ಬೋಧಿಸುವ ಪ್ರಕಾರ ನಮ್ಮೊಳಗಿರುವ ದೇವರಿಗಲ್ಲ.

**"ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ"**

✱ *ನಮ್ಮ ಮನೋಭಾವನೆ*

ನಂತರ ಯೇಸು ಪ್ರಾರ್ಥನೆಯಲ್ಲಿ ತಮಗಿದ್ದ ಮನೋಭಾವನೆಯ ಕುರಿತು ಶಿಷ್ಯರಿಗೆ ಬೋಧಿಸಿದರು.

ನಾವು ದೇವರ ಪ್ರೀತಿಯ ಮಕ್ಕಳಾದರೂ ಸಹ ನಾವು ಅವರ ಸನ್ನಿಧಿಗೆ ಭಯಭಕ್ತಿಯಿಲ್ಲದೆ ಬರುವುದಿಲ್ಲ. ನಾವು ಅವರನ್ನು ಸನ್ಮಾನಿಸುತ್ತೇವೆ. "ಪರಿಶುದ್ಧ" ಎಂದರೆ ಪವಿತ್ರತೆಯನ್ನು ಮಾಡುವುದು, ಶುದ್ಧಮಾಡುವುದು, ಪವಿತ್ರಮಾಡುವುದು, ಗೌರವದಿಂದ ಅಥವಾ ಭಯಭಕ್ತಿಯಿಂದ ಕಾಣುವುದು, ಪ್ರಶಂಸಿಸುವುದು, ಅಮೂಲ್ಯವೆಂದೆಣಿಸುವುದು, ಪ್ರೀತಿಸುವುದು. ನಾವು ಪ್ರಾರ್ಥನೆಯಲ್ಲಿ ಭಯಭಕ್ತಿಯಿಂದ ದೇವರನ್ನು ಸನ್ಮಾನಿಸುವ ಮಾತುಗಳನ್ನು ಹೇಳುವಾಗ ಅವರ ನಾಮವನ್ನು ಪರಿಶುದ್ಧವೆಂದು ಎಣಿಸುತ್ತೇವೆ.

**"ನಿನ್ನ ರಾಜ್ಯವು ಬರಲಿ"**

ನಾವು ಪ್ರಾರ್ಥನೆ ಮಾಡುವಾಗ, "ನಿನ್ನ ರಾಜ್ಯವು ಬರಲಿ" ಎಂದು ಹೇಳಬೇಕು - ನಮ್ಮ ರಾಜ್ಯವಲ್ಲ. ಅನೇಕರು ಅದನ್ನು ಅರಿಯದೆ ತಮ್ಮ ಸ್ವಂತ ಸಾಮ್ರಾಜ್ಯಗಳನ್ನು ಕಟ್ಟಿಕೊಳ್ಳಲು ಪ್ರಾರ್ಥಿಸುತ್ತಿದ್ದಾರೆ - ಒಂದು ಉತ್ತಮ ಮನೆ, ಒಂದು ದೊಡ್ಡ ಕಾರು, ಒಂದು ಉತ್ತಮ ಕೆಲಸ, ಒಂದು ದೊಡ್ಡ ಸೇವೆ! ನಾವು "ದೇವರ ರಾಜ್ಯ ಬರಲಿ" ಎಂದು ಪ್ರಾರ್ಥಿಸಬೇಕೆಂದು ಹೇಳಿದರು.

ನಾವು ದೇವರೊಂದಿಗೆ ಒಮ್ಮತವಾಗಬೇಕು, ನಂತರ ಭೂಮಿಯ ಮೇಲೆ ನಮ್ಮ ಪರಿಸ್ಥಿತಿಯಲ್ಲಿ ಅವರ ಚಿತ್ತವು ನೆರವೇರಲಿ ಎಂದು ಆಜ್ಞಾಪಿಸಬೇಕು. ಇದು ರಾಜರ ಪ್ರಾರ್ಥನೆ, ಆಳ್ವಿಕೆಯ ಒಂದು ಪ್ರಾರ್ಥನೆ.

✱ *ಬರಲಿ – ಎರ್ಕೋಮೆಹೆ*

Ercomehe, ಎರ್ಕೋಮೆಹೆ ಎಂಬ ಗ್ರೀಕ್ ಪದದ ಅರ್ಥ "ಅಲ್ಲಿಂದ ಇಲ್ಲಿಗೆ ಬರುವುದು" ಎಂದಾಗಿದೆ.

"ದೇವರ ಅಡಿಯಲ್ಲಿ ಎಲ್ಲವೂ ಇದೆ ಮತ್ತು ಏನು ಆಗಬೇಕೋ, ಅದು ಆಗುತ್ತದೆ" ಎಂಬುದು ಇದರರ್ಥವಲ್ಲ.

"ಹೀಗೆ ನಡೆದಿದ್ದರೆ ಒಳ್ಳೆಯದಾಗಿತ್ತು..., ಆದರೆ ದೇವರೇ ನಿಮ್ಮ ಚಿತ್ತ ಏನೇ ಇರಲಿ ಹಾಗೆ ಆಗಲಿ" ಎಂಬುದು ಇದರರ್ಥವಲ್ಲ.

ಯೇಸು "ಬನ್ನಿ" ಎಂದು ಹೇಳಿದಾಗ, ಗ್ರೀಕ್ ಭಾಷೆಯಲ್ಲಿ ಇದರ ಅರ್ಥವೇನೆಂದರೆ, "ಇಲ್ಲದೇ ಇರುವುದನ್ನು ಇದೆ ಎಂಬದಾಗಿ ಕರೆಯುವುದಾಗಿದೆ".

ಇದರ ಅರ್ಥ, "ನೀವು, ಅಲ್ಲಿಂದ ಇಲ್ಲಿಗೆ ಬನ್ನಿ" ಎಂಬದಾಗಿ.

✱ *ನೀರಿನ ಮೇಲೆ ನಡೆಯುವುದು*

ಯೇಸು "*ಎರ್ಕೋಮೆಹ್* – ಬಾ" ಎಂದು ಕರೆದದ್ದಕ್ಕೆ ಪ್ರತಿಕ್ರಿಯೆಯಾಗಿ ಪೇತ್ರನು ನೀರಿನ ಮೇಲೆ ನಡೆದನು.

**ಮತ್ತಾಯ 14:28,29 ಅದಕ್ಕೆ ಪೇತ್ರನು - ಸ್ವಾಮೀ, ನೀನೇಯಾದರೆ ನನಗೆ ನೀರಿನ ಮೇಲೆ ನಡೆದು ನಿನ್ನ ಬಳಿಗೆ ಬರುವದಕ್ಕೆ ಅಪ್ಪಣೆಕೊಡು ಅನ್ನಲು ಆತನು - ಬಾ ಅಂದನು.**

**ಆಗ ಪೇತ್ರನು ಯೇಸುವಿನ ಬಳಿಗೆ ಹೋಗುವದಕ್ಕೆ ದೋಣಿಯಿಂದ ಇಳಿದು ನೀರಿನ ಮೇಲೆ ನಡೆದನು.**

ಪೇತ್ರನು ಒಬ್ಬ ಮೀನುಗಾರನಾಗಿದ್ದನು. ಮನುಷ್ಯರು ನೀರಿನ ಮೇಲೆ ನಡೆಯಲಾಗದು ಎಂಬುದು ಅವನಿಗೆ ಗೊತ್ತಿತ್ತು. ಆದರೂ, "ನನಗೆ ನೀರಿನ ಮೇಲೆ ನಡೆದು ನಿನ್ನ ಬಳಿಗೆ ಬರುವದಕ್ಕೆ ಅಪ್ಪಣೆಕೊಡು" ಎಂದು ಅವನು ಬಯಸಿದ್ದರಿಂದ ಯೇಸು "ಬಾ" ಎಂದು ಪ್ರತ್ಯುತ್ತರವಾಗಿ ಹೇಳಿದರು. ಪೇತ್ರನು ಲೌಕಿಕ ಜಗತ್ತಿನಿಂದ ಅಲೌಕಿಕ ಜಗತ್ತಿಗೆ ಕಾಲಿಟ್ಟನು. ಪೇತ್ರನು ನೀರಿನ ಮೇಲೆ ನಡೆದನು.

ಪೇತ್ರನು ನೀರಿನ ಮೇಲೆ ಸ್ವಲ್ಪ ನಡೆದಾಗ ಅವನು ಮತ್ತೊಮ್ಮೆ ಲೌಕಿಕ ಜಗತ್ತಿಗೆ ಹಿಂದಿರುಗಿದನು. ಅವನು ಹೆದರಿದನು, ನಂತರ ಮುಳುಗಲಾರಂಭಿಸಿದನು.

**ಮತ್ತಾಯ 14:30,31 ಆದರೆ ಗಾಳಿಯನ್ನು ನೋಡಿ ಭಯಪಟ್ಟು ಮುಣುಗುತ್ತಾ - ಸ್ವಾಮೀ, ನನ್ನನ್ನು ಕಾಪಾಡು ಎಂದು ಕೂಗಿಕೊಂಡನು.**

**ಆ ಕ್ಷಣವೇ ಯೇಸು ಕೈ ಚಾಚಿ ಅವನನ್ನು ಹಿಡಿದು - ಅಲ್ಪ ವಿಶ್ವಾಸಿಯೇ, ಯಾಕೆ ಸಂದೇಹಪಟ್ಟೆ ಎಂದು ಹೇಳಿದನು.**

ಇಂದಿಗೂ ಅನೇಕ ಬಾರಿ ಹೀಗೆಯೇ ಆಗುತ್ತದೆ, ನಾವು ಪ್ರಾರ್ಥನೆಯಲ್ಲಿ ಅಲೌಕಿಕ ಜಗತ್ತನ್ನು ಪ್ರವೇಶಿಸುತ್ತೇವೆ, ನಾವು ಆರಂಭದಲ್ಲಿ ಬಹಳ ಧೈರ್ಯದಿಂದಿರುತ್ತೇವೆ, ಆದರೆ ನಂತರ ಪರಿಸ್ಥಿತಿಗಳನ್ನು ನೋಡಲಾರಂಭಿಸುತ್ತೇವೆ. ಸಂಶಯವು ನಮ್ಮೊಳಗೆ ಪ್ರವೇಶಿಸಲು ಅನುಮತಿಸುತ್ತೇವೆ. ನಾವು ಹೆದರುತ್ತೇವೆ ಮತ್ತು ಸೋಲಲಾರಂಭಿಸುತ್ತೇವೆ. ಆ ಕ್ಷಣದಲ್ಲಿ ನಮ್ಮ ಪ್ರಾರ್ಥನೆಯು ಪೇತ್ರನ ಪ್ರಾರ್ಥನೆಯಂತಿರಬೇಕು – "ಸ್ವಾಮೀ, ನನ್ನನ್ನು ಕಾಪಾಡು – ನಾನು ನಂಬುವಂತೆ ನನಗೆ ಸಹಾಯ ಮಾಡು."

✱ *ಶತಾಧಿಪತಿ*

ಶತಾಧಿಪತಿಯು ಯೇಸುವಿನ ಬಳಿಗೆ ಬಂದು ತನ್ನ ಸೇವಕನನ್ನು ಗುಣಪಡಿಸಬೇಕೆಂದು ಬೇಡಿಕೊಂಡನು. ಆಗ ಯೇಸು "ನಾನು ಬಂದು ಅವನನ್ನು ಗುಣಪಡಿಸುವೆನು" ಎಂದು ಹೇಳಿದರು. ಆದರೆ ಯೇಸು ಬರುವ ಅವಶ್ಯಕತೆಯಿರಲಿಲ್ಲ – ಕೇವಲ ಒಂದು ಮಾತು ಹೇಳಿದರೆ ಸಾಕು ಆ ಸೇವಕನಿಗೆ ಸೌಖ್ಯವಾಗುವುದು ಎಂಬುದನ್ನು ಶತಾಧಿಪತಿಯು ಅರಿತಿದ್ದನು.

**ಮತ್ತಾಯ 8:5-10 ಆತನು ಕಪೆರ್ನೌಮಿಗೆ ಬಂದಾಗ ದಂಡಿನ ಶತಾಧಿಪತಿಯು ಆತನ ಬಳಿಗೆ ಬಂದು - 6ಪ್ರಭುವೇ, ನನ್ನ ಆಳು ಪಾರ್ಶ್ವವಾಯುವಿನಿಂದ ಬಹಳ ಕಷ್ಟಪಡುತ್ತಾ ಮನೆಯಲ್ಲಿ ಬಿದ್ದಿದ್ದಾನೆ ಎಂದು ಹೇಳಿಕೊಂಡನು.**

**7ಆತನು ಅವನಿಗೆ - ನಾನು ಬಂದು ಅವನನ್ನು ವಾಸಿಮಾಡುತ್ತೇನೆ ಎಂದು ಹೇಳಿದ್ದಕ್ಕೆ**

**8ಆ ಶತಾಧಿಪತಿಯು - ಪ್ರಭುವೇ, ನೀನು ನನ್ನ ಮನೆಗೆ ಬರತಕ್ಕಷ್ಟು ಯೋಗ್ಯತೆ ನನ್ನಲ್ಲಿಲ್ಲ; ನೀನು ಒಂದು ಮಾತು ಹೇಳಿದರೆ ಸಾಕು, ನನ್ನ ಆಳಿಗೆ ಗುಣವಾಗುವದು.**

ತಾನು ಅಧಿಕಾರದ ಅಡಿಯಲ್ಲಿರುವವನು ಮತ್ತು ತನ್ನ ಅಧಿಕಾರದ ಅಡಿಯಲ್ಲೂ ಸೈನಿಕರು ಇರುವುದರಿಂದ ತನಗೆ ಅಧಿಕಾರ ಅಂದರೆ ಏನೆಂಬುದನ್ನು ತಾನು ಚೆನ್ನಾಗಿ ಅರಿತಿದ್ದೇನೆ ಎಂದು ಶತಾಧಿಪತಿಯು ಹೇಳಿದನು. ಅವನು *ಎರ್ಕೋಮೆಹೆ* ಪದವನ್ನು ಬಳಸಿದನು.

**9ನಾನು ಸಹ ಮತ್ತೊಬ್ಬರ ಕೈಕೆಳಗಿರುವವನು; ನನ್ನ ಕೈಕೆಳಗೆ ಸಿಪಾಯಿಗಳಿದ್ದಾರೆ; ನಾನು ಅವರಲ್ಲಿ ಒಬ್ಬನಿಗೆ ಹೋಗು ಎಂದು ಹೇಳಿದರೆ ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಎಂದು ಹೇಳಿದರೆ ಬರುತ್ತಾನೆ; ನನ್ನ ಆಳಿಗೆ ಇಂಥಿಂಥದನ್ನು ಮಾಡು ಎಂದು ಹೇಳಿದರೆ ಮಾಡುತ್ತಾನೆ ಅಂದನು.**

**10ಯೇಸು ಇದನ್ನು ಕೇಳಿ ಆಶ್ಚರ್ಯಪಟ್ಟು, ತನ್ನ ಹಿಂದೆ ಬರುತ್ತಿದ್ದವರಿಗೆ - ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.**

ನಾವು ಎಲ್ಲಿಯವರೆಗೆ ಅಧಿಕಾರದ ಅಡಿಯಲ್ಲಿ ಬರುವದಿಲ್ಲವೋ – ಅಂದರೆ ಎಲ್ಲಿಯವರೆಗೆ ನಾವು ದೇವರ ಅಧಿಕಾರಕ್ಕೆ ನಿಜವಾಗಿ ಅಧೀನರಾಗುವದಿಲ್ಲವೋ – ಅಲ್ಲಿಯವರೆಗೆ ಅಧಿಕಾರದಿಂದ ಮಾತನಾಡುವುದನ್ನು ಮತ್ತು ಆಜ್ಞಾಪಿಸಿವುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

* ಬಾ – ಒಂದು ಆಜ್ಞೆ

*ಎರ್ಕೋಮೆಹೆ* ಒಂದು ಸಲಹೆಯಲ್ಲ, ಅದು ಆಜ್ಞೆಯಾಗಿದೆ. ಅದು ಅಧಿಕಾರದಿಂದ ಕರೆಯುವುದಾಗಿದೆ. "ನಿಮ್ಮ ರಾಜ್ಯವು ಬರಲಿ!" ದೇವರ ರಾಜ್ಯವು ಬರಲಿ ಎಂದು ಆಜ್ಞಾಪಿಸುವವರೆಗೂ ದೇವರ ರಾಜ್ಯವು ಬರುವುದಿಲ್ಲ. ಭೂಮಿಯ ಮೇಲೆ, ದೇವರು ನಮಗೆ ಆ ರೀತಿಯ ಅಧಿಕಾರವನ್ನು ಕೊಟ್ಟಿದ್ದಾರೆ.

ಯೇಸು ಶಿಷ್ಯರಿಗೆ ನೀಡಿದ ಈ ಮಾದರಿ ಪ್ರಾರ್ಥನೆಯು ದೇವರು ಆದಾಮ ಹವ್ವರಿಗೆ ನೀಡಿದ ಅಧಿಕಾರದ ಅರಿವಿನ ಮೇಲೆ ನಿರ್ಮಿಸಲ್ಪಟ್ಟಿದೆ. ಅವರು ಶಿಷ್ಯರಿಗೆ ಸ್ವಲ್ಪ ಅಧಿಕಾರವನ್ನು ಕೊಟ್ಟು ಉಳಿದಿದ್ದನ್ನು ತಾನೇ ಹಿಂದಿಟ್ಟುಕೊಳ್ಳಲಿಲ್ಲ ಮತ್ತು ಯೇಸು ನಮ್ಮ ಅಧಿಕಾರದಲ್ಲಿ ಕೆಲವನ್ನು ಮಾತ್ರ ಗೆದ್ದುಕೊಳ್ಳಲಿಲ್ಲ. ಅವರು ಕಾರ್ಯವು ಪರಿಪೂರ್ಣವಾಗಿತ್ತು.

**"ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ"**

ಇದು ಯೇಸು ನಮಗೆ ನೀಡಿದ ಮಾದರಿ ಪ್ರಾರ್ಥನೆಯ ಒಂದು ಅದ್ಭುತವಾದ ಭಾಗವಾಗಿದೆ. "ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರವೇ ಭೂಲೋಕದಲ್ಲಿಯೂ ನೆರವೇರಲಿ".

ಪರಲೋಕದಲ್ಲಿ ದೇವರ ಚಿತ್ತವೇನಿದೆ? ಭೂಲೋಕದಲ್ಲಿ ಅವರ ಚಿತ್ತವೇನಿದೆ?

✱ *ಪರಲೋಕದಲ್ಲಿ*

ಪರಲೋಕದಲ್ಲಿ ಒಂದೇ ಚಿತ್ತವಿದೆ, ಅದು ದೇವರ ಚಿತ್ತವೇ. ಅದರ ಬಗ್ಗೆ ಯಾವ ಚರ್ಚೆಯೂ ಇಲ್ಲ. ಯಾವ ಆಯ್ಕೆಯೂ ಇಲ್ಲ. ದೇವರ ಚಿತ್ತವನ್ನು ಅಲ್ಲಿ ಸಂತೋಷವಾಗಿಯೂ ಮತ್ತು ತನ್ನಷ್ಟಕ್ಕೇ ಮಾಡಲಾಗುತ್ತದೆ. ಪರಲೋಕದಲ್ಲಿ ಯಾವ ಭಿನ್ನಾಭಿಪ್ರಾಯಗಳಿಲ್ಲ, ದೇವರ ಚಿತ್ತಕ್ಕೆ ಕೇವಲ ಆಮೆನ್ ಮತ್ತು ಹಾಗೆಯೇ ಆಗಲಿ ಎಂದು ಹೇಳಲಾಗುತ್ತದೆ.

✱ *ಭೂಲೋಕದಲ್ಲಿ*

ದೇವರ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರವೇ ಭೂಲೋಕದಲ್ಲಿಯೂ ನೆರವೇರಲಿ ಎಂದು ನಾವು ಆಜ್ಞಾಪಿಸಬೇಕೆಂದು ಯೇಸು ಹೇಳಿದರು.

ಆದಾಮ್ ಮತ್ತು ಹವ್ವ ಪಾಪ ಮಾಡಿದಾಗ, ಅವರು ದೇವರ ಚಿತ್ತಕ್ಕೆ ವಿರುದ್ಧವಾಗಿ ತಮ್ಮ ಚಿತ್ತಗಳನ್ನು ನಡೆಸಿದರು, ಅಂದಿನಿಂದ ಮಾನವ ಕುಲವು ಅದನ್ನೇ ಮಾಡುತ್ತಾ ಬಂದಿದೆ.

ಅನೇಕ ವರ್ಷಗಳವರೆಗೆ, ನಾವು ನಮ್ಮ ಚಿತ್ತವು ನೆರವೇರಲಿ ಎಂದು ಪ್ರಾರ್ಥಿಸಿದೆವು. “ದೇವರೇ, ನನಗೆ ಒಂದು ಹೊಸ ಕಾರ್ ಬೇಕು, ಒಂದು ಹೊಸ ಮನೆ ಬೇಕು, ಒಂದು ಕೆಲಸ ಬೇಕು”. ನಾವು ವಸ್ತುಗಳನ್ನು ಹುಡುಕುತ್ತಿದ್ದೆವು – ನಮಗೆ ಅವಶ್ಯವಿದ್ದ ಮುಖ್ಯ ವಸ್ತುಗಳನ್ನು  ಹುಡುಕುತ್ತಿದ್ದೆವು ಮತ್ತು ನಮ್ಮ ಚಿತ್ತ ನೆರವೇರಲಿ ಎಂದು ಪ್ರಾರ್ಥಿಸುತ್ತಿದ್ದೆವು.

ಈಗ ನಾವು ಯೇಸುವನ್ನು ನಮ್ಮ ರಕ್ಷಕನಾಗಿ ಮತ್ತು ಒದಗಿಸುವವನಾಗಿ ಮಾತ್ರವಲ್ಲ ನಮ್ಮ ಒಡೆಯನಾಗಿಯೂ ನಮ್ಮ ರಾಜನಾಗಿಯೂ ಕಾಣುತ್ತೇವೆ. ನಾವು ನಮ್ಮ ಚಿತ್ತವನ್ನು ಆತನಿಗೆ ಒಪ್ಪಿಸುತ್ತೇವೆ, ಯಾಕೆಂದರೆ ಇನ್ನು ಮುಂದೆ “ದೇವರೇ ನನಗೆ ಇದು ಬೇಕು ಅದು ಬೇಕು…” ಎಂದು ನಾವು ಕೇಳಬಾರದೆಂಬ ಸಲುವಾಗಿ.

“ದೇವರೇ ನಿಮ್ಮ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರವೇ ಭೂಲೋಕದಲ್ಲಿಯೂ ನೆರವೇರಲಿ” ಎಂದು ನಾವು, ಅಂದರೆ ಕ್ರಿಸ್ತನ ದೇಹವು, ಹೇಳುವವರೆಗೆ ದೇವರ ಚಿತ್ತವು ನಾವಿರುವ ಸ್ಥಳದಲ್ಲಿ ನೆರವೇರಲಾರದು. “ಎಂತಾ ಅದ್ಭುತವಾದ ಪ್ರಾರ್ಥನೆ!” ನಾವು ನಮ್ಮ ಕುಟುಂಬಗಳ, ನಮ್ಮ ಬೀದಿಯ, ನಮ್ಮ ಪಟ್ಟಣದ ಮತ್ತು ನಾವಿರುವ ದೇಶಗಳ ಮೇಲೆ ಒಂದು ರಕ್ಷಾ ಕವಚವಾಗಿರುವ ಜವಾಬ್ದಾರಿಯನ್ನು ಹೊಂದಿದ್ದೇವೆ.

ಸೈತಾನನು ಕೊಲ್ಲುವುದಕ್ಕೂ, ಕದ್ದುಕೊಳ್ಳುವುದಕ್ಕೂ ಮತ್ತು ನಾಶ ಮಾಡುವುದಕ್ಕೂ ಬಂದನು. ಅವನು ನಮ್ಮ ಅಧಿಕಾರ ವಲಯದಲ್ಲೂ  ಅದನ್ನು ಮಾಡಲು ಕಾರಣವೇನೆಂದರೆ ನಾವು ಹೇಗೆ ಪ್ರಾರ್ಥಿಸಬೇಕೆಂಬುದನ್ನು – ಏನು ಹೇಳಬೇಕೆಂಬುದನ್ನು – ಕಲಿತಿಲ್ಲ. ದೇವರ ಶಕ್ತಿಯನ್ನು ನಮ್ಮ ಪರಿಸ್ಥಿತಿಗಳಲ್ಲಿ ಹೇಗೆ ಬಿಡುಗಡೆಗೊಳಿಸಬೇಕೆಂಬುದನ್ನು ನಾವು ಕಲಿತಿಲ್ಲ.

ನಮ್ಮ ಅಧಿಕಾರದ ವಲಯದಲ್ಲಿ ದೇವರ ಚಿತ್ತವನ್ನು ಹೇಗೆ ಬಿಡುಗಡೆಗೊಳಿಸಬೇಕೆಂಬುದನ್ನು ಹೆಚ್ಚಾಗಿ ಅರಿತುಕೊಂಡಂತೆಲ್ಲಾ ಪ್ರಾರ್ಥನೆಯು ಹೆಚ್ಚಾಗಿ ರೋಮಾಂಚಕಾರಿಯಾಗುತ್ತದೆ! ನಾವು ಹೆಚ್ಚಾಗಿ ದೇವರ ವಾಕ್ಯವನ್ನು ಧ್ಯಾನಿಸಿದಂತೆಲ್ಲಾ ಮತ್ತು ಆತ್ಮದಲ್ಲಿ ಪ್ರಾರ್ಥಿಸಿದಂತೆಲ್ಲಾ ನಮ್ಮ ಪ್ರಾಂತ್ಯಗಳಲ್ಲಿ ದೇವರ ಚಿತ್ತವನ್ನು ಹೇಗೆ ಘೋಷಿಸಬೇಕೆಂಬುದನ್ನು ಹೆಚ್ಚಾಗಿ ತಿಳಿದುಕೊಳ್ಳುತ್ತೇವೆ.

## ದೇವರ ರಾಜ್ಯ ಎಂದರೇನು?

### ದಾನಿಯೇಲನ ಪ್ರವಾದನೆ

ನಾವು ನಮ್ಮ ಪರಿಸ್ಥಿತಿಗಳಲ್ಲಿ ದೇವರ ರಾಜ್ಯವನ್ನು ಘೋಷಿಸಬೇಕು. "ನಿನ್ನ ರಾಜ್ಯವು ಬರಲಿ" ಎಂದು ನಾವು ಹೇಳಬೇಕು. ನಾವು ಇದನ್ನು ಇನ್ನೂ ಪರಿಣಾಮಕಾರಿಯಾಗಿ ಮಾಡಬೇಕಾದರೆ ದೇವರ ರಾಜ್ಯ ಏನೆಂಬುದನ್ನು ಅರ್ಥಮಾಡಿಕೊಳ್ಳಬೇಕು.

**ದಾನಿಯೇಲ 7:13,14,18,27 ನಾನು ಕಂಡ ರಾತ್ರಿಯ ಕನಸಿನಲ್ಲಿ ಇಗೋ, ಮನುಷ್ಯಕುಮಾರನಂತಿರುವವನು ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾವೃದ್ಧನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ ತಂದರು. 14ಸಕಲಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು.**

**18ಆದರೆ ರಾಜ್ಯವು ಪರಾತ್ಪರನ ಭಕ್ತರಿಗೆ ಲಭಿಸುವದು, ಅವರೇ ಅದನ್ನು ತಲತಲಾಂತರಕ್ಕೂ ಶಾಶ್ವತವಾಗಿ ಅನುಭವಿಸುವರು ಎಂದು ಆ ವಿಷಯಗಳ ತಾತ್ಪರ್ಯವನ್ನು ವಿವರಿಸಿ ತಿಳಿಸಿದನು.**

**27ಆಗ ಅವನ ರಾಜ್ಯಪ್ರಭುತ್ವಗಳೂ ಸಮಸ್ತ ಭೂಮಂಡಲದಲ್ಲಿನ ರಾಜ್ಯಗಳ ಮಹಿಮೆಯೂ ಪರಾತ್ಪರನ ಭಕ್ತಜನರಿಗೆ ಕೊಡೋಣವಾಗುವವು; ಆತನ ರಾಜ್ಯವು ಶಾಶ್ವತರಾಜ್ಯ; ಸಕಲ ದೇಶಾಧಿಪತಿಗಳು ಆತನಿಗೆ ಅಧೀನರಾಗಿ ಸೇವೆಮಾಡುವರು ಎಂದು ಹೇಳಿದನು.**

**✶ ದಾನಿಯೇಲನ ಗ್ರಂಥದಿಂದ ನಾವು ಕಲಿಯುವುದೇನೆಂದರೆ, ದೇವರ ರಾಜ್ಯವು ಶಾಶ್ವತವಾದದ್ದು ಮತ್ತು ಅದನ್ನು ಹೊಂದಿಕೊಳ್ಳುವವರು ಭಕ್ತಜನರಾಗಿದ್ದಾರೆ.**

### ಸ್ನಾನಿಕನಾದ ಯೋಹಾನನ ಪ್ರವಾದನೆ

ದೇವರ ರಾಜ್ಯವು ಸಮೀಪಿಸಿತೆಂದು ಯೋಹಾನನು ತಿಳಿದಿದ್ದನು.

**ಮತ್ತಾಯ 3:2 ಪರಲೋಕರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ ಎಂದು ಯೂದಾಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು.**

**✶ ದೇವರ ರಾಜ್ಯವು ಯೇಸುವಿನ ಸೇವೆಯೊಂದಿಗೆ ಭೂಲೋಕಕ್ಕೆ ಬಂದಿತು.**

ನಂತರದ ಸಮಯದಲ್ಲಿ ಯೋಹಾನನು ಸೆರೆಮನೆಯಲ್ಲಿದ್ದಾಗ ತಾನು ಪ್ರವಾದಿಸಿದ ಬರಬೇಕಾದ ವ್ಯಕ್ತಿಯು ಯೇಸುವೋ ಎಂದು ಕೇಳಿದಾಗ ಯೇಸು ಉತ್ತರವನ್ನು ಕಳುಹಿಸಿಕೊಟ್ಟರು.

**ಮತ್ತಾಯ 11:4,5 ಆತನು ಅವರಿಗೆ ಪ್ರತ್ಯುತ್ತರವಾಗಿ - ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತವೆ; ಕುಷ್ಠರೋಗಿಗಳು ಶುದ್ಧರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತವೆ; ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ; ನೀವು ಹೋಗಿ ಕಂಡುಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ.**

ಯೇಸು ಯೋಹಾನನಿಗೆ ಕುರುಡರಿಗೆ ಕಣ್ಣು ಬಂದ, ಕುಂಟರಿಗೆ ಕಾಲು ಬಂದ, ಕುಷ್ಠರೋಗಿಗಳು ಶುದ್ಧರಾದ, ಕಿವುಡರಿಗೆ ಕಿವಿ ಬಂದ, ಸತ್ತವರು ಜೀವವನ್ನು ಹೊಂದಿದ, ಸುವಾರ್ತೆಯು ಸಾರಲ್ಪಡುತ್ತಿದ್ದ ಸಾಕ್ಷಿಗಳನ್ನು - ದೇವರ ರಾಜ್ಯವು ಬಂದಿದೆ ಎಂಬುದಕ್ಕೆ ಪುರಾವೆಯಾಗಿ ಕಳುಹಿಸಿಕೊಟ್ಟರು.

**ಯೇಸು ಹೇಳಿದರು ಮತ್ತು ಮಾಡಿದರು**

ಕರ್ತನ ಪ್ರಾರ್ಥನೆಯನ್ನು ಹೊರತುಪಡಿಸಿ ಇನ್ನೂ ಅನೇಕ ಕಡೆಗಳಲ್ಲಿ ಯೇಸು ದೇವರ ರಾಜ್ಯದ ಬಗ್ಗೆ ಉಲ್ಲೇಖಿಸಿದ್ದಾರೆ. ಈ ವಚನಗಳ ಮೂಲಕ ನಾವು ದೇವರ ರಾಜ್ಯವು ನಿಜವಾಗಲೂ ಏನಾಗಿದೆ ಎಂಬುದನ್ನು ಕಲಿತುಕೊಳ್ಳಬಹುದು.

✳ *ಯೇಸು ದೇವರ ರಾಜ್ಯದ ಬಗ್ಗೆ ಸಾರಿದರು*

**ಮತ್ತಾಯ 9:35 ಯೇಸು ಎಲ್ಲಾ ಊರುಗಳನ್ನೂ ಹಳ್ಳಿಪಳ್ಳಿಗಳನ್ನೂ ಸುತ್ತಿಕೊಂಡು ಅವರ ಸಭಾಮಂದಿರಗಳಲ್ಲಿ ಉಪದೇಶಮಾಡುತ್ತಾ ಪರಲೋಕರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು.**

**✶ ದೇವರ ರಾಜ್ಯದ ಬಗ್ಗೆ ಸಾರುವುದರ ಜೊತೆಯಲ್ಲೇ ಜನರಲ್ಲಿದ್ದ ಎಲ್ಲಾ ತರದ ರೋಗಗಳ ಬೇನೆಗಳ ಸೌಖ್ಯವೂ ಉಂಟಾಯಿತು.**

✳ *ದೇವರ ರಾಜ್ಯವು ಬಂದಿದೆ*

**ಲೂಕ 11:20 ನಾನು ದೇವರ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತಿರಕ್ಕೆ ಬಂತಲ್ಲಾ.**

**✶ ದೆವ್ವಗಳನ್ನು ಬಿಡಿಸುವುದು ದೇವರ ರಾಜ್ಯವು ನಮ್ಮ ಮೇಲೆ ಬಂದಿದೆ ಎಂಬುದಕ್ಕೆ ಸೂಚನೆಯಾಗಿದೆ ಎಂದು ಯೇಸು ಉಲ್ಲೇಖಿಸಿದರು.**

✳ *ದೇವರ ರಾಜ್ಯ ಮತ್ತು ಶಿಷ್ಯರು*

ದೇವರ ರಾಜ್ಯದ ಸುವಾರ್ತೆಯನ್ನು ಸಾರಲು ಯೇಸು ಹನ್ನೆರಡು ಶಿಷ್ಯರನ್ನು ಕಳುಹಿಸಿಕೊಟ್ಟರು.

**ಮತ್ತಾಯ10:7,8a ಪರಲೋಕರಾಜ್ಯವು ಸಮೀಪವಾಯಿತೆಂದು ಸಾರಿಹೇಳುತ್ತಾ ಹೋಗಿರಿ. ರೋಗಿಗಳನ್ನು ಸ್ವಸ್ಥಮಾಡಿರಿ, ಸತ್ತವರನ್ನು ಬದುಕಿಸಿರಿ, ಕುಷ್ಠಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ…**

✶ ದೇವರ ರಾಜ್ಯವು ರೋಗಿಗಳನ್ನು ಸ್ವಸ್ಥಮಾಡುವುದು, ಸತ್ತವರನ್ನು ಬದುಕಿಸುವುದು, ಕುಷ್ಠಹತ್ತಿದವರನ್ನು ಶುದ್ಧಮಾಡುವುದು ಮತ್ತು ದೆವ್ವಗಳನ್ನು ಬಿಡಿಸುವುದನ್ನು ಒಳಗೊಂಡಿದೆ.

✳ *ದೇವರ ರಾಜ್ಯ ಮತ್ತು ಎಪ್ಪತ್ತು ಶಿಷ್ಯರು*

ದೇವರ ರಾಜ್ಯದ ಸುವಾರ್ತೆಯನ್ನು ಸಾರಲು ಯೇಸು ಎಪ್ಪತ್ತು ಶಿಷ್ಯರನ್ನು ಕಳುಹಿಸಿಕೊಟ್ಟರು.

**ಲೂಕ 10:1,9-11 ಇದಾದ ಮೇಲೆ ಸ್ವಾಮಿಯು ಇನ್ನೂ ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ಇಬ್ಬಿಬ್ಬರಾಗಿ 2ತಾನು ಹೋಗಬೇಕೆಂದಿದ್ದ ಪ್ರತಿಯೊಂದೂರಿಗೂ ಪ್ರತಿಯೊಂದು ಸ್ಥಳಕ್ಕೂ ಮುಂದಾಗಿ ಕಳುಹಿಸಿದನು.**

**ಅಲ್ಲಿರುವ ರೋಗಿಗಳಿಗೆ ವಾಸಿಮಾಡಿ ಅವರಿಗೆ - ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದದೆ ಎಂದು ಹೇಳಿರಿ. ಆದರೆ ನೀವು ಯಾವ ಊರಿಗಾದರೂ ಹೋದ ಮೇಲೆ ಆ ಜನರು ನಿಮ್ಮನ್ನು ಸೇರಿಸಿಕೊಳ್ಳದೆ ಹೋದರೆ ನೀವು ಆ ಊರ ಬೀದಿಗಳಿಗೆ ಬಂದು - ನಿಮ್ಮ ಊರಿಂದ ನಮ್ಮ ಕಾಲುಗಳಿಗೆ ಹತ್ತಿದ ಧೂಳನ್ನೂ ಒರಸಿಬಿಡುತ್ತೇವೆ; ಅದು ನಿಮಗೇ ಇರಲಿ; ಆದಾಗ್ಯೂ ದೇವರ ರಾಜ್ಯವು ಸಮೀಪಕ್ಕೆ ಬಂದದೆ ಎಂದು ನಿಮಗೆ ತಿಳಿದಿರಲಿ ಎಂಬದಾಗಿ ಹೇಳಿರಿ.**

✶ ದೇವರ ರಾಜ್ಯವು ಸೌಖ್ಯದೊಂದಿಗೆ ಬರುತ್ತದೆ. "ಅಲ್ಲಿರುವ ರೋಗಿಗಳನ್ನು ವಾಸಿಮಾಡಿ [ನಂತರ] ಅವರಿಗೆ - ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದದೆ ಎಂದು ಹೇಳಿರಿ" ಎಂದು ಯೇಸು ಹೇಳಿದರು.

✳ *ದೇವರ ರಾಜ್ಯ ಮತ್ತು ಬಲಾತ್ಕಾರ*

**ಮತ್ತಾಯ 11:12 ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ.**

✶ ದೇವರ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ವಿಶ್ವಾಸಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ.

✳ *ಅಂತ್ಯಕಾಲದ ಸೂಚನೆಗಳು*

**ಮತ್ತಾಯ 24:14 ಇದಲ್ಲದೆ ಪರಲೋಕರಾಜ್ಯದ ಈ ಸುವಾರ್ತೆಯು ಸರ್ವಲೋಕದಲ್ಲಿ ಎಲ್ಲಾ ಜನಾಂಗಗಳಿಗೆ ಸಾಕ್ಷಿಗಾಗಿ ಸಾರಲಾಗುವದು; ಆಗ ಅಂತ್ಯವು ಬರುವದು.**

✶ ದೇವರ ರಾಜ್ಯವು ಭೂಲೋಕದಲ್ಲೆಲ್ಲಾ ಸಾಕ್ಷಿಯಾಗಿ ಸಾರಲಾಗುವದು; ಆಗ ಅಂತ್ಯವು ಬರುವದು.

## ಫಿಲಿಪ್ಪನು ದೇವರ ರಾಜ್ಯವನ್ನು ಸಾರಿದನು

ಫಿಲಿಪ್ಪನು ಬಲದೊಂದಿಗೆ ದೇವರ ರಾಜ್ಯವನ್ನು ಸಾರಿದನು. ದೊಡ್ಡ ಜನಸಮೂಹವು ಅದನ್ನು ಕೇಳಿ ಅವನು ಮಾಡಿದ ಅದ್ಭುತಗಳನ್ನು ನೋಡಿದರು –

ದೆವ್ವಗಳು ಕೂಗಿಕೊಂಡು ಹೊರಬಂದವು, ಪಾರ್ಶ್ವವಾಯು ರೋಗಿಗಳೂ ಕುಂಟರೂ ಸ್ವಸ್ಥಮಾಡಲ್ಪಟ್ಟರು.

**ಅ. ಕೃ. 8:5-8,12** ಫಿಲಿಪ್ಪನು ಸಮಾರ್ಯವೆಂಬ ಪಟ್ಟಣಕ್ಕೆ ಹೋಗಿ ಕ್ರಿಸ್ತನನ್ನು ಅಲ್ಲಿರುವವರಿಗೆ ಪ್ರಕಟಿಸಿದನು. 6ಗುಂಪಾಗಿ ಕೂಡಿದ ಜನಗಳು ಫಿಲಿಪ್ಪನ ಮಾತುಗಳನ್ನು ಕೇಳಿ ಅವನು ಮಾಡಿದ ಸೂಚಕಕಾರ್ಯಗಳನ್ನು ನೋಡಿ ಅವನು ಹೇಳಿದ ಸಂಗತಿಗಳಿಗೆ ಏಕಮನಸ್ಸಾಗಿ ಲಕ್ಷ್ಯಕೊಟ್ಟರು. 7ಯಾಕಂದರೆ ಅನೇಕರೊಳಗಿಂದ ದೆವ್ವಗಳು ಮಹಾಶಬ್ದದಿಂದ ಕೂಗಿ ಹೊರಗೆ ಬಂದವು; ಮತ್ತು ಅನೇಕ ಪಾರ್ಶ್ವವಾಯು ರೋಗಿಗಳೂ ಕುಂಟರೂ ಸ್ವಸ್ಥಮಾಡಲ್ಪಟ್ಟರು. 8ಆ ಪಟ್ಟಣದಲ್ಲಿ ಬಹು ಸಂತೋಷವಾಯಿತು.

ಆದರೆ ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ ಯೇಸು ಕ್ರಿಸ್ತನ ಹೆಸರಿನ ವಿಷಯದಲ್ಲಿಯೂ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು.

✶ ಯೇಸುವಿನ ಮರಣ ಮತ್ತು ಪುನರುತ್ಥಾನವಾದ ನಂತರ ನಡೆದ ಮೊದಲ ಸುವಾರ್ತಾ ಸೇವೆಯು ದೇವರ ರಾಜ್ಯದ ಬಗ್ಗೆಯಾಗಿತ್ತು.

ದೇವರ ರಾಜ್ಯದ ಭವಿಷ್ಯ ಪ್ರವಾದನೆ

ಪ್ರಕಟನೆ **11:15** ಏಳನೆಯ ದೇವದೂತನು ತುತೂರಿಯನ್ನೂದಿದನು. ಆಗ ಪರಲೋಕದಲ್ಲಿ ಮಹಾ ಶಬ್ದಗಳುಂಟಾಗಿ - ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನು ಅಭಿಷೇಕಿಸಿದವನಿಗೂ ಉಂಟಾಯಿತು; ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು

ಎಂದು ಹೇಳಿದವು.

✶ ಈ ಲೋಕದ ರಾಜ್ಯಾಧಿಕಾರಗಳು ನಮ್ಮ ಕರ್ತನ ಮತ್ತು ಆತನು ಅಭಿಷೇಕಿಸಿದವನ ರಾಜ್ಯಾಧಿಕಾರಗಳಾಗುವವು.

ದೇವರ ರಾಜ್ಯವು ಕದಲದು

ಇಬ್ರಿಯರಿಗೆ **12:25-28** ನೀವು ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು. ಭೂಮಿಯ ಮೇಲೆ ದೈವೋಕ್ತಿಗಳನ್ನಾಡಿದವನಿಗೆ ಕಿವಿಗೊಡ ಮನಸ್ಸಿಲ್ಲದೆ ಇದ್ದ ಇಸ್ರಾಯೇಲ್ಯರು ದಂಡನೆಗೆ ತಪ್ಪಿಸಿಕೊಳ್ಳದಿದ್ದರೆ ಪರಲೋಕದಿಂದ ಮಾತಾಡುವವನಿಗೆ ನಾವು ಕಿವಿಗೊಡ ಮನಸ್ಸಿಲ್ಲದೆ ತೊಲಗಿದರೆ ಹೇಗೆ ತಪ್ಪಿಸಿಕೊಂಡೇವು?

ಆತನ ಧ್ವನಿಯು ಆ ಕಾಲದಲ್ಲಿ ಭೂಮಿಯನ್ನು ಕದಲಿಸಿತು; ಈಗಲಾದರೋ ಆತನು - ಇನ್ನೊಂದೇ ಸಾರಿ ನಾನು ಭೂಮಿಯನ್ನು ಮಾತ್ರವಲ್ಲದೆ ಪರಲೋಕವನ್ನೂ ನಡುಗಿಸುವೆನೆಂದು ವಾಗ್ದಾನಮಾಡಿದ್ದಾನೆ.

**ಇನ್ನೊಂದೇ ಸಾರಿ ಎಂಬೀ ಮಾತನ್ನು ಯೋಚಿಸಿದರೆ ಕದಲಿಸಿರುವ ವಸ್ತುಗಳು ನಿರ್ಮಿತವಾದವುಗಳಾದದರಿಂದ ತೆಗೆದುಹಾಕಲ್ಪಡಬೇಕೆಂಬದು ಸ್ಪಷ್ಟವಾಗುತ್ತದೆ; ಆಗ ಕದಲಿಸದೆ ಇರುವ ವಸ್ತುಗಳು ಸ್ಥಿರವಾಗಿ ನಿಲ್ಲುವವು.**

**ಆದಕಾರಣ ಯಾರೂ ಕದಲಿಸಲಾರದ ರಾಜ್ಯವನ್ನು ಹೊಂದುವವರಾದ ನಾವು ಕೃತಜ್ಞತೆಯುಳ್ಳವರಾಗಿದ್ದು ಆತನಿಗೆ ಸಮರ್ಪಕವಾದ ಆರಾಧನೆಯನ್ನು ಭಕ್ತಿಯಿಂದಲೂ ಭಯದಿಂದಲೂ ಮಾಡೋಣ;**

ನಮ್ಮ ಸ್ವಂತ ಮಾನವ ಜ್ಞಾನವನ್ನು ಆಧರಿಸಿದ ದೇವರ ಮೇಲಿನ ನಂಬಿಕೆಯನ್ನು ಅಲುಗಾಡಿಸಬಹುದು. ದೇವರ ರಾಜ್ಯವು ಬಲದಿಂದಲೂ, ಸೂಚಕಕ್ರಿಯೆಗಳಿಂದಲೂ, ಅದ್ಭುತಗಳಿಂದಲೂ ಸಾರಲ್ಪಡುವುದನ್ನು ಕೇಳಿ ಕಂಡ ಅನುಭವವನ್ನು ಆಧರಿಸಿದ ದೇವರ ಮೇಲಿನ ನಂಬಿಕೆಯನ್ನು ಅಲುಗಾಡಿಸಲು ಸಾಧ್ಯವಿಲ್ಲ. ಯೇಸು ಹೇಳಿದಂತೆಯೇ ನಾವು ಪ್ರಾರ್ಥಿಸಬೇಕು,

**"ನಿನ್ನ ರಾಜ್ಯವು ಬರಲಿ.**
**ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ**
**ಭೂಲೋಕದಲ್ಲಿಯೂ ನೆರವೇರಲಿ".**

## ದೇವರ ರಾಜ್ಯವು ನಿಮ್ಮೊಳಗಿದೆ

ನಾವು ಇದುವರೆಗೆ ದೇವರ ರಾಜ್ಯದ ಬಾಹ್ಯ ಸೂಚನೆಗಳನ್ನು ಅಧ್ಯಯನ ಮಾಡುತ್ತಾ ಬಂದೆವು – ಅವು ಕುತೂಹಲಕರವಾಗಿವೆ! ದೇವರು ರಕ್ಷಣೆ ಹೊಂದದಿರುವ ಜನರಿಗೆ ರಕ್ಷಣೆಯ ಸಂದೇಶವನ್ನು ತಲುಪಿಸಲು ಈ ಸೂಚನೆಗಳನ್ನೇ ಬಳಸುತ್ತಾರೆ. ದೇವರ ರಾಜ್ಯವು ಆಂತರ್ಯದಲ್ಲೂ ಸಹ ಇರುವಂತದ್ದು – ವಿಶ್ವಾಸಿಯ ಆಂತರ್ಯದಲ್ಲಿರುವಂತದ್ದು.

### ✱ *ಕಣ್ಣಿಗೆ ಕಾಣಿಸದು*

ದೇವರ ರಾಜ್ಯವನ್ನು ಕಣ್ಣಿನಿಂದ ಕಾಣಲಾಗದು ಬದಲಾಗಿ ಅದು ದೇವರಾತ್ಮನಿಂದಾದದ್ದು ಮತ್ತು ನಮ್ಮೊಳಗಿರುವಂತದ್ದು ಎಂದು ಯೇಸು ಹೇಳಿದರು.

**ಲೂಕ 17:20,21 ದೇವರ ರಾಜ್ಯವು ಯಾವಾಗ ಬರುವದೆಂದು ಫರಿಸಾಯರು ಆತನನ್ನು ಕೇಳಿದಾಗ ಆತನು ಅವರಿಗೆ - ದೇವರ ರಾಜ್ಯವು ಪ್ರತ್ಯಕ್ಷವಾಗಿ ಬರುವಂಥದಲ್ಲ. ಇಗೋ ಇಲ್ಲಿ ಇದೆ, ಅಗೋ ಅಲ್ಲಿ ಅದೆ ಎಂದು ಹೇಳುವದಕ್ಕಾಗದು; ದೇವರ ರಾಜ್ಯವು ನಿಮ್ಮಲ್ಲಿಯೇ ಅದೆ ಅಂತ ತಿಳುಕೊಳ್ಳಿರಿ ಎಂದು ಉತ್ತರಕೊಟ್ಟನು.**

### ದೇವರ ರಾಜ್ಯವನ್ನು ಪ್ರವೇಶಿಸುವುದು

ನಿಕೊದೇಮನು ಯೇಸುವಿನ ಬಳಿಗೆ ರಾತ್ರಿಯಲ್ಲಿ ಬಂದನು.

**ಯೋಹಾನ 3:1-4 ಫರಿಸಾಯರಲ್ಲಿ ಯೆಹೂದ್ಯರ ಹಿರೀಸಭೆಯವನಾದ ನಿಕೊದೇಮನೆಂಬ ಒಬ್ಬ ಮನುಷ್ಯನಿದ್ದನು. ಅವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು ಆತನಿಗೆ - ಗುರುವೇ, ನೀನು ದೇವರ ಕಡೆಯಿಂದ ಬಂದ**

**ಬೋಧಕನೆಂದು ಬಲ್ಲೆವು. ನೀನು ಮಾಡುವಂಥ ಈ ಸೂಚಕಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು ಎಂದು ಹೇಳಿದನು. ಅದಕ್ಕೆ ಯೇಸು - ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು ಅಂದನು. ನಿಕೊದೇಮನು ಆತನನ್ನು - ಮನುಷ್ಯನು ಮುದುಕನಾದ ಮೇಲೆ ಹುಟ್ಟುವದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೇ? ಎಂದು ಕೇಳಿದನು.**

✱ *ನೀನು ಹೊಸದಾಗಿ ಹುಟ್ಟಬೇಕು*

**ಯೋಹಾನ 3:5-7 ಅದಕ್ಕೆ ಯೇಸು - ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ. ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ನಿನಗೆ ಹೇಳಿದ್ದರಿಂದ ಆಶ್ಚರ್ಯಪಡಬೇಡ.**

ನಾವು ದೇವರ ರಾಜ್ಯದ ಭಾಗವಾಗಬೇಕಾದರೆ ಹೊಸದಾಗಿ ಹುಟ್ಟಬೇಕು - ಆತ್ಮನಿಂದ ಹುಟ್ಟಬೇಕು. ಯೇಸುವೇ ದೇವರ ಮಗನೆಂದು ಮತ್ತು ನಮ್ಮ ಪಾಪಗಳಿಗಾಗಿ ಅವರು ಸತ್ತರು ಎಂಬುದನ್ನು ನಂಬುತ್ತೇವೆ ಎಂದು ಅರಿಕೆ ಮಾಡುತ್ತಾ ಅನೇಕರು ಬುದ್ಧಿಯಿಂದ ಪ್ರಾರ್ಥನೆಯನ್ನು ಮಾಡಿದ್ದಾರೆ ಆದರೆ ಅವರು ಆತ್ಮದ ಜಗತ್ತಿಗೆ ಕಾಲಿಟ್ಟಿಲ್ಲ. ಅವರು ತಮ್ಮ ಮನಸ್ಸಿನಲ್ಲಿ ಕ್ರಿಸ್ತನನ್ನು ಸ್ವೀಕರಿಸುವ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ, ಆದರೆ ಅವರು ಯೇಸು ಕ್ರಿಸ್ತನನ್ನು ಮುಖಾಮುಖಿಯಾಗುವಾಗ ಉಂಟಾಗುವ ಒಂದು ಜೀವನ-ಪರಿವರ್ತನೆಗೊಳಿಸುವ ಅನುಭವದಿಂದ ಬದಲಾಗಿಲ್ಲ. ಅವರು ದೇವರ ಆತ್ಮನಿಂದ ಹೊಸದಾಗಿ ಹುಟ್ಟಿಲ್ಲ. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ ಎಂದು ಯೇಸು ಹೇಳಿದರು.

ಅಪೋಸ್ತಲನಾದ ಪೌಲನು ಹೀಗೆ ಬರೆದನು,

**೧ ಕೊರಿಂಥ 2:12,14 ನಾವು ಪ್ರಾಪಂಚಿಕ ಆತ್ಮವನ್ನು ಹೊಂದದೆ ದೇವರು ನಮಗೆ ದಯಪಾಲಿಸಿರುವ ಕೃಪಾವರಗಳನ್ನು ತಿಳುಕೊಳ್ಳುವದಕ್ಕಾಗಿ ದೇವರಿಂದ ಬಂದ ಆತ್ಮವನ್ನೇ ಹೊಂದಿದೆವು.**

**ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.**

ಭಾನುವಾರ ಬೆಳಿಗ್ಗೆ ಸಭೆಗಳಲ್ಲಿ ಕಾಣಿಸಿಕೊಳ್ಳುವ ಅನೇಕರು ನಿಜವಾಗಲೂ ಹೊಸದಾಗಿ ಹುಟ್ಟದಿರುವುದು ಒಂದು ವಿಷಾದಕರವಾದ ವಾಸ್ತವವಾಗಿದೆ. ಕೆಲವರು ಕ್ರೈಸ್ತ ಕುಟುಂಬದಲ್ಲಿ ಹುಟ್ಟಿ ಬೆಳೆದಿರುವುದರಿಂದ ಕ್ರೈಸ್ತನಂತೆ ಹೇಗೆ ನಡೆದುಕೊಳ್ಳಬೇಕು ಮತ್ತು ಮಾತನಾಡಬೇಕು ಎಂಬುದನ್ನು ಅರಿತವರಾಗಿದ್ದಾರೆ, ಆದರೆ ಅವರಿಗೆ ಹೊಸದಾಗಿ ಹುಟ್ಟುವ ಅನುಭವವಿಲ್ಲ. ಇತರರು ಸಂಸ್ಥೆಗಳನ್ನು ಸೇರಿಕೊಂಡಿದ್ದಾರೆ ಆದರೆ ಎಂದಿಗೂ ಯೇಸುವಿನೊಂದಿಗೆ ಒಂದು

ವೈಯಕ್ತಿಕವಾದ ಅನುಭವವನ್ನು ಹೊಂದಿಲ್ಲ. ಅವರು ಅನೇಕ ಬಾರಿ ಬಹಳ ಒಳ್ಳೆಯ ಜನರಾಗಿದ್ದಾರೆ. ಅವರು ಸಭೆಯಲ್ಲಿ ನಾಯಕರೂ ಸಹ ಆಗಿರಬಹುದು, ಆದರೆ ಅವರು ಯೇಸುವನ್ನು ತಮ್ಮ ಸ್ವಂತ ರಕ್ಷಕನಾಗಿ ಸ್ವೀಕರಿಸುವ ಪ್ರಾರ್ಥನೆಯನ್ನು ಮಾಡಿರುವುದಿಲ್ಲ. ಈ ರೀತಿಯ ಪ್ರಾರ್ಥನೆಯನ್ನು:

*ದೇವರ ವಾಕ್ಯದ ಪ್ರಕಟನೆಯಿಂದ ನಾನು ಒಬ್ಬ ಪಾಪಿ ಎಂದು ಅರಿತಿದ್ದೇನೆ. ದೇವರ ಒಬ್ಬನೇ ಮಗನಾದ ಯೇಸು ಪರಿಶುದ್ಧಾತ್ಮನಿಂದ ಗರ್ಭದಾರಣೆಯಾಗಿ ಕನ್ಯೆಯಾದ ಮರಿಯಳ ಹೊಟ್ಟೆಯಲ್ಲಿ ಜನಿಸಿದನು ಎಂದು ನಾನು ನಂಬುತ್ತೇನೆ. ಅವರು ಒಂದು ಪಾಪರಹಿತ ಜೀವನವನ್ನು ಜೀವಿಸಿದರು ಮತ್ತು ನನ್ನ ಪಾಪದ ಪ್ರಾಯಶ್ಚಿತ್ತಕ್ಕಾಗಿ ನನ್ನ ಬದಲಾಗಿ ತಮ್ಮ ಪ್ರಾಣವನ್ನು ಉದ್ದೇಶಪೂರ್ವಕವಾಗಿ ಕೊಟ್ಟರು ಎಂದು ನಾನು ನಂಬುತ್ತೇನೆ. ಅವರು ಸತ್ತವರೊಳಗಿಂದ ಎದ್ದು ಬಂದು ಇಂದು ಜೀವಂತವಾಗಿದ್ದಾರೆ ಮತ್ತು ನನಗೆ ಪಾಪಕ್ಷಮಾಪಣೆಯ ಹಾಗೂ ರಕ್ಷಣೆಯ ಉಚಿತಾರ್ಥ ವರವನ್ನು ಕೊಡುತ್ತಿದ್ದಾರೆ ಎಂದು ನಾನು ನಂಬುತ್ತೇನೆ.*

*ನಾನು ಹೊಸದಾಗಿ ಹುಟ್ಟಬೇಕೆಂದು ನನಗೆ ಗೊತ್ತಿದೆ. ಯೇಸುವೇ, ನಾನು ನನ್ನ ಪಾಪಗಳಿಗಾಗಿ ಪಶ್ಚಾತ್ತಾಪ ಪಡುತ್ತೇನೆ. ನೀವು ನನ್ನ ಹೃದಯದೊಳಗೆ ಬಂದು ನನ್ನನ್ನು ರಕ್ಷಿಸಬೇಕೆಂದು ಬೇಡುತ್ತೇನೆ. ನಾನು ನಿಮ್ಮನ್ನು ನನ್ನ ಸ್ವಂತ ರಕ್ಷಕನಾಗಿ ಸ್ವೀಕರಿಸುತ್ತೇನೆ. ಯೇಸುವೇ ನೀವು ಈಗ ನನ್ನನ್ನು ರಕ್ಷಿಸಿದ್ದೀರಿ, ಅದಕ್ಕಾಗಿ ವಂದನೆ!*

ಒಬ್ಬ ವ್ಯಕ್ತಿಯ ಆಂತರ್ಯದಲ್ಲಿ ದೇವರ ಜೀವವಿಲ್ಲದಿದ್ದರೆ ಕ್ರಿಸ್ತೀಯ ಜೀವನವನ್ನು ಜೀವಿಸುವದು ಅಸಾಧ್ಯ!

ಮೇಲಿನ ವಾಕ್ಯಗಳಲ್ಲಿ ಯಾವುದಾದರೂ ನಿಮ್ಮಲ್ಲಿ ಸಂದೇಹವನ್ನು ಹುಟ್ಟಿಸಿರುವುದಾದರೆ ಈಗಲೇ ಪ್ರಾರ್ಥನೆ ಮಾಡಿರಿ. ನೀವು ಹೊಸದಾಗಿ ಹುಟ್ಟಿದ್ದೀರೆಂಬುದನ್ನು ತಿಳಿದುಕೊಳ್ಳಲು ಸಾಧ್ಯ. ನೀವು ದೇವರ ರಾಜ್ಯದ ಭಾಗವಾಗಿದ್ದೀರೆಂದು ತಿಳಿದುಕೊಳ್ಳಲು ಸಾಧ್ಯ.

ಪೌಲನು ರೋಮನ್ನರಿಗೆ ಬರೆದ ಪತ್ರದಲ್ಲಿ ಹೀಗೆ ಬರೆದನು,
**ರೋಮಾ 8:16 ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.**
ನಾವು ಪಾಪಿಯ ಪ್ರಾರ್ಥನೆಯನ್ನು ಪ್ರಾರ್ಥಿಸುವವರೆಗೆ – ದೇವರೊಂದಿಗೆ ಒಂದು ಸರಿಯಾದ ಸಂಬಂಧದಲ್ಲಿ ಬರುವವರೆಗೆ – ದೇವರ ರಾಜ್ಯವನ್ನು ಪ್ರವೇಶಿಸುವವರೆಗೆ – ಪ್ರಾರ್ಥನಾ ಜೀವಿತವನ್ನು ಪ್ರವೇಶಿಸಲು ಸಾಧ್ಯವಿಲ್ಲ.

## ದೇವರ ರಾಜ್ಯ

ರೋಮನ್ನರಿಗೆ ಬರೆದ ಪತ್ರದಲ್ಲಿ ದೇವರ ರಾಜ್ಯವು ನೀತಿಯೂ, ಸಮಾಧಾನವೂ ಮತ್ತು ಪರಿಶುದ್ಧಾತ್ಮನಿಂದ ಆಗುವ ಆನಂದವೂ ಆಗಿದೆ ಎಂಬುದನ್ನು ನಾವು ಕಲಿಯುತ್ತೇವೆ. ಅದು ಶರೀರ ಸಂಬಂಧವಾದದ್ದಲ್ಲ, ಪರಿಶುದ್ಧಾತ್ಮ ಸಂಬಂಧವಾದದ್ದಾಗಿದೆ.

**ರೋಮಾ 14:17 ಯಾಕಂದರೆ ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ.**

ನಮ್ಮೊಳಗಿರುವ ದೇವರ ರಾಜ್ಯವು ನೀತಿಯುಳ್ಳದ್ದಾಗಿದೆ. ಈ ನೀತಿಯು ನಮ್ಮ ವೈಯಕ್ತಿಕವಾದ ನೀತಿಯನ್ನು ಉಲ್ಲೇಖಿಸುತ್ತಿಲ್ಲ, ಯಾಕೆಂದರೆ ನಮ್ಮ ನೀತಿಯು ಕೊಳಕಾದ ಚಿಂದಿ ಬಟ್ಟೆಯಂತಿದೆ ಎಂದು ಯೆಶಾಯನು ಹೇಳುತ್ತಾನೆ.

**ಯೆಶಾಯ 64:6a ನಾವೆಲ್ಲರು ಅಶುದ್ಧನ ಹಾಗಿದ್ದೇವೆ, ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ...**

ರಕ್ಷಣೆಯ ಸಮಯದಲ್ಲಿ ದೇವರ ನೀತಿಯು ನಮಗೆ ಸಂದಾಯವಾಗುತ್ತದೆ- ನಮ್ಮ ಖಾತೆಗೆ ಜಮೆಯಾಗುತ್ತದೆ. ನಾವು ಯೇಸುವಿನ ನೀತಿಯನ್ನು ಹೊಂದಿಕೊಳ್ಳುವುದಕ್ಕಾಗಿ ಯೇಸು ನಮ್ಮ ಪಾಪಗಳನ್ನು ತೆಗೆದುಕೊಂಡನು. ನಾವು ಹುಡುಕಬೇಕಾದ ದೇವರ ರಾಜ್ಯವು -ದೇವರ ನೀತಿಯಾಗಿದೆ.

**ಮತ್ತಾಯ 6:33a ಹೀಗಿರುವದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ...**

ನೀತಿವಂತಿಕೆ ಎಂದರೆ ಕೇವಲ ಪಾಪವಿಲ್ಲದಿರುವುದು ಮಾತ್ರವಲ್ಲ, ಅದು ದೇವರ ಇಡೀ ಪರಿಪೂರ್ಣವಾದ ಪವಿತ್ರತೆ ಮತ್ತು ನೀತಿವಂತಿಕೆಯ ದೇವರ ಸಕಾರಾತ್ಮಕ ಗುಣಲಕ್ಷಣಗಳನ್ನು ಹೊಂದಿದೆ. “ನಿನ್ನ ರಾಜ್ಯವು ಬರಲಿ” ಎಂದು ನಮಗೆ ಆಜ್ಞಾಪಿಸಲ್ಪಟ್ಟಂತೆ ನಾವು ಪ್ರಾರ್ಥಿಸುವಾಗ, “ನೀತಿಯು ಬರಲಿ” ಎಂದು ಹೇಳುತ್ತಿದ್ದೇವೆ.

ನಾವು ನೀತಿಯುಳ್ಳವರಾಗಿರಲು ಬಯಸುತ್ತೇವೋ? ನಾವು ಪವಿತ್ರರಾಗಿರಲು ಬಯಸುತ್ತೇವೋ?

ನಾವು ಸಭೆಗಳಲ್ಲಿ ನೋಡುವಾಗ ವಿವಾಹ ವಿಚ್ಛೇದನಗಳ ಸಂಖ್ಯೆಯು ಲೋಕದಲ್ಲಿ ಇರುವಷ್ಟರ ಮಟ್ಟಿಗೆ ಸಭೆಯಲ್ಲಿಯೂ ಇವೆ. ಕ್ರೈಸ್ತ ನಾಯಕರು ವ್ಯಭಿಚಾರದಲ್ಲಿರುವುದು ಬಯಲಾಗಿವೆ. ನಾನು ದೇವರನ್ನು ತಿಳಿದುಕೊಳ್ಳಲು ಬಯಸುತ್ತೇನೆ ಎಂದು ಹೇಳಿದ ಜನರೇ ದೇವರ ವಾಕ್ಯಕ್ಕೆ ವಿರುದ್ಧವಾಗಿ ಎಲ್ಲರ ಮುಂದೆ ಜೀವಿಸುತ್ತಿದ್ದಾರೆ.

ನಮಗೆ ಪವಿತ್ರತೆಯ ಮತ್ತು ನೀತಿವಂತಿಕೆಯ ಪ್ರಕಟನೆಯ ಅವಶ್ಯವಿದೆ. ನಮಗೆ ಪ್ರಾಮಾಣಿಕತೆಯ ಪ್ರಕಟನೆ ಅವಶ್ಯವಿದೆ. ಅಪೋಸ್ತಲನಾದ ಪೇತ್ರನು ಬಹಳ ಸರಳವಾಗಿ ಅದನ್ನು ಹೇಳುತ್ತಾನೆ. “ಪರಿಶುದ್ಧರಾಗಿರ್ರಿ!” ಎಂದು ಅವನು ಬರೆದನು.

**1 ಪೇತ್ರ 1:15,16 ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ.ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು ಎಂದು ಬರೆದದೆಯಲ್ಲಾ.**

ನಾವು ನೀತಿಯುಳ್ಳವರಾಗಿರಬೇಕೆಂದು ದೇವರು ಬಯಸುತ್ತಾರೆ. ನಾವು “ಇದನ್ನು ಮಾಡಬೇಕು ಮತ್ತು ಇದನ್ನು ಮಾಡಬಾರದು” ಎಂಬ ಬಾಹ್ಯ ಆಚಾರಗಳ ಒಂದು ಪಟ್ಟಿಯ ಬಗ್ಗೆ ಮಾತನಾಡುತ್ತಿಲ್ಲ. ನಿಜವಾದ ನೀತಿಯು ನಾವು ದೇವರ

ಸಾರೂಪ್ಯವುಳ್ಳವರಾಗುವುದು – ಮಹಿಮೆಯಿಂದ ಮಹಿಮೆಗೆ ಬದಲಾಗುವುದು – ಆಂತರ್ಯದಲ್ಲಿ ಬದಲಾಗಿ ಬಹಿರಂಗವಾಗಿ ಕಂಡುಬರುವಂತದ್ದಾಗಿದೆ.

**2 ಕೊರಿಂಥ 3:18 ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ.**

* *ಶಾಂತಿ*

ದೇವರ ರಾಜ್ಯವು ನೀತಿಯೂ, ಸಮಾಧಾನವೂ ಮತ್ತು ಪರಿಶುದ್ಧಾತ್ಮನಿಂದ ಆಗುವ ಆನಂದವೂ ಆಗಿದೆ. ನೀತಿಯಲ್ಲಿ ಏನೋ ವಿಶೇಷತೆಯಿದೆ. ನಾವು ದೇವರ ರಾಜ್ಯವನ್ನು ಮತ್ತು ಅವರ ನೀತಿಯನ್ನು ಹುಡುಕುವಾಗ ತಕ್ಷಣವಾಗಿ ಶಾಂತಿಯು ಬರುತ್ತದೆ – ಅದು ನಮ್ಮ ಜೀವಿತಗಳಲ್ಲಿರುವ ಪರಿಶುದ್ಧಾತ್ಮನ ಒಂದು ಸಾಮಾನ್ಯವಾದ ಫಲವಾಗಿದೆ. ಶಾಂತಿಯು ನಮ್ಮ ಪ್ರಯತ್ನದಿಂದ ಸಾಧಿಸುವಂತದ್ದಲ್ಲ. ಅದು ಒಮ್ಮೆಲೇ ಆಗುವಂತದ್ದಲ್ಲ. ಅದು ಪ್ರಗತಿಯುಳ್ಳದ್ದಾಗಿದೆ.

ಅನೇಕರು ತಮ್ಮ ಬ್ಯಾಂಕಿನ ಖಾತೆಯಲ್ಲಿ ತಕ್ಕ ಮಟ್ಟಿಗೆ ಹಣವಿದ್ದಾಗ ಅವರಿಗೆ ಶಾಂತಿ ಸಿಗುತ್ತದೆ ಎಂದು ಭಾವಿಸುತ್ತಾರೆ. ದೇವರು ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂಗಾತಿಯನ್ನು ತಿದ್ದಿ ಸರಿಪಡಿಸಿದಾಗ ಅವರಿಗೆ ಶಾಂತಿ ಸಿಗುತ್ತದೆ ಎಂದು ಭಾವಿಸುತ್ತಾರೆ. ಹೊಸ ಹುದ್ದೆಗಳನ್ನು ಪಡೆದಾಗ, ನಿವೃತ್ತಿಯಾದಾಗ ಅಥವಾ ದೇಶದಾದ್ಯಂತ ಸಂಚರಿಸುವಾಗ ಶಾಂತಿ ಸಿಗಬಹುದೆಂದು ಭಾವಿಸುತ್ತಾರೆ. ಆದರೆ ಇದ್ಯಾವುದೂ ಶಾಂತಿಯನ್ನು ತರಲು ಸಾಧ್ಯವಿಲ್ಲ.

ಯೇಸು ಶಾಂತಿಯ ರಾಜಕುಮಾರನು. ನಾವು ಅವರನ್ನು ನಮ್ಮ ಜೀವಿತಗಳ ಒಡೆಯನನ್ನಾಗಿ – ನಮ್ಮ ರಾಜಕುಮಾರನನ್ನಾಗಿ - ಮಾಡುವಾಗ ನಮಗೆ ಶಾಂತಿಯು ಸಿಗುತ್ತದೆ. ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವಂತೆ ಅನುಮತಿಸಬೇಕೆಂದು ಪೌಲನು ನಮ್ಮನ್ನು ಉತ್ತೇಜಿಸುತ್ತಾನೆ.

**ಫಿಲಿಪ್ಪಿ 4:6,7 ಯಾವ ಸಂಬಂಧವಾಗಿಯೂ ಚಿಂತೆಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. 7ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು.**

* *ಆನಂದ*

ದೇವರ ರಾಜ್ಯವು ನೀತಿಯೂ, ಸಮಾಧಾನವೂ ಮತ್ತು ಆನಂದವೂ ಆಗಿದೆ. ಆನಂದ ಎಂದು ಹೇಳುವಾಗ ಅದು ನಾವು ಕೆಲವೊಮ್ಮೆ ಅನುಭವಿಸುವ ಮೇಲ್ಮೈಯಲ್ಲಿ ತೋರುವ ಸಂತೋಷವಲ್ಲ. ಆನಂದವು ನಮ್ಮೊಳಗಿಂದ ಬರುವಂತದ್ದಾಗಿದೆ. ದಾವೀದನು ಕೀರ್ತನೆಯಲ್ಲಿ ಹೀಗೆ ಬರೆದನು,

ಕೀರ್ತನೆ 16:11  ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ;

ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ;

ನಿನ್ನ ಬಲಗೈಯಲ್ಲಿ ಶಾಶ್ವತಭಾಗ್ಯವಿದೆ.

ನಿಜವಾದ ಆನಂದವು ನಾವು ದೇವರ ಸಮ್ಮುಖದಲ್ಲಿರುವಾಗ ಬರುತ್ತದೆ.

### ✌ ಯೇಸು ಪ್ರಾರ್ಥನೆಯ ಬಗ್ಗೆ ಬೋಧಿಸಿದ - ಸಾರಾಂಶ

"ನಮಗೆ ಪ್ರಾರ್ಥನೆ ಮಾಡುವುದನ್ನು ಕಲಿಸು" ಎಂದು ಶಿಷ್ಯರು ಕೇಳಿಕೊಂಡದ್ದಕ್ಕೆ ಪ್ರತ್ಯುತ್ತರವಾಗಿ ಯೇಸು ಅವರಿಗೆ ಪ್ರಾರ್ಥನೆಯ ಬಗ್ಗೆ ಬೋಧಿಸಲು ಆರಂಭಿಸಿದಾಗ ನಾವು ಬೇಡಬೇಕು ಅಥವಾ ಗೋಗರೆಯಬೇಕು ಎಂದು ಹೇಳಲಿಲ್ಲ. ನಾವು "ಹೇಳಬೇಕೆಂದು" ಅವರು ಹೇಳಿದರು. ನಾವು ನಮ್ಮ ಸಮಸ್ಯೆಗಳಿಗೆ "ದೇವರ ರಾಜ್ಯವು ಈ (ಸನ್ನಿವೇಶದೊಳಗೆ) ಬರಲಿ, ದೇವರ ಚಿತ್ತವು ನೆರವೇರಲಿ!" ಎಂದು ನಾವು ಹೇಳಬೇಕು. ನಾವು ನಮ್ಮ ಸಮಸ್ಯೆ ಮತ್ತು ನಮ್ಮ ಚಿತ್ತವನ್ನು ಹೇಳುತ್ತಾ ಪ್ರಾರ್ಥಿಸಬಾರದು, ಬದಲಾಗಿ ದೇವರ ಚಿತ್ತವನ್ನು ಪ್ರಾರ್ಥಿಸಬೇಕು.

ದೇವರ ರಾಜ್ಯವು ನಮ್ಮೊಳಗಿದೆ ಎಂಬುದನ್ನು ತಿಳಿದುಕೊಳ್ಳುವಾಗ ದೇವರ ಚಿತ್ತವನ್ನು ಪ್ರಾರ್ಥಿಸುವುದು ಸುಲಭವಾಗುತ್ತದೆ. ನಾವು ನಮ್ಮ ಸಮಸ್ಯೆಗಳಿಗೆ ಇನ್ನು ಮೇಲೆ ಉತ್ತರಗಳನ್ನು ಕಲ್ಪಿಸಿಕೊಳ್ಳುವುದಿಲ್ಲ ಮತ್ತು ದೇವರೇ ನಮ್ಮ "ಖರೀದಿಯ ಪಟ್ಟಿಯನ್ನು" ಪೂರೈಸು ಎಂದು ಕೇಳುವುದಿಲ್ಲ. ನಾವು ಎಷ್ಟರಮಟ್ಟಿಗೆ ಪರಿಶುದ್ಧಾತ್ಮನೊಂದಿಗೆ ಒಮ್ಮತದಲ್ಲಿರುತ್ತೇವೆ ಮತ್ತು ದೇವರ ಚಿತ್ತವನ್ನು ಭೂಮಿಯ ಮೇಲೆ ಘೋಷಿಸುತ್ತೇವೆಯೆಂದರೆ ನಮ್ಮ ಅಗತ್ಯತೆಗಳು ಪೂರೈಸಲ್ಪಡುವವು. ನಾವು ದೇವರೊಂದಿಗೆ ಹೊಂದಿರುವ ಸಂಬಂಧದಲ್ಲಿ ಐಕ್ಯವಾಗಿರುವೆವು ಮತ್ತು ದೇವರ ಚಿಂತೆ ನಮ್ಮ ಚಿಂತೆಯಾಗಿರುವುದು. ಹಾಗೆಯೇ ನಮ್ಮ ಚಿಂತೆಯೆಲ್ಲಾ ದೇವರ ಚಿಂತೆಯಾಗಿರುವುದು. ಮತ್ತಾಯ ೬:೩೩ ನಮ್ಮ ಜೀವಿತಗಳಲ್ಲಿ ಕಾರ್ಯಮಾಡುತ್ತಿರುವುದು – ನಾವು ಮೊದಲು ದೇವರ ರಾಜ್ಯವನ್ನು ಹುಡುಕುವೆವು ಮತ್ತು ಇವೆಲ್ಲವೂ ಸಹ ನಮಗೆ ಕೊಡಲ್ಪಡುವವು.

### ವಿಮರ್ಶೆಗಾಗಿ ಪ್ರಶ್ನೆಗಳು

1. ಪ್ರಾರ್ಥನೆಯ ಸರಳ ವ್ಯಾಖ್ಯಾನವನ್ನು ಬರೆಯಿರಿ ಮತ್ತು ಅದರ ಅರ್ಥದ ಬಗ್ಗೆ ನಿಮ್ಮ ತಿಳುವಳಿಕೆಯನ್ನು ನೀಡಿ.

2. ದೇವರ ರಾಜ್ಯದ ಮೂರು ಬಾಹ್ಯ ಸೂಚನೆಗಳನ್ನು ಹೆಸರಿಸಿ.

3. ದೇವರ ರಾಜ್ಯದ ಮೂರು ಆಂತರಿಕ ಅಂಶಗಳನ್ನು ಹೆಸರಿಸಿ.

4. ಪ್ರಾರ್ಥನೆಯು ದೇವರ ರಾಜ್ಯಕ್ಕೆ ಹೇಗೆ ಸಂಬಂಧಿಸಿದೆ ಎಂಬುದನ್ನು ವಿವರಿಸಿ.

*ಪಾಠ ಐದು*

# ಪ್ರಾರ್ಥನೆಯು ಫಲವನ್ನು ಕೊಡುತ್ತದೆ

ಹೆಚ್ಚಿನ ಫಲಗಳನ್ನು ಕಾಣುವಂತೆ ಪ್ರಾರ್ಥನೆ ಮಾಡುವುದು ನಮ್ಮ ಆಸೆ. ನಾವು ಅಪಾಯದಲ್ಲಿದ್ದಾಗ ಮಾಡುವ ವೇಗವಾದ ಪ್ರಾರ್ಥನೆಯಾಗಲಿ, ನಮ್ಮ ಪ್ರೀತಿಪಾತ್ರರಿಗೋಸ್ಕರ ಮಾಡುವ ಪ್ರಾರ್ಥನೆಯಾಗಲಿ, ನಮ್ಮ ಸುತ್ತಲಿನ ಸಾಮಾಜಿಕ/ರಾಜಕೀಯ ಸಂದರ್ಭಗಳಿಗಾಗಿ ಪ್ರಾರ್ಥಿಸುವದಾಗಲಿ – ನಾವೆಲ್ಲರೂ ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಪ್ರಾರ್ಥನೆ ಮಾಡಬೇಕೆಂದು ತಿಳಿಯಲು ಬಯಸುತ್ತೇವೆ.

ಸುವಾರ್ತೆಗಳಲ್ಲೆಲ್ಲಾ ಪ್ರಾರ್ಥನೆಯ ಬಗ್ಗೆ ಯೇಸು ಮಾಡಿದ ಬೋಧನೆಗಳು ನಮ್ಮ ಪ್ರಾರ್ಥನಾ ಜೀವನದಲ್ಲಿ ಕ್ರಾಂತಿಯನ್ನುಂಟುಮಾಡುತ್ತವೆ.

## ಸತತ ಪ್ರಯತ್ನ - ಸತತ ಪ್ರಯತ್ನ - ಸತತ ಪ್ರಯತ್ನ

ಕೆಲವು ಪ್ರಾರ್ಥನೆಗಳಿಗೆ ಉತ್ತರ ಸಿಕ್ಕುವುದಿಲ್ಲ ಯಾಕೆಂದರೆ ಪ್ರಾರ್ಥನೆಯೇ ಮಾಡಿರುವುದಿಲ್ಲ. ಕೆಲವೊಮ್ಮೆ, ನಾವು ಒಂದು ಪರಿಸ್ಥಿತಿಯ ಬಗ್ಗೆ ಮಾತನಾಡುತ್ತೇವೆ, ಅದರ ಬಗ್ಗೆ ಪ್ರಾರ್ಥನೆ ಮಾಡುವೆ ಎಂದು ಹೇಳುತ್ತೇವೆ ಆದರೆ ನಿಜವಾಗಲೂ ಅದನ್ನು ಮಾಡಿರುವುದಿಲ್ಲ. ಇತರೆ ಸಮಯದಲ್ಲಿ ನಾವು ಪ್ರಾರ್ಥನೆಯಲ್ಲಿ ಸತತವಾಗಿ ಮುಂದುವರೆಯದ ಕಾರಣದಿಂದ ನಮ್ಮ ಪ್ರಾರ್ಥನೆಗೆ ಉತ್ತರ ಸಿಕ್ಕುವುದಿಲ್ಲ.

ಅಪೋಸ್ತಲನಾದ ಪೌಲನು ಹೀಗೆ ಬರೆದನು,
**ಎಫೆಸ 6:18 ... ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರ್ರಿ.**

ಯೆಶಾಯನು ಪೌಳಿಗೋಡೆಗಳಲ್ಲಿ ಶಾಂತವಾಗಿರದ ಕಾವಲುಗಾರರನ್ನು ನೇಮಿಸಿದನು. ಅವರು ಮೌನವಾಗಿರದೆ ಸತತವಾಗಿ ಪ್ರಾರ್ಥಿಸುವರು.

**ಯೆಶಾಯ 62:6,7 ಯೆರೂಸಲೇಮೇ, ನಾನು ನಿನ್ನ ಪೌಳಿಗೋಡೆಗಳಲ್ಲಿ ಕಾವಲುಗಾರರನ್ನು ನೇಮಿಸಿದ್ದೇನೆ; ಅವರು ಹಗಲೂ ಇರುಳೂ ಮೌನವಾಗಿರರು. ಯೆಹೋವನಿಗೆ ಜ್ಞಾಪಿಸುವವರೇ, ಆತನು ಯೆರೂಸಲೇಮನ್ನು ಭದ್ರಪಡಿಸಿ ಲೋಕಪ್ರಸಿದ್ಧಿಗೆ ತರುವ ತನಕ ನಿಮಗೆ ವಿರಾಮವಿಲ್ಲದಿರಲಿ, ಆತನಿಗೂ ವಿರಾಮಕೊಡದಿರಿ.**

ಯೇಸು ಎಡಬಿಡದೆ ಪ್ರಾರ್ಥಿಸಬೇಕೆಂದು ಬೋಧಿಸಿದರು

ನಾವು ಸತತವಾಗಿ ಪ್ರಾರ್ಥಿಸಬೇಕೆಂದು ಯೇಸು ನಮಗೆ ಬೋಧಿಸಿದರು.

**ಲೂಕ 11:5-8 ಮತ್ತು ಅವರಿಗೆ ಹೇಳಿದ್ದೇನಂದರೆ - ನಿಮ್ಮಲ್ಲಿ ಒಬ್ಬನಿಗೆ ಸ್ನೇಹಿತನಿದ್ದಾನೆ ಎಂದು ಹೇಳೋಣ. ಅವನು ಸರುಹೊತ್ತಿನಲ್ಲಿ ಆ ಸ್ನೇಹಿತನ ಬಳಿಗೆ ಹೋಗಿ - ಸ್ನೇಹಿತನೇ, ನನಗೆ ಮೂರು ರೊಟ್ಟಿಗಳನ್ನು ಕಡವಾಗಿ ಕೊಡು. ನನ್ನ ಸ್ನೇಹಿತರಲ್ಲಿ ಒಬ್ಬನು ಎಲ್ಲಿಗೋ ಪ್ರಯಾಣವಾಗಿ ನನ್ನ ಬಳಿಗೆ ಬಂದಿದ್ದಾನೆ; ಅವನಿಗೆ ಊಟಮಾಡಿಸುವದಕ್ಕೆ ನನ್ನಲ್ಲಿ ಏನೂ ಇಲ್ಲ ಎಂದು ಕೇಳಲು ಆ ಸ್ನೇಹಿತನು - ನನಗೆ ತೊಂದರೆಕೊಡಬೇಡ; ಈಗ ಕದಾಹಾಕಿ ಅದೆ; ನನ್ನ ಚಿಕ್ಕ ಮಕ್ಕಳು ನನ್ನ ಕೂಡ ಮಲಗಿದ್ದಾರೆ; ನಾನು ಎದ್ದು ನಿನಗೆ ಕೊಡುವದಕ್ಕಾಗುವದಿಲ್ಲ ಎಂದು ಒಳಗಿನಿಂದ ಉತ್ತರ ಕೊಟ್ಟರೂ ಕೊಡಬಹುದು. ಆದರೆ ಸ್ನೇಹದ ನಿಮಿತ್ತವಾಗಿ ಎದ್ದು ಕೊಡದೆ ಇದ್ದರೂ ಅವನ ಕಾಟದ ದೆಸೆಯಿಂದ ಎದ್ದು ಬಂದು ಕೇಳಿದಷ್ಟು ಅವನಿಗೆ ಕೊಡುವನೆಂದು ನಿಮಗೆ ಹೇಳುತ್ತೇನೆ."**

ಹಗಲು ರಾತ್ರಿ ಪ್ರಾರ್ಥಿಸಿರಿ

ನಾವು ಮನಸೋತು ಹೋಗದೆ ಹಗಲು ರಾತ್ರಿ ಪ್ರಾರ್ಥಿಸಬೇಕೆಂದು ಅವರು ಹೇಳಿದರು.

**ಲೂಕ 18:1,7 ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು.**

**ದೇವರಾದುಕೊಂಡವರು ಆತನಿಗೆ ಹಗಲು ರಾತ್ರಿ ಮೊರೆಯಿಡುವಲ್ಲಿ ಆತನು ಅವರ ವಿಷಯದಲ್ಲಿ ತಡಮಾಡಿದರೂ ಅವರ ನ್ಯಾಯವನ್ನು ತೀರಿಸದೆ ಇರುವನೇ? ಅವರಿಗೆ ಬೇಗ ನ್ಯಾಯ ತೀರಿಸುವನೆಂದು ನಿಮಗೆ ಹೇಳುತ್ತೇನೆ.**

ಪ್ರಾರ್ಥನೆಯ ಮೂರು ಹೆಜ್ಜೆಗಳು

ಯೇಸು ಸಹ ನಮಗೆ ಯಶಸ್ವಿ ಪ್ರಾರ್ಥನಾ ಜೀವಿತಕ್ಕೆ ಮೂರು ಹೆಜ್ಜೆಗಳನ್ನು ಕೊಟ್ಟಿದ್ದಾರೆ: ಕೇಳಿರಿ – ಹುಡುಕಿರಿ – ಮತ್ತು ತಟ್ಟಿರಿ.

**ಮತ್ತಾಯ 7:7-11 ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು; 8ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು.**

**ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ?**

**ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ.**

* *ಕೇಳಿರಿ, ಆಗ ಪಡೆಯುವಿರಿ*

ಕೇಳುವುದು ದೇವರ ಮೇಲೆ ಅವಲಂಬಿತವಾಗಿರುವುದನ್ನು ಸೂಚಿಸುತ್ತದೆ, ನಮ್ಮ ಬೇಡಿಕೆಗಳೊಂದಿಗೆ ಅವರ ಹತ್ತಿರ ಬರುವುದನ್ನು ಸೂಚಿಸುತ್ತದೆ. "ನಮ್ಮ ಕಣ್ಣುಗಳು ತೆರೆಯಲ್ಪಡಬೇಕು, ಸ್ವಾಮೀ!" ಎಂದು ಬೀದಿಬದಿಯಲ್ಲಿ ಕುಳಿತಿದ್ದ ಕುರುಡರು ಕೇಳಿಕೊಂಡಂತೆಯೇ ನಾವೂ ಕೇಳಿಕೊಳ್ಳಬೇಕು. ನಾವು ನಂಬಿಕೆಯಿಂದ ಕೇಳಿಕೊಳ್ಳುವಾಗ ಪಡೆದುಕೊಳ್ಳುವೆವು ಎಂಬ ನಿರೀಕ್ಷೆಯಿರುತ್ತದೆ.

ನಾವು ಕೇಳಿದರೆ ಪಡೆದುಕೊಳ್ಳುವೆವು ಎಂದು ಯೇಸು ನಮಗೆ ವಾಗ್ದಾನ ಮಾಡಿದರು.

* *ಹುಡುಕಿರಿ, ಆಗ ಕಂಡುಕೊಳ್ಳುವಿರಿ*

ಹುಡುಕುವುದು ಉದ್ದೇಶಪೂರ್ವಕವಾದ ಪ್ರಯತ್ನವನ್ನು ಸೂಚಿಸುತ್ತದೆ, ನಾವು ಕಂಡುಕೊಳ್ಳುವವರೆಗೆ ಹುಡುಕುವಂತೆ ನಮ್ಮನ್ನು ಒತ್ತಾಯಿಸುವ ಅವಸರ. "ನಾನು ಯೇಸುವನ್ನು ಮುಟ್ಟಿದ ತಕ್ಷಣವೇ ನನಗೆ ಸೌಖ್ಯವಾಗುವುದು" ಎನ್ನುತ್ತಾ ರಕ್ತಸಂಬಂಧವಾದ ರೋಗವಿದ್ದ ಸ್ತ್ರೀಯು ಜನಸಮೂಹವನ್ನು ತಳ್ಳಿಕೊಂಡು ಯೇಸುವಿನ ಸಮೀಪಕ್ಕೆ ಬಂದಿದ್ದು ಇದನ್ನು ಉತ್ತಮವಾಗಿ ನಿರೂಪಿಸುತ್ತದೆ.

ಯಾರಾದರೂ ಏನನ್ನಾದರೂ ಹುಡುಕುತ್ತಿದ್ದರೆ ಅದನ್ನು ಕಂಡುಕೊಳ್ಳುತ್ತೇವೆ ಎಂಬ ನಿರೀಕ್ಷೆಯನ್ನು ಹೊಂದಿರುತ್ತಾರೆ – ಅದನ್ನು ಕಂಡುಕೊಳ್ಳಲೇಬೇಕು ಎಂಬ ಹಂಬಲ ಅವರಲ್ಲಿರುತ್ತದೆ.

ನಾವು ಏನನ್ನಾದರೂ ದೇವರ ಬಳಿಯಲ್ಲಿ ಕೇಳಿಕೊಂಡಾಗ ಇದು ನಮ್ಮ ಜೀವಿತಕ್ಕೆ ದೇವರ ಚಿತ್ತವಾಗಿದೆ ಎಂದು ನಮಗನ್ನಿಸಿದರೆ ಆ ಪ್ರಾರ್ಥನೆಗೆ ಉತ್ತರ ಬರದಂತೆ ತೋರಿದಾಗಲೂ ಉತ್ತರವನ್ನು ನಾವು ಎದುರುನೋಡಬೇಕು. ಆ ವಿಷಯದ ಬಗ್ಗೆ ದೇವರ ವಾಕ್ಯ ಏನು ಹೇಳುತ್ತದೆ ಎಂದು ಇನ್ನೂ ಹೆಚ್ಚಾಗಿ ಹುಡುಕಬೇಕಾಗುತ್ತದೆ. ನಮ್ಮ ಪ್ರಾರ್ಥನೆಯ ಉತ್ತರವು ಪ್ರಕಟಗೊಳ್ಳದಂತೆ ನಮ್ಮ ಜೀವನದಲ್ಲಿ ಇರಬಹುದಾದ ಅಡ್ಡಿ ಅಥವಾ ಸಮಸ್ಯೆಗಳನ್ನು ಹುಡುಕುವುದೂ ಸಹ ಇದರಲ್ಲಿ ಸೇರಿರುತ್ತದೆ.

ನಾವು ಹುಡುಕಿದರೆ ಕಂಡುಕೊಳ್ಳುವೆವು ಎಂದು ಯೇಸು ವಾಗ್ದಾನ ಮಾಡಿದರು.

* *ತಟ್ಟಿರಿ, ಆಗ ತೆರೆಯುವುದು*

ತಟ್ಟುವುದು ಸತತವಾದ ಪ್ರಯತ್ನವನ್ನು ಸೂಚಿಸುತ್ತದೆ - ಸಿಗುವವರೆಗೆ ಬಿಟ್ಟುಕೊಡದ ಮನಸ್ಸನ್ನು ಹೊಂದಿರುವುದು. ಇದಕ್ಕೆ ಸೈರೋ-ಫಿನಿಶಿಯನ್ ಸ್ತ್ರೀಯು ಉತ್ತಮವಾದ ಉದಾಹರಣೆಯಾಗಿದ್ದಾಳೆ.

**ಮಾರ್ಕ 7:25-30 ಕೂಡಲೆ ಒಬ್ಬ ಹೆಂಗಸು ಆತನ ಸುದ್ದಿಯನ್ನು ಕೇಳಿ ಬಂದು ಆತನ ಪಾದಕ್ಕೆ ಬಿದ್ದಳು. ಆಕೆಯ ಮಗಳಿಗೆ ದೆವ್ವ ಹಿಡಿದಿತ್ತು. ಆ ಹೆಂಗಸು ಅನ್ಯಮತದವಳೂ ಸುರೋಫೊಯಿನಿಕ್ಯರವಳೂ ಆಗಿದ್ದಳು. ಆಕೆಯು ತನ್ನ ಮಗಳ ದೆವ್ವವನ್ನು ಬಿಡಿಸಬೇಕೆಂದು ಆತನನ್ನು ಬೇಡಿಕೊಂಡಾಗ**

**ಆತನು ಆಕೆಗೆ - ಮಕ್ಕಳಿಗೆ ಮೊದಲು ತೃಪ್ತಿಯಾಗಲಿ; ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗಳಿಗೆ ಹಾಕುವದು ಸರಿಯಲ್ಲ ಎಂದು ಹೇಳಿದನು.**

**ಅದಕ್ಕೆ ಆಕೆಯು - ಸ್ವಾಮೀ, ಆ ಮಾತು ನಿಜವೇ; ಮೇಜಿನ ಕೆಳಗಿರುವ ನಾಯಿಮರಿಗಳಂತೂ ಮಕ್ಕಳ ಕೈಯಿಂದ ಬೀಳುವ ರೊಟ್ಟೀತುಂಡುಗಳನ್ನು ತಿನ್ನುತ್ತವಲ್ಲಾ ಎಂದು ಉತ್ತರಕೊಡಲು**

**ಆತನು - ಈ ಮಾತನ್ನು ಹೇಳಿದ್ದರಿಂದ ದೆವ್ವವು ನಿನ್ನ ಮಗಳನ್ನು ಬಿಟ್ಟು ಬಿಟ್ಟಿದೆ, ಹೋಗು ಅಂದನು. 30ಆಕೆಯು ತನ್ನ ಮನೆಗೆ ಹೋಗಿ ನೋಡಲಾಗಿ ಆ ಹುಡುಗಿ ಹಾಸಿಗೆಯ ಮೇಲೆ ಮಲಗಿದ್ದಳು; ದೆವ್ವ ಅವಳನ್ನು ಬಿಟ್ಟು ಹೋಗಿತ್ತು.**

ತಟ್ಟುವುದು ಅಂದರೆ ಸತತ ಪ್ರಯತ್ನ ಮಾಡುವುದು, “ದೇವರೊಳಗೆ ನುಗ್ಗುವುದು”, ದೇವರ ವಾಕ್ಯವು ನಮ್ಮ ತಿಳುವಳಿಕೆಯಿಂದ ನಮ್ಮ ಆತ್ಮದವರೆಗೆ ಚಲಿಸುವವರೆಗೆ ಅದನ್ನು ಹೇಳುತ್ತಲೇ ಇರುವುದು.

ಮತ್ತೊಮ್ಮೆ ಹೇಳುವುದಾದರೆ, ನಾವು ತಟ್ಟುವಾಗ ನಮಗೆ ತೆರೆಯಲ್ಪಡುವುದು ಎಂದು ಯೇಸು ವಾಗ್ದಾನ ಮಾಡಿದರು.

ನಾವು ನಮ್ಮ ಅದ್ಭುತವು ಸಿಕ್ಕುವಷ್ಟರಲ್ಲಿ ಕೈಬಿಡುವಂತಾಗಬಾರದು. ಪ್ರಾರ್ಥನೆಗೆ ಉತ್ತರ ಬರುವವರೆಗೆ ನಾವು ಪ್ರಾರ್ಥನೆಯಲ್ಲಿ ಮತ್ತು ನಂಬಿಕೆಯಲ್ಲಿ ಸತತವಾಗಿ ಮುಂದುವರೆಯಬೇಕು. ಯೇಸು ಹೇಳಿದಂತೆಯೇ ನಾವು ಮಾಡಬೇಕು – ನಾವು ಕೇಳಿದ್ದನ್ನು ಪಡೆದುಕೊಳ್ಳುವೆವು ಎಂಬ ನಿರೀಕ್ಷೆಯೊಂದಿಗೆ ನಂಬಿಕೆಯಿಂದ ಕೇಳಬೇಕು – ಕಂಡುಕೊಳ್ಳುವೆವು ಎಂಬ ನಿರೀಕ್ಷೆಯೊಂದಿಗೆ ಹುಡುಕಬೇಕು – ತೆರೆಯಲ್ಪಡುವುದು ಎಂಬ ನಿರೀಕ್ಷೆಯೊಂದಿಗೆ ಕದಗಳನ್ನು ತಟ್ಟಬೇಕು.

## ಏಕಾಂತವಾಗಿ ಪ್ರಾರ್ಥಿಸಿರಿ

### ಇತರರಿಗೆ ಕಾಣಿಸಬೇಕೆಂದು ಪ್ರಾರ್ಥಿಸಬೇಡಿರಿ

ಯಾರಾದರೂ ತಮ್ಮ ಪ್ರಾರ್ಥನಾ ಜೀವಿತದ ಬಗ್ಗೆ ಮಾತನಾಡುವಾಗ ನಿಮಗೆ ಸರಿ ಅನ್ನಿಸಲಿಲ್ಲದ ಅನುಭವವಿದೆಯೋ? “ನಾನು ಪ್ರತಿದಿನ ಬೆಳಿಗ್ಗೆ ಕನಿಷ್ಠ ಒಂದು ಗಂಟೆ ಪ್ರಾರ್ಥಿಸುತ್ತೇನೆ”, “ನಾನು ಇದನ್ನು ಮಾಡುತ್ತೇನೆ” ಅಥವಾ “ನಾನು ಅದನ್ನು ಮಾಡುತ್ತೇನೆ” ಎಂದು ಅವರು ಹೇಳಬಹುದು. ಅದು ತುಂಬಾ ಒಳ್ಳೆಯದು! ಆದರೆ ಅವರು ಇತರರಿಗೆ ಅದನ್ನು ಏಕೆ ಹೇಳುತ್ತಿದ್ದಾರೆ. ಅವರ ಉದ್ದೇಶವೇನು?

ಕೆಲವೊಮ್ಮೆ ಒಬ್ಬ ವ್ಯಕ್ತಿಯು ಸುಂದರವಾದ ಪ್ರಾರ್ಥನೆಯನ್ನು ಪ್ರಾರ್ಥಿಸುತ್ತಾನೆ, ಆದರೆ ಅವರು ದೇವರ ಮುಂದೆ ನಮ್ರತೆಯಿಂದ ಹೋಗುವ ಬದಲು ಕೇಳುವವರ ಅನುಕೂಲಕ್ಕಾಗಿ ಪ್ರಾರ್ಥಿಸುತ್ತಾರೆ.

ನಾವು ಇತರರ ಉದ್ದೇಶಗಳನ್ನು ತಿಳಿದುಕೊಳ್ಳಬೇಕಾಗಿಲ್ಲ ಆದರೆ ನಮ್ಮನ್ನೇ ನಾವು ತೀರ್ಪು ಮಾಡಿಕೊಳ್ಳಬೇಕು. ಒಬ್ಬ ವ್ಯಕ್ತಿಯ ಹೃದಯದಲ್ಲಿರುವ ನಿಜವಾದ ಉದ್ದೇಶಗಳನ್ನು ತಿಳಿದಿರುವದು ದೇವರು ಮಾತ್ರ.

**1 ಸಮುವೇಲ 16:7b ... ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ**

ಯೇಸು ಕಪಟಿಗಳ ಪ್ರಾರ್ಥನೆಗಳ ಬಗ್ಗೆ ಮಾತನಾಡಿದರು.

**ಮತ್ತಾಯ 6:5 ನೀವು ಪ್ರಾರ್ಥನೆಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದೀಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.**

ಯೇಸು ರಹಸ್ಯವಾಗಿ ಪ್ರಾರ್ಥಿಸಲು ಹೇಳಿದರು. ಬಹುಶಃ, ಕನಿಷ್ಠಪಕ್ಷ ಭಾಗಶಃವಾಗಿ ಆಗಲಿ, ನಮ್ಮ ಪ್ರಾರ್ಥನೆಗಳು ನಮ್ಮ ಸುತ್ತಮುತ್ತಲಿನವರ ಮೆಚ್ಚುಗೆ ಅಥವಾ ಟೀಕೆಯಿಂದ ಕಳಂಕವಾಗದಂತೆ ನೋಡಿಕೊಳ್ಳಬೇಕಂಬ ಕಾರಣದಿಂದ ಹೇಳಿರಬಹುದು.

✱ *ಬಾಗಿಲನ್ನು ಮುಚ್ಚಿಕೊಳ್ಳಿರಿ*

**ಮತ್ತಾಯ 6:6 ನೀನು ಪ್ರಾರ್ಥನೆಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.**

## ಹೇಳಿದ್ದನ್ನೇ ಪದೇ ಪದೇ ಹೇಳಬೇಡಿರಿ

**ಮತ್ತಾಯ 6:7-8a ಪ್ರಾರ್ಥನೆಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮಸುಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ.**

ಹೇಳಿದ್ದನ್ನೇ ಪದೇ ಪದೇ ಹೇಳಬೇಡಿರಿ ಅಂದರೆ ಮಂತ್ರ ಹೇಳಿದಂತೆ ಹೇಳಬಾರದು ಎಂದರ್ಥ. ಕೆಲ ಕಾಲದವರೆಗಾಗಲಿ ಅಥವಾ ದಿನನಿತ್ಯವಾಗಲಿ ನಂಬಿಕೆಯಿಲ್ಲದೆ ಪ್ರಾರ್ಥಿಸಿದ್ದನ್ನೇ ಪದೇ ಪದೇ ಪ್ರಾರ್ಥಿಸಬಾರದು. ಪ್ರಾರ್ಥಿಸಿದ್ದನ್ನೇ ಪದೇ ಪದೇ ಪ್ರಾರ್ಥಿಸುವುದು ಚಿಂತೆ ಮತ್ತು ಅಪನಂಬಿಕೆಯನ್ನು ವ್ಯಕ್ತಪಡಿಸುತ್ತದೆ.

ಕೆಲವೊಮ್ಮೆ ನಾವು ಒತ್ತಡದ ಪರಿಸ್ಥಿತಿಯಲ್ಲಿರುವಾಗ ನಮಗೆ ಯಾವುದೋ ಒಂದರ ಅವಶ್ಯಕತೆಯು ಬಹಳವಿದ್ದಾಗ ನಾವು ಹೇಳಿದ್ದನ್ನೇ ಪದೇ ಪದೇ ಹೇಳುತ್ತಿದ್ದೇವೆ ಎಂಬುದನ್ನು ಗ್ರಹಿಸುತ್ತೇವೆ. ಅಂತಹ ಸಮಯಗಳಲ್ಲಿ, ನಾವು ಪದೇ ಪದೇ ಹೇಳುವುದನ್ನು ನಿಲ್ಲಿಸಿ ದೇವರ ವಾಕ್ಯವನ್ನು ಹೇಳಲು ಆರಂಭಿಸಬೇಕು. ಇದನ್ನು ನಾವು ಪದೇ ಪದೇ ಮಾಡಬಹುದು ಯಾಕೆಂದರೆ ದೇವರ ವಾಕ್ಯವನ್ನು ಹೆಚ್ಚೆಚ್ಚಾಗಿ ಕೇಳಿದಂತೆಲ್ಲಾ ನಮ್ಮ ಆತ್ಮಗಳಲ್ಲಿ ನಂಬಿಕೆ ಹುಟ್ಟುತ್ತದೆ. ದೇವರ ವಾಗ್ದಾನಗಳನ್ನು ಹೇಳುವಾಗ ನಂಬಿಕೆಯು ನಮ್ಮಲ್ಲಿ ಹುಟ್ಟುವಂತೆ ನಾವು ನಮ್ಮನ್ನು ಕಟ್ಟುತ್ತೇವೆ.

**ನಿಮ್ಮ ತಂದೆಗೆ ಈಗಾಗಲೇ ತಿಳಿದದೆ**

ನಾವು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ದೇವರು ನಮ್ಮ ಅಗತ್ಯತೆಗಳನ್ನು ಬಲ್ಲವನಾಗಿದ್ದಾನೆ. ನಮ್ಮ ಜೀವಿತಗಳಲ್ಲಿ ಏನೋ ಅನಿರೀಕ್ಷಿತವಾದದ್ದು ಸಂಭವಿಸುವಾಗ ದೇವರಿಗೆ ಆಶ್ಚರ್ಯವಾಗುವುದಿಲ್ಲ. ಯೇಸು ವ್ಯರ್ಥವಾಗಿ ಪದಗಳನ್ನು ಪುನರಾವರ್ತಿಸಬೇಡಿರಿ ಎಂದು ಹೇಳಿದ ನಂತರ ತಕ್ಷಣವೇ ಇದರ ಬಗ್ಗೆ ಮಾತನಾಡಿದರು.

**ಮತ್ತಾಯ 6:8b "ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬದು ಆತನಿಗೆ ತಿಳಿದದೆ."**

**ಎಲೀಯನು ಬಾಳನ ಪುರೋಹಿತರುಗಳನ್ನು ಎದುರಿಸಿದ್ದು**

ವ್ಯರ್ಥವಾದ ಮಂತ್ರ ಪಠನೆಗೆ ಒಂದು ಬಲವಾದ ಉದಾಹರಣೆಯು ಎಲೀಯನ ಹಾಗೂ ಬಾಳನ ಪುರೋಹಿತರುಗಳ ನಡುವೆ ನಡೆದ ಸಂಘರ್ಷಣೆಯಾಗಿದೆ.

**1 ಅರಸುಗಳು 18:26-29 ಅವರು ತರಲ್ಪಟ್ಟ ಹೋರಿಗಳಲ್ಲೊಂದನ್ನು ತೆಗೆದುಕೊಂಡು ಸಿದ್ಧಪಡಿಸಿ ತಮ್ಮ ದೇವರಾದ ಬಾಳನ ಹೆಸರು ಹೇಳಿ - ಬಾಳನೇ, ನಮಗೆ ಕಿವಿಗೊಡು ಎಂದು ಹೊತ್ತಾರೆಯಿಂದ ಮಧ್ಯಾಹ್ನದವರೆಗೆ ಕೂಗಿದರೂ ಆಕಾಶವಾಣಿಯಾಗಲಿಲ್ಲ; ಅವರು ವೇದಿಯ ಸುತ್ತಲು ಕುಣಿದಾಡಿದರೂ ಯಾರೂ ಉತ್ತರ ದಯಪಾಲಿಸಲಿಲ್ಲ.**

**ಮಧ್ಯಾಹ್ನವಾದನಂತರ ಎಲೀಯನು ಅವರನ್ನು ಪರಿಹಾಸ್ಯಮಾಡಿ - ಗಟ್ಟಿಯಾಗಿ ಕೂಗಿರಿ; ಅವನು ದೇವರಾಗಿರುತ್ತಾನಲ್ಲಾ! ಈಗ ಒಂದು ವೇಳೆ ಅವನು ಧ್ಯಾನದಲ್ಲಿರಬಹುದು; ಇಲ್ಲವೆ ಯಾವದೋ ಕೆಲಸದಲ್ಲಿ ಅಥವಾ ಪ್ರಯಾಣದಲ್ಲಿ ಇರಬೇಕು. ಅದೂ ಇಲ್ಲದಿದ್ದರೆ ನಿದ್ರೆಮಾಡುತ್ತಿದ್ದಾನು, ಎಚ್ಚರವಾಗಬೇಕು ಎಂದು ಹೇಳಿದನು.**

**ಅವರು ಗಟ್ಟಿಯಾಗಿ ಕೂಗಿ ತಮ್ಮ ಪದ್ಧತಿಯ ಪ್ರಕಾರ ಈಟಿಕತ್ತಿಗಳಿಂದ ರಕ್ತಸೋರುವಷ್ಟು ಗಾಯ ಮಾಡಿಕೊಂಡರು.**

**ಮಧ್ಯಾಹ್ನದಿಂದ ನೈವೇದ್ಯ ಸಮರ್ಪಣೆಯ ಹೊತ್ತಿನವರೆಗೂ ಪರವಶರಾಗಿ ಕೂಗುತ್ತಾ ಇದ್ದರು. ಆದರೂ ಆಕಾಶವಾಣಿಯಾಗಲಿಲ್ಲ; ಯಾವನೂ ಅವರಿಗೆ ಉತ್ತರಕೊಡಲಿಲ್ಲ, ಅವರನ್ನು ಲಕ್ಷಿಸಲಿಲ್ಲ.**

ಬಾಳನ ಪುರೋಹಿತರುಗಳು ದಿನವೆಲ್ಲಾ ಕೂಗಿದರು ಮತ್ತು ವೇದಿಯ ಸುತ್ತಲು ಕುಣಿದಾಡಿದರು. ಅವರು ರಕ್ತಸೋರುವಷ್ಟು ಗಾಯ ಮಾಡಿಕೊಂಡರು ಆದರೂ ಉತ್ತರ ಕೊಡಲು ಯಾವ ಬಾಳನೂ ಇರಲಿಲ್ಲ.

ಎಲೀಯನು ಅದಕ್ಕೆ ವಿರುದ್ಧವಾದ ರೀತಿಯಲ್ಲಿ ದೇವರ ಹತ್ತಿರ ಬಂದನು. ಅವನು ಯೆಹೋವನ ಯಜ್ಞವೇದಿಯನ್ನು ತಿರುಗಿ ಕಟ್ಟಿದನು ಮತ್ತು ಯಜ್ಞಬಲಿಯು ತೋಯುವಷ್ಟರ ಮಟ್ಟಿಗೆ ನೀರನ್ನು ಹೊಯ್ಯಿರಿ ಎಂದು ಹೇಳಿದನು. ನಂತರ ಎಲೀಯನು ಹತ್ತಿರ ಬಂದು *ಹೇಳಿದನು* – ಅವನು ಕೂಗಲಿಲ್ಲ ಅಥವಾ ಕುಣಿದಾಡಲಿಲ್ಲ ಅಥವಾ ತನ್ನನ್ನು ಹೊಡೆದುಕೊಳ್ಳಲಿಲ್ಲ. ಇವೆಲ್ಲವೂ

ಅಪನಂಬಿಕೆಯ ಸೂಚನೆಗಳಾಗಿವೆ. ಅವನು ಪ್ರಾರ್ಥಿಸಿದನು ... ಯೆಹೋವನ ಬೆಂಕಿಯು ಯಜ್ಞಬಲಿಯನ್ನು ದಹಿಸಿಬಿಟ್ಟಿತು.

**1 ಅರಸುಗಳು 18:30-39** ಅನಂತರ ಎಲೀಯನು ಎಲ್ಲಾ ಜನರನ್ನು ಹತ್ತಿರಕ್ಕೆ ಕರೆಯಲು ಅವರು ಬಂದರು. ಅವನು ಹಾಳಾಗಿದ್ದ ಅಲ್ಲಿನ ಯೆಹೋವವೇದಿಯನ್ನು ತಿರಿಗಿ ಕಟ್ಟಿಸಿದನು. 31 ಯೆಹೋವನಿಂದ ಇಸ್ರಾಯೇಲನೆಂಬ ಹೆಸರು ಹೊಂದಿದ ಯಾಕೋಬನ ಮಕ್ಕಳಿಂದ ಉತ್ಪತ್ತಿಯಾದ ಕುಲಗಳ ಸಂಖ್ಯೆಗೆ ಸರಿಯಾಗಿ ಹನ್ನೆರಡು ಕಲ್ಲುಗಳನ್ನು ತೆಗೆದುಕೊಂಡು 32 ಯೆಹೋವನ ಹೆಸರಿಗೋಸ್ಕರ ಒಂದು ವೇದಿಯನ್ನು ಕಟ್ಟಿಸಿ ಅದರ ಸುತ್ತಲೂ ಇಪ್ಪತ್ತು ಸೇರು ಬೀಜವರೀ ನೆಲವನ್ನು ಅಗೆಸಿ ಕಾಲುವೆಮಾಡಿಸಿದನು. 33 ಇದಲ್ಲದೆ ಕಟ್ಟಿಗೆಯನ್ನು ವೇದಿಯ ಮೇಲೆ ಕ್ರಮಪಡಿಸಿ ಹೋರಿಯನ್ನು ವಧಿಸಿ ತುಂಡುಮಾಡಿ ಅದರ ಮೇಲಿಟ್ಟನು. ಅನಂತರ ಜನರಿಗೆ - ನಾಲ್ಕು ಕೊಡ ನೀರು ತಂದು ಯಜ್ಞಮಾಂಸದ ಮೇಲೆಯೂ ಕಟ್ಟಿಗೆಯ ಮೇಲೆಯೂ ಹೊಯ್ಯಿರಿ ಎಂದು ಆಜ್ಞಾಪಿಸಿದನು.

34 ಅವರು ತೆಗೆದುಕೊಂಡು ಬರಲು ಇನ್ನೊಂದು ಸಾರಿ ತನ್ನಿರಿ ಎಂದು ಹೇಳಿದನು. ತಿರಿಗಿ ತಂದರು. ಅವನು ಮೂರನೆಯ ಸಾರಿ ಅದೇ ಪ್ರಕಾರವಾಗಿ ಆಜ್ಞಾಪಿಸಲು ಅವರು ಮತ್ತೊಮ್ಮೆ ತಂದು ಸುರಿದರು. 35ನೀರು ವೇದಿಯ ಸುತ್ತಲೂ ಹರಿಯಿತು; ಇದಲ್ಲದೆ ಅವನು ಕಾಲುವೆಯನ್ನು ನೀರಿನಿಂದ ತುಂಬಿಸಿದನು.

✳ *ಅವನ ಪ್ರಾರ್ಥನೆ*

36 ಸಂಧ್ಯಾನೈವೇದ್ಯದ ಹೊತ್ತಿಗೆ ಪ್ರವಾದಿಯಾದ ಎಲೀಯನು ವೇದಿಯ ಹತ್ತಿರ ಬಂದು - ಅಬ್ರಹಾಮ್ ಇಸಾಕ್ ಇಸ್ರಾಯೇಲ್ಯರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲ್ಯರ ದೇವರಾಗಿರುತ್ತೀ ಎಂಬದನ್ನೂ ನಾನು ನಿನ್ನ ಸೇವಕನಾಗಿರುತ್ತೇನೆಂಬದನ್ನೂ ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬದನ್ನೂ ಈಹೊತ್ತು ತೋರಿಸಿ ಕೊಡು. 37 ಕಿವಿಗೊಡು; ಯೆಹೋವನೇ, ಕಿವಿಗೊಡು; ಯೆಹೋವನಾದ ನೀನೊಬ್ಬನೇ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬದನ್ನು ಇವರಿಗೆ ತಿಳಿಯಪಡಿಸು ಎಂದು ಪ್ರಾರ್ಥಿಸಿದನು.
38 ಕೂಡಲೆ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞಮಾಂಸವನ್ನೂ ಕಟ್ಟಿಗೆಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲುವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು.

**39 ಜನರೆಲ್ಲರೂ ಅದನ್ನು ಕಂಡು ಬೋರ್ಲಬಿದ್ದು - ಯೆಹೋವನೇ ದೇವರು, ಯೆಹೋವನೇ ದೇವರು ಎಂದು ಕೂಗಿದರು.**

## ಅಡ್ಡಿಗಳನ್ನು ತೆಗೆದುಹಾಕಿರಿ

ಯೇಸು ಪ್ರಾರ್ಥನೆಯ ಬಗ್ಗೆ ಬೋಧಿಸಿದಾಗ ನಮ್ಮ ಪ್ರಾರ್ಥನೆಯು ಕೇಳಲ್ಪಡದಂತೆ ಅಡ್ಡಿಯಾಗುವ ವಿಷಯಗಳ ಬಗ್ಗೆ ಬೋಧಿಸಿದರು.

ಯೇಸು ಪ್ರಾರ್ಥಿಸಿದಾಗ – ಮಾತನಾಡಿದಾಗ – ಅದು ತಕ್ಷಣವೇ ನೆರವೇರಲು ಕಾರಣವೇನೆಂದರೆ, ಅವರು ದೇವರ ಮಗನಾಗಿದ್ದರು ಅನ್ನುವುದಲ್ಲ. ಅವರು ಈ ಲೋಕದಲ್ಲಿ ಕೊನೆಯ ಆದಾಮನಾಗಿ ಕಾರ್ಯಮಾಡಿದರು. ಆದಾಮ ಮತ್ತು ಹವ್ವರು ಯಾವ ರೀತಿಯಲ್ಲಿ ಕಾರ್ಯಮಾಡಬೇಕೆಂದು ಸೃಷ್ಟಿಸಲ್ಪಟ್ಟಿದ್ದರೋ ಆ ರೀತಿಯಲ್ಲಿ ಅವರು ಕ್ರಿಯೆಗಳನ್ನು ಮಾಡಿದರು. ಅವರ ಪ್ರಾರ್ಥನೆಗಳಿಗೆ ಯಾಕೆ ಅಷ್ಟು ಬಲವಾದ ಉತ್ತರಗಳು ಬಂತೆಂದರೆ ಅವರ ಜೀವಿತವು ಸಂಪೂರ್ಣವಾಗಿ ಪರಿಶುದ್ಧವಾಗಿತ್ತು. ಯಾವ ಅಡ್ಡಿಗಳಿರಲಿಲ್ಲ.

ಅನೇಕ ಬಾರಿ ನಾವು ಕಲಬೆರಕೆಯ ಸನ್ನಿವೇಶಗಳಲ್ಲಿ ನಮ್ಮನ್ನು ಸಿಲುಕಿಕೊಳ್ಳಲು ಅನುಮತಿಸುತ್ತೇವೆ, ಪಾಪವನ್ನೂ ಅನುಮತಿಸುತ್ತೇವೆ, ನಂತರ ದೇವರು ಯಾಕೆ ನಮ್ಮ ಪ್ರಾರ್ಥನೆಗಳನ್ನು ಉತ್ತರಿಸುವುದಿಲ್ಲ ಎಂದು ಆಲೋಚಿಸುತ್ತೇವೆ.

ಅಪೋಸ್ತಲನಾದ ಪೌಲನು ನಮ್ಮನ್ನು ಎಚ್ಚರಿಸುತ್ತಾನೆ,

**ಗಲಾತ್ಯ 6:7,8 ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ. ಮನುಷ್ಯನು ತಾನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯಬೇಕು. ತನ್ನ ಶರೀರಭಾವವನ್ನು ಕುರಿತು ಬಿತ್ತುವವನು ಆ ಭಾವದಿಂದ ನಾಶನವನ್ನು ಕೊಯ್ಯುವನು. ಆತ್ಮನನ್ನು ಕುರಿತು ಬಿತ್ತುವವನು ಆತ್ಮನಿಂದ ನಿತ್ಯಜೀವವನ್ನು ಕೊಯ್ಯುವನು.**

ನಾವು ಬಲವುಳ್ಳ ಪ್ರಾರ್ಥನಾ ಸ್ತ್ರೀ ಪುರುಷರಾಗಬೇಕಾದರೆ ನಾವು ಅಡ್ಡಿಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ತೆಗೆದುಹಾಕಲು ಸಮಯ ತೆಗೆದುಕೊಳ್ಳಬೇಕು.

## ಅಪನಂಬಿಕೆ

ಯೇಸು ತನ್ನ ಊರಿಗೆ ತಿಂತಿರುಗಿದಾಗ ಅವರಿಗೆ ಪರಿಪೂರ್ಣವಾದ ನಂಬಿಕೆಯಿದ್ದರೂ ಅಲ್ಲಿ ಮಹತ್ತಾದ ಕಾರ್ಯಗಳನ್ನು ಮಾಡಲಾಗಲಿಲ್ಲ. ಅದಕ್ಕೆ ಕಾರಣ ಅಪನಂಬಿಕೆ ಎಂದು ಮತ್ತಾಯನು ನಮಗೆ ತಿಳಿಸುತ್ತಾನೆ. ಅಪನಂಬಿಕೆಯು ನಂಬಿಕೆಗೆ ತದ್ವಿರುದ್ಧವಾಗಿದೆ.

**ಮತ್ತಾಯ 13:54-58 ತರುವಾಯ ಆತನು ತನ್ನ ಊರಿಗೆ ಬಂದು ಅಲ್ಲಿರುವ ಸಭಾಮಂದಿರದಲ್ಲಿ ಜನರಿಗೆ ಉಪದೇಶಮಾಡುತ್ತಿದ್ದನು. ಅವರು ಕೇಳಿ ಅತ್ಯಾಶ್ಚರ್ಯಪಟ್ಟು - ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು? 55ಇವನು ಆ ಬಡಗಿಯ ಮಗನಲ್ಲವೇ. ಇವನ ತಾಯಿ ಮರಿಯಳೆಂಬವಳಲ್ಲವೇ. ಯಾಕೋಬ ಯೋಸೇಫ ಸೀಮೋನ ಯೂದ ಇವರು ಇವನ ತಮ್ಮಂದಿರಲ್ಲವೇ. 56ಇವನ ತಂಗಿಯರೆಲ್ಲರು ನಮ್ಮಲ್ಲಿ ಇದ್ದಾರಲ್ಲವೇ. ಹಾಗಾದರೆ ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು? ಎಂದು ಮಾತಾಡಿಕೊಂಡು**

**ಆತನ ವಿಷಯವಾಗಿ ಬೇಸರಗೊಂಡರು. 57ಆದರೆ ಯೇಸು ಅವರಿಗೆ - ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಅಂದನು. 58ಅವರು ಆತನನ್ನು ನಂಬದೆ ಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ.**

ಯೇಸು ಸಭಾಮಂದಿರದ ಅಧಿಕಾರಿಗೆ "ನಿನ್ನ ಮಗಳು ಸತ್ತಿದ್ದಾಳೆ" ಎಂಬ ಸುದ್ದಿ ಬಂದಾಗ ಏನು ಹೇಳಿದರು? "ನಂಬಿಕೆ ಮಾತ್ರ ಇರಲಿ".

ಯೇಸು ರಸ್ತೆಬದಿಯಲ್ಲಿ ಭಿಕ್ಷೆ ಬೇಡುತ್ತಿದ್ದ ಕುರುಡರಿಗೆ ಏನು ಹೇಳಿದರು? "ನಿಮ್ಮ ನಂಬಿಕೆಯಂತೆ ನಿಮಗಾಗಲಿ".

ಯೇಸು ಮಾರ್ಥಳಿಗೆ ಲಾಜರನ ಸಮಾಧಿಯ ಬಳಿಯಲ್ಲಿದ್ದಾಗ ಏನು ಹೇಳಿದರು? "ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ".

ನಾವು ಸಂದೇಹ ಮತ್ತು ಅಪನಂಬಿಕೆಯಲ್ಲಿ ಜೀವಿಸುತ್ತಿದ್ದರೆ ನಮ್ಮ ಪ್ರಾರ್ಥನೆಗಳಿಗೆ ನಾವು ಉತ್ತರಗಳನ್ನು ಪಡೆದುಕೊಳ್ಳಲು ಸಾಧ್ಯವಿಲ್ಲ.

**ಯಾಕೋಬ 1:5-7 ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. 6ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. 7ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ.**

**ತಿಳುವಳಿಕೆಯ ಕೊರತೆ**

ಯೆಶಾಯ ಹಾಗೂ ಹೊಶೆಯರ ಗ್ರಂಥಗಳಲ್ಲಿ ನಾವು ಕೆಲವು ಸವಾಲೊಡ್ಡುವ ಹೇಳಿಕೆಗಳನ್ನು ಓದುತ್ತೇವೆ.

**ಯೆಶಾಯ 5:13a ಆದಕಾರಣ ನನ್ನ ಜನರು ಜ್ಞಾನಹೀನರಾಗಿ ಸೆರೆಗೆ ಹೋಗುವದು ಖಂಡಿತ...**

**ಹೊಶೆಯ 4:6a ನನ್ನ ಜನರು ಜ್ಞಾನಹೀನರಾಗಿ ಹಾಳಾಗಿದ್ದಾರೆ...**

ಒಂದು ಸನ್ನಿವೇಶದ ಬಗ್ಗೆ ದೇವರ ವಾಕ್ಯವು ಏನು ಹೇಳುತ್ತದೆ ಎಂಬುದು ನಮಗೆ ಗೊತ್ತಿಲ್ಲದಿದ್ದರೆ, ನಾವು ನಂಬಿಕೆಯನ್ನು ಹೇಗೆ ಹೊಂದಿಕೊಳ್ಳಲು ಸಾಧ್ಯ? ದೇವರ ವಾಕ್ಯ ಮಾತ್ರವೇ ನಿಜವಾದ ನಂಬಿಕೆಗೆ ಆಧಾರವಾಗಿದೆ.

ದೇವರನ್ನು ಮತ್ತು ಅವರ ನೀತಿವಂತಿಕೆಯನ್ನು ತಿಳಿದುಕೊಳ್ಳುವುದು ತಿಳುವಳಿಕೆಗೆ ಆಧಾರವಾಗಿದೆ.

**ರೋಮಾ 10:2,3 ದೇವರಲ್ಲಿ ಆಸಕ್ತರಾಗಿದ್ದಾರೆಂದು ನಾನು ಅವರ ವಿಷಯದಲ್ಲಿ ಸಾಕ್ಷಿಕೊಡುತ್ತೇನೆ; ಆದರೂ ಅವರ ಆಸಕ್ತಿ ಜ್ಞಾನಾನುಸಾರವಾದದ್ದಲ್ಲ. 3ಅವರು ದೇವರಿಂದ ದೊರಕುವ ನೀತಿಯನ್ನರಿಯದೆ ಸ್ವನೀತಿಯನ್ನೇ ಸ್ಥಾಪಿಸಬೇಕೆಂದು ಪ್ರಯತ್ನಿಸುತ್ತಾ ಇದ್ದದರಿಂದ ದೇವರ ನೀತಿಗೆ ಅಧೀನರಾಗಲಿಲ್ಲ.**

## ಹೆಮ್ಮೆ ಮತ್ತು ನಟನೆ

ಯೇಸು ಗರ್ವಿಷ್ಟರ ಪ್ರಾರ್ಥನೆಯನ್ನು ದೀನರ ಪ್ರಾರ್ಥನೆಯೊಂದಿಗೆ ವಿರುದ್ಧವಾಗಿ ಹೋಲಿಸುತ್ತಾರೆ.

**ಲೂಕ 18:9b-14 ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. 10ಅದೇನಂದರೆ - ಪ್ರಾರ್ಥನೆಮಾಡಬೇಕೆಂದು ಇಬ್ಬರು ಮನುಷ್ಯರು ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು, ಒಬ್ಬನು ಸುಂಕದವನು. 11ಫರಿಸಾಯನು ನಿಂತುಕೊಂಡು ಪ್ರಾರ್ಥಿಸುವಾಗ ತನ್ನೊಳಗೆ - ದೇವರೇ, ಸುಲುಕೊಳ್ಳುವವರೂ ಅನ್ಯಾಯಗಾರರೂ ಹಾದರಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರಮಾಡುತ್ತೇನೆ. 12ವಾರಕ್ಕೆ ಎರಡಾವರ್ತಿ ಉಪವಾಸ ಮಾಡುತ್ತೇನೆ; ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ ಅಂದುಕೊಂಡನು. 13ಆದರೆ ಆ ಸುಂಕದವನು ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ - ದೇವರೇ, ಪಾಪಿಯಾದ ನನ್ನನ್ನು ಕರುಣಿಸು ಅಂದನು. 14ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು, ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು ಅಂದನು.**

ಯೇಸು ಶಾಸ್ತ್ರಿಗಳನ್ನು ಮತ್ತು ಫರಿಸಾಯರನ್ನು ಕಪಟಿಗಳೆಂದು ಕರೆದರು, ಯಾಕೆಂದರೆ ಅವರು ನಟನೆಯ ಪ್ರಾರ್ಥನೆಯನ್ನು ಮಾಡಿದರು.

**ಮಾರ್ಕ 12:40 ವಿಧವೆಯರ ಮನೆಗಳನ್ನು ನುಂಗಿ ನಟನೆಗಾಗಿ ದೇವರಿಗೆ ಉದ್ದವಾದ ಪ್ರಾರ್ಥನೆಗಳನ್ನು ಮಾಡುವವರಾದ ಇವರು ಹೆಚ್ಚಾದ ದಂಡನೆಯನ್ನು ಹೊಂದುವರು ಅಂದನು.**

## ಕ್ಷಮಿಸದಿರುವುದು

ನಾವು ಬಹಳ ಕುಂದುಕೊರತೆಗಳಿರುವ ಜಗತ್ತಿನಲ್ಲಿ ವಾಸಿಸುತ್ತೇವೆ. ನಾವೆಲ್ಲರೂ ಸ್ವಲ್ಪ ಮಟ್ಟಿಗಾದರೂ ನೋಯಿಸಲ್ಪಟ್ಟಿದ್ದೇವೆ, ನಿಂದಿಸಲ್ಪಟ್ಟಿದ್ದೇವೆ, ತಿರಸ್ಕರಿಸಲ್ಪಟ್ಟಿದ್ದೇವೆ ಮತ್ತು ಸುಳ್ಳು ಹೇಳಲ್ಪಟ್ಟಿದ್ದೇವೆ. "ಆದರೆ ಇವರು ಮಾತ್ರ ಕ್ಷಮೆಗೆ ಅರ್ಹರಲ್ಲ" ಎಂದು ಯಾರಾದರೂ ಹೇಳುವುದನ್ನು ನಾವು ಎಷ್ಟು ಬಾರಿ ಕೇಳಿದ್ದೇವೆ. ನಿಜವಾಗಲೂ ಹೇಳಬೇಕಾದರೆ, ಒಬ್ಬ ವ್ಯಕ್ತಿಯ ಅರ್ಹತೆಗೂ ಕ್ಷಮೆಗೂ ನಡುವೆ ಯಾವುದೇ ಸಂಬಂಧವಿಲ್ಲ. ಇತರ ವ್ಯಕ್ತಿಯು ಏನು ಮಾಡುತ್ತಾನೆ, ಅಥವಾ ಮಾಡುವುದಿಲ್ಲ ಎಂಬುದರ ಮೇಲೆ ಷರತ್ತುಬದ್ಧವಾಗಿ ಕ್ಷಮಿಸಿರಿ ಎಂದು ದೇವರು ಎಂದಿಗೂ ಹೇಳಲಿಲ್ಲ. ಹಾಗೆ ಮಾಡಿದ್ದರೆ ಅವರ ನಿಯಂತ್ರಣದಲ್ಲಿ ನಾವಿರುತ್ತಿದ್ದೆವು

ಇತರ ವ್ಯಕ್ತಿಗೆ ಅನುಕೂಲವಾಗಲಿ ಅಥವಾ ಸುಲಭವಾಗಲಿ ಎಂಬುದು ದೇವರ ಉದ್ದೇಶವಲ್ಲ. ನಮಗೆ ಸುಲಭವಾಗಲಿ ಎಂಬುದು ದೇವರ ಬಯಕೆ. ನಾವು

ಕ್ಷಮೆಯನ್ನು ಹಿಡಿದಿಟ್ಟುಕೊಳ್ಳುವವರೆಗೂ ಉತ್ತಮವಾದ ಜೀವನವನ್ನು ನಡೆಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿಯನ್ನಾಗಲಿ ಅಥವಾ ಸನ್ನಿವೇಶವನ್ನಾಗಲಿ ನಾವು ಕ್ಷಮಿಸದಿದ್ದಾಗ ಆ ವ್ಯಕ್ತಿಯ ಅಥವಾ ಸನ್ನಿವೇಶದ ಬಂಧನದಲ್ಲಿ ಸಿಕ್ಕಿಕೊಳ್ಳುತ್ತೇವೆ. ನಮ್ಮ ಮೇಲೆ ಅವರ ಹಿಡಿತವನ್ನು ಮುರಿಯುವ ಏಕೈಕ ಮಾರ್ಗವೆಂದರೆ ನಾವು ಅವರನ್ನು ಕ್ಷಮಿಸುವುದು.

✱ *ಕ್ಷಮಿಸಲ್ಪಡಬೇಕಾದರೆ ನೀವೂ ಕ್ಷಮಿಸಿರಿ*

ನಮ್ಮ ಹೃದಯಗಳಲ್ಲಿ ಕ್ಷಮಾಪಣೆ ಬರುವವರೆಗೂ ನಮ್ಮ ಪ್ರಾರ್ಥನೆಗಳಿಗೆ ಉತ್ತರ ಬರುವುದಿಲ್ಲವೆಂದು ಯೇಸು ಬೋಧಿಸಿದರು.

**ಮಾರ್ಕ 11:25 ಇದಲ್ಲದೆ ನೀವು ನಿಂತುಕೊಂಡು ಪ್ರಾರ್ಥನೆಮಾಡುವಾಗೆಲ್ಲಾ ಯಾರ ಮೇಲೆ ಏನಾದರೂ ವಿರೋಧವಿದ್ದರೆ ಅದನ್ನು ಅವನಿಗೆ ಕ್ಷಮಿಸಿರಿ; ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ಸಹ ನಿಮ್ಮ ತಪ್ಪುಗಳನ್ನು ನಿಮಗೆ ಕ್ಷಮಿಸಿಬಿಡುವನು ಅಂದನು**

**ಮತ್ತಾಯ 6:15 ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ.**

ನಾವು ಇತರರನ್ನು ಕ್ಷಮಿಸಲು ಆಲೋಚಿಸುವಾಗ ಅವರು ನಮ್ಮನ್ನು ಕ್ಷಮಿಸಲಿ ಎಂಬ ವಿರುದ್ಧವಾದ ಆಲೋಚನೆ ಬರುತ್ತದೆ. ನಾವು ಕರ್ತನಲ್ಲಿರುವ ನಮ್ಮ ಸಹೋದರನಿಗೆ ಅಥವಾ ಸಹೋದರಿಗೆ ವಿರುದ್ಧವಾಗಿ ತಪ್ಪು ಮಾಡಿದ್ದರೆ ಎಂದು ಯೇಸು ಹೇಳಲಿಲ್ಲ, ಬದಲಾಗಿ ಅವರು ನಮಗೆ ವಿರುದ್ಧವಾಗಿ ತಪ್ಪು ಮಾಡಿದ್ದರೆ ಎಂದು ಯೇಸು ಹೇಳಿದ್ದನ್ನು ಗಮನಿಸಿರಿ.

**ಮತ್ತಾಯ 5:23,24 ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬದು ನಿನ್ನ ನೆನಪಿಗೆ ಬಂದರೆ, 24ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟುಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು.**

ಯೇಸು ಕ್ಷಮಾಪಣೆಯನ್ನು ಕರ್ತನ ಪ್ರಾರ್ಥನೆಯ ಭಾಗವಾಗಿ ಮಾಡಿದರು ಮತ್ತು ಆ ಪ್ರಾರ್ಥನೆಯ ನಂತರವೇ ತಕ್ಷಣವಾಗಿ ಕ್ಷಮಾಪಣೆಯ ಬಗ್ಗೆ ಇನ್ನೂ ಹೆಚ್ಚಾಗಿ ಬೋಧಿಸಿದರು. ಇದಕ್ಕಿಂತ ಇನ್ನೂ ಸ್ಪಷ್ಟವಾಗಿ ಅವರು ಹೇಳಲು ಸಾಧ್ಯವಿಲ್ಲ – ದೇವರು ನಿಮ್ಮನ್ನು ಕ್ಷಮಿಸಬೇಕಾಗಿದ್ದರೆ ನೀವು ಇತರರನ್ನು ಕ್ಷಮಿಸಿರಿ.

**ಮತ್ತಾಯ 6:12,14,15 ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು.**

**ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ.**

✱ *ಏಳೆಪ್ಪತ್ತು ಬಾರಿ*

ಪೇತ್ರನು ನಿಯಮಗಳ ವ್ಯವಸ್ಥೆಯಡಿ ಬೆಳೆದಿದ್ದನು. ಅವನು ಯೇಸುವಿಗೆ ಕೇಳಿದ ಪ್ರಶ್ನೆಯೇನೆಂದರೆ, "ಏಳು ಬಾರಿ ಕ್ಷಮಿಸಿದರೆ ಸಾಕೋ?" ಅವನು ಒಂದು ಧಾರ್ಮಿಕವಾದ ನಿಯಮವನ್ನು ಕೇಳುತ್ತಿದ್ದನು.

**ಮತ್ತಾಯ 18:21,22 ಆಗ ಪೇತ್ರನು ಆತನ ಬಳಿಗೆ ಬಂದು - ಸ್ವಾಮೀ, ನನ್ನ ಸಹೋದರನು ನನಗೆ ತಪ್ಪುಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು ಯೇಸು ಅವನಿಗೆ - ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ.**

"ಏಳೆಪ್ಪತ್ತು ಬಾರಿ" ಎಂಬ ಯೇಸುವಿನ ಉತ್ತರವು ಅವರು ಕ್ಷಮಿಸುವ ಗುಣವನ್ನು ನಿರಂತರ ಜೀವನ ಶೈಲಿಯಾಗಿ ಬೆಳೆಸಿಕೊಳ್ಳಬೇಕೆಂದು ಸೂಚಿಸಿತು. ನಾವು ಯಾರನ್ನಾದರೂ ನಾನೂರ ತೊಂಬತ್ತು ಬಾರಿ ಕ್ಷಮಿಸುವದಾದರೆ ಪ್ರತಿಯೊಂದು ಸನ್ನಿವೇಶದ ಲೆಕ್ಕ ಇಡುವುದು ಅಸಾಧ್ಯ.

✱ *ನೀಚ ಸೇವಕ*

ಯೇಸು ಕ್ಷಮಾಪಣೆಯ ಪ್ರಾಮುಖ್ಯತೆಯನ್ನು ತಿಳಿಸಲು ಒಂದು ಸಾಮ್ಯವನ್ನು ಹೇಳಿದರು.

**ಮತ್ತಾಯ 18:23-35 ಆದದರಿಂದ ಪರಲೋಕರಾಜ್ಯವು ತನ್ನ ಸೇವಕರಿಂದ ಲೆಕ್ಕವನ್ನು ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ. 24ಅವನು ಲೆಕ್ಕಾ ತೆಗೆದುಕೊಳ್ಳುವದಕ್ಕೆ ಪ್ರಾರಂಭಮಾಡಿದಾಗ ಕೋಟ್ಯಾಂತರ ಸಾಲಾ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡತಂದರು. 25ಆ ಸಾಲಾ ತೀರಿಸುವದಕ್ಕೆ ಅವನಲ್ಲಿ ಏನೂ ಇಲ್ಲದ್ದರಿಂದ ಅವನ ಒಡೆಯನು ಅವನನ್ನೂ ಅವನ ಹೆಂಡತಿಮಕ್ಕಳನ್ನೂ ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆ ಮಾಡಿದನು. 26ಆ ಸೇವಕನು ಅವನ ಕಾಲಿಗೆ ಬಿದ್ದು ಅವನಿಗೆ - ಒಡೆಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆಂದು ನಮಸ್ಕರಿಸಲಾಗಿ 27ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು. 28ತರುವಾಯ ಆ ಸೇವಕನು ಹೊರಕ್ಕೆ ಬಂದು ತನಗೆ ನೂರು ಹಣಾ ಕೊಡಬೇಕಾದ ಒಬ್ಬ ಜೊತೇಸೇವಕನನ್ನು ಕಂಡು ಅವನನ್ನು ಹಿಡಿದು - ಎಲಾ, ನನ್ನ ಸಾಲ ತೀರಿಸು ಎಂದು ಹೇಳಿ ಕುತ್ತಿಗೆ ಹಿಸಿಕಿದನು. 29ಆಗ ಅವನ ಜೊತೇಸೇವಕನು ಅವನ ಕಾಲಿಗೆ ಬಿದ್ದು - ಸ್ವಲ್ಪ ತಾಳಿಕೋ, ತೀರಿಸುತ್ತೇನೆ ಎಂದು ಬೇಡಿಕೊಂಡನು. 30ಆದರೆ ಅವನು ಒಪ್ಪದೆ ಹೊರಟು ಹೋಗಿ ಆ ಸಾಲಾ**

**ತೀರಿಸುವ ತನಕ ಅವನನ್ನು ಸೆರೆಮನೆಯಲ್ಲಿ ಹಾಕಿಸಿದನು. 31ಅವನ ಜೊತೇ ಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೆದದ್ದನ್ನೆಲ್ಲಾ ತಿಳಿಸಿದರು. 32ಆಗ ಅವನ ಒಡೆಯನು ಅವನನ್ನು ಕರಸಿ - ಎಲಾ ನೀಚನೇ, ನೀನು ನನ್ನನ್ನು ಬೇಡಿಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟುಬಿಟ್ಟೆನಲ್ಲಾ; 33ನಾನು ನಿನ್ನನ್ನು ಕರುಣಿಸಿದ ಹಾಗೆ ನೀನು ಸಹ ನಿನ್ನ ಜೊತೇಸೇವಕನನ್ನು ಕರುಣಿಸಬಾರದಾಗಿತ್ತೇ ಎಂದು ಹೇಳಿ ಸಿಟ್ಟುಮಾಡಿ 34ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು. 35ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು.**

ನಮ್ಮ ಹಿಂದಿನ ಪಾಪಗಳನ್ನಾಗಲಿ ಮತ್ತು ನಮ್ಮ ಇಂದಿನ ಸೋಲುಗಳನ್ನಾಗಲಿ ನೆನೆಸುವಾಗ - ದೇವರು ನಮ್ಮನ್ನು ಎಷ್ಟೊಂದು ಕ್ಷಮಿಸಿದ್ದಾರೆ - ನಾವು ಇತರರನ್ನು ಹೇಗೆ ಕ್ಷಮಿಸಲು ಆಗುವುದಿಲ್ಲ?

### ಪಾಪದ ಅಡ್ಡಿಯನ್ನು ತೆಗೆದುಹಾಕಿರಿ

ಆದಾಮ್ ಮತ್ತು ಹವ್ವರು ಏದೆನ್ ತೋಟದಲ್ಲಿದ್ದಾಗ ದೇವರಿಂದ ಬಚ್ಚಿಟ್ಟುಕೊಂಡ ಸಮಯದಿಂದಲೇ ಪಾಪವು ಪರಿಶುದ್ಧ ದೇವರ ಹಾಗೂ ಪಾಪಮಯ ಸ್ತ್ರೀ ಪುರುಷರ ನಡುವೆ ಒಂದು ಅಡ್ಡಿಯಾಗಿ ನಿಂತಿದೆ.

**ಯೆಶಾಯ 59:1,2 ಇಗೋ, ಯೆಹೋವನ ಹಸ್ತವು ರಕ್ಷಿಸಲಾರದಂತೆ ಮೋಟುಗೈಯಲ್ಲ; ಆತನ ಕಿವಿಯು ಕೇಳಲಾರದ ಹಾಗೆ ಕಿವುಡಲ್ಲ. ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ.**

ಯೇಸು ನಮ್ಮ ಪಾಪಗಳ ದಂಡನೆಯನ್ನು ಹೊತ್ತಿದ್ದಾರೆ ಆದರೆ ನಾವು ಅವರು ಒದಗಿಸಿರುವ ಪಾಪಕ್ಷಮಾಪಣೆಯನ್ನು ಮತ್ತು ಪಾಪನಿವಾರಣೆಯನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ವಾಸ್ತವಾಂಶಗಳು ಸ್ವಯಂ-ಸ್ಪಷ್ಟವಾಗಿವೆ ಎಂಬ ಪೂರ್ವಕಲ್ಪನೆಯೊಂದಿಗೆ ಪ್ರಾರ್ಥನೆಯ ಬಗ್ಗೆ ಅನೇಕ ಪುಸ್ತಕಗಳು ಬರೆಯಲ್ಪಟ್ಟಿವೆ. ಪಾಪವನ್ನು, ಅದರಲ್ಲೂ ನಿರ್ದಿಷ್ಟವಾಗಿ ತಮ್ಮ ಸ್ವಂತ ಪಾಪಗಳನ್ನು, ದೇವರು ಅರ್ಥಮಾಡಿಕೊಳ್ಳುತ್ತಾನೆ ಮತ್ತು ಅದನ್ನು ನಿರ್ಲಕ್ಷಿಸುತ್ತಾನೆ ಎಂದು ಸ್ತ್ರೀ ಪುರುಷರು ತಮಗೆ ತಾವೇ ಮನದಟ್ಟು ಮಾಡಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಆದರೆ ಇದು ಸತ್ಯವಲ್ಲ. ಸೊಲೊಮೊನನು ಹೀಗೆ ಬರೆದನು,

**ಜ್ಞಾನೋಕ್ತಿ 14:12 ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ.**

ದೇವರು ಪಾಪವನ್ನು ನಿರ್ಲಕ್ಷಿಸಲು ಸಾಧ್ಯವಿಲ್ಲ. ಅದು ಅವರ ಗುಣಕ್ಕೆ ಹಾಗೂ ಅವರ ವಾಕ್ಯಕ್ಕೆ ವಿರುದ್ಧವಾಗಿದೆ. ಪರಿಶುದ್ಧ ದೇವರು ಪಾಪವು ಇರುವಲ್ಲಿ ಇರಲು ಸಾಧ್ಯವಿಲ್ಲ ಮತ್ತು ದೇವರ ಕೃಪೆ ಎನ್ನುವಾಗ ಅದು ಸುಮ್ಮನೇ ಪಾಪವನ್ನು ನಿರ್ಲಕ್ಷಿಸುವುದಾಗಲಿ ಅಥವಾ ಕ್ಷಮಿಸುವುದಾಗಲಿ ಅಲ್ಲ.

**ರೋಮಾ 6:1,2 ಹಾಗಾದರೆ ಏನು ಹೇಳೋಣ? ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ?**

ಯಾವುದೇ ರೂಪದಲ್ಲಾಗಲಿ ಪಾಪವು ನಮ್ಮ ಜೀವಿತದಲ್ಲಿರುವಾಗ ನಮ್ಮ ಪ್ರಾರ್ಥನೆಗಳು ಕೇಳಲ್ಪಡದಂತೆ ಅದು ತಡೆಯುತ್ತದೆ.

### ಪಾಪವನ್ನು ಅರಿಕೆ ಮಾಡಿರಿ ಮತ್ತು ಕ್ಷಮಾಪಣೆ ಹೊಂದಿರಿ

ನಮ್ಮ ಜೀವಿತಗಳಲ್ಲಿ ನಾವು ಪಾಪದಿಂದ ವಿಮುಕ್ತರಾಗುವುದು ಹೇಗೆ? ನಾವು ನಮ್ಮೊಂದಿಗೂ ದೇವರೊಂದಿಗೂ ಯಥಾರ್ಥರಾಗಿರುವುದರಿಂದ, ಪಾಪವನ್ನು ಪಾಪವೆಂದು ಕರೆಯುವುದರಿಂದ ಮತ್ತು ದೇವರ ಮುಂದೆ ಅದನ್ನು ಅರಿಕೆ ಮಾಡುವುದರಿಂದ ವಿಮುಕ್ತರಾಗುತ್ತೇವೆ. ನಾವು ನೆಪಗಳನ್ನು ಹೇಳಬಾರದು. “ನಾನು ಆ ಅರ್ಥದಲ್ಲಿ ಹೇಳಲಿಲ್ಲ, ಆದರೆ…”

“ಅದೇನು ಮಹಾ ತಪ್ಪು…” ಎಂದು ನಾವು ಹೇಳಲು ಸಾಧ್ಯವಿಲ್ಲ. ನಾವು ಅನೀತಿಯಿಂದ ಶುದ್ಧೀಕರಿಸಲ್ಪಡಬೇಕಾದರೆ ಮತ್ತು ಕ್ಷಮಿಸಲ್ಪಡಬೇಕಾದರೆ ನಾವು ಪಾಪವನ್ನು ಯಥಾರ್ಥವಾಗಿ ಎದುರಿಸಬೇಕು ಮತ್ತು ದೇವರಿಗೆ ಅದನ್ನು ಅರಿಕೆ ಮಾಡಬೇಕು.

**1 ಯೋಹಾನ 1:9 ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.**

ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗುತ್ತಿಲ್ಲವಾದರೆ ನಾವು ಅದರ ಹಿಂದಿನ ಕಾರಣಗಳನ್ನು ತಿಳಿದುಕೊಳ್ಳಲು ಸಮಯ ತೆಗೆದುಕೊಳ್ಳಬೇಕು. ಅದು ಒಂದು ವೇಳೆ ಪಾಪ ಅಲ್ಲದೆ ಇರಬಹುದು - ತಿಳುವಳಿಕೆಯ ಕೊರತೆಯಿರಬಹುದು, ನಂಬಿಕೆಯ ಕೊರತೆಯಿರಬಹುದು ಅಥವಾ ದೇವರ ಚಿತ್ತಾನುಸಾರವಾಗಿ ಬೇಡಿಕೊಳ್ಳದೆ ಇರುವದರಿಂದ ಆಗಿರಬಹುದು.

### ಉತ್ತರಿಸಲ್ಪಟ್ಟ ಪ್ರಾರ್ಥನೆಗೆ ಅಡ್ಡಿಗಳು

✱ *ದುಷ್ಕೃತ್ಯಗಳು*

ದುಷ್ಕೃತ್ಯಗಳೆಂದರೆ ತಲೆಮಾರಿನಿಂದ ತಲೆಮಾರಿಗೆ ನಡೆದುಕೊಂಡು ಬಂದ ಪಾಪಗಳು.

**ಯೆರೆಮೀಯ 11:10,11 ನನ್ನ ಮಾತುಗಳನ್ನು ಕೇಳಲೊಲ್ಲದಿದ್ದ ತಮ್ಮ ಮೂಲ ಪಿತೃಗಳ ದುಷ್ಕೃತ್ಯಗಳ ಕಡೆಗೆ ತಿರುಗಿಕೊಂಡು ಅನ್ಯದೇವತೆಗಳನ್ನು ಹಿಂಬಾಲಿಸಿ**

**ಸೇವಿಸಿದ್ದಾರೆ; ಇಸ್ರಾಯೇಲ್ ವಂಶದವರೂ ಯೆಹೂದ ವಂಶದವರೂ ನಾನು ಅವರ ಪಿತೃಗಳ ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಮೀರಿದ್ದಾರೆ. ಆದಕಾರಣ ಯೆಹೋವನೆಂಬ ನಾನು ಹೀಗನ್ನುತ್ತೇನೆ - ಇಗೋ, ಅವರು ತಪ್ಪಿಸಿಕೊಳ್ಳಲಾರದ ಕೇಡನ್ನು ಅವರ ಮೇಲೆ ಬರಮಾಡುವೆನು; ನನಗೆ ಮೊರೆಯಿಟ್ಟರೂ ಕೇಳೆನು.**

ದಾವೀದನು ಹೀಗೆ ಬರೆದನು,

**ಕೀರ್ತನೆ 66:18 ನಾನು ಕೆಟ್ಟತನದ ಮೇಲೆ ಮನಸ್ಸಿಟ್ಟಿದ್ದರೆ ಸ್ವಾಮಿಯು ನನ್ನ ವಿಜ್ಞಾಪನೆಯನ್ನು ಕೇಳುತ್ತಿದ್ದಿಲ್ಲ.**

✳ *ನಮ್ಮ ಹೃದಯಗಳಲ್ಲಿ ವಿಗ್ರಹಗಳನ್ನು ಇಟ್ಟುಕೊಂಡಿರುವುದು*

ನಾವು ನಮ್ಮ ಜೀವಿತಗಳಲ್ಲಿ ದೇವರಿಗೆ ಕೊಡಬೇಕಾದ ಪ್ರಾಮುಖ್ಯ ಸ್ಥಾನವನ್ನು ಬೇರೆ ಯಾವುದಕ್ಕಾದರೂ ಕೊಟ್ಟಿದ್ದರೆ ಅದೇ ವಿಗ್ರಹವಾಗುತ್ತದೆ. ನಮ್ಮ ಜೀವಿತಗಳಲ್ಲಿ ದೇವರು ಮೊದಲ ಸ್ಥಾನವನ್ನು ಹೊಂದಬೇಕು.

**ಯೆಹೆಜ್ಕೇಲ 14:3 ನರಪುತ್ರನೇ, ಇವರು ತಮ್ಮ ಬೊಂಬೆಗಳನ್ನು ಮನಸ್ಸಿನಲ್ಲಿ ನೆಲೆಗೊಳಿಸಿ ತಮಗೆ ಪಾಪಕಾರಿಯಾದ ವಿಘ್ನವನ್ನು ತಮ್ಮ ಮುಂದೆ ಇಟ್ಟುಕೊಂಡಿದ್ದಾರೆ; ಇಂಥವರಿಗೆ ನಾನು ದೈವೋತ್ತರವನ್ನು ದಯಪಾಲಿಸುವದು ಯುಕ್ತವೋ? ಎಂದಿಗೂ ಅಲ್ಲ.**

✳ *ಕದಿಯುವುದು, ಕೊಲೆ ಮಾಡುವುದು, ವ್ಯಭಿಚಾರ ಮಾಡುವುದು*
*ಸುಳ್ಳು ಸಾಕ್ಷಿ ಹೇಳುವುದು, ಇತರೆ ದೇವರುಗಳನ್ನು ಸೇವಿಸುವುದು*

**ಯೆರೆಮೀಯ 7:9,10,13,16 ನೀವು ಕಳವು ಕೊಲೆ ಹಾದರಗಳನ್ನು ಮಾಡಿ ಸುಳ್ಳುಸಾಕ್ಷಿ ಹೇಳಿ ಬಾಳನಿಗೆ ಹೋಮವನ್ನರ್ಪಿಸಿ ಕಂಡುಕೇಳದ ಅನ್ಯದೇವತೆಗಳನ್ನು ಹಿಂಬಾಲಿಸಿದ ಮೇಲೆ ನನ್ನ ಹೆಸರುಗೊಂಡಿರುವ ಈ ಆಲಯಕ್ಕೆ ಬಂದು ನನ್ನ ಸನ್ನಿಧಿಯಲ್ಲಿ ನಿಂತು - ನಮಗೆ ಪರಿಹಾರವಾಯಿತು ಎಂದು ಹೇಳಿ ಈ ಎಲ್ಲಾ ಅಸಹ್ಯಕಾರ್ಯಗಳನ್ನು ಇನ್ನೂ ನಡಿಸುವದಕ್ಕೆ ಅವಕಾಶ ಮಾಡಿಕೊಳ್ಳುವಿರೋ?**

**ನಾನು ಸಾವಕಾಶ ಮಾಡದೆ ನಿಮಗೆ ನುಡಿದ ಮಾತುಗಳನ್ನು ನೀವು ಕೇಳದೆ ನಿಮ್ಮನ್ನು ಕರೆದ ನನಗೆ ಉತ್ತರಕೊಡದೆ ಈ ಕೃತ್ಯಗಳನ್ನೆಲ್ಲಾ ನಡಿಸಿದ ಕಾರಣ... ಶೀಲೋವಿಗೆ ತಂದ ಗತಿಯನ್ನೇ ಈಗ ತರುವೆನು.**

**ನೀನಂತು ಈ ಜನರಿಗೋಸ್ಕರ ಬೇಡಿಕೊಳ್ಳಬೇಡ, ಇವರಿಗಾಗಿ ಮೊರೆಯಿಡಬೇಡ, ಪ್ರಾರ್ಥಿಸಬೇಡ, ನನಗೆ ವಿಜ್ಞಾಪಿಸಲೂಬೇಡ, ನಾನು ಕೇಳಲೊಲ್ಲೆ.**

ದೇವರು ಯೆರೆಮೀಯನಿಗೆ ಏನು ಹೇಳಿದರು? ಬೇಡಿಕೊಳ್ಳಬೇಡ, ಇವರಿಗಾಗಿ ಮೊರೆಯಿಡಬೇಡ, ಪ್ರಾರ್ಥಿಸಬೇಡ, ನನಗೆ ವಿಜ್ಞಾಪಿಸಲೂಬೇಡ, ನಾನು ಕೇಳುವುದಿಲ್ಲ.

"ಇವರಿಗಾಗಿ" ಎಂಬುದು ಕಳವು ಕೊಲೆ ವ್ಯಭಿಚಾರಗಳನ್ನು ಮಾಡಿ ಸುಳ್ಳುಸಾಕ್ಷಿ ಹೇಳಿ ನಂತರ ದೇವರ ಆಲಯಕ್ಕೆ ಬಂದು "ಇವುಗಳನ್ನು ಮಾಡುವದಕ್ಕೆ ನಮಗೆ ಬಿಡುಗಡೆಯಾಗಿದೆ" ಎಂದು ಹೇಳುವವರನ್ನು ಉಲ್ಲೇಖಿಸುತ್ತದೆ. ಕೆಲವರು ಹೇಳುವಂತೆ - "ನಾವು ಕೃಪೆಯ ಅಡಿಯಲ್ಲಿ ಇದ್ದೇವೆ ಧರ್ಮಶಾಸ್ತ್ರದ ಅಡಿಯಲ್ಲಿ ಇಲ್ಲ, ಹಾಗಾಗಿ ನಾವು ಪಾಪ ಮಾಡಬಹುದು, ದೇವರು ನಮ್ಮನ್ನು ಕ್ಷಮಿಸುತ್ತಾನೆ". "ಇದು ತಪ್ಪೆಂದು ಸತ್ಯವೇದ ಹೇಳುತ್ತದೆ. ಅದು ನನಗೂ ಗೊತ್ತು. ಆದರೆ ದೇವರು ನನ್ನ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುತ್ತಾನೆ" - ಎಂದು ಹೇಳುವದಕ್ಕೆ ಇದು ಸಮವಲ್ಲವೇ.

* *ಗರ್ವದಿಂದಿರುವುದು*

ದೇವರು ಗರ್ವಿಷ್ಟರ ಪ್ರಾರ್ಥನೆಯನ್ನು ಕೇಳುವುದಿಲ್ಲ.

**ಯೋಬ 35:12,13 ಇಂಥಾ ಸಂದರ್ಭದಲ್ಲಿ ಅವರು ದುಷ್ಟರ ಸೊಕ್ಕಿನಿಂದ ನೊಂದು ಗೋಳಾಡುವರು, ಆದರೂ ಆತನು ಉತ್ತರವನ್ನು ದಯಪಾಲಿಸುವದಿಲ್ಲ. ದೇವರು ಪೊಳ್ಳುಮಾತಿಗೆ ಕಿವಿಗೊಡುವದೇ ಇಲ್ಲ, ಸರ್ವಶಕ್ತನು ಅದನ್ನು ಎಂದಿಗೂ ಲಕ್ಷಿಸುವದಿಲ್ಲ.**

**ಯಾಕೋಬ 4:6b ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ**

* *ಕಿವಿಮುಚ್ಚಿಕೊಳ್ಳುವದು*

ಬಡವರ ಮೊರೆಗೆ ಕಿವಿಮುಚ್ಚಿಕೊಳ್ಳುವವರ ಪ್ರಾರ್ಥನೆಯನ್ನು ದೇವರು ಕೇಳುವುದಿಲ್ಲ.

**ಜ್ಞಾನೋಕ್ತಿ 21:13 ಬಡವನ ಮೊರೆಗೆ ಕಿವಿಮುಚ್ಚಿಕೊಳ್ಳುವವನು ತಾನೇ ಮೊರೆಯಿಡುವಾಗ ಯಾರೂ ಉತ್ತರಕೊಡರು.**

* *ಅವಿಧೇಯರಾಗುವುದು*

ದೇವರ ವಾಕ್ಯಕ್ಕೆ ಅವಿಧೇಯರಾಗುವುದು ಬಹಳ ಗಂಭೀರವಾದ ವಿಷಯ. ಅದು ಮಾಟಮಂತ್ರಕ್ಕೆ ಸಮಾನ ಎಂದು ಯೆಶಾಯನು ಹೇಳುತ್ತಾನೆ. ದೇವರು ಅವಿಧೇಯರ ಪ್ರಾರ್ಥನೆಯನ್ನು ಕೇಳುವುದಿಲ್ಲ.

**1 ಸಮುವೇಲ 15:23a ಅವಿಧೇಯತ್ವವು ಮಂತ್ರತಂತ್ರಗಳಷ್ಟೇ ಕೆಟ್ಟದ್ದಾಗಿರುವದು; ಹಟವು ಮಿಥ್ಯಾಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರುವದು.**

**ಜೆಕರ್ಯ 7:11-13 ನಿಮ್ಮ ಪಿತೃಗಳಾದರೋ ಗಮನಿಸಲೊಲ್ಲದೆ ಹೆಗಲುಕೊಡದೆ ಹೋದರು. ಕೇಳಬಾರದೆಂದು ಕಿವಿಮಂದ ಮಾಡಿಕೊಂಡರು. ಧರ್ಮೋಪದೇಶವನ್ನೂ ಸೇನಾಧೀಶ್ವರ ಯೆಹೋವನು ಪೂರ್ವಕಾಲದ ಪ್ರವಾದಿಗಳ ಮೂಲಕ ತನ್ನ ಆತ್ಮನಿಂದ ಹೇಳಿಸಿದ ಮಾತುಗಳನ್ನೂ ಕೇಳಬಾರದೆಂದು ತಮ್ಮ ಹೃದಯಗಳನ್ನು ವಜ್ರದಷ್ಟು**

**ಕಠಿನಪಡಿಸಿಕೊಂಡರು; ಆದಕಾರಣ ಸೇನಾಧೀಶ್ವರ ಯೆಹೋವನಿಂದ ಅತಿರೌದ್ರವು ಅವರ ಮೇಲೆ ಬಿತ್ತು.**

**ಆಗ ಸೇನಾಧೀಶ್ವರ ಯೆಹೋವನು ಇಂತೆಂದನು - ನಾನು ಕೂಗಿದರೂ ಅವರು ಹೇಗೆ ಕೇಳಲಿಲ್ಲವೋ ಹಾಗೆ ಅವರು ಕೂಗಿದರೂ ನಾನು ಕೇಳುವದಿಲ್ಲ.**

**ಜ್ಞಾನೋಕ್ತಿ 28:9 ಧರ್ಮೋಪದೇಶಕ್ಕೆ ಕಿವಿಗೊಡದವನು ಮಾಡುವ**

**ದೇವಪ್ರಾರ್ಥನೆಯೂ ಅಸಹ್ಯ.**

✱ *ಹೆಂಡತಿಗೆ ಗೌರವ ಕೊಡದಿರುವುದು*

ಗಂಡ ಹೆಂಡತಿಯ ನಡುವೆ ಇರುವ ಸಂಬಂಧವು ಯೇಸುವಿನ ಹಾಗೂ ಸಭೆಯ (ಕ್ರಿಸ್ತನ ದೇಹದ) ನಡುವೆ ಇರುವ ಸಂಬಂಧದ ಒಂದು ಇಹಲೋಕದ ಚಿತ್ರಣವಾಗಿದೆ. ಈ ಸಂಬಂಧವು ಸರಿ ಇಲ್ಲದಿದ್ದಾಗ ನಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಾಗುವುದು ಎಂದು ಪೇತ್ರನು ಹೇಳಿದನು.

**1 ಪೇತ್ರ 3:7 ಅದೇ ರೀತಿಯಾಗಿ ಪುರುಷರೇ, ಸ್ತ್ರೀಯು ಪುರುಷನಿಗಿಂತ ಬಲಹೀನಳೆಂಬದನ್ನು ಜ್ಞಾಪಕಮಾಡಿಕೊಂಡು ನಿಮ್ಮ ಹೆಂಡತಿಯರ ಸಂಗಡ ವಿವೇಕದಿಂದ ಒಗತನ ಮಾಡಿರಿ. ಅವರು ಜೀವವರಕ್ಕೆ ನಿಮ್ಮೊಂದಿಗೆ ಬಾಧ್ಯರಾಗಿದ್ದಾರೆಂದು ತಿಳಿದು ಅವರಿಗೆ ಮಾನವನ್ನು ಸಲ್ಲಿಸಿರಿ. ಹೀಗೆ ನಡೆದರೆ ನಿಮ್ಮ ಪ್ರಾರ್ಥನೆಗಳಿಗೆ ಅಡ್ಡಿಯಿರುವದಿಲ್ಲ.**

**ಸಮಾರೋಪವಾಗಿ**

ನಮ್ಮ ಮನಸ್ಸಾಕ್ಷಿಯು ಯಾವುದಾದರೂ ವಿಷಯದಲ್ಲಿ ನಮ್ಮನ್ನು ದೋಷಿ ಎಂದು ಹೇಳುವುದಾದರೆ ಅದು ಕ್ಷಮಿಸಲ್ಪಡುವವರೆಗೆ ನಾವು ಧೈರ್ಯದಿಂದ ಪ್ರಾರ್ಥನೆ ಮಾಡಲು ಆಗುವುದಿಲ್ಲ. ಶುದ್ಧ ಮನಸ್ಸಾಕ್ಷಿ ಮತ್ತು ನಂಬಿಕೆ ಒಂದಕ್ಕೊಂದು ಕೂಡಿದೆ, ಅದನ್ನು ಬೇರ್ಪಡಿಸಲು ಸಾಧ್ಯವಿಲ್ಲ.

**1 ತಿಮೊಥಿ 1:5 ಶುದ್ಧ ಹೃದಯ ಒಳ್ಳೇಮನಸ್ಸಾಕ್ಷಿ ನಿಷ್ಕಪಟವಾದ ನಂಬಿಕೆ ಎಂಬಿವುಗಳಿಂದ ಹುಟ್ಟಿದ ಪ್ರೀತಿಯೇ ದೇವವಾಕ್ಯೋಪದೇಶದ ಗುರಿಯಾಗಿದೆ.**

## ಪ್ರಾರ್ಥನೆ ಮಾಡಲು ಉತ್ತೇಜನ ಹೊಂದಿರಿ

**ಪ್ರಾರ್ಥಿಸಿರಿ ಎಂದು ಯೇಸು ಹೇಳಿದರು**

ಯೇಸು ನಾವು ಪ್ರಾರ್ಥಿಸಬೇಕೆಂದು ಆಜ್ಞಾಪಿಸಿದರು ಮತ್ತು ನಾವು ಸತತವಾಗಿ ಪ್ರಾರ್ಥಿಸಬೇಕೆಂದು ನಮ್ಮನ್ನು ಪ್ರೋತ್ಸಾಹಿಸಿದರು.

**ಮತ್ತಾಯ 9:38 ಆದದರಿಂದ ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ ಎಂದು ಹೇಳಿದನು.**

**ಲೂಕ 18:1 ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು.**

**ಲೂಕ 21:36 ಆದರೆ ಬರುವದಕ್ಕಿರುವ ಇವೆಲ್ಲವುಗಳೊಳಗಿಂದ ತಪ್ಪಿಸಿಕೊಳ್ಳುವದಕ್ಕೂ ಮನುಷ್ಯಕುಮಾರನ ಮುಂದೆ ನಿಂತುಕೊಳ್ಳುವದಕ್ಕೂ**

**ನೀವು ಪೂರ್ಣ ಶಕ್ತರಾಗುವಂತೆ ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ ಅಂದನು.**

ಅಪೋಸ್ತಲರು ಪ್ರಾರ್ಥನೆಯನ್ನು ಪ್ರೋತ್ಸಾಹಪಡಿಸಿದರು

ಅಪೋಸ್ತಲರು ಪ್ರಾರ್ಥನೆ ಮತ್ತು ದೇವರ ವಾಕ್ಯದ ಬೋಧನೆಯಲ್ಲಿ ನಿರತರಾಗಿರಲು ಅನುಕೂಲವಾಗುವಂತೆ ಸಭೆಯಲ್ಲಿ ಮೊಟ್ಟ ಮೊದಲ ಬಾರಿಗೆ ಹಿರಿಯರನ್ನು ನೇಮಕ ಮಾಡಲಾಯಿತು.

**ಅ.ಕೃ. 6:4 ನಾವಾದರೋ ಪ್ರಾರ್ಥನೆಯನ್ನೂ ವಾಕ್ಯೋಪದೇಶವನ್ನೂ ಮಾಡುವದರಲ್ಲಿ ನಿರತರಾಗಿರುವೆವು ಎಂದು ಹೇಳಿದರು**

ನಾವು ಯಾವಾಗಲೂ ಪವಿತ್ರತೆಯಲ್ಲಿ, ಕೋಪವಿಲ್ಲದೆ ಅಥವಾ ಸಂದೇಹವಿಲ್ಲದೆ ಪ್ರಾರ್ಥಿಸಬೇಕೆಂಬುದೇ ತನ್ನ ಬಯಕೆಯೆಂದು ಅಪೋಸ್ತಲನಾದ ಪೌಲನು ಹೇಳಿದನು.

**1 ತಿಮೊಥಿ 2:8 ಹೀಗಿರಲಾಗಿ ಪುರುಷರು ಎಲ್ಲಾ ಸ್ಥಳಗಳಲ್ಲಿ ಕೋಪವೂ ವಾಗ್ವಾದವೂ ಇಲ್ಲದವರಾಗಿ ಭಕ್ತಿಪೂರ್ವಕವಾಗಿಯೇ ಕೈಗಳನ್ನೆತ್ತಿ ಪ್ರಾರ್ಥಿಸಬೇಕೆಂದು ಅಪೇಕ್ಷಿಸುತ್ತೇನೆ.**

**ಎಫೆಸ 6:18 ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರ್ರಿ.**

ನಾವು ಒಬ್ಬರಿಗೊಬ್ಬರು ಪ್ರಾರ್ಥಿಸಬೇಕೆಂದು ಯಾಕೋಬನು ಹೇಳಿದನು.

**ಯಾಕೋಬ 5:16 ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ.**

ನಾವು ಪ್ರಾರ್ಥನೆಯಲ್ಲಿ ಎಚ್ಚರವಾಗಿದ್ದು ಗಂಭೀರವಾಗಿರಬೇಕೆಂದು ಪೇತ್ರನು ಹೇಳುತ್ತಾನೆ.

**1 ಪೇತ್ರ 4:7 ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ; ಆದದರಿಂದ ನೀವು ಜಿತೇಂದ್ರಿಯರಾಗಿಯೂ ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತರಾಗಿಯೂ ಇರ್ರಿ.**

ದಾವೀದನು ಪ್ರಾರ್ಥಿಸಿದನು

ಕೀರ್ತನೆಯ ಪುಸ್ತಕವು ದಾವೀದನ ಪ್ರಾರ್ಥನೆಗಳಿಂದ ತುಂಬಿದೆ. ದಾವೀದನು ತನ್ನನ್ನೇ ಪ್ರಾರ್ಥನೆಗೆ ಒಪ್ಪಿಸಿದನು ಎಂದು ಹೇಳುತ್ತಾನೆ.

**ಕೀರ್ತನೆ 109:4b ನಾನಾದರೋ ನಿನಗೆ ಮೊರೆಯಿಡುತ್ತೇನೆ.**

**ಪ್ರಾರ್ಥನೆಯು ದೇವರನ್ನು ಮಹಿಮೆಪಡಿಸುತ್ತದೆ**

ಯೇಸು ಹೇಳಿದರು,
**ಯೋಹಾನ 14:13 ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು.**

**ಪ್ರಾರ್ಥನೆಯು ದೇವರನ್ನು ಸಂತೋಷಪಡಿಸುತ್ತದೆ**

**ಜ್ಞಾನೋಕ್ತಿ 15:8 ದುಷ್ಟರ ಯಜ್ಞ ಯೆಹೋವನಿಗೆ ಅಸಹ್ಯ; ಶಿಷ್ಟರ ಬಿನ್ನಪ ಆತನಿಗೆ ಒಪ್ಪಿತ.**

**ದೇವರು ಪ್ರಾರ್ಥನೆಯನ್ನು ಕೇಳುತ್ತಾರೆ ಮತ್ತು ಉತ್ತರಿಸುತ್ತಾರೆ**

**ಕೀರ್ತನೆ 65:2 ಪ್ರಾರ್ಥನೆಯನ್ನು ಕೇಳುವವನೇ, ನರರೆಲ್ಲರು ನಿನ್ನ ಬಳಿಗೆ ಬರುವರು.**
**ಕೀರ್ತನೆ 86:7 ನೀನು ಸದುತ್ತರವನ್ನು ದಯಪಾಲಿಸುವಿಯೆಂದು ನಂಬಿ ನನ್ನ ಇಕ್ಕಟ್ಟಿನ ದಿನದಲ್ಲಿ ನಿನ್ನನ್ನೇ ಕರೆಯುವೆನು.**

**1 ಪೇತ್ರ 3:12a ಯಾಕಂದರೆ ಕರ್ತನು ನೀತಿವಂತರನ್ನು ಕಟಾಕ್ಷಿಸುತ್ತಾನೆ, ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ. ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ ಎಂದು ಬರೆದದೆ.**

**☝ ಸಾರಾಂಶ - ಪ್ರಾರ್ಥನೆಯು ಫಲವನ್ನು ತರುತ್ತದೆ**

ನಾವು ಸತತವಾಗಿ ಪ್ರಾರ್ಥಿಸಬೇಕೆಂದು ಯೇಸು ಹೇಳಿದರು. ನಾವು ಹಗಲು ರಾತ್ರಿ ಪ್ರಾರ್ಥಿಸಬೇಕು. ನಾವು ಪ್ರಾರ್ಥನೆಯಲ್ಲಿ ಕೇಳಬೇಕು, ಹುಡುಕಬೇಕು ಮತ್ತು ತಟ್ಟಬೇಕು. ನಾವು ಜನರ ಮುಂದೆ ತೋರಿಕೆಗಾಗಿ ಪ್ರಾರ್ಥಿಸದೆ ಏಕಾಂತವಾಗಿ ಪ್ರಾರ್ಥಿಸಬೇಕೆಂದು ಅವರು ಹೇಳಿದರು. ನಾವು ಪ್ರಾರ್ಥಿಸಿದ್ದನ್ನೇ ಪದೇ ಪದೇ ಪ್ರಾರ್ಥಿಸಬಾರದು ಯಾಕೆಂದರೆ ದೇವರು ನಮ್ಮ ಅಗತ್ಯತೆಗಳನ್ನು ಬಲ್ಲವನಾಗಿರುವುದರಿಂದ ಹಾಗೆ ಪ್ರಾರ್ಥಿಸುವುದು ನಂಬಿಕೆಯ ಪ್ರಾರ್ಥನೆಯಲ್ಲ.

ನಾವು ಇತರರನ್ನು ಕ್ಷಮಿಸದಿದ್ದರೆ ನಾವು ಅವರೊಂದಿಗೆ ಸರಿಯಾಗುವವರೆಗೆ ಪ್ರಾರ್ಥಿಸಬಾರದು ಎಂದು ಯೇಸು ಸ್ಪಷ್ಟವಾಗಿ ಹೇಳಿದ್ದಾರೆ. ನಮ್ಮನ್ನು ನೋಯಿಸಿದವರನ್ನು ನಾವು ಕ್ಷಮಿಸಬೇಕು ಮತ್ತು ನಾವು ಇತರರನ್ನು ನೋಯಿಸಿರುವುದಾದರೆ ಅಥವಾ ನಮ್ಮ ಬಗ್ಗೆ ಯಾರಿಗಾದರೂ ನಕಾರಾತ್ಮಕ ಭಾವನೆಗಳಿದ್ದರೆ ಅವರ ಬಳಿ ಕ್ಷಮಾಪಣೆಯನ್ನು ಕೇಳಬೇಕು.

ಅಪನಂಬಿಕೆ, ತಿಳುವಳಿಕೆಯ ಕೊರತೆ, ಗರ್ವ, ಪಾಪ, ಕಳ್ಳತನ, ಕೊಲೆ, ವ್ಯಭಿಚಾರ, ಸುಳ್ಳು ಸಾಕ್ಷಿ ಮತ್ತು ಇತರೆ ದೇವರುಗಳನ್ನು ಸೇವಿಸುವುದು - ಎಲ್ಲಾ ಪಾಪಗಳು - ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗದಂತೆ ಮಾಡುತ್ತವೆ.

ನಾವು ಪ್ರಾರ್ಥನೆಯಲ್ಲಿ ದೇವರ ಮುಂದೆ ಬರುವಾಗ, ನಾವು ಅವರ ಸನ್ನಿಧಾನಕ್ಕೆ ಮುಕ್ತವಾಗಿ ಬರದಂತೆ ನಮ್ಮನ್ನು ತಡೆಯುವ ವಿಷಯಗಳನ್ನು ಮೊದಲು

ತೆಗೆದುಹಾಕಬೇಕು. ಆಗ ನಮ್ಮ ಪ್ರಾರ್ಥನೆಗಳನ್ನು ನಂಬಿಕೆಯಿಂದ ಮಾಡಲು ಸಾಧ್ಯ.

**ವಿಮರ್ಶೆಗಾಗಿ ಪ್ರಶ್ನೆಗಳು**

1. ಪರಿಣಾಮಕಾರಿಯಾಗಿ ಪ್ರಾರ್ಥಿಸಲು ಮೂರು ಹಂತಗಳನ್ನು ಪಟ್ಟಿ ಮಾಡಿ ಮತ್ತು ವಿವರಿಸಿ.

3. ನಮ್ಮ ಪ್ರಾರ್ಥನೆಗೆ ದೇವರು ಉತ್ತರಿಸದಂತೆ ತಡೆಯುವ ಯಾವುದೇ ಅಡ್ಡಿ ಅಥವಾ ಅಡೆತಡೆಗಳು ನಮ್ಮ ಜೀವನದಲ್ಲಿ ಇದೆಯೇ ಎಂದು ನಾವು ಹೇಗೆ ತಿಳಿಯಬಹುದು?

2. ನಿಮ್ಮ ಜೀವನದಲ್ಲಿ ಸಮಸ್ಯೆಯಾಗಿರುವ ಪ್ರಾರ್ಥನೆಗೆ ಯಾವುದೇ ಅಡ್ಡಿ ಅಥವಾ ಅಡೆತಡೆಗಳನ್ನು ಹೆಸರಿಸಿ. ಅವುಗಳ ಬಗ್ಗೆ ಏನು ಮಾಡಲು ನೀವು ಯೋಜಿಸಿದ್ದೀರಿ?

*ಪಾಠ ಆರು*

# ಒಂದು ಯಶಸ್ವಿಯಾದ ಪ್ರಾರ್ಥನಾ ಜೀವಿತವನ್ನು ಪ್ರವೇಶಿಸುವುದು

**ಪೀಠಿಕೆ**

ದೇವರ ವಾಕ್ಯವನ್ನು ಅಧ್ಯಯನ ಮಾಡುವುದಕ್ಕೆ ಹೆಚ್ಚು ಒತ್ತು ಕೊಡುವ ಸಭೆಯಲ್ಲಿ ನಾವು ಬೆಳೆದೆವು. ಪೌಲನು ತಿಮೊಥಿಗೆ ನೀಡಿದ ಉಪದೇಶಗಳನ್ನು ನಾವು ಅನೇಕ ಬಾರಿ ಕೇಳಿದೆವು.

**2 ತಿಮೊಥಿ 2:15 ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗದ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ ಉಪದೇಶಿಸುವವನೂ ಆಗಿರು.**

ನಾವು ದೇವರ ಸಮ್ಮತಿಯನ್ನು ಪಡೆದುಕೊಳ್ಳುವುದಕ್ಕಾಗಿ ಅಧ್ಯಯನ ಮಾಡಿದೆವು ಮತ್ತು ಆ ವರ್ಷಗಳಲ್ಲಿ ಕಲಿತಂತಹ ಎಲ್ಲಾ ವಿಷಯಗಳಿಗಾಗಿ ದೇವರಿಗೆ ವಂದನೆಯನ್ನು ಸಲ್ಲಿಸುತ್ತೇವೆ. ಆದರೆ ನಿಜವಾದ ಅಧ್ಯಯನವೆಂದರೆ, ಅದು ಕೇವಲ ನಮ್ಮ ಸ್ವಾಭಾವಿಕ ಮನಸ್ಸಿನಿಂದ ಕಲಿಯುವುದಕ್ಕೆ ಮಾತ್ರ ಮೀಸಲಾದದ್ದಲ್ಲ ಬದಲಾಗಿ ಪರಿಶುದ್ಧಾತ್ಮನು ಸಹ ನಮ್ಮ ಬೋಧಕನಾಗಿರಲು ಅವಕಾಶ ಮಾಡಿಕೊಡಬೇಕು ಮತ್ತು ಅವರ ಪ್ರಕಟನೆಯನ್ನು ಅವಲಂಬಿಸಬೇಕು ಎಂಬುದು ನಮಗೆ ತಿಳಿದಿರಲಿಲ್ಲ.

✱ *ಎಲುಬುಗಳು*

ದೇವರ ವಾಕ್ಯದ ತಿಳುವಳಿಕೆಯನ್ನು ದೇಹದ ಮೂಳೆಯ ರಚನೆಗೆ ಹೋಲಿಸಬಹುದು. ನಾವು ಒಂದು ಉದ್ದೇಶದೊಂದಿಗೆ ಬದುಕುವಂತೆ ಮತ್ತು ಚಲಿಸುವಂತೆ ಅವು ಮಾಡುತ್ತವೆ.

ನಾವು ಎಂದಿಗೂ ಹೆಚ್ಚಾಗಿ ಕೇಳದ ಇನ್ನೊಂದು ವಚನವಿದೆ. ನಾವು ಏನನ್ನಾದರೂ ಕಲಿಯುವಾಗ ಅದನ್ನು ಕಾರ್ಯರೂಪಕ್ಕೆ ತರಬೇಕು. ನಾವು ಅದನ್ನು ಮಾಡಬೇಕು!ನಾವು ದೇವರ ವಾಕ್ಯವನ್ನು ಕೇಳುವವರು ಮಾತ್ರವಾಗಿರದೆ ಅದನ್ನು ಮಾಡುವವರಾಗಿರಬೇಕು ಎಂದು ಅಪೋಸ್ತಲನಾದ ಯಾಕೋಬನು ಹೇಳುತ್ತಾನೆ.

**ಯಾಕೋಬ 1:22-24 ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ. 23ಯಾವನಾದರೂ ವಾಕ್ಯವನ್ನು ಕೇಳುವವನಾದರೂ ಅದರ ಪ್ರಕಾರ ನಡೆಯದಿದ್ದರೆ ಅವನು ಕನ್ನಡಿಯಲ್ಲಿ ತನ್ನ ಹುಟ್ಟು ಮುಖವನ್ನು ನೋಡಿದ ಮನುಷ್ಯನಂತಿರುವನು; 24ಇವನು ತನ್ನನ್ನು ನೋಡಿಕೊಂಡು ಹೋಗಿ ತಾನು ಹೀಗಿದ್ದೇನೆಂಬದನ್ನು ಆ ಕ್ಷಣವೇ ಮರೆತುಬಿಡುವನು. 25ಆದರೆ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯಕೊಟ್ಟು**

**ನೋಡಿ ಇನ್ನೂ ನೋಡುತ್ತಲೇ ಇರುವವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು.**

✱ *ಶರೀರ*

ದೇಹದ ಸಾದೃಶ್ಯವನ್ನು ಇನ್ನೂ ಮುಂದುವರೆಸುವುದಾದರೆ, ಮನುಷ್ಯನ ಸ್ವಚಿತ್ತ ಮತ್ತು ಭಾವನೆಗಳು ಮಾಂಸ ಮತ್ತು ರಕ್ತದಂತೆ ಇರುತ್ತವೆ. ಪ್ರೀತಿ, ಸಂತೋಷ, ಶಾಂತಿ, ಧೀರ್ಘಶಾಂತಿ, ದಯೆ, ಒಳ್ಳೆಯತನ, ನಂಬಿಗಸ್ತಿಕೆ, ಸೌಮ್ಯತೆ, ಸ್ವಯಂ ನಿಯಂತ್ರಣ ಇದೇ ಕ್ಷೇತ್ರದ ಅಡಿಯಲ್ಲಿ ಬರುತ್ತವೆ.

✱ *ಆತ್ಮ*

ಜೀವಂತ ದೇಹದ ಇನ್ನೊಂದು ಭಾಗವಿದೆ, ಅದು ಮನುಷ್ಯನ ಆತ್ಮವಾಗಿದೆ. ಪ್ರಾರ್ಥನೆಯು ಆರಾಧನೆಯ ವ್ಯಕ್ತಪಡಿಸುವಿಕೆಯಾಗಿದೆ ಮತ್ತು ಆತ್ಮದಲ್ಲಿ ಆರಾಧಿಸಬೇಕು.

**ಯೋಹಾನ 4:23,24  ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. 24ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.**

## ನಾವು ಹೇಗೆ ಪ್ರಾರ್ಥಿಸಬೇಕು

ಪ್ರಾರ್ಥನೆಯ ಬಗ್ಗೆ ಅಧ್ಯಯನ ಮಾಡುವುದು ಮಾತ್ರ ಸಾಕಾಗುವುದಿಲ್ಲ, ಅದನ್ನು ನಾವು ಮಾಡಬೇಕು. ನಾವು ತಂದೆಯಾದ ದೇವರಿಗೆ, ಆತನ ಮಗನ ಮುಖಾಂತರವಾಗಿ, ಪರಿಶುದ್ಧಾತ್ಮನ ಶಕ್ತಿಯಲ್ಲಿ ಪ್ರಾರ್ಥಿಸಬೇಕು.

### ತಂದೆಯಾದ ದೇವರಿಗೆ

✱ *ನಮಗೆ ಮಾದರಿಯಾಗಿರುವ ಯೇಸು*

ಯೇಸು ದೇವರನ್ನು ತಂದೆಯೆಂದು ಕರೆದು ಪ್ರಾರ್ಥಿಸಿದರು.

**ಯೋಹಾನ 17:1  ಯೇಸು ಈ ಮಾತುಗಳನ್ನಾಡಿದ ಮೇಲೆ ಆಕಾಶದ ಕಡೆಗೆ ಕಣ್ಣೆತ್ತಿ ಹೇಳಿದ್ದೇನಂದರೆ - ತಂದೆಯೇ, ಕಾಲ ಬಂದದೆ; ನಿನ್ನ ಮಗನನ್ನು ಮಹಿಮೆಪಡಿಸು, ಆಗ ಮಗನು ನಿನ್ನನ್ನು ಮಹಿಮೆಪಡಿಸುವದಕ್ಕಾಗುವದು.**

ಅವರು ದೇವರನ್ನು ಪರಿಶುದ್ಧನಾದ ತಂದೆಯೇ ಎಂದು ಕರೆದರು.

**ಯೋಹಾನ 17:11  ಇನ್ನು ನಾನು ಲೋಕದಲ್ಲಿ ಇರುವದಿಲ್ಲ, ಇವರು ಲೋಕದಲ್ಲಿ ಇರುತ್ತಾರೆ, ನಾನು ನಿನ್ನ ಬಳಿಗೆ ಬರುತ್ತೇನೆ. ಪವಿತ್ರನಾದ ತಂದೆಯೇ, ನಾವು ಒಂದಾಗಿರುವ ಹಾಗೆ ಇವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು.**

ಅವರು ದೇವರನ್ನು ನೀತಿವಂತನಾದ ತಂದೆಯೇ ಎಂದು ಕರೆದರು.

**ಯೋಹಾನ 17:25 ನೀತಿಸ್ವರೂಪನಾದ ತಂದೆಯೇ, ಲೋಕವಂತೂ ನಿನ್ನನ್ನು ತಿಳಿಯಲಿಲ್ಲ, ಆದರೆ ನಾನು ನಿನ್ನನ್ನು ತಿಳಿದಿದ್ದೇನೆ; ಮತ್ತು ಇವರು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವದಾಗಿ ತಿಳುಕೊಂಡಿದ್ದಾರೆ.**

ನಾವು ದೇವರನ್ನು ಪರಲೋಕದಲ್ಲಿರುವ ನಮ್ಮ ತಂದೆಯೇ ಎಂದು ಕರೆಯಬೇಕೆಂದು ಯೇಸು ಹೇಳಿದರು.

**ಮತ್ತಾಯ 6:9 ಆದದರಿಂದ ನೀವು ಹೀಗೆ ಪ್ರಾರ್ಥನೆಮಾಡತಕ್ಕದ್ದು -**

**ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು**

**ಎಣಿಸಲ್ಪಡಲಿ.**

* *ಇತರರು ಯೇಸುವಿಗೆ ಪ್ರಾರ್ಥಿಸಿದರು*

ತಂದೆಯಾದ ದೇವರಿಗೆ ಪ್ರಾರ್ಥಿಸಲು ನಮಗೆ ನಿರ್ದೇಶನವನ್ನೂ ಹಾಗೂ ಪ್ರೋತ್ಸಾಹವನ್ನು ನೀಡಲಾಗಿದ್ದರೂ ಇದು ಎಲ್ಲಾ ಸಮಯದಲ್ಲೂ ಅನುಸರಿಸಲೇಬೇಕಾದ ನೇಮನಿಷ್ಠೆಯಲ್ಲ. ಇದು ನಮಗೆ ಹೇಗೆ ಗೊತ್ತೆಂದರೆ, ಸ್ತೆಫನನು ಸಾವಿನ ಕ್ಷಣದಲ್ಲಿ ಯೇಸುವಿಗೆ ಪ್ರಾರ್ಥಿಸಿದನು.

**ಅ. ಕೃ. 7:59 ಅವರು ಸ್ತೆಫನನ ಮೇಲೆ ಕಲ್ಲೆಸೆಯುತ್ತಾ ಇರಲು ಅವನು ಕರ್ತನ ಹೆಸರನ್ನು ಹೇಳಿ - ಯೇಸುಸ್ವಾಮಿಯೇ, ನನ್ನಾತ್ಮವನ್ನು ಸೇರಿಸಿಕೋ ಎಂದು ಪ್ರಾರ್ಥಿಸಿ …**

ಕೆಲವು ಜನರು ತಮ್ಮ ಇಹಲೋಕದ ತಂದೆಗಳಿಂದ ಅತ್ಯಂತ ನೋವಿಗೆ ಒಳಗಾಗಿರುವುದರಿಂದ ತಮ್ಮ ಪರಲೋಕದ ತಂದೆಗೆ ಪ್ರಾರ್ಥಿಸಲು ಹೆದರುತ್ತಾರೆ. ದೇವರು ಅದನ್ನು ಅರ್ಥಮಾಡಿಕೊಳ್ಳುತ್ತಾರೆ. ಅವರು ಯೇಸುವಿನೊಂದಿಗಿರುವ ತಮ್ಮ ಸಂಬಂಧದಲ್ಲಿ ಬೆಳೆದಂತೆ ಆತನು ಅವರಿಗೆ ನಿಜವಾದ ಪ್ರೀತಿಸುವ ಪರಲೋಕದ ತಂದೆಯನ್ನು ಪ್ರಕಟಪಡಿಸುತ್ತಾನೆ ಮತ್ತು ಅವರನ್ನು ಆತನೊಂದಿಗೆ ಸಂಬಂಧಕ್ಕೆ ತರುತ್ತಾನೆ.

**ಯೇಸುವಿನ ಹೆಸರಿನಲ್ಲಿ**

ನಾವು ಯೇಸುವಿನ ಹೆಸರು ಹಿಡಿದು ದೇವರಿಗೆ ಪ್ರಾರ್ಥಿಸಬೇಕು. ದೇವರ ಮುಂದೆ ನಮಗಿರುವ ಸ್ಥಾನವು ಯೇಸುವಿನಲ್ಲಿದೆ. ನಾವು ಯೇಸುವಿನಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ.

**ಯೋಹಾನ 15:16 ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ. ಹೀಗಿರಲಾಗಿ ನನ್ನ ಹೆಸರಿನಲ್ಲಿ ತಂದೆಯನ್ನು ಏನೇನು ಬೇಡಿಕೊಳ್ಳುವಿರೋ ಅದನ್ನು ಆತನು ನಿಮಗೆ ಕೊಡುವನು.**

### ಪರಿಶುದ್ಧಾತ್ಮನ ಮುಖಾಂತರ

ಪರಿಶುದ್ಧಾತ್ಮನಿಗೆ ಯಾರಾದರೂ ಪ್ರಾರ್ಥಿಸಿದ ಸನ್ನಿವೇಶದ ಬಗ್ಗೆ ಸತ್ಯವೇದದಲ್ಲಿ ಎಲ್ಲಿಯೂ ದಾಖಲಾಗಿಲ್ಲ. ಆದರೂ ಪರಿಶುದ್ಧಾತ್ಮನ ಮುಖಾಂತರವಾಗಿಯೂ ಅವರ ಮೇಲೆ ಅವಲಂಬಿಸಿದವರಾಗಿಯೂ ಪ್ರಾರ್ಥಿಸಬೇಕು.

**ರೋಮಾ 8:26 ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.**

ನಾವು ಯೇಸುವಿನ ಮೂಲಕವಾಘಿ ಪರಿಶುದ್ಧಾತ್ಮನಿಂದ ತಂದೆಯಾದ ದೇವರ ಬಳಿಗೆ ಬರುವದಕ್ಕೆ ಅವಕಾಶವಿದೆ ಎಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ.

**ಎಫೆಸ 2:18 ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗವಾಯಿತು.**

### ಸರಿಯಾದ ಮನೋಭಾವನೆಗಳೊಂದಿಗೆ ದೇವರ ಸಮೀಪಕ್ಕೆ ಬರುವುದು

#### ಪಶ್ಚಾತ್ತಾಪ

ಕರ್ತನ ಪ್ರಾರ್ಥನೆಯಲ್ಲಿ "ನಮ್ಮ ಪಾಪಗಳನ್ನು ಕ್ಷಮಿಸು" ಎಂದು ನಾವು ಪ್ರಾರ್ಥಿಸಬೇಕೆಂದು ಯೇಸು ಬೋಧಿಸಿದರು. ಇದು ಯಾವಾಗಲೂ ನಮ್ಮ ಪ್ರಾರ್ಥನಾ ಜೀವಿತದ ಭಾಗವಾಗಿರಬೇಕು.

* *ದಾವೀದನು*

ಅರಸನಾದ ದಾವೀದನು ಪಾಪ ಮಾಡಿದನು ಮತ್ತು ಅವನು ನಮಗೆ ಪಶ್ಚಾತ್ತಾಪದ ಮಾದರಿಯಾದನು.

**ಕೀರ್ತನೆ 51:1 ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು; ಕರುಣಾನಿಧಿಯೇ, ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು.**

* *ದಾರಿ ತಪ್ಪಿದ ಮಗ*

ಪಶ್ಚಾತ್ತಾಪದ ಅತ್ಯಂತ ಸುಂದರವಾದ ಕಥೆಗಳಲ್ಲಿ ಒಂದು ದಾರಿ ತಪ್ಪಿದ ಮಗನ ಕಥೆ. ಅವನು ತನ್ನ ತಂದೆಯ ವಿರುದ್ಧ ದಂಗೆ ಎದ್ದು ತನ್ನದೇ ಆದ ದಾರಿಯಲ್ಲಿ ಹೋಗಿದ್ದನು. ಅಂತಿಮವಾಗಿ ಹಸಿವಿನಿಂದ ಬಳಲುತ್ತಿರುವ ಸಮಯದಲ್ಲಿ, ಅವನು ತನ್ನ ತಂದೆಯ ಬಳಿಗೆ ಮರಳಲು ಮತ್ತು ಅವನ ಕ್ಷಮೆ ಕೇಳಲು ನಿರ್ಧರಿಸಿದನು. ಅವನು ತೀರ್ಮಾನಿಸಿದಂತೆಯೇ ಮಾಡಿದನು. ಅವನ ತಂದೆಯು ಚಾಚಿದ ಪ್ರೀತಿಯ ತೋಳುಗಳಿಂದ ಅವನನ್ನು ಎದುರುಗೊಂಡಾಗ, “ಓ, ನನ್ನ ಕೆಟ್ಟ ಅವಸ್ಥೆ ತಂದೆಗೆ ಗೊತ್ತಾದ ಹಾಗೆ ಕಾಣುತ್ತಿಲ್ಲ. ನಾನು ಇಷ್ಟೊಂದು ತಗ್ಗಿಸಿಕೊಳ್ಳುವುದು ಏಕೆ. ಹೇಗಿದ್ದರೂ ನನ್ನ ತಂದೆ ಅರ್ಥಮಾಡಿಕೊಳ್ಳುತ್ತಾನೆ ...” ಎಂದು ಅವನು ತನಗೆ ತಾನು ಹೇಳಿಕೊಳ್ಳಲಿಲ್ಲ. ನಾವು ದೇವರಿಂದ ದೂರವಾದರೆ, ನಾವು ಕ್ಷಮೆಯನ್ನು ಬೇಡುತ್ತಾ ದೀನತೆಯಿಂದ ಆತನ ಬಳಿಗೆ ಬರಬೇಕು.

**ಲೂಕ 15:18-23 ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ - ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪ ಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; 19ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು ಅಂದುಕೊಂಡು ಎದ್ದು ತನ್ನ ತಂದೆಯ ಕಡೆಗೆ ಬಂದನು.**

**20ಅವನು ಇನ್ನೂ ದೂರದಲ್ಲಿರುವಾಗ ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು.**

**21ಆದರೂ ಮಗನು ಅವನಿಗೆ - ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳಲು**

**22ತಂದೆಯು ತನ್ನ ಆಳುಗಳಿಗೆ - ಶ್ರೇಷ್ಠವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ ಕೈಗೆ ಉಂಗುರವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ; ಹಬ್ಬಮಾಡೋಣ, ಉಲ್ಲಾಸ ಪಡೋಣ.**

ನಾವು ನಮ್ಮ ಪರಲೋಕದ ತಂದೆಯ ಬಳಿ ಬಂದು "ನಾನು ಪಾಪ ಮಾಡಿದ್ದೇನೆ" ಎಂದು ಹೇಳಿದರೆ ಸಾಕು ಅವರು ಚಾಚಿದ ಕರಗಳಿಂದ ನಮ್ಮನ್ನು ಸ್ವೀಕರಿಸುತ್ತಾರೆ.

## ದೀನತೆ

ದೀನತೆ ಎಂದರೆ ದೇವರಿಗೆ ಗೌರವಯುತವಾದ ಅಧೀನತೆ ತೋರಿಸುವುದಾಗಿದೆ. ದೀನತೆಯ ಅರ್ಥ ನಾವು ದೇವರ ಅಧಿಕಾರ, ಜ್ಞಾನ ಮತ್ತು ತೀರ್ಪನ್ನು ಅಂಗೀಕರಿಸಿದವರಾಗಿ ದೇವರ ಅಭಿಪ್ರಾಯ, ಇಚ್ಛೆಗಳಿಗೆ ಮತ್ತು ತೀರ್ಮಾನಕ್ಕೆ ಗೌರವದಿಂದ ಅಧೀನರಾಗುವುದಾಗಿದೆ. ನಾವು ಆತನ ಹೆಸರಿನಲ್ಲಿ ಬರುತ್ತಿದ್ದೇವೆ ಎಂದು ತಿಳಿಯುವುದು - ನಮ್ಮ ಸ್ವಂತ ಜ್ಞಾನ, ಸ್ಥಾನ ಅಥವಾ ಸಾಮರ್ಥ್ಯಗಳಲ್ಲಿ ಅಲ್ಲ.

**2 ಪೂರ್ವ. 7:14 ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು.**

ನಾವು ಪ್ರಾರ್ಥನೆಯಲ್ಲಿ ದೇವರ ಮುಂದೆ ನಮ್ಮನ್ನು ತಗ್ಗಿಸಿಕೊಳ್ಳಬೇಕು.

## ವಿಧೇಯತೆ

ನಮ್ಮ ಪ್ರಾರ್ಥನೆಗಳು ಉತ್ತರಿಸಲ್ಪಡುವುದರ ಹಿಂದೆ ವಿಧೇಯತೆಯ ಬಹಳ ಪಾತ್ರವಿದೆ ಎಂದು ಯೋಹಾನನು ಅತ್ಯಂತ ಸ್ಪಷ್ಟವಾಗಿ ಹೇಳಿದನು.

**1 ಯೋಹಾನ 3:22** ನಾವು ಆತನ ಆಜ್ಞೆಗಳನ್ನು ಕೈಕೊಂಡು ಆತನ ಎಣಿಕೆಯಲ್ಲಿ ಮೆಚ್ಚಿಕೆಯಾದ ಕಾರ್ಯಗಳನ್ನು ಮಾಡುವವರಾಗಿರುವದರಿಂದ ಏನು ಬೇಡಿಕೊಂಡರೂ ಆತನಿಂದ ಹೊಂದುವೆವು.

ನಂಬಿಕೆ

ಯೇಸು ಜನರಿಗೆ ದೇವರ ವಾಕ್ಯವನ್ನು ಸಾರುತ್ತಿದ್ದಾಗ ಜನರು ನಂಬಿಕೆಯುಳ್ಳವರಾಗಿರಬೇಕೆಂದು ಯಾವಾಗಲೂ ಪ್ರೋತ್ಸಾಹಿಸಿದರು.

**ಮಾರ್ಕ 11:22-24** ಯೇಸು ಹೇಳಿದ್ದೇನಂದರೆ - ನಿಮಗೆ ದೇವರಲ್ಲಿ ನಂಬಿಕೆಯಿರಲಿ. ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ - ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು. ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.

**ಮತ್ತಾಯ 8:13** ಬಳಿಕ ಯೇಸು ಆ ಶತಾಧಿಪತಿಗೆ - ನೀನು ನಂಬಿದಂತೆ ನಿನಗಾಗಲಿ, ಹೋಗು ಎಂದು ಹೇಳಿದನು. ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು.

**ಮತ್ತಾಯ 9:28** ಆತನು ಮನೆಗೆ ಬಂದಾಗ ಆ ಕುರುಡರು ಆತನ ಬಳಿಗೆ ಬಂದರು. ಯೇಸು ಅವರನ್ನು - ನಾನು ಇದನ್ನು ಮಾಡಬಲ್ಲೆನೆಂಬದನ್ನು ನಂಬುತ್ತೀರೋ ಎಂದು ಕೇಳಿದ್ದಕ್ಕೆ ಅವರು - ಹೌದು, ಸ್ವಾಮೀ, ನಂಬುತ್ತೇವೆ ಅಂದರು.

**ಮಾರ್ಕ 5:36** ಅವರು ಆಡಿದ ಮಾತನ್ನು ಯೇಸು ಲಕ್ಷ್ಯಮಾಡದೆ ಸಭಾಮಂದಿರದ ಅಧಿಕಾರಿಗೆ - ಅಂಜಬೇಡ, ನಂಬಿಕೆ ಮಾತ್ರ ಇರಲಿ ಎಂದು ಹೇಳಿದನು.

**ಮಾರ್ಕ 9:23** ಯೇಸು ಅವನಿಗೆ - ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು ಎಂದು ಹೇಳಿದನು.

**ಲೂಕ 8:48** ಆತನು ಆಕೆಗೆ - ಮಗಳೇ ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು ಎಂದು ಹೇಳಿದನು.

ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ.

**ಇಬ್ರಿಯರಿಗೆ 11:6** ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ.

## ಕ್ರಿಸ್ತನಲ್ಲಿ ನೆಲೆಸಿರಬೇಕು

ಯಶಸ್ವಿಯಾದ ಪ್ರಾರ್ಥನೆಗಳನ್ನು ಮಾಡಲು ಮೊದಲ ಹೆಜ್ಜೆ ಕ್ರಿಸ್ತನಲ್ಲಿ ನೆಲೆಯಾಗಿರುವುದು. ನಾವು ಆತನೊಂದಿಗೆ ನೆಲೆಸಿರುವುದನ್ನು ಜೀವನ ಶೈಲಿಯಾಗಿ ಬೆಳೆಸಿಕೊಳ್ಳಬೇಕು. ನಾವು ಇದನ್ನು ಮಾಡುವುದಾದರೆ ಪ್ರಾರ್ಥನೆಯಲ್ಲಿ ಏನನ್ನು ಬೇಡಿಕೊಂಡರೂ ಅದು ನೆರವೇರುವುದು ಎಂದು ಯೇಸು ಹೇಳಿದರು.

**ಯೋಹಾನ 15:7  ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು**

ಯೆಹೋವನು ನಮ್ಮ ಇಷ್ಟಾರ್ಥಗಳನ್ನು ನೆರವೇರಿಸುವನು - ಆದರೆ ನಾವು ಮೊದಲು ಯೆಹೋವನಲ್ಲಿ ಆನಂದಿಸಬೇಕು ಎಂದು ದಾವೀದನು ಹೇಳಿದನು. ನಾವು ಇದನ್ನು ಮಾಡುವಾಗ, ಆತನ ಸ್ವರೂಪಕ್ಕೆ ಬದಲಾಗುತ್ತೇವೆ, ನಮ್ಮ ಆಸೆಗಳು ಆತನ ಗುಣಕ್ಕೆ ಅನುಗುಣವಾಗಿರುತ್ತವೆ.

**ಕೀರ್ತನೆ 37:4  ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ ಇಷ್ಟಾರ್ಥಗಳನ್ನು ನೆರವೇರಿಸುವನು.**

## ದೇವರ ಚಿತ್ತಕ್ಕೆ ಅನುಸಾರವಾಗಿ ಬೇಡಿಕೊಳ್ಳಬೇಕು

ನಾವು ದೇವರ ಚಿತ್ತಾನುಸಾರವಾಗಿ ಏನು ಬೇಡಿಕೊಂಡರೂ ಅದು ನಮಗೆ ಸಿಕ್ಕುವುದು ಎಂಬ ಅದ್ಭುತವಾದ ವಾಗ್ದಾನವನ್ನು ಅಪೋಸ್ತಲನಾದ ಯೋಹಾನನು ನಮಗೆ ಕೊಟ್ಟನು.

**1 ಯೋಹಾನ 5:14,15   ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ.**

ನಾವು ದೇವರ ಚಿತ್ತಕ್ಕೆ ವಿರುದ್ಧವಾಗಿ ಆಗಲಿ, ಸ್ವಾರ್ಥಕ್ಕಾಗಿ ಆಗಲಿ ಅಥವಾ ನಮ್ಮ ಸ್ವ-ಇಚ್ಛೆಗಳನ್ನು ಪೂರೈಸಿಕೊಳ್ಳುವ ಶಾರೀರಿಕ ಉದ್ದೇಶಗಳಿಗಾಗಿ ಆಗಲಿ ಮಾಡುವ ಪ್ರಾರ್ಥನೆಗಳಿಗೆ ಉತ್ತರ ದೊರೆಯುವುದಿಲ್ಲವೆಂದು ಯಾಕೋಬನು ಬರೆದನು.

**ಯಾಕೋಬ 4:3**  ನೀವು ಬೇಡಿದರೂ ಬೇಡಿದ್ದನ್ನು ನಿಮ್ಮ ಭೋಗಗಳಿಗಾಗಿ ಉಪಯೋಗಿಸಬೇಕೆಂಬ ದುರಭಿಪ್ರಾಯಪಟ್ಟು ಬೇಡಿಕೊಳ್ಳುವದರಿಂದ ನಿಮಗೆ ದೊರೆಯುವದಿಲ್ಲ.

ಈ ಸಂದರ್ಭದಲ್ಲಿ, ದೇವರ ಚಿತ್ತಾನುಸಾರವಾದದ್ದು ಯಾವುದು ಎಂಬುದನ್ನು ನಾವು ಹೇಗೆ ತಿಳಿದುಕೊಳ್ಳಬಹುದು? ಎಂಬ ಪ್ರಶ್ನೆ ಉದ್ಭವವಾಗುತ್ತದೆ.

**ಯಾಕೋಬ 1:5 ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ.**

* *ದಾವೀದನು ದೇವರ ಚಿತ್ತವನ್ನು ಪ್ರಾರ್ಥಿಸಿದನು*

ದಾವೀದನು ತನ್ನ ಮನೆಗಾಗಿ ಪ್ರಾರ್ಥಿಸಿದನು - ಮನೆ ಕಟ್ಟಡಕ್ಕಾಗಿ ಅಲ್ಲ ಬದಲಾಗಿ ತನ್ನ ಸಂತತಿಗೋಸ್ಕರ ಪ್ರಾರ್ಥಿಸಿದನು. ಅವನು ದೇವರಿಂದ ಕೇಳಿದ್ದ ಮಾತುಗಳ ಮೇಲೆ ತನ್ನ ಪ್ರಾರ್ಥನೆಯನ್ನು ಆಧರಿಸಿದನು. ಅವನು ಆ ವಾಕ್ಯಗಳಿಗೆ ಅನುಸಾರವಾಗಿ ಪ್ರಾರ್ಥಿಸಿದನು.

**2 ಸಮುವೇಲ 7:26-29 ಸೇನಾಧೀಶ್ವರನಾದ ಯೆಹೋವನು, ಇಸ್ರಾಯೇಲ್‌ದೇವರು ಎಂಬ ನಿನ್ನ ನಾಮಧೇಯಗಳಿಗೆ ಸದಾಕಾಲವೂ ಮಹಿಮೆಯುಂಟಾಗಲಿ. ನಿನ್ನ ಸೇವಕನಾದ ದಾವೀದನ ಮನೆಯು ನಿನ್ನ ಸನ್ನಿಧಿಯಲ್ಲಿ ಸ್ಥಿರವಾಗಿರಲಿ.**

**27ಸೇನಾಧೀಶ್ವರನಾದ ಯೆಹೋವನೇ, ಇಸ್ರಾಯೇಲ್‌ದೇವರೇ, ನೀನು ನಿನ್ನ ಸೇವಕನಿಗೆ - ನಾನು ನಿನಗೋಸ್ಕರ ಮನೆ ಕಟ್ಟುವೆನೆಂದು ವಾಗ್ದಾನ ಮಾಡಿದ್ದರಿಂದ ಅವನು ಈ ಪ್ರಕಾರ ನಿನ್ನನ್ನು ಪ್ರಾರ್ಥಿಸುವದಕ್ಕೆ ಧೈರ್ಯಗೊಂಡನು.**

**28ಕರ್ತನೇ, ಯೆಹೋವನೇ, ನಿನ್ನ ಸೇವಕನಿಗೆ ಈ ಶ್ರೇಷ್ಠ ವಾಗ್ದಾನಗಳನ್ನು ಮಾಡಿದ ನೀನು ದೇವರಾಗಿರುತ್ತೀ; ನಿನ್ನ ವಾಕ್ಯವು ಸತ್ಯವಾದದ್ದು.**

**29ಆದದರಿಂದ ನೀನು ನಿನ್ನ ಸೇವಕನ ಮನೆಯನ್ನು ಆಶೀರ್ವದಿಸು; ಸದಾಕಾಲವೂ ಅದರ ಮೇಲೆ ನಿನ್ನ ಕಟಾಕ್ಷವಿರಲಿ. ಕರ್ತನೇ, ಯೆಹೋವನೇ, ವಾಗ್ದಾನಮಾಡಿದವನು ನೀನೇ. ನಿನ್ನ ಆಶೀರ್ವಾದದಿಂದ ನಿನ್ನ ಸೇವಕನ ಮನೆಯಲ್ಲಿ ನಿತ್ಯ ಸೌಭಾಗ್ಯವಿರಲಿ ಎಂದನು.**

ದಾವೀದನು ದೇವರ ಚಿತ್ತವನ್ನು ಕೇಳಿದನು, ನಂತರ ಅವನು ತನ್ನ ಆತ್ಮದಲ್ಲಿ ಅದನ್ನು ಧೃಢೀಕರಿಸುತ್ತಾ ಅದನ್ನೇ ತಿರುಗಿ ದೇವರಿಗೆ ಪ್ರಾರ್ಥಿಸಿದನು. ಅದು ವಾಸ್ತವವಾಗಲಿ ಎಂಬ ಉದ್ದೇಶದಿಂದ ಹಾಗೆ ಬಾಯಿಂದ ಅರಿಕೆ ಮಾಡಿದನು.

* *ಎಲೀಷನು ಸತ್ತ ಮಗುವನ್ನು ಎಬ್ಬಿಸಿದನು*

ಈ ಕೆಳಗಿನ ಉತ್ತರಿಸಲ್ಪಟ್ಟ ಪ್ರಾರ್ಥನೆಯು ಬಹಳ ಕುತೂಹಲಕಾರಿಯಾಗಿದೆ. ಆದರೆ ಅದರಲ್ಲಿರುವ ಅನೇಕ ಅಂಶಗಳ ಬಗ್ಗೆ ಹೆಚ್ಚು ಬೆಳಕು ಚೆಲ್ಲಲಾಗಿಲ್ಲ.

**2 ಅರಸುಗಳು 4:32-35 ಎಲೀಷನು ಆ ಮನೆಯನ್ನು ಮುಟ್ಟಿದಾಗ ಸತ್ತ ಹುಡುಗನು ತನ್ನ ಮಂಚದ ಮೇಲೆ ಇಡಲ್ಪಟ್ಟಿರುವದನ್ನು ಕಂಡು ಯಾರೂ ಒಳಗೆ ಬಾರದಂತೆ ಆ ಕೋಣೆಯ ಬಾಗಲನ್ನು ಮುಚ್ಚಿಕೊಂಡು ಯೆಹೋವನನ್ನು ಪ್ರಾರ್ಥಿಸಿದನು.**

**34ಅನಂತರ ಹುಡುಗನ ಮೇಲೆ ಬೋರ್ಲಬಿದ್ದು ತನ್ನ ಬಾಯಿ ಕಣ್ಣು ಕೈಗಳನ್ನು ಅವನ ಬಾಯಿ ಕಣ್ಣು ಕೈಗಳಿಗೆ ಮುಟ್ಟಿಸಿದ್ದರಿಂದ ಹುಡುಗನ ದೇಹವು ಬೆಚ್ಚಗಾಯಿತು.**

**35ಆಮೇಲೆ ಹುಡುಗನನ್ನು ಬಿಟ್ಟು ಎದ್ದು ಮನೆಯಲ್ಲಿ ತುಸುಹೊತ್ತು ಅತ್ತಿತ್ತ ಅಡ್ಡಾಡಿ ತಿರಿಗಿ ಅವನ ಮೇಲೆ ಬೋರ್ಲ ಬೀಳಲು ಹುಡುಗನು ಏಳು ಸಾರಿ ಸೀತು ಕಣ್ದೆರೆದನು.**

ಎಲೀಷನು ಅಗತ್ಯತೆಯ ಬಗ್ಗೆ ಕೇಳಿದನು, ಅದಕ್ಕಾಗಿ ಪ್ರಾರ್ಥಿಸಿದನು, ನಂತರ ಮಗುವಿನ ಬಳಿಗೆ ಹೋದನು. ಅವನು ದೇವರು ಹೇಳಿದ್ದನ್ನೇ ಮಾಡಿರಬೇಕು ಯಾಕೆಂದರೆ ಅವನು ಸ್ವಾಭಾವಿಕವಾದದ್ದನ್ನು ಮಾಡಲಿಲ್ಲ. ಅವನು ಸತ್ತ ಮಗುವಿನ ಮೇಲೆ ಬಿದ್ದನು. ಮಗುವಿನ ದೇಹವು ಬೆಚ್ಚಗಾಯಿತು, ಆದರೆ ಅದ್ಭುತವು ಇನ್ನೂ ಪೂರ್ಣಗೊಂಡಿರಲಿಲ್ಲ.

ನಂತರ ಎಲೀಷನು ಕೋಣೆಯ ಹೊರಗೆ ಬಂದು ಅತ್ತಿತ್ತ ಅಡ್ಡಾಡಿದನು. ಬಹುಶಃ ಅವನು ಪ್ರಾರ್ಥಿಸುತ್ತಿದ್ದಿರಬಹುದು - ಬಹುಶಃ ದೇವರಿಂದ ಕೇಳಿದ್ದನ್ನು ಧೃಢಪಡಿಸಿಕೊಳ್ಳುತ್ತಿದ್ದಿರಬೇಕು - ಬಹುಶಃ ಆತ್ಮಿಕವಾದ ಹೋರಾಟದಲ್ಲಿ ಕಾರ್ಯನಿರತನಾಗಿದ್ದಿರಬಹುದು - ನಂತರ ಅವನು ಮಗುವಿನ ಬಳಿಗೆ ಹಿಂತಿರುಗಿ ಎರಡನೆಯ ಬಾರಿ ಅದರ ಮೇಲೆ ಬಿದ್ದನು, ಆಗ ಮಗುವು ತನ್ನ ಕಣ್ಣುಗಳನ್ನು ತೆರೆಯಿತು.

ಎಲೀಷನು "ಹೀಗೆ ನಡೆದಿದ್ದರೆ ಚೆನ್ನಾಗಿತ್ತು" ಎಂದು ಹೇಳುತ್ತಾ ಕ್ರಿಯೆ ಮಾಡಲಿಲ್ಲ. ಅವನು ಮೊದಲು ಪ್ರಾರ್ಥಿಸಿದ ನಂತರ ತನಗೆ ಸಿಕ್ಕ ಪ್ರಕಟನೆಗೆ ಅನುಗುಣವಾಗಿ ಕಾರ್ಯಮಾಡಿದನು.

### ಸತ್ಯದಲ್ಲಿ ಪ್ರಾರ್ಥಿಸಿರಿ

ಸತ್ಯದ ಆತ್ಮನು ನಮ್ಮನ್ನು ನಡೆಸುವನು ಮತ್ತು ನಮಗೆ ಹೇಳುವನು ಎಂದು ಯೋಹಾನನು ಹೇಳಿದನು.

**ಯೋಹಾನ 16:13 ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು.**

ನಾವು ಪ್ರಾರ್ಥಿಸುವಾಗ ದೇವರೊಂದಿಗೂ ನಮ್ಮೊಂದಿಗೂ ಯಥಾರ್ಥವಾಗಿರಬೇಕು. 'ಸತ್ಯ' ಎಂಬ ಪದಕ್ಕೆ ಹಿಬ್ರೂ ಭಾಷೆಯಲ್ಲಿ ಸ್ಥಿರತೆ ಮತ್ತು ನಂಬಲರ್ಹತೆ ಎಂಬ ಅರ್ಥವೂ ಸಹ ಬರುತ್ತದೆ.

**ಕೀರ್ತನೆ 145:18 ಯೆಹೋವನಿಗೆ ಮೊರೆಯಿಡುವವರು ಯಥಾರ್ಥವಾಗಿ ಮೊರೆಯಿಡುವದಾದರೆ ಆತನು ಹತ್ತಿರವಾಗಿಯೇ ಇದ್ದಾನೆ.**

### ಆತ್ಮದಲ್ಲಿ ಪ್ರಾರ್ಥಿಸಿರಿ

**ಪಾಠ ಒಂದರಲ್ಲಿ, ನಾವು ಪ್ರಾರ್ಥನೆಯ ಎರಡು ಭಾಷೆಗಳನ್ನು ಕಲಿತೆವು - ಆತ್ಮದಿಂದಲೂ ಬುದ್ಧಿಯಿಂದಲೂ ಪ್ರಾರ್ಥಿಸುವುದು. ಅಪೋಸ್ತಲನಾದ ಯೂದನು ಹೀಗೆ ಬರೆದನು,**

**ಯೂದನು 1:20 ಪ್ರಿಯರೇ, ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತ ನಂಬಿಕೆಯನ್ನು ಆಧಾರಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆಮಾಡುತ್ತಾ...**

**ಅಪೋಸ್ತಲನಾದ ಪೌಲನು ಎಫೆಸದವರಿಗೆ ಬರೆದ ಪತ್ರಿಕೆ 6:17-19 ರಲ್ಲಿ *ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ... ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ* ಎಂದು ಬರೆದನು.**

**ನಾವು ಎಂದಿಗೂ ಪರಿಶುದ್ಧಾತ್ಮನ ಸಹಾಯವನ್ನು ಮೊದಲು ಹುಡುಕದೆ ಪ್ರಾರ್ಥಿಸಲು ಹೋಗಬಾರದು.**

**ರೋಮಾ 8:26 ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.**

**ಒಂದು ಸನ್ನಿವೇಶದಲ್ಲಿ ದೇವರು ತಾನು ಏನನ್ನು ಮಾಡಲು ಬಯಸುತ್ತಾರೆ ಎಂಬುದನ್ನು ದೇವರ ವಾಕ್ಯದ ಮೂಲಕವಾಗಲಿ ಅಥವಾ ಪರಿಶುದ್ಧಾತ್ಮನ ಮೂಲಕವಾಗಲಿ ನಮಗೆ ಧೃಢಪಡಿಸುವಾಗ ನಮ್ಮೊಳಗೆ ನಂಬಿಕೆಯು ಹುಟ್ಟುತ್ತದೆ. ಆಗ ನಾವು ಧೈರ್ಯದಿಂದಲೂ ಭರವಸೆಯಿಂದಲೂ ಪ್ರಾರ್ಥಿಸಲು ಸಾಧ್ಯವಾಗುತ್ತದೆ.**

**ಎಫೆಸ 3:12 ದೇವರ ಸಾನ್ನಿಧ್ಯ ಸೇರುವದಕ್ಕೆ ನಮಗಿರುವ ಭರವಸವುಳ್ಳ ಧೈರ್ಯವು ಕ್ರಿಸ್ತನಲ್ಲಿ ಇಟ್ಟಿರುವ ನಂಬಿಕೆಯ ಮೂಲಕ ಆತನಲ್ಲಿಯೇ ನಮಗೆ ಉಂಟಾಯಿತು.**

## ಶ್ರದ್ಧೆಯುಳ್ಳವರಾಗಿಯೂ ತೀವ್ರವಾಗಿಯೂ ಪ್ರಾರ್ಥಿಸಿರಿ

ದೇವರು ನಾವು ಉಗುರುಬೆಚ್ಚಗಿರುವುದನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ. ನೀವು ಬೆಚ್ಚಗಾಗಿಯೂ ಅಥವಾ ತಣ್ಣಗಾಗಿಯೂ ಇದ್ದಿದ್ದರೆ ಒಳ್ಳೇದು ಎಂದು ದೇವರು ಹೇಳುತ್ತಾರೆ. "ದೇವರೇ, ನೀನು ಹೇಳಿದ್ದೇ ಯಾವುದೋ ಒಂದು ನಡೆಯಲಿ. ನೀನು ಬಯಸಿದ್ದೇ ಯಾವುದೋ ಒಂದು ಆಗಲಿ..." ಎಂದು ಹೇಳುವುದನ್ನು ನಿಲ್ಲಿಸಬೇಕು.

**ಪ್ರಕಟನೆ 3:14-16 ಲವೊದಿಕೀಯದಲ್ಲಿರುವ ಸಭೆಯ ದೂತನಿಗೆ ಬರೆ -**

**ಆಮೆನ್ ಎಂಬಾತನು ಅಂದರೆ ನಂಬತಕ್ಕ ಸತ್ಯಸಾಕ್ಷಿಯೂ ದೇವರ ಸೃಷ್ಟಿಗೆ ಮೂಲನೂ ಆಗಿರುವಾತನು ಹೇಳುವದೇನಂದರೆ - 15ನಿನ್ನ ಕೃತ್ಯಗಳನ್ನು ಬಲ್ಲೆನು; ನೀನು ತಣ್ಣಗೂ ಅಲ್ಲ, ಬೆಚ್ಚಗೂ ಅಲ್ಲ; ನೀನು ತಣ್ಣಗಾಗಲಿ ಬೆಚ್ಚಗಾಗಲಿ ಇದ್ದರೆ ಒಳ್ಳೇದಾಗಿತ್ತು. 16ನೀನು ಬೆಚ್ಚಗೂ ಇಲ್ಲದೆ ತಣ್ಣಗೂ ಇಲ್ಲದೆ ಉಗುರುಬೆಚ್ಚಗಿರುವದರಿಂದ ನಿನ್ನನ್ನು ನನ್ನ ಬಾಯೊಳಗಿಂದ ಕಾರುವೆನು.**

ನಾವು ದೇವರನ್ನು ತಿಳಿದುಕೊಳ್ಳಬೇಕು, ದೇವರ ವಾಕ್ಯವನ್ನು ತಿಳಿದುಕೊಳ್ಳಬೇಕು, ಅವರು ನಮಗಾಗಿ ಕೊಟ್ಟಿರುವುದನ್ನು ತಿಳಿದುಕೊಳ್ಳಬೇಕು ಮತ್ತು ಅದನ್ನು ಬೆನ್ನಟ್ಟಿ

ಹೋಗಬೇಕು. ದೇವರು ಇಸ್ರಾಯೇಲರಿಗೆ ವಾಗ್ದಾನ ದೇಶವನ್ನು ಕೊಟ್ಟರು, ಆದರೆ ಅವರು ಅದನ್ನು ವಶಪಡಿಸಿಕೊಳ್ಳಲು ಹೋರಾಡಬೇಕಾಯಿತು.

**ಬಿಟ್ಟುಬಿಡದೆ ಪ್ರಾರ್ಥಿಸಿರಿ**

ಪೌಲನು ಥೆಸಲೋನಿಕದ ಸಭೆಗೆ ಪತ್ರವನ್ನು ಬರೆದಾಗ ಅವರು ಎಡಬಿಡದೆ ಪ್ರಾರ್ಥಿಸಬೇಕೆಂದು ಹೇಳಿದನು. ಇದು ಹೇಗೆ ಸಾಧ್ಯ? ನಾವು ಮತ್ತು ನೀವು ನಮ್ಮ ದೈನಂದಿನ ಜವಾಬ್ದಾರಿಗಳನ್ನು ನೆರವೇರಿಸುವುದರ ಜೊತೆಗೆ ಎಡಬಿಡದೆ ಪ್ರಾರ್ಥಿಸಲು ಹೇಗೆ ಸಾಧ್ಯ?

ನಾವು ಪ್ರಾರ್ಥನೆಯನ್ನು ಜೀವನಶೈಲಿಯಾಗಿ ಬೆಳೆಸಿಕೊಳ್ಳುವಾಗ ಇದು ಸಾಧ್ಯ - ಪ್ರತಿದಿನ ಪ್ರಾರ್ಥನೆಗಾಗಿ ಸಮಯ ಗೊತ್ತು ಮಾಡಬೇಕು, ನಂತರ ನಮ್ಮ ಆತ್ಮವು ದಿನವೆಲ್ಲಾ ಪ್ರಾರ್ಥನೆಯಲ್ಲಿ ನಿರತವಾಗುವಂತೆ ಮಾಡಬೇಕು. ೧ ಥೆಸಲೋನಿಕ

**1 ಥೆಸಲೋನಿಕ 5:17 ಎಡೆಬಿಡದೆ ಪ್ರಾರ್ಥನೆಮಾಡಿರಿ**

✳ *ನಿರಂತರವಾಗಿ*

ಪೇತ್ರನು ಸೆರೆಮನೆಗೆ ಹಾಕಲ್ಪಟ್ಟಾಗ ಉಳಿದ ವಿಶ್ವಾಸಿಗಳು ಅವನಿಗಾಗಿ ನಿರಂತರವಾಗಿ ಪ್ರಾರ್ಥಿಸಿದರು. "ಏನೇ ಆದ್ರೂ ದೇವರು ನಿಯಂತ್ರಣದಲ್ಲಿದ್ದಾನೆ" ಎಂದು ಅವರು ಸುಮ್ಮನೆ ಕುಳಿತುಕೊಳ್ಳಲಿಲ್ಲ.

**ಅ.ಕೃ. 12:5 ಪೇತ್ರನು ಸೆರೆಮನೆಯೊಳಗೆ ಕಾವಲಲ್ಲಿದ್ದಾಗ ಸಭೆಯವರು ಆತನಿಗೋಸ್ಕರ ಆಸಕ್ತಿಯಿಂದ ದೇವರಿಗೆ ಪ್ರಾರ್ಥನೆಮಾಡುತ್ತಿದ್ದರು.**

✳ *ಪರಿಣಾಮಕಾರಿಯಾಗಿ, ಉತ್ಸಾಹದಿಂದ, ಶ್ರದ್ಧೆಯಿಂದ*

ನಾವು ಒಬ್ಬರಿಗೊಬ್ಬರು ಪ್ರಾರ್ಥಿಸಬೇಕೆಂದು ಯಾಕೋಬನು ಹೇಳಿದಾಗ ಎಲೀಯನ ಉತ್ಸಾಹಭರಿತ ಪ್ರಾರ್ಥನೆಯನ್ನು ನಮಗೆ ನೆನಪಿಸುತ್ತಾನೆ.

**ಯಾಕೋಬ 5:16,17 ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ. ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ.**

✳ *ಹೋರಾಡಿ*

ನಿಶ್ಚಯವಾಗಲೂ ಪೌಲನಿಗೆ ದೊಡ್ಡ ಸೇವೆಯು ಇದ್ದುದ್ದರಿಂದಲೂ ಮತ್ತು ಬರೆಯಲು ಅನೇಕ ಪುಸ್ತಕಗಳಿದ್ದದ್ದರಿಂದಲೂ ಪ್ರಾರ್ಥನೆಗೆ ಸಮಯವನ್ನು ಬೇರ್ಪಡಿಸುವುದು ಅಷ್ಟು ಸುಲಭವಾಗಿರಲಿಲ್ಲ. ಆದರೂ ಅವನು ಈ ಪದಗಳನ್ನು ಬರೆಯುತ್ತಾನೆ -

**ಕೊಲೊಸ್ಸೆ 4:12** **ಕ್ರಿಸ್ತಯೇಸುವಿನ ದಾಸನಾಗಿರುವ ನಿಮ್ಮ ಊರಿನವನಾದ ಎಪಫ್ರನು ನಿಮಗೆ ವಂದನೆ ಹೇಳುತ್ತಾನೆ, ನೀವು ಪ್ರವೀಣರಾಗಿಯೂ ದೇವರ ಎಲ್ಲಾ ಚಿತ್ತದಲ್ಲಿ ಪೂರ್ಣ**

**ನಿಶ್ಚಯವುಳ್ಳವರಾಗಿರಬೇಕೆಂದು ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆಯಲ್ಲಿ ಹೋರಾಡುತ್ತಾನೆ.**

✱ *ಬಲವಾಗಿ*

ಪೌಲನು "ಬಲವಾಗಿ" ಎಂಬ ಪದವನ್ನು ಬಳಸಿದನು. ಬಲವಾಗಿ ಅಂದರೆ ಹೋರಾಡುವುದು, ಅಧಿಕವಾದ ಶ್ರಮ ಮತ್ತು ಶಕ್ತಿಯನ್ನು ಬಳಸುವುದು. ಪೌಲನಿಗೆ "ಒಂದು ವೇಳೆ ನಿನ್ನ ಚಿತ್ತವಿದ್ದರೆ ಆಗಲಿ" ಎಂಬ ಉಗುರುಬೆಚ್ಚಗಿನ ಪ್ರಾರ್ಥನೆಗಳು ಬೇಕಾಗಿರಲಿಲ್ಲ. ಪೌಲನು ಒಂದು ಯುದ್ಧದಲ್ಲಿದ್ದನು ಮತ್ತು ಸಹೋದರರು ತನ್ನೊಂದಿಗೆ ಪ್ರಾರ್ಥನೆಯಲ್ಲಿ ಬಲವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ಬೇಡಿಕೊಂಡನು.

**ರೋಮಾ 15:30 ಸಹೋದರರೇ, ನೀವು ನನಗೋಸ್ಕರ ದೇವರ ಮುಂದೆ ಮಾಡುವ ಪ್ರಾರ್ಥನೆಗಳಲ್ಲಿ ನನ್ನೊಂದಿಗೆ ಬಲವಾಗಿ ವಿಜ್ಞಾಪಿಸಿಕೊಳ್ಳಬೇಕೆಂದು ನಮ್ಮ ಕರ್ತನಾದ ಯೇಸು ಕ್ರಿಸ್ತನ ನಿಮಿತ್ತವಾಗಿಯೂ ಪವಿತ್ರಾತ್ಮನಿಂದಾಗುವ ಪ್ರೀತಿಯ ನಿಮಿತ್ತವಾಗಿಯೂ ನಿಮ್ಮನ್ನು ಬೇಡಿಕೊಳ್ಳುತ್ತೇನೆ.**

✱ *ಪ್ರಸವವೇದನೆ ಪಡುತ್ತಾ*

ಪ್ರಸವವೇದನೆ ಎಂಬ ಪದವು ಒಬ್ಬ ಸ್ತ್ರೀಯು ಮಗುವನ್ನು ಹೆರುವುದನ್ನು ಹೊರತುಪಡಿಸಿ ಇತರೆ ಸಂದರ್ಭಗಳಲ್ಲಿ, ಶ್ರಮಿಸುವುದು, ದೀರ್ಘ ಮತ್ತು ಕಷ್ಟಪಟ್ಟು ಕೆಲಸ ಮಾಡುವುದು ಎಂಬ ಅರ್ಥವನ್ನು ಸೂಚಿಸುತ್ತದೆ. ಅಪೊಸ್ತಲ ಪೌಲನು ಗಲಾತ್ಯದ ವಿಶ್ವಾಸಿಗಳಲ್ಲಿ ಕ್ರಿಸ್ತನ ಸಾರೂಪ್ಯವು ಉಂಟಾಗುವ ತನಕ ಅವರಿಗಾಗಿ ಪ್ರಸವವೇದನೆ ಪಡುತ್ತಿದ್ದೇನೆಂದು ಬರೆದನು. ಈ ಒಂದು ವಚನವು ಮಾತ್ರ ಪ್ರಾರ್ಥನೆಯನ್ನು ಪ್ರಸವವೇದನೆಯ ಅರ್ಥದಲ್ಲಿ ಸೂಚಿಸುತ್ತದೆ ಮತ್ತು ಇಲ್ಲಿ ವಿಶ್ವಾಸಿಗಳ ಬಗ್ಗೆ ಬರೆಯಲಾಗಿದೆ.

**ಗಲಾತ್ಯ 4:19 ನನ್ನ ಪ್ರಿಯರಾದ ಮಕ್ಕಳೇ, ಕ್ರಿಸ್ತನ ಸಾರೂಪ್ಯವು ನಿಮ್ಮಲ್ಲಿ ಉಂಟಾಗುವ ತನಕ ನಾನು ನಿಮಗಾಗಿ ಪ್ರಸವವೇದನೆ ಪಡುತ್ತಿರುವೆನು.**

ಪ್ರಸವವೇದನೆಯು ಒಮ್ಮೆ ಪ್ರಾರಂಭವಾದರೆ ಮಗು ಜನಿಸುವವರೆಗೂ ಅದು ಮುಂದುವರೆಯುತ್ತದೆ. ಪ್ರಾರ್ಥನೆಯಲ್ಲಿ ಪ್ರಸವವೇದನೆ ಪಡುವದು ಎಂದರೆ ಆತ್ಮದಲ್ಲಿ ಯುದ್ಧವನ್ನು ಜಯಿಸುವವರೆಗೆ ಅತ್ಯಂತ ತೀವ್ರವಾಗಿ ಪ್ರಾರ್ಥನೆಯನ್ನು ಮುಂದುವರೆಸುತ್ತಾ ಇರುವುದಾಗಿದೆ.

✱ *ಹುಡುಕುವುದು*

ನಾವು ನಮ್ಮ ಪೂರ್ಣ ಹೃದಯದಿಂದ ದೇವರನ್ನು ಹುಡುಕಬೇಕು. ಮೋಶೆಯು ತನ್ನ ಜನರು ಪೂರ್ಣ ಹೃದಯದಿಂದ ಹುಡುಕುವರೆಂದು ಪ್ರವಾದಿಸಿದನು.

**ಧರ್ಮೋ 4:29 ಅಲ್ಲಿಂದಲಾದರೂ ನೀವು ಸಂಪೂರ್ಣ ಹೃದಯದಿಂದಲೂ ಮನಸ್ಸಿನಿಂದಲೂ ನಿಮ್ಮ ದೇವರಾದ ಯೆಹೋವನನ್ನು ಹುಡುಕಿದರೆ ಆತನು ನಿಮಗೆ ಸಿಕ್ಕುವನು.**

ಯೆರೆಮೀಯನು ಅದನ್ನೇ ಹೇಳಿದನು.

**ಯೆರೆಮೀಯ 29:12,13  ನೀವು ನನಗೆ ಮೊರೆಯಿಡುವಿರಿ, ನನ್ನನ್ನು ಪ್ರಾರ್ಥಿಸಲು ಹೋಗುವಿರಿ; ನಾನು ಕಿವಿಗೊಡುವೆನು. ನೀವು ನನ್ನನ್ನು ಹುಡುಕುವಿರಿ, ಮನಃಪೂರ್ವಕವಾಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ.**

ದಾವೀದನು ಸಹ ಒಪ್ಪಿದನು.

**ಕೀರ್ತನೆ 119:2  ಆತನ ಕಟ್ಟಳೆಗಳನ್ನು ಕೈಕೊಂಡು ಸಂಪೂರ್ಣಮನಸ್ಸಿನಿಂದ ಆತನನ್ನು ಹುಡುಕುವವರು ಭಾಗ್ಯವಂತರು.**

## ಪ್ರಾರ್ಥನೆ ಮತ್ತು ಉಪವಾಸ

### ನಾವು ಉಪವಾಸ ಮಾಡಬೇಕೇ?

ಉಪವಾಸ ಮಾಡುವುದು ಹಳೆ ಒಡಂಬಡಿಕೆಯ ಆಚಾರವಲ್ಲವೇ ಮತ್ತು ನಾವು ಕೃಪೆಯ ಕಾಲದಲ್ಲಿ ಜೀವಿಸುತ್ತಿರುವುದರಿಂದ ನಮಗೆ ಅದರ ಅವಶ್ಯಕತೆಯಿದೆಯೇ?

ಶಿಷ್ಯರು ಉಪವಾಸ ಮಾಡುವರು ಎಂದು ಯೇಸು ಹೇಳಿದರು. ಒಂದು ವೇಳೆ ಉಪವಾಸ ಮಾಡಿದರೆ ಎಂದು ಹೇಳಲಿಲ್ಲ.

**ಲೂಕ 5:35  ಆದರೆ ಮದಲಿಂಗನನ್ನು ಅವರ ಬಳಿಯಿಂದ ತೆಗೆದುಕೊಂಡುಹೋಗುವ ಕಾಲ ಬರುತ್ತದೆ. ಆ ಕಾಲದಲ್ಲೇ ಉಪವಾಸ ಮಾಡುವರು ಎಂದು ಉತ್ತರಕೊಟ್ಟನು.**

ಮೂರ್ಛಾರೋಗದಿಂದ ಕಷ್ಟಪಡುತ್ತಿದ್ದ ಹುಡುಗನಿಂದ ದುರಾತ್ಮಗಳು ಹೊರಬರದಿದ್ದಕ್ಕೆ ಎರಡು ಕಾರಣಗಳನ್ನು ಯೇಸು ಶಿಷ್ಯರಿಗೆ ವಿವರಿಸಿದರು.

**ಮತ್ತಾಯ 17:20a, 21 (IRV) ಆತನು ಅವರಿಗೆ, "ನಿಮ್ಮ ಅಪನಂಬಿಕೆಯಿಂದಲೇ ಆಗಲಿಲ್ಲ… (21 ಮೂಲ ಗ್ರಂಥದಲ್ಲಿ ಇಲ್ಲ. ಆದರೆ ಕೆಲವು ಪ್ರತಿಗಳಲ್ಲಿ, ಈ ರೀತಿಯ ದೆವ್ವಗಳು ದೇವರ ಪ್ರಾರ್ಥನೆಯಿಂದಲೇ ಮತ್ತು ಉಪವಾಸದಿಂದಲೇ ಹೊರತು ಬೇರೆ ಯಾವರೀತಿಯಿಂದಲೂ ಇವುಗಳು ಬಿಟ್ಟು ಹೋಗುವುದಿಲ್ಲವೆಂದು ಅವರಿಗೆ ಹೇಳಿದನು.)**

### ಉಪವಾಸದ ಹಿಂದೆ ತಪ್ಪಾದ ಉದ್ದೇಶಗಳು

ದೇವರು ಬಲವಂತವಾಗಿ ನಮ್ಮ ಸ್ವರವನ್ನು ಕೇಳುವಂತೆ ಮಾಡುವುದಕ್ಕಾಗಿ ಉಪವಾಸ ಮಾಡಬಾರದು. ಯೆಶಾಯನು ಈ ರೀತಿಯ ತಪ್ಪಾದ ಉಪವಾಸವನ್ನು ವರ್ಣಿಸುತ್ತಾನೆ.

**ಯೆಶಾಯ  58:3, 4  ನಾವು ಉಪವಾಸಮಾಡಿದ್ದೇವೆ, ನೀನು ಏಕೆ ಕಟಾಕ್ಷಿಸುವದಿಲ್ಲ; ನಮ್ಮ ಆತ್ಮವನ್ನು ಕುಂದಿಸಿಕೊಂಡಿದ್ದೇವೆ, ನೀನು ಗಮನಿಸದಿರುವದೇಕೆ ಅಂದುಕೊಳ್ಳುತ್ತಾರೆ. ಇಗೋ, ನಿಮ್ಮ ಉಪವಾಸದ ದಿನದಲ್ಲಿಯೂ ನಿಮ್ಮ ನಿತ್ಯದ ಕೆಲಸವನ್ನು ನಡಿಸಿ ನಿಮ್ಮ ಆಳುಗಳನ್ನು ದುಡಿತಕ್ಕೆಳೆಯುತ್ತೀರಿ.**

**ನೋಡಿರಿ, ನಿಮ್ಮ ಉಪವಾಸದ ಫಲವೇನಂದರೆ - ವ್ಯಾಜ್ಯ, ಕಲಹ, ಕೇಡಿನ ಗುದ್ದು, ಇವುಗಳೇ. ನೀವು ಈಗ ಮಾಡುವ ಉಪವಾಸವು ನಿಮ್ಮ ಪ್ರಾರ್ಥನೆಯನ್ನು ಉನ್ನತಲೋಕಕ್ಕೆ ಮುಟ್ಟಿಸತಕ್ಕದ್ದಲ್ಲ.**

ನಮ್ಮ ಜೀವನದ ಇತರೆ ಕ್ಷೇತ್ರಗಳು ದೇವರಿಗೆ ಮೆಚ್ಚಿಗೆಯಿಲ್ಲದಿರುವಾಗ ಉಪವಾಸ ಮಾಡುವದಕ್ಕೆ ಹೋಗಬಾರದು.

**ದೇವರಿಗೆ ಇಷ್ಟವಾದ ಉಪವಾಸ**

ದೇವರು ತಾನು ಮೆಚ್ಚುವ ಉಪವಾಸವನ್ನು ವರ್ಣಿಸುತ್ತಾರೆ.

**ಯೆಶಾಯ 58:6,7 ನೋಡಿರಿ, ಕೇಡಿನ ಬಂಧಗಳನ್ನು ಬಿಚ್ಚುವದು, ನೊಗದ ಕಣ್ಣಿಗಳನ್ನು ಕಳಚುವದು, ಜಜ್ಜಿಹೋದವರನ್ನು ಬಿಡುಗಡೆಮಾಡುವದು, ನೊಗಗಳನ್ನೆಲ್ಲಾ ಮುರಿಯುವದು, ಹಸಿದವರಿಗೆ ಅನ್ನವನ್ನು ಹಂಚುವದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವದು, ಬೆತ್ತಲೆಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖ ತಪ್ಪಿಸಿಕೊಳ್ಳದಿರುವದು, ಇವುಗಳೇ ನನಗೆ ಇಷ್ಟವಾದ ಉಪವಾಸವ್ರತವಲ್ಲವೇ.**

**ನಾಲ್ಕು ರೀತಿಯ ಉಪವಾಸಗಳು**

ಸತ್ಯವೇದದಲ್ಲಿ ನಾಲ್ಕು ರೀತಿಯ ಉಪವಾಸಗಳನ್ನು ತಿಳಿಸಲಾಗಿದೆ.

* *ಭಾಗಶಃ ಉಪವಾಸ*

ದಾನಿಯೇಲನ ಉಪವಾಸವು ಹೇಗಿತ್ತೆಂದರೆ, ಅವನು ರುಚಿಯಾದ ಆಹಾರವನ್ನಾಗಲಿ, ಮಾಂಸವನ್ನಾಗಲಿ ತಿನ್ನಲಿಲ್ಲ ಮತ್ತು ದ್ರಾಕ್ಷಾರಸವನ್ನು ಸೇವಿಸಲಿಲ್ಲ.

**ದಾನಿಯೇಲ 10:2,3 ಆ ಕಾಲದಲ್ಲಿ ದಾನಿಯೇಲನಾದ ನಾನು ಮೂರು ವಾರ ಶೋಕಿಸುತ್ತಿದ್ದೆನು. ಮೂರು ವಾರ ಮುಗಿಯುವ ತನಕ ನಾನು ರುಚಿಪದಾರ್ಥವನ್ನು ತಿನ್ನಲಿಲ್ಲ, ಮಾಂಸವನ್ನೂ ದ್ರಾಕ್ಷಾರಸವನ್ನೂ ನನ್ನ ಬಾಯಿಗೆ ಹಾಕಲಿಲ್ಲ, ಎಣ್ಣೆಯನ್ನು ಹಚ್ಚಿಕೊಳ್ಳಲಿಲ್ಲ.**

* *ಸಾಮಾನ್ಯ ಉಪವಾಸ*

ಈ ರೀತಿಯ ಉಪವಾಸ ಮಾಡುವಾಗ ನೀವು ಆಹಾರ ಸೇವಿಸಬಾರದು ಆದರೆ ನೀರನ್ನು ಅಥವಾ ಹಣ್ಣಿನ ರಸವನ್ನು ಕುಡಿಯಬಹುದು. ದೀರ್ಘಕಾಲ ಉಪವಾಸ ಮಾಡುವವರು ಸಾಮಾನ್ಯವಾಗಿ ಹೀಗೆ ಮಾಡುತ್ತಾರೆ.

✶ **ಯೇಸು**

ಯೇಸು ಪರಿಶುದ್ಧಾತ್ಮನಿಂದ ಅಡವಿಗೆ ನಡೆಸಲ್ಪಟ್ಟರು ಮತ್ತು ಅಲ್ಲಿ ಯೇಸು ನಾಲ್ವತ್ತು ದಿನಗಳವರೆಗೆ ಉಪವಾಸ ಮಾಡಿದರು. ಈ ಉಪವಾಸದ ಸಮಯದಲ್ಲಿ ಯೇಸು ಏನನ್ನೂ ತಿನ್ನಲಿಲ್ಲ ಎಂದು ನಮಗೆ ತಿಳಿದಿದೆ.

**ಲೂಕ 4:1,2 ಯೇಸು ಪವಿತ್ರಾತ್ಮಭರಿತನಾಗಿ ಯೊರ್ದನ್‌ಹೊಳೆಯಿಂದ ಹಿಂತಿರುಗಿ ದೇವರಾತ್ಮನಿಂದ ನಾಲ್ವತ್ತು ದಿವಸ ಅಡವಿಯಲ್ಲಿ ನಡಿಸಲ್ಪಡುತ್ತಾ**

**ಸೈತಾನನಿಂದ ಶೋಧಿಸಲ್ಪಟ್ಟನು. 2ಆ ದಿವಸಗಳಲ್ಲಿ ಆತನು ಏನೂ ತಿನ್ನಲಿಲ್ಲ. ಅವು ಕಳೆದ ಮೇಲೆ ಆತನಿಗೆ ಹಸಿವಾಯಿತು.**

✳ *ಅಸಮಾನ್ಯ ಉಪವಾಸ*

ಎರಡು ಅಸಮಾನ್ಯ ಉಪವಾಸಗಳ ಬಗ್ಗೆ ನಮಗೆ ತಿಳಿಸಲ್ಪಟ್ಟಿದೆ, ಆದರೆ ಇಂದು ಇದು ನಮಗಿರುವ ಸಾಮಾನ್ಯ ???ವಲ್ಲ.

✶ **ಎಲೀಯ**

ಎಲೀಯನ ಉಪವಾಸವು ಅಸಮಾನ್ಯವಾಗಿತ್ತು ಯಾಕೆಂದರೆ ಅವನಿಗೆ ಅಲೌಕಿಕವಾಗಿ ಆಹಾರವು ಕೊಡಲ್ಪಟ್ಟಿತು. ನಂತರ ಅವನು ಆ ಊಟ ಮತ್ತು ನೀರಿನ ಶಕ್ತಿಯಲ್ಲಿ ನಾಲ್ವತ್ತು ದಿನಗಳನ್ನು ಕಳೆದನು.

**1 ಅರಸು 19:5-8 ಅದೇ ಗಿಡದ ಕೆಳಗೆ ಮಲಗಿಕೊಂಡು ನಿದ್ರೆಮಾಡಿದನು. ಫಕ್ಕನೆ ಒಬ್ಬ ದೇವದೂತನು ಅವನನ್ನು ತಟ್ಟಿ - ಎದ್ದು ಊಟಮಾಡು ಎಂದು ಹೇಳಿದನು. 6ಎಲೀಯನು ಎದ್ದು ನೋಡಲಾಗಿ ಕೆಂಡದ ಮೇಲೆ ಸುಟ್ಟ ರೊಟ್ಟಿಯೂ ಒಂದು ತಂಬಿಗೆ ನೀರೂ ತನ್ನ ತಲೆಯ ಹತ್ತಿರ ಇರುವದನ್ನು ಕಂಡು ಅವುಗಳನ್ನು ತೆಗೆದುಕೊಂಡು ತಿಂದು ಕುಡಿದು ತಿರಿಗಿ ಮಲಗಿದನು.**

**7ಯೆಹೋವನ ದೂತನು ಎರಡನೆಯ ಸಾರಿ ಬಂದು ಅವನನ್ನು ತಟ್ಟಿ ಅವನಿಗೆ - ಎದ್ದು ಊಟಮಾಡು; ನೀನು ನಿನ್ನ ಶಕ್ತಿ ಮೀರುವಷ್ಟು ಪ್ರಯಾಣಮಾಡಬೇಕಾಗಿದೆ ಅಂದನು. 8ಅವನು ಎದ್ದು ತಿಂದು ಕುಡಿದು ಅದರ ಬಲದಿಂದ ನಾಲ್ವತ್ತು ದಿವಸ ಹಗಲಿರುಳು ಪ್ರಯಾಣಮಾಡಿ ದೇವಗಿರಿಯಾದ ಹೋರೇಬಿಗೆ ಮುಟ್ಟಿ 9ಅಲ್ಲಿನ ಒಂದು ಗವಿಯಲ್ಲಿ ಇಳುಕೊಂಡನು.**

✶ **ಮೋಶೆ**

ಮೋಶೆಯು ನಾಲ್ವತ್ತು ದಿನ ಹಗಲು ಮತ್ತು ರಾತ್ರಿ ಬೆಟ್ಟದ ಮೇಲೆ ಉಪವಾಸ ಮಾಡಿದನು ಮತ್ತು ದೇವರು ಅವನಿಗೆ ಮೊಟ್ಟಮೊದಲ ದಶಾಜ್ಞೆಗಳನ್ನು ಕೊಟ್ಟರು.

**ಧರ್ಮೋ 9:9 ಯೆಹೋವನು ನಿಮ್ಮ ಸಂಗಡ ಮಾಡಿದ ನಿಬಂಧನೆಯನ್ನು ಬರೆದ ಆ ಕಲ್ಲಿನ ಹಲಿಗೆಗಳನ್ನು ತೆಗೆದುಕೊಳ್ಳುವದಕ್ಕೆ ನಾನು ಬೆಟ್ಟವನ್ನು ಹತ್ತಿದ್ದಾಗ ನಾನು ಅನ್ನಪಾನಗಳನ್ನು ಬಿಟ್ಟು ಹಗಲಿರುಳು ನಾಲ್ವತ್ತು ದಿನ ಆ ಬೆಟ್ಟದಲ್ಲಿದ್ದೆನು.**

ಜನರು ಬಂಗಾರದ ಬಸವನನ್ನು ಆರಾಧಿಸಿದರು - ದಶಾಜ್ಞೆಗಳು ಮುರಿಯಲ್ಪಟ್ಟವು - ಮತ್ತು ಮೋಶೆಯು ಮತ್ತೊಮ್ಮೆ ನಾಲ್ವತ್ತು ದಿನಗಳ ಉಪವಾಸ ಮತ್ತು ಪ್ರಾರ್ಥನೆಗಾಗಿ ಬೆಟ್ಟದ ಮೇಲೆ ಹೋದನು.

**ಧರ್ಮೋ 9:18 "ನೀವು ಹೀಗೆ ಅಪರಾಧಮಾಡಿ ಯೆಹೋವನ ದೃಷ್ಟಿಯಲ್ಲಿ ಕೆಟ್ಟದ್ದನ್ನು ನಡಿಸಿ ಆತನನ್ನು ಕೋಪಗೊಳಿಸಿದ ಕಾರಣ ನಾನು ಮೊದಲಿನಂತೆ ಅನ್ನಪಾನಗಳನ್ನು ಬಿಟ್ಟು ನಾಲ್ವತ್ತು ದಿನಗಳು ಹಗಲಿರುಳು ಯೆಹೋವನ ಸನ್ನಿಧಿಯಲ್ಲೇ ಬಿದ್ದಿದ್ದೆನು."**

ಮೋಶೆಯ ಎಂಭತ್ತು ದಿನಗಳ ಉಪವಾಸವು ದೇವರ ಪ್ರಸನ್ನತೆಯ ಮಹಿಮೆಯಲ್ಲಿ ಕಳೆಯಲ್ಪಟ್ಟವು. ಹಾಗಾಗಿ ಇದು ಸಂಪೂರ್ಣವಾದ ಉಪವಾಸವನ್ನು ಮುಂದುವರೆಸುವ ಇಂದಿನ ವಿಧಾನವಲ್ಲ.

ಸಂಪೂರ್ಣ ಉಪವಾಸವನ್ನು ಸ್ವಲ್ಪ ಸಮಯ ಮಾತ್ರ ಆಚರಿಸಲಾಗುತ್ತದೆ. ಆ ಸಮಯದಲ್ಲಿ ಯಾವ ಆಹಾರವನ್ನಾಗಲಿ ನೀರನ್ನಾಗಲಿ ಸೇವಿಸಲಾಗುವುದಿಲ್ಲ.

**✶ ನಿನವೆಯ ಜನರು**

ಯೋನನು ನಿನವೆಗೆ ಬಂದಾಗ, ಬರುವ ನಾಲ್ವತ್ತು ದಿನದೊಳಗಾಗಿ ಆ ಪಟ್ಟಣವು ನಾಶವಾಗಲಿದೆ ಎಂದು ಸಂದೇಶವನ್ನು ಸಾರಿದನು. ಆಗ ಜನರು ಸಂಪೂರ್ಣ ಉಪವಾಸವನ್ನು ಮಾಡಿದರು. ದೇವರು ಅವರ ಪಶ್ಚಾತ್ತಾಪವನ್ನು ಕಂಡು ಪಟ್ಟಣವನ್ನು ನಾಶ ಮಾಡಲಿಲ್ಲ.

**ಯೋನ 3:7b-10  ಜನ ಪಶು ಮಂದೆ ಹಿಂಡು ಇವುಗಳು ಏನೂ ರುಚಿನೋಡದಿರಲಿ; ತಿನ್ನದಿರಲಿ, ಕುಡಿಯದಿರಲಿ; ಜನರಿಗೂ ಪಶುಗಳಿಗೂ ಗೋಣಿತಟ್ಟು ಹೊದಿಕೆಯಾಗಲಿ; ಎಲ್ಲರು ದೇವರಿಗೆ ಬಲವಾಗಿ ಮೊರೆಯಿಡಲಿ; ಒಬ್ಬೊಬ್ಬನು ತನ್ನ ತನ್ನ ದುರ್ಮಾರ್ಗವನ್ನೂ ತಾನು ನಡಿಸುತ್ತಿದ್ದ ಹಿಂಸೆಯನ್ನೂ ತೊರೆದುಬಿಡಲಿ. ದೇವರು ಒಂದು ವೇಳೆ ಮನಮರುಗಿ ಹಿಂದಿರುಗಿ ತನ್ನ ಉಗ್ರಕೋಪವನ್ನು ತೊಲಗಿಸಾನು, ನಾವು ನಾಶವಾಗದೆ ಉಳಿದೇವು ಎಂಬದನ್ನು ನಿನೆವೆಯಲ್ಲೆಲ್ಲಾ ಸಾರಿಸಿದನು.**

**10ದೇವರು ನಿನೆವೆಯವರ ಕಾರ್ಯಗಳನ್ನು ನೋಡಿ ಅವರು ತಮ್ಮ ದುರ್ಮಾರ್ಗದಿಂದ ತಿರುಗಿಕೊಂಡರೆಂದು ತಿಳಿದು ಮನಮರುಗಿ ತಾನು ಅವರಿಗೆ ಮಾಡುವೆನೆಂದು ಪ್ರಕಟಿಸಿದ್ದ ಕೇಡನ್ನು ಮಾಡದೆ ಬಿಟ್ಟನು.**

**✶ ರಾಣಿಯಾದ ಎಸ್ತೇರಳು ಮತ್ತು ಶುಶಾನ್ ನಲ್ಲಿ ವಾಸವಿದ್ದ ಎಲ್ಲಾ ಯೆಹೂದ್ಯರು**

ರಾಣಿಯಾದ ಎಸ್ತೇರಳು ತನ್ನ ಜನರಿಗೆ ಜೀವಬೆದರಿಕೆ ಹಾಕಲಾಗಿದೆ ಎಂಬುದನ್ನು ಕೇಳಿದಾಗ ಅವರೆಲ್ಲರೂ ಮೂರು ದಿನಗಳ ಕಾಲ ಉಪವಾಸ ಮಾಡಬೇಕೆಂದು ಹೇಳಿದಳು ಮತ್ತು ತಾನೂ ಸಹ ತನ್ನ ಸೇವಕರೊಂದಿಗೆ ಸೇರಿ ಉಪವಾಸವಿರುವುದಾಗಿ ಹೇಳಿದಳು. ಆ ಉಪವಾಸ ಮುಗಿದ ನಂತರ ಅರಸನನ್ನು ಭೇಟಿಯಾಗುವುದಕ್ಕೆ ಹೋಗಲು ತೀರ್ಮಾನಿಸಿದಳು.

**ಎಸ್ತೇರಳು 4:16  "ನೀನು ಹೋಗಿ ಶೂಷನಿನಲ್ಲಿ ಸಿಕ್ಕುವ ಎಲ್ಲಾ ಯೆಹೂದ್ಯರನ್ನು ಕೂಡಿಸು; ನೀವೆಲ್ಲರೂ ಮೂರು ದಿನ ಹಗಲಿರುಳು ಅನ್ನಪಾನಗಳನ್ನು ಬಿಟ್ಟು ನನಗೋಸ್ಕರ ಉಪವಾಸ ಮಾಡಿರಿ; ಅದರಂತೆ ನಾನೂ ನನ್ನ ಸೇವಕಿಯರೊಡನೆ ಉಪವಾಸದಿಂದಿರುವೆನು. ಅನಂತರ ನಾನು ವಿಧಿ ಮೀರಿ ಅರಸನ ಬಳಿಗೆ ಹೋಗುವೆನು, ಸತ್ತರೆ ಸಾಯುತ್ತೇನೆ"**

**✶ ಪೌಲನು**

ಪೌಲನು ದಮಸ್ಕದ ರಸ್ತೆಯಲ್ಲಿ ಯೇಸುವನ್ನು ಎದುರುಗೊಂಡ ನಂತರ ಸಂಪೂರ್ಣ ಉಪವಾಸವನ್ನು ಮಾಡಿದನು.

ಅ.ಕೃ. 9:9  ಅವನು ಮೂರು ದಿವಸ ಕಣ್ಣುಕಾಣದೆ ಏನೂ ತಿನ್ನಲಿಲ್ಲ; ಏನೂ ಕುಡಿಯಲಿಲ್ಲ.

ಉಪವಾಸದಿಂದಾಗುವ ಪ್ರಯೋಜನಗಳು

* *ದೆವ್ವಗಳು ಬಿಟ್ಟುಹೋಗುತ್ತವೆ*

ಮತ್ತಾಯ 17:21 (IRV) (21 ಮೂಲ ಗ್ರಂಥದಲ್ಲಿ ಇಲ್ಲ. ಆದರೆ ಕೆಲವು ಪ್ರತಿಗಳಲ್ಲಿ, ಈ ರೀತಿಯ ದೆವ್ವಗಳು ದೇವರ ಪ್ರಾರ್ಥನೆಯಿಂದಲೇ ಮತ್ತು ಉಪವಾಸದಿಂದಲೇ ಹೊರತು ಬೇರೆ ಯಾವರೀತಿಯಿಂದಲೂ ಇವುಗಳು ಬಿಟ್ಟು ಹೋಗುವುದಿಲ್ಲವೆಂದು ಅವರಿಗೆ ಹೇಳಿದನು.)

* *ರಾಷ್ಟ್ರೀಯ ವಿಪತ್ತು ನಿವಾರಣೆಯಾಗುವುದು*

ಯೋನ 3:10  ದೇವರು ನಿನೆವೆಯವರ ಕಾರ್ಯಗಳನ್ನು ನೋಡಿ ಅವರು ತಮ್ಮ ದುರ್ಮಾರ್ಗದಿಂದ ತಿರುಗಿಕೊಂಡರೆಂದು ತಿಳಿದು ಮನಮರುಗಿ ತಾನು ಅವರಿಗೆ ಮಾಡುವೆನೆಂದು ಪ್ರಕಟಿಸಿದ್ದ ಕೇಡನ್ನು ಮಾಡದೆ ಬಿಟ್ಟನು.

* *ದರ್ಶನಗಳು ಬರುತ್ತವೆ*

ದಾನಿಯೇಲ 10:5,6  ಕಣ್ಣೆತ್ತಿ ನೋಡಲು ಇಗೋ, ನಾರಿನ ಬಟ್ಟೆಯನ್ನು ಹೊದ್ದುಕೊಂಡು ಊಫಜಿನ ಅಪರಂಜಿಯ ಪಟ್ಟಿಯನ್ನು ಸೊಂಟಕ್ಕೆ ಬಿಗಿದುಕೊಂಡ ಒಬ್ಬ ಪುರುಷನು ನನಗೆ ಕಾಣಿಸಿದನು; 6ಅವನ ಶರೀರವು ಪೀತರತ್ನದ ಹಾಗೆ ಕಂಗೊಳಿಸಿತು, ಅವನ ಮುಖವು ಮಿಂಚಿನಂತೆ ಹೊಳೆಯಿತು, ಅವನ ಕಣ್ಣುಗಳು ಉರಿಯುವ ಪಂಜುಗಳೋಪಾದಿಯಲ್ಲಿ ನಿಗಿನಿಗಿಸಿದವು, ಅವನ ಕೈಕಾಲುಗಳು ಬೆಳಗಿದ ತಾಮ್ರದ ಹಾಗೆ ಥಳಥಳಿಸಿದವು, ಅವನ ಮಾತಿನ ಶಬ್ದವು ಸಂದಣಿಯ ಕೋಲಾಹಲದಂತೆ ಕೇಳಿಸಿತು.

* *ಶಾರೀರಿಕವಾಗಿ ಆರೋಗ್ಯವನ್ನು ತಿರುಗಿಹೊಂದಿಕೊಳ್ಳಬಹುದು*

ಯೆಶಾಯ 58:6-8  "ನೋಡಿರಿ, ಕೇಡಿನ ಬಂಧಗಳನ್ನು ಬಿಚ್ಚುವದು, ನೊಗದ ಕಣ್ಣಿಗಳನ್ನು ಕಳಚುವದು, ಜಜ್ಜಿಹೋದವರನ್ನು ಬಿಡುಗಡೆಮಾಡುವದು, ನೊಗಗಳನ್ನೆಲ್ಲಾ ಮುರಿಯುವದು, 7ಹಸಿದವರಿಗೆ ಅನ್ನವನ್ನು ಹಂಚುವದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವದು, ಬೆತ್ತಲೆಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖ ತಪ್ಪಿಸಿಕೊಳ್ಳದಿರುವದು, ಇವುಗಳೇ ನನಗೆ ಇಷ್ಟವಾದ ಉಪವಾಸವ್ರತವಲ್ಲವೇ.

8ಇದನ್ನು ಆಚರಿಸುವಾಗ ನಿಮಗೆ ಬೆಳಕು ಉದಯದಂತೆ ಭೇದಿಸಿಕೊಂಡು ಬರುವದು, ನಿಮ್ಮ ಕ್ಷೇಮವು ಬೇಗನೆ ವಿಕಸಿಸುವದು; ನಿಮ್ಮ ಧರ್ಮವು ನಿಮಗೆ ಮುಂಬಲವಾಗಿ ಮುಂದರಿಯುವದು, ಯೆಹೋವನ ಮಹಿಮೆಯು ನಿಮಗೆ ಹಿಂಬಲವಾಗಿರುವದು."

* *ಗರ್ವವನ್ನು ಅಧೀನಕ್ಕೆ ತರಬಹುದು*

**ಕೀರ್ತನೆ 35:13 ನಾನಾದರೋ ಅವರ ಅಸ್ವಸ್ಥಕಾಲದಲ್ಲಿ ಗೋಣಿತಟ್ಟನ್ನೇ ಕಟ್ಟಿಕೊಂಡಿದ್ದೆನು; ಉಪವಾಸದಿಂದ ನನ್ನ ಆತ್ಮವನ್ನು ನೋಯಿಸಿದೆನು. ನನ್ನ ಪ್ರಾರ್ಥನೆಯು ನನ್ನ ಎದೆಗೆ ತಿರುಗಿತು.**

* *ಆತ್ಮಿಕ ಜಾಗೃತಿ*

**2 ಪೂರ್ವ 7:14 "ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು."**

## ನಾವು ಉಪವಾಸ ಮಾಡಬೇಕೇ?

ನಾವು ನಮ್ಮ ಪ್ರಾರಂಭದ ಪ್ರಶ್ನೆಗೆ ಹಿಂತಿರುಗೋಣ - ನಾವು ಉಪವಾಸ ಮಾಡಬೇಕೆ? ದೇವರ ವಾಕ್ಯದಲ್ಲಿ ಉಪವಾಸದಿಂದಾಗುವ ಇಷ್ಟೊಂದು ಪ್ರಯೋಜನಗಳಿರುವುದನ್ನು ನಾವು ಕಂಡ ಮೇಲೆ ಉಪವಾಸ ಯಾಕೆ ಮಾಡಬಾರದು?

ನಾವು ರಹಸ್ಯವಾಗಿ ಉಪವಾಸವಿರಬೇಕೆಂದು ಯೇಸು ಹೇಳಿದರು.

**ಮತ್ತಾಯ 6:16-18 "ಇದಲ್ಲದೆ ನೀವು ಉಪವಾಸಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನರಿಗೆ ತೋರುವದಕ್ಕಾಗಿ ತಮ್ಮ ಮುಖವನ್ನು ವಿಕಾರಮಾಡಿಕೊಳ್ಳುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಉಪವಾಸಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ. ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆ ಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು."**

## ಉಪವಾಸದ ಬಗ್ಗೆ ಕೆಲವು ಪ್ರಾಯೋಗಿಕ ಅಂಶಗಳು

ತಿಳಿದುಕೊಳ್ಳಬೇಕಾದ ಕೆಲವು ಪ್ರಾಯೋಗಿಕ ವಿಷಯಗಳು:

* ನಿಮಗೆ ಸಾಧ್ಯವಾದಷ್ಟು ನೀರು ಕುಡಿಯಿರಿ - ಇದು ಅತ್ಯಗತ್ಯ.
* ಭಾಗಶಃ ಉಪವಾಸಕ್ಕಾಗಿ, ತಾಜಾ ಹಣ್ಣಿನಂತಹ ಲಘು ಆಹಾರವನ್ನು ಸೇವಿಸಿ. ಸಂಸ್ಕರಿಸಿದ ಆಹಾರವನ್ನು ಸೇವಿಸಬೇಡಿ. ನೀರು, ಹಾಲು ಅಥವಾ ಹಣ್ಣಿನ ರಸವನ್ನು ಕುಡಿಯಿರಿ. ನೀವು ಹಣ್ಣಿನ ರಸವನ್ನು (ವಿಶೇಷವಾಗಿ ಸಿಟ್ರಸ್ ಹಣ್ಣಿನ ರಸವನ್ನು) ಅರ್ಧದಷ್ಟು ನೀರಿನೊಂದಿಗೆ ಬೆರೆಸಬಹುದು.
* ನೀವು ಎಷ್ಟು ದಿನಗಳ ಕಾಲ ಉಪವಾಸ ಮಾಡಬೇಕೆಂಬುದು ನಿಮಗೂ ದೇವರಿಗೂ ನಡುವೆ ಇರುವ ವಿಷಯ. ಉಪವಾಸ ಎನ್ನುವುದು ಒಂದು

ಬದ್ಧತೆಯಾಗಿರುವುದರಿಂದ ಮತ್ತು ಹರಕೆಯಾಗಿರುವುದರಿಂದ ಅದನ್ನು ಹಗುರವಾಗಿ ಪರಿಗಣಿಸಬೇಡಿರಿ. ಒಂದು ಹೊತ್ತಿನ ಉಪವಾಸದೊಂದಿಗೆ ಆರಂಭಿಸುವುದು ಉತ್ತಮ. ಆನಂತರ ಒಂದು ದಿನ, ಅದಾದ ನಂತರ ಇನ್ನೂ ಒಂದು ದಿನ ಹೀಗೆ ಕ್ರಮೇಣವಾಗಿ ಹೆಚ್ಚು ಮಾಡುವುದು ಒಳ್ಳೆಯದು.

✶ ದೀರ್ಘ ಉಪವಾಸವನ್ನು ಅಂತ್ಯಗೊಳಿಸುವಾಗ ಕ್ರಮೇಣವಾಗಿ ಹಣ್ಣಿನ ರಸದೊಂದಿಗೆ ಅಥವಾ ದ್ರವ್ಯಪದಾರ್ಥದೊಂದಿಗೆ ಆರಂಭಿಸಬೇಕು.

## ✍ ಸಾರಾಂಶ - ಒಂದು ಯಶಸ್ವಿಯಾದ ಪ್ರಾರ್ಥನಾ ಜೀವಿತವನ್ನು ಪ್ರವೇಶಿಸುವುದು

ನಾವು ಯಶಸ್ವಿಯಾಗಿ ಪ್ರಾರ್ಥಿಸಬೇಕಾದರೆ, ನಾವು ದೇವರನ್ನು ವೈಯಕ್ತಿಕವಾಗಿ ತಿಳಿದುಕೊಳ್ಳುವುದನ್ನು ನಮ್ಮ ಜೀವನಶೈಲಿಯನ್ನಾಗಿಸಿಕೊಳ್ಳಬೇಕು. ನಾವು ಆತನಲ್ಲಿ ನೆಲೆಗೊಳ್ಳಬೇಕು. ನಾವು ಅನೇಕ ವರ್ಷಗಳ ಕಾಲ ಹೇಗೆ ನಮ್ಮ ಒಳ್ಳೆಯ ಸ್ನೇಹಿತರೊಂದಿಗೆ ಒಡನಾಟದಲ್ಲಿ ಇರುತ್ತೇವೋ ಹಾಗೆಯೇ ಇದು ಸಹ. ಅವರೊಂದಿಗೆ ದಿನಗಳನ್ನು ಕಳೆದಂತೆಲ್ಲಾ, ಅವರು ಈ ಸನ್ನಿವೇಶದಲ್ಲಿ ಏನು ಯೋಚಿಸಬಹುದು, ಏನು ಅಂದುಕೊಳ್ಳಬಹುದು ಮತ್ತು ಹೇಗೆ ಪ್ರತಿಕ್ರಿಯಸಬಹುದು ಎಂಬುದನ್ನು ನಾವು ಮುಂಚಿತವಾಗಿಯೇ ತಿಳಿದುಕೊಂಡವರಾಗಿರುತ್ತೇವೆ. ನಾವು ದೇವರಲ್ಲಿ ಹೆಚ್ಚಾಗಿ ನೆಲೆಗೊಂಡಂತೆಲ್ಲಾ ಅವರ ಚಿತ್ತಕ್ಕೆ ಅನುಸಾರವಾಗಿ ಹೇಗೆ ಕೇಳಿಕೊಳ್ಳಬೇಕು ಎಂಬುದನ್ನೂ ತಿಲಿದುಕೊಳ್ಳುತ್ತೇವೆ.

ಜನರು ತಮ್ಮ ಸುತ್ತಮುತ್ತಲಿರುವ ಅಗತ್ಯತೆಗಳ ಬಗ್ಗೆ ಕಾಳಜಿಯುಳ್ಳವರಾಗಿರಬೇಕೆಂದು - ಅಂದರೆ ಜನರು ದೇವರನ್ನು ತಿಳಿದುಕೊಳ್ಳಬೇಕೆಂಬ ಹಂಬಲವು ನಮಗಿರಬೇಕೆಂದು - ದೇವರು ಬಯಸುತ್ತಾರೆ. ತನ್ನ ಜನರು ಸತತವಾಗಿ, ಶ್ರದ್ಧೆಯಿಂದ, ತೀವ್ರವಾಗಿ, ನಿರಂತರವಾಗಿ ಪ್ರಾರ್ಥಿಸಬೇಕೆಂದು ದೇವರು ಬಯಸುತ್ತಾರೆ. ತನ್ನ ಚಿತ್ತವು ನೆರವೇರಬೇಕೆಂದು ಹುಡುಕುವ ಮತ್ತು ಹೋರಾಡುವ ಜನರನ್ನು ದೇವರು ಬಯಸುತ್ತಾರೆ.

ನಮ್ಮ ದೇಹ ಮತ್ತು ಪ್ರಾಣಗಳನ್ನು ನಮ್ಮ ಆತ್ಮದ ಅಧೀನಕ್ಕೂ ಮತ್ತು ಕರ್ತನ ಒಡೆಯತ್ವದ ಅಧೀನಕ್ಕೂ ತರುವ ಒಂದು ವಿಧಾನವಾಗಿ ದೇವರು ಉಪವಾಸವೆಂಬ ಸಾಧನವನ್ನು ಕೊಟ್ಟಿದ್ದಾರೆ.

## ವಿಮರ್ಶೆಗಾಗಿ ಪ್ರಶ್ನೆಗಳು

1. ಯಶಸ್ವಿ ಪ್ರಾರ್ಥನೆಗೆ ನಾಲ್ಕು ಹಂತಗಳು ಯಾವುವು? ಪ್ರತಿಯೊಂದನ್ನು ಸಂಕ್ಷಿಪ್ತವಾಗಿ ವಿವರಿಸಿ.

2. ಉಪವಾಸದ ಪ್ರಯೋಜನಗಳನ್ನು ಪಟ್ಟಿ ಮಾಡಿ.

3. ನೀವು ಇದುವರೆಗೂ ಉಪವಾಸ ಮಾಡಿರದಿದ್ದರೆ, ನೀವು ಹೇಗೆ ಪ್ರಾರಂಭಿಸುತ್ತೀರಿ? ನಿಮ್ಮ (ವಿವೇಕಯುಕ್ತವಾದ) ಗುರಿಗಳೇನು?

*ಪಾಠ ಏಳು*

# ನಂಬಿಕೆಯ ಧ್ವನಿ

## ಪೀಠಿಕೆ

ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗಬೇಕಾದರೆ ನಾವು ನಂಬಿಕೆಯಿಂದ ಪ್ರಾರ್ಥಿಸಬೇಕು. ಹಾಗೆ ಮಾಡಬೇಕಾದರೆ ನಾವು ಮೊದಲು ನಂಬಿಕೆಯನ್ನು ಅರ್ಥಮಾಡಿಕೊಳ್ಳಬೇಕು ಮತ್ತು ನಂಬಿಕೆಯ ಜನರಾಗಬೇಕು.

ಹೊಸ ಒಡಂಬಡಿಕೆಯಲ್ಲಿ "ನಂಬು" ಎಂಬ ಪದವನ್ನು ನಾವು ನೂರ ಮೂವತ್ತು ಬಾರಿ ಕಾಣುತ್ತೇವೆ. "ನಂಬಿಕೆ" ಎಂಬ ಪದವನ್ನು ಇನ್ನೂರ ಇಪ್ಪತ್ತು ಬಾರಿ ಕಾಣುತ್ತೇವೆ.

ಯೇಸು ತನ್ನ ಇಹಲೋಕದ ಸೇವೆಯ ಅವಧಿಯಲ್ಲಿ ಅನೇಕ ಬಾರಿ ನಂಬಿಕೆಗೆ ಪ್ರತಿಕ್ರಿಯಿಸಿದರು.

ಅವರು ಹೇಳಿದ್ದು,

"ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥ ಮಾಡಿದೆ"

"ನಿನ್ನ ನಂಬಿಕೆಯಂತೆಯೇ ..."

" ಅಮ್ಮಾ, ನಿನ್ನ ನಂಬಿಕೆ ಬಹಳ… "

"ನೀವು ಸಂದೇಹಪಡದೆ ನಂಬುವುದಾದರೆ ..."

"ದೇವರಲ್ಲಿ ನಂಬಿರಿ"

ಅದೇ ಸಮಯದಲ್ಲಿ ಇದನ್ನೂ ಸಹ ಹೇಳಿದರು,

"ಅಲ್ಪವಿಶ್ವಾಸಿಗಳೇ ..."

"ಯಾಕೆ ಸಂದೇಹಪಟ್ಟಿರಿ?"

"ನಿಮ್ಮ ಅಪನಂಬಿಕೆಯ ಕಾರಣದಿಂದ ..."

" ಇನ್ನೂ ನಿಮಗೆ ನಂಬಿಕೆಯಿಲ್ಲವೇ? "

"ನಿಮ್ಮ ನಂಬಿಕೆ ಎಲ್ಲಿ?"

ಶಿಷ್ಯರಿಗೆ ಅವರು ಹೇಳಿದರು, "ನಿಮ್ಮ ನಂಬಿಕೆಯು ಬಿದ್ದು ಹೋಗಬಾರದೆಂದು ನಾನು ಪ್ರಾರ್ಥಿಸಿದ್ದೇನೆ."

ನಾವು ದೇವರಿಂದ ಹೊಂದಿದ್ದೆಲ್ಲವನ್ನೂ ನಂಬಿಕೆಯಿಂದಲೇ ಹೊಂದಿದ್ದೇವೆ - ನಮ್ಮ ರಕ್ಷಣೆ, ಪರಿಶುದ್ಧಾತ್ಮನ ದೀಕ್ಷಾಸ್ನಾನ, ನೀತಿವಂತಿಕೆ, ಸೌಖ್ಯತೆಗಳು, ಆಶೀರ್ವಾದಗಳು, ಅಲೌಕಿಕವಾದ ಜ್ಞಾನ ಮತ್ತು ತಿಳುವಳಿಕೆ.

## ನಂಬಿಕೆಯು ಮಾತನಾಡುತ್ತದೆ

ನಂಬಿಕೆಯು ಮಾತನಾಡುತ್ತದೆ - ಆದರೆ ಅದು ಹೇಳುವುದೇನು?

ಅಪೋಸ್ತಲನಾದ ಪೌಲನು ಹೀಗೆ ಬರೆದನು,

**ರೋಮಾ 10:6a,8 ಆದರೆ ನಂಬಿಕೆಯಿಂದುಂಟಾಗುವ ನೀತಿಯು ಏನು ಹೇಳುತ್ತದೆ?... ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ.**

ನಂಬಿಕೆಯು ದೇವರ ವಾಕ್ಯವನ್ನು ಮಾತನಾಡುತ್ತದೆ. ನಮ್ಮ ಪ್ರಾರ್ಥನೆಗಳಿಗೆ ಉತ್ತರ ಸಿಗಬೇಕಾದರೆ ನಾವು ನಂಬಬೇಕು ಮತ್ತು ನಾವು ನಂಬಬೇಕಾದರೆ ದೇವರ ವಾಕ್ಯವನ್ನು ತಿಳಿದುಕೊಳ್ಳಬೇಕು ಮತ್ತು ಆತನ ಸ್ವರವನ್ನು ಕೇಳಬೇಕು.

ಇದು ನಮ್ಮಲ್ಲಿ ಒಂದು ಪ್ರಶ್ನೆ ಉದ್ಭವಿಸುವಂತೆ ಮಾಡುತ್ತದೆ, "ನಿಜವಾದ ನಂಬಿಕೆ ಎಂದರೇನು?"

ಅದಕ್ಕೆ ಉತ್ತರವನ್ನು ಕಂಡುಕೊಳ್ಳುವುದಕ್ಕಿಂತ ಮೊದಲು ನಾವು ಯಾವ ರೀತಿಯಲ್ಲಿ ಸೃಷ್ಟಿಸಲ್ಪಟ್ಟಿದ್ದೇವೆ ಎಂಬುದನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾದದ್ದು.ನಾವು ಯಾರಾಗಿದ್ದೇವೆ

**ದೇಹ, ಪ್ರಾಣ ಮತ್ತು ಆತ್ಮ**

ನಾವು ಮೂರು ಭಾಗಗಳಿಂದ ಉಂಟುಮಾಡಲ್ಪಟ್ಟಿದ್ದೇವೆ:

ದೇಹ - ನಮ್ಮ ಮೂಳೆಗಳು, ಮಾಂಸ ಮತ್ತು ರಕ್ತ

ಪ್ರಾಣ - ನಮ್ಮ ಬುದ್ಧಿಶಕ್ತಿ, ನಮ್ಮ ಸ್ವ-ಇಚ್ಛೆ, ನಮ್ಮ ಭಾವನೆಗಳು

ಆತ್ಮ - ನಮ್ಮ ಜೀವ, ನಮ್ಮ ಅಸ್ತಿತ್ವ

ಆತ್ಮವಿಲ್ಲದ ದೇಹ ಸತ್ತದ್ದು ಎಂದು ಯಾಕೋಬನು ಹೇಳಿದನು.

**ಯಾಕೋಬನು 2:26 ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ.**

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಪ್ರಾಣ ಮತ್ತು ಆತ್ಮವನ್ನು ಉಲ್ಲೇಖಿಸುತ್ತಾ ದೇವರ ವಾಕ್ಯದಿಂದ ನಾವು ಪ್ರಾಣ ಮತ್ತು ಆತ್ಮ ಎರಡೂ ಬೇರೆಯಾದದ್ದು ಎಂಬುದನ್ನು ತಿಳಿದುಕೊಳ್ಳಬಹುದು ಎಂದು ಹೇಳುತ್ತಾನೆ.

**ಇಬ್ರಿಯರಿಗೆ 4:12 ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.**

ಥೆಸಲೋನಿಕದವರಿಗೆ ಬರೆದ ಪತ್ರಿಕೆಯಲ್ಲಿ ಪೌಲನು ದೇವರು ನಮ್ಮನ್ನು ಪರಿಪೂರ್ಣವಾಗಿ - ಅಂದರೆ ಆತ್ಮ, ಪ್ರಾಣ ಮತ್ತು ಶರೀರಗಳನ್ನು - ಪವಿತ್ರಮಾಡಲಿ ಎಂದು ಪ್ರಾರ್ಥಿಸುತ್ತಾನೆ.

**1 ಥೆಸಲೋನಿಕದವರಿಗೆ 5:23 ಶಾಂತಿದಾಯಕನಾದ ದೇವರು ತಾನೇ ನಿಮ್ಮನ್ನು ಪರಿಪೂರ್ಣವಾಗಿ ಪವಿತ್ರಮಾಡಲಿ. ನಮ್ಮ ಕರ್ತನಾದ ಯೇಸು ಕ್ರಿಸ್ತನು**

**ಪ್ರತ್ಯಕ್ಷನಾದಾಗ ನಿಮ್ಮ ಆತ್ಮಪ್ರಾಣಶರೀರಗಳು ದೋಷವಿಲ್ಲದೆ ಸಂಪೂರ್ಣವಾಗಿ ಕಾಣಿಸುವಂತೆ ಕಾಪಾಡಲ್ಪಡಲಿ.**

**ಆತ್ಮನಿಂದ ಹುಟ್ಟಿದ್ದು**

ದೇವರೊಂದಿಗೆ ನಾವು ಹೊಂದಿರುವ ಸಂಬಂಧವು ಆತ್ಮಸಂಬಂಧವಾದದ್ದು. ನಾವು ಆತ್ಮದಲ್ಲಿ ಹೊಸದಾಗಿ ಹುಟ್ಟುತ್ತೇವೆ. ನಮ್ಮಲ್ಲಿ ಅನೇಕರು ದೇವರನ್ನು ನಮ್ಮ ಪ್ರಾಣಗಳಿಂದ ಸೇವಿಸಲು, ಆರಾಧಿಸಲು ಮತ್ತು ಪ್ರಾರ್ಥಿಸಲು ಯತ್ನಿಸುತ್ತೇವೆ. ಆದರೆ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಪರಿಶುದ್ಧಾತ್ಮನಲ್ಲಿ ಹುಟ್ಟಬೇಕು ಮತ್ತು ಆತ್ಮದಲ್ಲಿ ದೇವರ ಬಳಿಗೆ ಬರಬೇಕು.

**ಯೋಹಾನ 3:4-6 ನಿಕೊದೇಮನು ಆತನನ್ನು - ಮನುಷ್ಯನು ಮುದುಕನಾದ ಮೇಲೆ ಹುಟ್ಟುವದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೇ? ಎಂದು ಕೇಳಿದನು. ಅದಕ್ಕೆ ಯೇಸು - ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ದೇವರ ರಾಜ್ಯಕ್ಕೆ ಸೇರಲಾರನು. ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ.**

ದೇವರು ಆತ್ಮಸ್ವರೂಪನು ಮತ್ತು ನಾವು ಆತ್ಮದಲ್ಲಿ ಮಾತ್ರ ಅವರ ಬಳಿಗೆ ಬರಲು ಸಾಧ್ಯ ಎಂಬುದನ್ನು ಯೋಹಾನನು ನಮಗೆ ತಿಳಿಸುತ್ತಾನೆ.

**ಯೋಹಾನನು 4:23,24 ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು ಅಂದನು.**

✳ *ಒಂದು ನೂತನ ಸೃಷ್ಟಿ*

ನಾವು ಆತ್ಮದಲ್ಲಿ ನೂತನ ಸೃಷ್ಟಿಗಳಾಗಬೇಕು.

**2 ಕೊರಿಂಥ 5:17 ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನಸೃಷ್ಟಿಯಾದನು. ಇಗೋ, ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**

**ದೇವರೊಂದಿಗೆ ಒಂದೇ ಆತ್ಮವಾಗುವುದು**

ಹೊಸದಾಗಿ ಹುಟ್ಟುವುದರ ಮೂಲಕ ನಾವು ದೇವರೊಂದಿಗೆ ಒಂದೇ ಆತ್ಮವಾಗುತ್ತೇವೆ. ನಾವು ದೇವರೊಂದಿಗೆ ಅಥವಾ ದೇವರಿಗಾಗಿ ಮಾಡುವಂತದನ್ನು ಆತ್ಮದಲ್ಲಿಯೇ ಮಾಡಬೇಕು. ನಮ್ಮ ಪ್ರಾರ್ಥನೆಗಳು ಪರಿಣಾಮಕಾರಿಯಾಗಬೇಕಾದರೆ, ನಮ್ಮ ಮನಸ್ಸಿನಿಂದ ಮಾತ್ರ ಸ್ವಾಭಾವಿಕ ಮಟ್ಟದಲ್ಲಿ ಮಾಡಬಾರದು - ಆತ್ಮದಲ್ಲಿಯೂ ಮಾಡಬೇಕು.

**1 ಕೊರಿಂಥ 6:17 ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ.**

ಅಪೋಸ್ತಲನಾದ ಪೌಲನು ಮಾಡಿದಂತೆ ನಾವು ನಮ್ಮ ಆತ್ಮದಿಂದ ದೇವರನ್ನು ಸೇವಿಸಬೇಕು.

**ರೋಮಾ 1:9a ಇದಕ್ಕೆ ದೇವರೇ ನನ್ನ ಸಾಕ್ಷಿ; ಆತನ ಮಗನ ಸುವಾರ್ತೆಯನ್ನು ಸಾರುತ್ತಾ ಆತನನ್ನೇ ನನ್ನ ಆತ್ಮದಲ್ಲಿ ಆರಾಧಿಸುವವನಾಗಿದ್ದೇನೆ.**

ನಾವು ನಂಬಿಕೆಯಿಂದ ದೇವರ ಬಳಿಗೆ ಬರುವಾಗ ಮಾತ್ರ ಆತನನ್ನು ಮೆಚ್ಚಿಸಲು ಸಾಧ್ಯ ಎಂಬುದನ್ನು ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ಪ್ರಕಟಿಸುತ್ತಾನೆ.

**ಇಬ್ರಿಯರಿಗೆ 11:6 ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ.**

## ಸ್ವಾಭಾವಿಕವಾದ ಮತ್ತು ಅಲೌಕಿಕವಾದ ನಂಬಿಕೆ

**ಸ್ವಾಭಾವಿಕವಾದ ನಂಬಿಕೆ**

ನಂಬಿಕೆ ಎನ್ನುವುದು ಒಬ್ಬ ವ್ಯಕ್ತಿಯ ಅಥವಾ ಒಂದು ಆಲೋಚನೆಯ ಸತ್ಯತೆ, ಮೌಲ್ಯತೆ ಮತ್ತು ವಿಶ್ವಾಸಾರ್ಹತೆಯ ಮೇಲಿರುವ ದೃಢವಾದ ಭರವಸೆ ಎಂದು ಡಿಕ್ಷನರಿ (ನಿಘಂಟು) ಹೇಳುತ್ತದೆ. ನಂಬಿಕೆಯು ನಮ್ಮ ಪ್ರಾಣಗಳಿಗಿರುವ ಒಂದು ಸ್ವಾಭಾವಿಕವಾದ ಸಾಮಾರ್ಥ್ಯವಾಗಿದೆ. ಉದಾಹರಣೆಗೆ, ನಾವು ಒಂದು ಕುರ್ಚಿಯ ಮೇಲೆ ಕುಳಿತಾಗ ಅದು ಮುರಿದು ಬೀಳುವುದಿಲ್ಲ ಎಂದು ನಂಬುತ್ತೇವೆ. ನಮ್ಮಲ್ಲಿ ಅನೇಕರು ನಿರಂತರವಾಗಿ ಸ್ವಾಭಾವಿಕ ಮಟ್ಟದ ನಂಬಿಕೆಯಲ್ಲಿಯೇ ಕಾರ್ಯಮಾಡುತ್ತೇವೆ, ಆದರೆ ಇದು ಸತ್ಯವೇದದಲ್ಲಿ ಪ್ರಕಟವಾಗಿರುವ ದೇವರ ರೀತಿಯಾದ ನಂಬಿಕೆಯಲ್ಲ.

**ಅಲೌಕಿಕವಾದ ನಂಬಿಕೆ**

ಅಲೌಕಿಕ ನಂಬಿಕೆಯು ತಾರ್ಕಿಕ ಪುರಾವೆ ಅಥವಾ ಶಾರೀರಿಕ ಪುರಾವೆಗಳ ಮೇಲೆ ಆತುಕೊಂಡಿಲ್ಲ, ಬದಲಾಗಿ ಅದು ದೇವರಲ್ಲಿರುವ ಮತ್ತು ಆತನ ವಾಕ್ಯದಲ್ಲಿರುವ ಭದ್ರವಾದ ನಂಬಿಕೆಯನ್ನು ಆಧರಿಸಿದೆ. ಅಲೌಕಿಕ ನಂಬಿಕೆಯು ನಮ್ಮ ಆತ್ಮಗಳಿಂದ ಬರುವಂತದ್ದು - ನಮ್ಮ ಮನಸ್ಸಿನಿಂದಲ್ಲ. ಅಲೌಕಿಕ ನಂಬಿಕೆಯೆಂದರೆ ಯಾವುದೇ ರೀತಿಯಾಗಿ ಪ್ರಶ್ನಿಸದೆ ಅಥವಾ ವಿವರಣೆಯನ್ನು

ಹುಡುಕದೆ ದೇವರ ವಾಕ್ಯವನ್ನು ನಂಬುವುದು ಮತ್ತು ಅದರಂತೆ ಕಾರ್ಯ ಮಾಡುವುದಾಗಿದೆ.

**ಹೊಯ್ದಾಡುವ ಮನಸ್ಸು**

ನಂಬಿಕೆಯಿಂದ ಬೇಡಿಕೊಂಡ ನಂತರ ಸಂದೇಹಪಡಲು ಪ್ರಾರಂಭಿಸುವ ವ್ಯಕ್ತಿಯನ್ನು ಯಾಕೋಬನು ವರ್ಣಿಸುತ್ತಾನೆ. ಈ ವ್ಯಕ್ತಿಯು ನಂಬಿಕೆಯಿಂದ ಪ್ರಾರಂಭಿಸಿ ಅಂತ್ಯದಲ್ಲಿ ನಂಬಿಕೆಯಿಲ್ಲದವನಾಗುತ್ತಾನೆ, ಹೀಗೆ ನಿರಂತರವಾಗಿ ನಡೆದುಕೊಳ್ಳುತ್ತಾನೆ. ಅವನು ಅಥವಾ ಅವಳು ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ಅಲೆಯಂತೆ ಹಿಂದಕ್ಕೆ ಮತ್ತು ಮುಂದಕ್ಕೆ ಎಸೆಯಲ್ಪಡುತ್ತಾನೆ.

**ಯಾಕೋಬ 1:5,6 ನಿಮ್ಮಲ್ಲಿ ಯಾವನಿಗಾದರೂ ಜ್ಞಾನ ಕಡಿಮೆಯಾಗಿದ್ದರೆ ಅವನು ದೇವರನ್ನು ಕೇಳಿಕೊಳ್ಳಲಿ, ಅದು ಅವನಿಗೆ ದೊರಕುವದು; ದೇವರು ಹಂಗಿಸದೆ ಎಲ್ಲರಿಗೂ ಉದಾರ ಮನಸ್ಸಿನಿಂದ ಕೊಡುವವನಾಗಿದ್ದಾನೆ. ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು.**

ಸಂದೇಹವು ನಂಬಿಕೆಗೆ ವಿರುದ್ಧವಾದದ್ದು. ಅದು ಸ್ವಾಭಾವಿಕ ಮನಸ್ಸಿನ ಕಾರ್ಯವಾಗಿದೆ. ಸಂದೇಹಪಡುವುದು ಅಂದರೆ ತೀರ್ಮಾನವಿಲ್ಲದಿರುವುದು ಅಥವಾ ಸಂಶಯದಿಂದ ಕೂಡಿರುವುದು; ನಂಬಿಕೆ ಇಡದಿರುವುದು ಅಥವಾ ವಿಶ್ವಾಸ ಇಡದಿರುವುದು; ಅಸಂಭವವೆಂದು ಪರಿಗಣಿಸುವುದು; ನಿಶ್ಚಿತತೆ ಇಲ್ಲದಿರುವುದು: ವಿಶ್ವಾಸದ ಕೊರತೆ.

ನಾವು ಒಂದೇ ಸಮಯದಲ್ಲಿ ನಂಬಿಕೆಯಲ್ಲಿಯೂ ಮತ್ತು ಸಂದೇಹದಲ್ಲಿಯೂ ಇರಲು ಸಾಧ್ಯವಿಲ್ಲ. ನಾವು ಒಂದೇ ಸಮಯದಲ್ಲಿ ನಂಬಿಕೆಯಲ್ಲಿಯೂ ಮತ್ತು ಚಿಂತೆಯಲ್ಲಿಯೂ ಇರಲು ಸಾಧ್ಯವಿಲ್ಲ. ಅವೆರಡೂ ಒಂದಕ್ಕೊಂದು ವಿರುದ್ಧವಾಗಿವೆ.

**ಸಂದೇಹಕ್ಕೆ ಮೂಲಕಾರಣಗಳು**

ಒಬ್ಬ ವ್ಯಕ್ತಿಯು ಸಂದೇಹದೊಂದಿಗೆ ಹೋರಾಡಾಲು ಮೂರು ಮುಖ್ಯವಾದ ಕಾರಣಗಳಿವೆ. ಅವುಗಳನ್ನು ನಾವು ಗುರುತಿಸಬಹುದು ಮತ್ತು ನಿಭಾಯಿಸಬಹುದು.

✻ *ಸ್ವಾಭಿಮಾನದ ಕೊರತೆ*

ಸಂದೇಹಪಡಲು ಪ್ರಮುಖ ಕಾರಣವೆಂದರೆ ಸ್ವಾಭಿಮಾನದ ಕೊರತೆ. ನಮ್ಮ ಸ್ವಾಭಿಮಾನದ ಕೊರತೆಯ ಬಗ್ಗೆ ಅತ್ಯಂತ ಅಪಾಯಕಾರಿ ವಿಷಯವೆಂದರೆ ನಾವು ಇದರ ಬಗ್ಗೆ ಏನೂ ಮಾಡಲು ಸಾಧ್ಯವಿಲ್ಲ ಎಂದು ನಾವು ಭಾವಿಸುತ್ತೇವೆ. " ನಾನು ಬೆಳೆದು ಬಂದಿದ್ದು ಹೀಗೆಯೇ, ನಾನೇನು ಮಾಡಲಿ ನಾನಿರೋದೇ ಹೀಗೆ" ಎಂದು ಹೆಚ್ಚಾಗಿ ಕೇಳಿಬರುತ್ತದೆ.

ಆದರೂ ರಕ್ಷಣೆಯಲ್ಲಿ ನಾವು ನೂತನ ಸೃಷ್ಟಿಗಳಾಗುತ್ತೇವೆ. ನಾವು ದೇವರೊಂದಿಗೆ ಒಂದೇ ಆತ್ಮವಾಗುತ್ತೇವೆ. ನೂತನ ಸೃಷ್ಟಿಯಾಗಿದ್ದೇವೆ ಎಂಬ ಪ್ರಕಟನೆಯು ಒಬ್ಬ ವ್ಯಕ್ತಿಗೆ ಉಂಟಾಗುವಾಗ ನಕರಾತ್ಮಕ ಸ್ವ-ಚಿತ್ರಣಕ್ಕೆ ಸ್ಥಳವಿರುವುದಿಲ್ಲ.

ನಾವು ಪಾಪದಲ್ಲಿ ಸತ್ತವರಾಗಿದ್ದಾಗಲೂ ದೇವರು ನಮ್ಮನ್ನು ಪ್ರೀತಿಸಿದನು ಎಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ. ಒಂದು ವೇಳೆ ನಮ್ಮ ತಂದೆತಾಯಿಗಳು ನಮಗೆ ತೋರಿಸಬೇಕಾದಷ್ಟು ಪ್ರೀತಿ ತೋರಿಸದೆ ಇರಬಹುದು. ಬಹುಶಃ ನಮ್ಮನ್ನು ನೋಯಿಸುವ ಮತ್ತು ನಕಾರಾತ್ಮಕವಾದ ಮಾತುಗಳನ್ನಾಡಿರಬಹುದು ಆದರೆ ದೇವರು ನಮ್ಮನ್ನು ಪ್ರೀತಿಸುತ್ತಾರೆ.

**ಎಫೆಸ 2:4-6  ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ.) ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ.**

ದೇವರು ನಮ್ಮಲ್ಲಿ ಆನಂದಿಸಿ ಹರ್ಷಧ್ವನಿಗೈಯುವ ಒಂದು ಸುಂದರವಾದ ಚಿತ್ರಣವನ್ನು ಪ್ರವಾದಿಯಾದ ಚೆಫನ್ಯನು ನಮಗೆ ಕೊಡುತ್ತಾನೆ.

**ಚೆಫನ್ಯ 3:17  ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ, ನಿನ್ನನ್ನು ರಕ್ಷಿಸುವನು; ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು; ತನ್ನ ಪ್ರೀತಿಯಲ್ಲಿ ಮುಣುಗಿ ಮೌನವಾಗಿರುವನು; ನಿನ್ನಲ್ಲಿ ಆನಂದಿಸಿ ಹರ್ಷಧ್ವನಿಗೈಯುವನು ಎಂದು ಹೇಳೋಣವಾಗುವದು.**

**✶  ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ ಎಂಬುದರ ಬಗ್ಗೆ ದೇವರ ವಾಕ್ಯವು ಹೇಳುವುದನ್ನು ಅಧ್ಯಯನ ಮಾಡುವದರಿಂದ, ಘೋಷಿಸುವದರಿಂದ ಮತ್ತು ನಂಬುವದರಿಂದ ಸ್ವಾಭಿಮಾನದ ಕೊರತೆಯನ್ನು ನಿಭಾಯಿಸುತ್ತೇವೆ.**

✷ *ಪಾಪ*

ಸಂದೇಹಕ್ಕೆ ಇನ್ನೊಂದು ಕಾರಣ ಪಾಪ. ಅನೇಕ ಬಾರಿ ನಾವು ನಮ್ಮ ಪ್ರಜ್ಞಾಪೂರ್ವಕ ಮನಸ್ಸಿನಿಂದ ಪಾಪವನ್ನು ಮರೆಮಾಡಲು ಯತ್ನಿಸಿದ್ದೇವೆ. ನಾವು ನಮ್ಮ ಮನಸ್ಸಿನಲ್ಲಿ ಪಾಪವನ್ನು ದೇವರು ಪರಿಗಣಿಸುವುದಿಲ್ಲವೆಂದು ಮನವರಿಕೆ ಮಾಡಿಕೊಂಡಿದ್ದೇವೆ, ಆದರೆ ನಮ್ಮ ಆತ್ಮ ದೇವರೊಂದಿಗೆ ಒಂದಾಗಿದೆ. ಇದು ಪಾಪ ಎಂದು ನಮ್ಮ ಆತ್ಮಕ್ಕೆ ತಿಳಿದಿದೆ. ನಮ್ಮ ಮನಸ್ಸಿನಲ್ಲಿ ನಾವು ದೋಷವನ್ನು ಸರಿ ಎಂದು ಒಪ್ಪಿಕೊಂಡಿರುವುದರಿಂದ ಎರಡು ಮನಸ್ಸುಳ್ಳವರಾಗಿದ್ದೇವೆ.

**ಯಾಕೋಬ 1:6-8  ಸ್ವಲ್ಪವೂ ಸಂದೇಹಪಡದೆ ನಂಬಿಕೆಯಿಟ್ಟು ಕೇಳಿಕೊಳ್ಳಬೇಕು. ಸಂದೇಹಪಡುವವನೋ ಗಾಳಿಯಿಂದ ಬಡಿಯಲ್ಪಟ್ಟ ಸಮುದ್ರದ ತೆರೆಯಂತೆ ಅಲೆಯುತ್ತಿರುವನು. ಆ ಮನುಷ್ಯನು ತಾನು ಕರ್ತನಿಂದ ಏನಾದರೂ ಹೊಂದುವೆನೆಂದು ಭಾವಿಸದೆ ಇರಲಿ; ಅವನು ಎರಡು ಮನಸ್ಸುಳ್ಳವನೂ ತನ್ನ ನಡತೆಯಲ್ಲೆಲ್ಲಾ ಚಂಚಲನೂ ಆಗಿದ್ದಾನೆ**

ನಾವು 1 ಅರಸುಗಳಲ್ಲಿ ಹೀಗೆ ಓದುತ್ತೇವೆ,

**1 ಅರಸು 2:4b ಯೆಹೋವನು - ನಿನ್ನ ಸಂತಾನದವರು ನಂಬಿಗಸ್ತರಾಗಿ ಪೂರ್ಣಮನಸ್ಸಿನಿಂದಲೂ ಪೂರ್ಣಪ್ರಾಣದಿಂದಲೂ ನನಗೆ ನಡೆದುಕೊಳ್ಳುವದರಲ್ಲಿ ಜಾಗರೂಕರಾಗಿರುವದಾದರೆ ಅವರು ತಪ್ಪದೆ ಇಸ್ರಾಯೇಲ್ ಸಿಂಹಾಸನದ ಮೇಲೆ ಕೂತುಕೊಳ್ಳುವರು ಎಂಬದಾಗಿ ತಾನು ನನಗೆ ಮಾಡಿದ ವಾಗ್ದಾನವನ್ನು ಸ್ಥಿರಪಡಿಸುವನು.**

ಅವರು ನಂಬಿಗಸ್ತರಾಗಿ ಪೂರ್ಣಮನಸ್ಸಿನಿಂದಲೂ (ಆತ್ಮದಿಂದಲೂ) ಪೂರ್ಣಪ್ರಾಣದಿಂದಲೂ ದೇವರಿಗೆ ನಡೆದುಕೊಳ್ಳುವದರಲ್ಲಿ ಜಾಗರೂಕರಾಗಿರಬೇಕಾಗಿತ್ತು.

✶ **ಈ ಕ್ಷೇತ್ರದ ಮೂಲಕ ಸಂದೇಹವು ನುಸುಳದಂತೆ ತಪ್ಪಿಸಬೇಕಾದರೆ ನಾವು ಪಾಪವನ್ನು ಗುರುತಿಸಬೇಕು ಮತ್ತು ಅದನ್ನು ಅರಿಕೆ ಮಾಡಬೇಕು. ಆಗ ಅದು ಕ್ಷಮಿಸಲ್ಪಡುವುದು ಮತ್ತು ತೆಗೆದುಹಾಕಲ್ಪಡುವುದು.**

**1 John 1:9 ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು.**

✱ *ಅಸತ್ಯ*

ಸಂದೇಹಕ್ಕೆ ಮೂರನೆಯ ಕಾರಣವು ಇಂದು ಎಲ್ಲೆಡೆ ವ್ಯಾಪಿಸಿರುವ ಒಂದು ಸಮಸ್ಯೆಯಾಗಿದೆ - ಅಸತ್ಯ. ಇನ್ನೊಬ್ಬರ ಭಾವನೆಗಳಿಗೆ ಧಕ್ಕೆ ಬಾರದಿರಲು ಅಥವಾ ಎಲ್ಲವೂ ಸುಗಮವಾಗಿ ಸಾಗಲು "ಸಣ್ಣಪುಟ್ಟ ಸುಳ್ಳುಗಳನ್ನು" ಅಥವಾ "ಸಾಮಾಜಿಕ ಸುಳ್ಳುಗಳನ್ನು" ಹೇಳುವದರಲ್ಲಿ ತಪ್ಪೇನಿಲ್ಲ ಎಂದು ಹಲವರು ಭಾವಿಸುತ್ತಾರೆ.

ಸುಳ್ಳು ಹೇಳುವ ವ್ಯಕ್ತಿಯು ಎಲ್ಲರೂ ತನಗೆ ಸುಳ್ಳನ್ನು ಹೇಳುತ್ತಿದ್ದಾರೆ ಅಂದುಕೊಳ್ಳುತ್ತಾನೆ. ಅವನು ಅಸತ್ಯವನ್ನು ಪಾಲಿಸುತ್ತಿರುವುದರಿಂದ ಬೇರೆ ಯಾರನ್ನೇ ಆಗಲಿ ಸತ್ಯವಂತರೆಂದು ನಂಬುವುದಿಲ್ಲ. ಈ ಅಪನಂಬಿಕೆ ದೇವರಿಗೂ ವಿಸ್ತರಿಸುತ್ತದೆ. ಅವನಿಗೆ ತನ್ನ ಮಾತಿನ ಮೇಲೆ ಯಾವ ಭರವಸೆ ಇಲ್ಲದಿರುವುದರಿಂದ ದೇವರ ವಾಕ್ಯದ ಮೇಲೂ ನಂಬಿಕೆ ಇಡಲು ಸಾಧ್ಯವಾಗುವುದಿಲ್ಲ. ಅವನು ನಂಬುತ್ತೇನೆ ಎಂದು ಹೇಳಬಹುದು ಅಥವಾ ಯೋಚಿಸಬಹುದು ಆದರೆ ವಾಸ್ತವದಲ್ಲಿ ಅವನು ತನ್ನ ಗುಣದ ನಿಮಿತ್ತ ನಂಬಲು ಸಾಧ್ಯವಿಲ್ಲ.

ದೇವರು ಸುಳ್ಳನ್ನು ಹೇಗೆ ಕಾಣುತ್ತಾನೆ ಎಂಬುದರ ಬಗ್ಗೆ ಅರಸನಾದ ಸೊಲೊಮೋನನು ಸ್ಪಷ್ಟವಾಗಿ ಹೇಳಿದ್ದಾನೆ.

**ಜ್ಞಾನೋಕ್ತಿ 6:16-17a ಯೆಹೋವನು ಹಗೆಮಾಡುವ ವಸ್ತುಗಳು ಆರು ಇವೆ. ಹೌದು, ಏಳು ಆತನಿಗೆ ಅಸಹ್ಯಗಳಾಗಿ ತೋರುತ್ತವೆ. ಯಾವವಂದರೆ, ಹೆಮ್ಮೆಯ ಕಣ್ಣು, ಸುಳ್ಳಿನ ನಾಲಿಗೆ…**

✶ **ಈ ಕ್ಷೇತ್ರದ ಮೂಲಕ ಸಂದೇಹವು ಒಳಗೆ ಪ್ರವೇಶಿಸದಂತೆ ತಡೆಯಲು ನಾವು ಯಾಥಾರ್ಥವಾದ ವಿಶ್ವಾಸರ್ಹ ವ್ಯಕ್ತಿಯಾಗಿರುವೆವು ಎಂಬ ಸಮರ್ಪಣೆಯನ್ನು ಮಾಡಿಕೊಳ್ಳಬೇಕು.**

ನಾವು ಹಿಂದೆ ಹೇಳಿರುವ ಸುಳ್ಳುಗಳನ್ನು ದೇವರಿಗೆ ಅರಿಕೆ ಮಾಡುವುದರ ಮೂಲಕ ಇದನ್ನು ಮಾಡಬಹುದು. ಸುಳ್ಳಿನ ಅಭ್ಯಾಸವನ್ನು ಮುರಿಯಬೇಕಾದರೆ ನಾವು ಯಾರಿಗಾದರೂ ಸುಳ್ಳು ಹೇಳಿದ ತಕ್ಷಣವೇ ಅದನ್ನು ಅವರ ಮುಂದೆ ಅರಿಕೆ ಮಾಡಬೇಕು. ಎಷ್ಟು ಬೇಗನೇ ಹೀಗೆ ಮಾಡುವಾಗ ಆಗುವ ಮುಜುಗರವು ನಾವು ಮಾತನಾಡುವ ಮುನ್ನ ಆಲೋಚಿಸಿ ಮಾತನಾಡಬೇಕು ಎಂಬುದನ್ನು ನಮಗೆ ಕಲಿಸುತ್ತದೆ ಎಂಬುದು ನಿಜವಾಗಲೂ ಆಶ್ಚರ್ಯ ಹುಟ್ಟಿಸುತ್ತದೆ.

**ಯಾಕೋಬನು 5:16 ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ.**

## ಸತ್ಯದ ಮೇಲೆ ಆಧರಿತವಾದ ನಿಜವಾದ ನಂಬಿಕೆ

ದೇವರ ವಾಕ್ಯದಲ್ಲಿ "ಸತ್ಯದಲ್ಲಿ ಅಥವಾ ಯಥಾರ್ಥ" ಎಂಬ ಪದವನ್ನು ಅನೇಕ ಬಾರಿ ಕಾಣುತ್ತೇವೆ. ಯೆಹೋಶುವನು ಹೀಗೆ ಬರೆದನು,

**ಯೆಹೋಶುವ 24:14a ಹೀಗಿರುವದರಿಂದ ನೀವು ಯೆಹೋವನಲ್ಲಿ ಭಯ ಭಕ್ತಿಯುಳ್ಳವರಾಗಿರ್ರಿ; ಆತನನ್ನು ಪೂರ್ಣಮನಸ್ಸಿನಿಂದಲೂ ಯಥಾರ್ಥಚಿತ್ತದಿಂದಲೂ ಸೇವಿಸಿರಿ.**

ಪ್ರವಾದಿಯಾದ ಸಮುವೇಲನು ಹೀಗೆ ಬರೆದನು,
**1 ಸಮುವೇಲನು 12:24 “ನೀವಾದರೋ ಯೆಹೋವನಲ್ಲಿ ಭಯಭಕ್ತಿಯುಳ್ಳವರಾಗಿದ್ದು ಆತನು ನಿಮಗೋಸ್ಕರವಾಗಿ ಮಾಡಿದ ಮಹತ್ಕಾರ್ಯಗಳನ್ನು ನೆನಸಿಕೊಂಡು ಆತನನ್ನು ಸತ್ಯದಿಂದಲೂ ಪೂರ್ಣಮನಸ್ಸಿನಿಂದಲೂ ಸೇವಿಸುತ್ತಾ ಬರಬೇಕು.**

ಅರಸನಾದ ಸೊಲೊಮೋನನು ಹೀಗೆ ಬರೆದನು,
**1 ಅರಸು 3:6a ನಿನಗೆ ನಂಬಿಗಸ್ತನಾಗಿ ನೀತಿಯಿಂದಲೂ ಯಥಾರ್ಥಚಿತ್ತದಿಂದಲೂ ನಡೆದುಕೊಂಡ ನಿನ್ನ ಸೇವಕನೂ ನನ್ನ ತಂದೆಯೂ ಆದ ದಾವೀದನಿಗೆ ನೀನು ಮಹಾಕೃಪೆಯನ್ನು ತೋರಿಸಿದಿ; ಅವನ ಮೇಲೆ ಬಹಳವಾಗಿ ಕೃಪೆಮಾಡಿ ಈಗಿರುವಂತೆ ಅವನ ಸಿಂಹಾಸನಕ್ಕೆ ಒಬ್ಬ ಮಗನನ್ನು ಅನುಗ್ರಹಿಸಿದ್ದರಲ್ಲಿ ಅದನ್ನು ಪೂರ್ತಿಗೊಳಿಸಿದಿ.**

ಅರಸನಾದ ಹಿಜ್ಕೀಯನು ಹೀಗೆ ಪ್ರಾರ್ಥಿಸಿದನು,
**2 ಅರಸು 20:3a ಯೆಹೋವನೇ, ನಾನು ನಂಬಿಗಸ್ತನಾಗಿಯೂ ಯಥಾರ್ಥಚಿತ್ತನಾಗಿಯೂ ನಿನಗೆ ನಡೆದುಕೊಂಡು ನಿನ್ನ ದೃಷ್ಟಿಯಲ್ಲಿ ಒಳ್ಳೆಯವನಾಗಿದ್ದದ್ದನ್ನು ನೆನಪು ಮಾಡಿಕೋ...**

ಅಪೋಸ್ತಲನಾದ ಯೋಹಾನನು ಹೀಗೆ ಬರೆದನು,

**1 ಯೋಹಾನ 3:18 ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು.**

**✶ ದೇವರ ಕಾರ್ಯಗಳನ್ನು ಸತ್ಯದಲ್ಲಿ ಮಾತ್ರ ಮಾಡಲು ಸಾಧ್ಯ.**

"ಯಾವ ವಿಧದಲ್ಲಾದರೂ ಇದನ್ನು ಸಾಧಿಸಬೇಕು" ಎಂದು ನಂಬುವ ಜನರನ್ನು ನಾವು ಎದುರುಗೊಂಡಿದ್ದೇವೆ. "ಒಂದು ಒಳ್ಳೆಯ ಕಾರ್ಯಕ್ಕಾಗಿ" ಕೇಳುತ್ತಿದ್ದೇವೆ ಎಂಬ ಭಾವನೆಯೊಂದಿಗೆ ಅವರು ತಮ್ಮ ಅಗತ್ಯತೆಗಳಿಗಾಗಿ - ಮತ್ತು ತಮ್ಮ ದೇವರ ಸೇವೆಗಾಗಿಯೂ - ಹಣವನ್ನು ಪಡೆದುಕೊಳ್ಳಲು ಸುಳ್ಳು ಹೇಳುತ್ತಾರೆ.

ಅರಸನಾದ ದಾವೀದನು ಹೀಗೆ ಬರೆದನು,

**ಕೀರ್ತನೆ 33:4 ಯೆಹೋವನ ವಚನವು ಯಥಾರ್ಥವಾದದ್ದು; ಆತನ ಕೃತ್ಯವೆಲ್ಲಾ ನಂಬಿಕೆಯಾಗಿದೆ.**

**ಕೀರ್ತನೆ 111:7,8 ಆತನ ಕೈಕೆಲಸಗಳು ನೀತಿಸತ್ಯತೆಗಳನ್ನು ಪ್ರಕಟಿಸುತ್ತವೆ; ಆತನ ನಿಯಮಗಳೆಲ್ಲಾ ಸ್ಥಿರವಾಗಿವೆ. ಅವು ದೃಢವಾದ ಆಧಾರವುಳ್ಳವು; ಯುಗಯುಗಾಂತರಕ್ಕೂ ಇರುವವು. ಸತ್ಯನೀತಿಗಳಿಗನುಸಾರವಾಗಿ ವಿಧಿಸಲ್ಪಟ್ಟಿವೆ.**

## ದೇವರ ರೀತಿಯ ನಂಬಿಕೆ

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ನಂಬಿಕೆಯ ಬಗ್ಗೆ ಇಬ್ರಿಯರಿಗೆ 11 ರಲ್ಲಿ ಒಂದು ಅದ್ಭುತವಾದ ಅಧ್ಯಾಯವನ್ನು ಕೊಟ್ಟಿದ್ದಾನೆ. ಅದು ಹಳೆ ಒಡಂಬಡಿಕೆಯ ಭಕ್ತರ ಒಂದು ಹಾಜರಾತಿ ಕೂಗಾಗಿದೆ. ಈ ಅಧ್ಯಾಯವನ್ನು ಓದದೆ ನಂಬಿಕೆಯ ಯಾವ ಅಧ್ಯಯನವೂ ಪರಿಪೂರ್ಣವಾಗುವುದಿಲ್ಲ.

### ವ್ಯಾಖ್ಯಾನ

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ನಾವು ನಂಬಿಕೆಯು ಏನೆಂಬುದನ್ನು ಕಲಿತುಕೊಳ್ಳುತ್ತೇವೆ.

**ಇಬ್ರಿಯರಿಗೆ 11:1,3 ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ.**

**ಲೋಕಗಳು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ.**

ಶಿಷ್ಯರು ದೇವರಲ್ಲಿ ನಂಬಿಕೆಯಿಡಬೇಕೆಂದು ಯೇಸು ಉಪದೇಶಿಸಿದರು. ನಂತರ ಅವರು ಈ ನಂಬಿಕೆಯನ್ನು ಬೆಟ್ಟಕ್ಕೆ ಮಾತನಾಡುವಂತಹ, ಸಂದೇಹಪಡದ ನಂಬಿಕೆಯಾಗಿ ವರ್ಣಿಸುತ್ತಾರೆ.

**ಮಾರ್ಕ 11:22-24  ಯೇಸು ಹೇಳಿದ್ದೇನಂದರೆ - ನಿಮಗೆ ದೇವರಲ್ಲಿ ನಂಬಿಕೆಯಿರಲಿ. ನಿಮಗೆ ಸತ್ಯವಾಗಿ ಹೇಳುತ್ತೇನೆ, ಯಾವನಾದರೂ ಈ ಬೆಟ್ಟಕ್ಕೆ - ನೀನು ಕಿತ್ತುಕೊಂಡು ಹೋಗಿ ಸಮುದ್ರದಲ್ಲಿ ಬೀಳು ಎಂದು ಹೇಳಿ ತನ್ನ ಮನಸ್ಸಿನಲ್ಲಿ ಸಂಶಯಪಡದೆ ತಾನು ಹೇಳಿದ್ದು ಆಗುವದೆಂದು ನಂಬಿದರೆ ಅವನು ಹೇಳಿದಂತೆಯೇ ಆಗುವದು. ಆದಕಾರಣ ನೀವು ಪ್ರಾರ್ಥನೆಮಾಡಿ ಏನೇನು ಬೇಡಿಕೊಳ್ಳುತ್ತೀರೋ ಅದನ್ನೆಲ್ಲಾ ಹೊಂದಿದ್ದೇವೆಂದು ನಂಬಿರಿ; ಅದು ನಿಮಗೆ ಸಿಕ್ಕುವದೆಂದು ನಿಮಗೆ ಹೇಳುತ್ತೇನೆ.**

### ದೇವರಿಂದ ಕೊಡಲ್ಪಟ್ಟ ನಂಬಿಕೆ

ನಿಜವಾದ ನಂಬಿಕೆಯು ದೇವರು ನಮಗೆ ಕೊಟ್ಟದ್ದಾಗಿದೆ, ಹಾಗಾಗಿ ಅಲ್ಲಿ ಹೊಗಳಿಕೊಳ್ಳುವುದಕ್ಕೆ ಆಸ್ಪದವಿಲ್ಲ.

**ಎಫೆಸ 2:8  ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ. ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ.**

**ರೋಮಾ 12:3  ದೇವರು ನನಗೆ ಕೃಪೆಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೂ ಹೇಳುವದೇನಂದರೆ ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಿಕೊಳ್ಳಬೇಕು.**

ದೇವರು ಎಲ್ಲರಿಗೂ ನಂಬಿಕೆಯ ಅಳತೆಯನ್ನು ಕೊಟ್ಟಿರುವಾಗ ನಂಬಿಕೆಯು ಬೆಳೆಯಲು ಸಾಧ್ಯವೇ ಅಥವಾ ನಮಗೆ ಅವಶ್ಯವಾಗಿರುವದೆಲ್ಲವನ್ನೂ ದೇವರು ಏಕಸಮಯದಲ್ಲಿ ನಮಗೆ ಕೊಟ್ಟರೇ?

✳ *ಸಾಸಿವೆ ಕಾಳಿನಷ್ಟು ನಂಬಿಕೆ*

ಯೇಸು ನಂಬಿಕೆಯನ್ನು ಭೂಮಿಯ ಮೇಲೆ ಅತ್ಯಂತ ಸಣ್ಣ ಬೀಜವಾದ ಸಾಸಿವೆ ಬೀಜಕ್ಕೆ ಹೋಲಿಸುತ್ತಾರೆ. ನಂತರ ಅವರು ಸಾಸಿವೆ ಬೀಜವು ಎಷ್ಟು ದೊಡ್ಡ ಮರವಾಗಬಲ್ಲದು ಎಂಬುದನ್ನು ಬೋಧಿಸುತ್ತಾರೆ.

**ಮತ್ತಾಯ 17:20b ... ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ - ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ ಅಂದನು.**

ಅವರು ಮತ್ತೊಮ್ಮೆ ಸಾಸಿವೆ ಕಾಳಿನ ಬಗ್ಗೆ ಮಾತನಾಡುತ್ತಾರೆ.

**ಮಾರ್ಕ 4:31,32  ಅದು ಸಾಸಿವೆ ಕಾಳಿನಂತಿರುತ್ತದೆ. ಭೂಮಿಯಲ್ಲಿ ಬಿತ್ತುವಾಗ ಅದು ಭೂಮಿಯಲ್ಲಿರುವ ಎಲ್ಲಾ ಬೀಜಗಳಿಗಿಂತಲೂ ಸಣ್ಣದಾಗಿದೆ. ಬಿತ್ತಿದ ಮೇಲೆ ಅದು ಬೆಳೆದು ಎಲ್ಲಾ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ದೊಡ್ಡ ದೊಡ್ಡ ಕೊಂಬೆಗಳನ್ನು ಬಿಡುವದರಿಂದ ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಅದರ ನೆರಳಿನಲ್ಲಿ ವಾಸಮಾಡುವದಕ್ಕಾಗುತ್ತದೆ ಅಂದನು.**

ನಮ್ಮ ನಂಬಿಕೆಯು ಹೆಚ್ಚುತ್ತದೆ ಎಂದು ಪೌಲನು ಬರೆದನು.

**2 ಕೊರಿಂಥ 10:15b ... ನಿಮ್ಮ ನಂಬಿಕೆಯು ಹೆಚ್ಚಿದ ಹಾಗೆಲ್ಲಾ ನಿಮ್ಮ ಮೂಲಕ ನಮ್ಮ ಮೇರೆಯೊಳಗೆ ಇನ್ನೂ ಅಭಿವೃದ್ಧಿಹೊಂದಿ ...**

ಅಪೋಸ್ತಲರಿಗೆ ನಂಬಿಕೆಯು ಹೆಚ್ಚಾಗಬೇಕೆಂದು ಅರಿತವರಾಗಿ ಹೀಗೆ ಪ್ರಾರ್ಥಿಸಿದರು,

**ಲೂಕ 17:5b ನಮ್ಮ ನಂಬಿಕೆಯನ್ನು ಹೆಚ್ಚಿಸು.**

ನಾವು ನಮ್ಮ ನಂಬಿಕೆಯನ್ನು ಕಟ್ಟಬಹುದು ಎಂದು ಅಪೋಸ್ತಲನಾದ ಯೂದನು ಹೇಳಿದನು.

**ಯೂದ 1:20 ಪ್ರಿಯರೇ, ನೀವಾದರೋ ನಿಮಗಿರುವ ಅತಿಪರಿಶುದ್ಧವಾದ ಕ್ರಿಸ್ತ ನಂಬಿಕೆಯನ್ನು ಆಧಾರಮಾಡಿಕೊಂಡು ಭಕ್ತಿಯಲ್ಲಿ ಅಭಿವೃದ್ಧಿಯನ್ನು ಹೊಂದುತ್ತಾ ಪವಿತ್ರಾತ್ಮ ಪ್ರೇರಿತರಾಗಿ ಪ್ರಾರ್ಥನೆಮಾಡುತ್ತಾ...**

ನಂಬಿಕೆಯು ನಮ್ಮ ಜೀವಿತಗಳಲ್ಲಿ ನಾವು ಬೆಳೆಯಲು ಬಿಟ್ಟಷ್ಟು ಬಲಿಷ್ಟಗೊಳ್ಳುತ್ತದೆ. ಅದು ಕಾಲಕ್ರಮೇಣ ಒಂದು ಸಾಸಿವೆ ಕಾಳಿನಂತೆ ಬೆಳೆಯುತ್ತದೆ.

∗ *ನಂಬಿಕೆಯು ನಿರೀಕ್ಷೆಯಲ್ಲ*

ನಿರೀಕ್ಷೆಯು ನಂಬಿಕೆಯಲ್ಲ. ನಿರೀಕ್ಷೆ ಅಂದರೆ ದೇವರು ಭವಿಷ್ಯದಲ್ಲಿ ಕಾರ್ಯಮಾಡುತ್ತಾನೆ ಎಂದು ನಂಬುವುದಾಗಿದೆ. ನಂಬಿಕೆಯು ದೇವರು ಈಗಲೇ ಕಾರ್ಯಮಾಡುತ್ತಾನೆ ಎಂದು ನಂಬುವುದಾಗಿದೆ. ನಿರೀಕ್ಷೆಯು ನಂಬಿಕೆಯಾಗದಿದ್ದರೆ ನಾವು ಹೊಂದಿಕೊಳ್ಳುವುದನ್ನು ಅದು ತಡೆಯುತ್ತದೆ. "ದೇವರು ಒಂದು ದಿನ ಈ ಕಾರ್ಯವನ್ನು ಮಾಡಲಿದ್ದಾನೆ" ಎನ್ನುವುದು ನಾವು ಅದನ್ನು ಇಂದು ಹೊಂದಿಕೊಳ್ಳದಂತೆ ತಡೆಯುತ್ತದೆ.

∗ *ತಿಳುವಳಿಕೆಯು ನಂಬಿಕೆಯಲ್ಲ*

ತಿಳುವಳಿಕೆಯು ಒಳ್ಳೆಯದು. ತಿಳುವಳಿಕೆಯ ಮೂಲಕ ನಾವು ಮಾನಸಿಕವಾಗಿ ಒಪ್ಪಿಗೆಯನ್ನು ಸೂಚಿಸಬಹುದು - ದೇವರ ವಾಕ್ಯವು ಸತ್ಯವಾದದ್ದು ಎಂದು ನಾವು ನಮ್ಮ ಮನಸ್ಸಿನಲ್ಲಿ ಒಪ್ಪಬಹುದು. ಆದರೆ ತಿಳುವಳಿಕೆಯ ಜೊತೆಗೆ ನಂಬಿಕೆ ಇರದಿದ್ದರೆ ಅದು ಎಂದಿಗೂ ನಮ್ಮ ಜೀವಿತಗಳನ್ನು ಬದಲಾಯಿಸಲಾಗದು. ನಂಬಿಕೆಯ ಮೂಲಕ ತಿಳುವಳಿಕೆಯು ಅನುಭವವಾಗುತ್ತದೆ.

ಅಪೋಸ್ತಲನಾದ ಪೌಲನು ಹೀಗೆ ಬರೆದನು

**1 ಕೊರಿಂಥ 2:9,14 ಆದರೆ ಬರೆದಿರುವ ಪ್ರಕಾರ - ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ.**

**ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚುಮಾತಾಗಿ ತೋರುತ್ತವೆ; ಅವು ಆತ್ಮವಿಚಾರದಿಂದ ತಿಳಿಯ ತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು.**

## ದೇವರ ವಾಕ್ಯದ ಮೂಲಕ ನಂಬಿಕೆ

ನಂಬಿಕೆಯು ದೇವರ ವಾಕ್ಯವನ್ನು ಕೇಳುವುದರ ಮೂಲಕ ಬರುತ್ತದೆ ಎಂದು ಪೌಲನು ಹೇಳಿದನು. ನಿಜವಾದ ನಂಬಿಕೆಯು ದೇವರ ವಾಕ್ಯವನ್ನು ಆಧರಿಸುತ್ತದೆ. ನಿಜವಾದ ನಂಬಿಕೆಯೆಂದರೆ ನಾವು ಕೇಳುವ ಅಥವಾ ನೋಡುವ ಯಾವುದಾದರೂ ವಿಷಯವು ದೇವರ ವಾಕ್ಯಕ್ಕೆ ವಿರುದ್ಧವಾಗಿದ್ದರೆ ಅದನ್ನು ನಂಬದೆ ದೇವರ ವಾಕ್ಯವೇ ಎಲ್ಲಕ್ಕಿಂತಲೂ ಸತ್ಯವಾದದ್ದು ಎಂದು ನಂಬುವಂತದ್ದಾಗಿದೆ.

**ರೋಮಾ 10:17 ಆದಕಾರಣ ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ.**

ಆತ್ಮದಲ್ಲಿ ಕೇಳುವುದರ, ನೋಡುವುದರ ಮತ್ತು ಅರ್ಥಮಾಡಿಕೊಳ್ಳುವುದರ ಮನೋಭಾವನೆಯಿಂದ ನಂಬಿಕೆಯು ಬರುತ್ತದೆ. ನೋಡದ, ಕೇಳದ ಮತ್ತು ಅರ್ಥಮಾಡಿಕೊಳ್ಳದ ಜನರ ಬಗ್ಗೆ ಯೇಸು ಮಾತನಾಡಿದರು.

**ಮತ್ತಾಯ 13:13 "ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ಕಾರಣವೇನಂದರೆ ಅವರಿಗೆ ಕಣ್ಣಿದ್ದರೂ ನೋಡುವದಿಲ್ಲ, ಕಿವಿಯಿದ್ದರೂ ಕೇಳುವದಿಲ್ಲ ಮತ್ತು ತಿಳುಕೊಳ್ಳುವದಿಲ್ಲ."**

## ಜಯಿಸುವ ನಂಬಿಕೆ

ನಂಬಿಕೆಯು ಅತ್ಯಂತ ಪ್ರಾಮುಖ್ಯವಾದದ್ದು ಯಾಕೆಂದರೆ ಅದು ಲೋಕವನ್ನು ಜಯಿಸುವಂತದ್ದಾಗಿದೆ.

**1 ಯೋಹಾನ 5:4 ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ.**

## ನಮ್ಮ ನಂಬಿಕೆಯನ್ನು ಪ್ರಾರಂಭಿಸಿದಾತನು

ಯೇಸುವೇ ನಮ್ಮ ನಂಬಿಕೆಯ ಆರಂಭವೂ ಅಂತ್ಯವೂ ಆಗಿದ್ದಾರೆ.

**ಇಬ್ರಿಯರಿಗೆ 12:2 ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.**

## ನಿಮ್ಮ ನಂಬಿಕೆ ಎಲ್ಲಿದೆ?

ಒಂದು ಬಿರುಗಾಳಿ ಎದ್ದಿತು ಮತ್ತು ದೋಣಿ ಮುಳುಗುವಂತಾಯಿತು.

**ಲೂಕ 8:24b,25a ಆಗ ಆತನು ಎದ್ದು ಗಾಳಿಯನ್ನೂ ಉಬ್ಬುವ ನೀರನ್ನೂ ಗದರಿಸಿದನು. ಗದರಿಸಲು ಅವು ನಿಂತವು, ಶಾಂತವಾಯಿತು. ತರುವಾಯ ಆತನು - ನಿಮ್ಮ ನಂಬಿಕೆ ಎಲ್ಲಿ? ಎಂದು ಅವರನ್ನು ಕೇಳಿದನು.**

ನಾವು ಆಚೆ ದಡಕ್ಕೆ ಹೋಗಲಿದ್ದೇವೆ ಎಂದು ಯೇಸು ಹೇಳಿದ್ದರು. ಅವರು ಶಿಷ್ಯರೊಂದಿಗೆ ದೋಣಿಯಲ್ಲಿದ್ದರು, ಆದರೂ ಬಿರುಗಾಳಿ ಬೀಸಿದಾಗ ಶಿಷ್ಯರು

ಸ್ವಾಭಾವಿಕವಾದ ಕಣ್ಣುಗಳಿಂದ ಮಾತ್ರ ನೋಡಿದರು. "ಗುರುವೇ, ಗುರುವೇ, ನಾವು ಸಾಯುತ್ತೇವೆ!"

ಯೇಸು ಈಗಲೂ ನಮಗೆ ಕೇಳುತ್ತಿರಬಹುದು, "ನಿಮ್ಮ ನಂಬಿಕೆ ಎಲ್ಲಿದೆ?"

ಅದು ಸ್ವಾಭಾವಿಕ ವಿಷಯಗಳ ಮೇಲಿದೆಯೋ ಅಥವಾ ಅಲೌಕಿಕವಾದದ್ದರ ಮೇಲಿದೆಯೋ? ನಮ್ಮ ಆತ್ಮದಲ್ಲಿಯೂ ಹಾಗೂ ನಮ್ಮ ಬಾಯಲ್ಲಿಯೂ ನಮ್ಮ ನಂಬಿಕೆಯು ದೇವರ ವಾಕ್ಯವನ್ನು ಆಧಾರ ಮಾಡಿಕೊಂಡಿರಬೇಕು.

**ರೋಮಾ 10:8  ನಿನ್ನ ಮನಸ್ಸಿನಲ್ಲಿ ಅಂದುಕೊಳ್ಳಬೇಡ. ದೇವರ ವಾಕ್ಯವು ನಿನ್ನ ಸಮೀಪದಲ್ಲಿಯೇ ಇದೆ; ಅದು ನಿನ್ನ ಬಾಯಲ್ಲಿಯೂ ನಿನ್ನ ಹೃದಯದಲ್ಲಿಯೂ ಇದೆ ಅನ್ನುತ್ತದೆ. ಆ ವಾಕ್ಯವು ನಾವು ಸಾರುವ ನಂಬಿಕೆಯ ವಿಷಯವಾದ ವಾಕ್ಯವೇ.**

## ನಂಬಿಕೆಯ ವರ

ನಂಬಿಕೆಯ ವರವು ಪರಿಶುದ್ಧಾತ್ಮನ ಅಲೌಕಿಕ ವರವಾಗಿದ್ದು ಸಾಮಾನ್ಯವಾಗಿ ಒಬ್ಬ ನಿರ್ದಿಷ್ಟ ವ್ಯಕ್ತಿ, ಸಮಯ ಮತ್ತು ಸನ್ನಿವೇಶಕ್ಕಾಗಿ ಒಂದು ಜ್ಞಾನವಾಕ್ಯವನ್ನು ಹೊಂದಿಕೊಳ್ಳುವುದರ ಮೂಲಕ ಬರುತ್ತದೆ. ಅದು ಪರಿಶುದ್ಧಾತ್ಮನ ಬಲವುಳ್ಳ ವರಗಳಲ್ಲಿ ಒಂದಾಗಿದ್ದು ಅದ್ಭುತಗಳನ್ನು ನಡೆಸುವಂತೆ ಮತ್ತು ರೋಗಸೌಖ್ಯ ನಡೆಸುವಂತೆ ಮಾಡುತ್ತದೆ.

## ನಂಬಿಕೆಯ ಶತ್ರುಗಳು

* *ನಾವು ಹೋರಾಡಬೇಕು*

ನಂಬಿಕೆಯ ಒಳ್ಳೆ ಹೋರಾಟವನ್ನು ಮಾಡು ಎಂದು ಅಪೋಸ್ತಲನಾದ ಪೌಲನು ತಿಮೊಥಿಗೆ ಪ್ರೋತ್ಸಾಹಪಡಿಸಿದನು. "ಹೋರಾಡು" ಎಂಬ ಪದವು ನಮ್ಮ ನಂಬಿಕೆಗೆ ಶತ್ರುಗಳಿದ್ದಾರೆ ಎಂಬುದನ್ನು ನಿಶ್ಚಯವಾಗಲೂ ಸೂಚಿಸುತ್ತದೆ.

**1 ತಿಮೊಥಿ 6:12  ಕ್ರಿಸ್ತ ನಂಬಿಕೆಯುಳ್ಳವರು ಮಾಡತಕ್ಕ ಶ್ರೇಷ್ಠ ಹೋರಾಟವನ್ನು ಮಾಡು, ನಿತ್ಯಜೀವವನ್ನು ಹಿಡಿದುಕೋ; ಅದಕ್ಕಾಗಿ ದೇವರು ನಿನ್ನನ್ನು ಕರೆದನು, ಮತ್ತು ನೀನು ಅನೇಕ ಸಾಕ್ಷಿಗಳ ಮುಂದೆ ಒಳ್ಳೇ ಪ್ರತಿಜ್ಞೆಯನ್ನು ಮಾಡಿದಿಯಲ್ಲಾ.**

* *ಸ್ವಾಭಾವಿಕವಾದ ಇಂದ್ರಿಯಗಳು*

ನಮ್ಮ ಸ್ವಾಭಾವಿಕವಾದ ಇಂದ್ರಿಯಗಳೇ ನಂಬಿಕೆಗೆ ದೊಡ್ಡ ಶತ್ರುಗಳಾಗಿವೆ. ದೇವರ ವಾಕ್ಯಕ್ಕಿಂತಲೂ ಹೆಚ್ಚಾಗಿ ನಮ್ಮ ಕಣ್ಣಿಗೆ ಕಾಣುವುದರ, ಕಿವಿಗೆ ಕೇಳಿಸುವುದರ ಮತ್ತು ಕೈಯಿಂದ ಮುಟ್ಟುವುದರ ಮೇಲೆ ಭರವಸೆ ಇಡುವುದು ನಮ್ಮನ್ನು ಸೋಲಿಸುತ್ತದೆ.

ದೇವರ ವಾಕ್ಯವು ಸತ್ಯವಾದದ್ದು. ದೇವರು ತನ್ನ ವಾಕ್ಯವು ಹೇಳುವುದನ್ನು ಮಾಡೇ ಮಾಡುತ್ತಾನೆ. ಅದನ್ನು ನಂಬದವರ ಮಾತುಗಳು, ನಮ್ಮ ಕಣ್ಣಿಗೆ ಕಾಣುವ ಅಥವಾ ನಾವು ಅನುಭವಿಸುವ ರೋಗದ ಲಕ್ಷಣಗಳು, ಪಾವತಿಸದ ಬಿಲ್ಲುಗಳು ದೇವರ ವಾಕ್ಯವನ್ನು ಬದಲಾಯಿಸಲಾರದು. ಪೌಲನು ಇದರ ಬಗ್ಗೆ ಬರೆದನು.

**ರೋಮಾ 3:3,4a ಅವರಲ್ಲಿ ಕೆಲವರು ನಂಬದೆ ಹೋಗಿದ್ದರೇನು? ಅವರು ನಂಬದೆ ಹೋದದರಿಂದ ದೇವರು ವಚನಕ್ಕೆ ತಪ್ಪುವವನಾದನೋ? ಎಂದಿಗೂ ಇಲ್ಲ; ಎಲ್ಲಾ ಮನುಷ್ಯರು ಸುಳ್ಳುಗಾರರಾದರೂ ದೇವರು ಸತ್ಯವಂತನೇ ಸರಿ.**

* *ಅಪನಂಬಿಕೆ*

ಅಪನಂಬಿಕೆಯು ಒಂದು ಬಲವಾದ ಶತ್ರು, ಆದರೆ ಅದು ದೇವರ ವಾಕ್ಯವನ್ನು ಬದಲಾಯಿಸಲಾರದು. ದೇವರ ವಾಕ್ಯವು ನಮ್ಮ ಜೀವಿತಗಳಲ್ಲಿ ಸತ್ಯವಾಗುವುದನ್ನು ಅದು ತಡೆಯಬಲ್ಲದು.

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ನಂಬಿಕೆಯು ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳಿದುಕೊಳ್ಳುವುದು ಎಂದು ಹೇಳುತ್ತಾನೆ ಮತ್ತು ನೋಹನನ್ನು ಉದಾಹರಣೆಯಾಗಿ ಕೊಡುತ್ತಾನೆ.

**ಇಬ್ರಿಯರಿಗೆ 11:1,7 ನಂಬಿಕೆಯೋ ನಾವು ನಿರೀಕ್ಷಿಸುವವುಗಳ ವಿಷಯವಾಗಿ ಭರವಸದಿಂದಿರುವದೂ ಕಣ್ಣಿಗೆ ಕಾಣದವುಗಳನ್ನು ನಿಜವೆಂದು ತಿಳುಕೊಳ್ಳುವದೂ ಆಗಿದೆ.**

**ನಂಬಿಕೆಯಿಂದಲೇ ನೋಹನು ಅದುವರೆಗೆ ಕಾಣದಿದ್ದ ಸಂಗತಿಗಳ ವಿಷಯವಾಗಿ ದೈವೋಕ್ತಿಯನ್ನು ಹೊಂದಿ ಭಯಭಕ್ತಿಯುಳ್ಳವನಾಗಿ ತನ್ನ ಮನೆಯವರ ಸಂರಕ್ಷಣೆಗೋಸ್ಕರ ನಾವೆಯನ್ನು ಕಟ್ಟಿ ಸಿದ್ಧಮಾಡಿದನು. ಅದರಿಂದ ಅವನು ಲೋಕದವರನ್ನು ದಂಡನೆಗೆ ಪಾತ್ರರೆಂದು ನಿರ್ಣಯಿಸಿಕೊಂಡು ನಂಬಿಕೆಯ ಫಲವಾದ ನೀತಿಗೆ ಬಾಧ್ಯನಾದನು.**

ಕಣ್ಣಿಗೆ ಕಾಣದವುಗಳ ಬಗ್ಗೆ ಅಪೋಸ್ತಲನಾದ ಪೌಲನೂ ಸಹ ಉಲ್ಲೇಖಿಸುತ್ತಾನೆ.

**2 ಕೊರಿಂಥ 4:18 ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು.**

* *Doubt*

ತೋಮನಿಗೆ ಸ್ವಾಭಾವಿಕವಾದ ವಲಯದಿಂದ ಅಲೌಕಿಕ ವಲಯಕ್ಕೆ ಪ್ರವೇಶಿಸಲು - ಅಂದರೆ ಅಪನಂಬಿಕೆಯಿಂದ ನಂಬಿಕೆಗೆ ಪ್ರವೇಶಿಸಲು - ಕಷ್ಟವಾಯಿತು. "ನಾನು ನೋಡದೆ, ನಾನು ಮುಟ್ಟದೇ, ನಂಬುವುದಿಲ್ಲ" ಎಂದು ಅವನು ಹೇಳಿದನು.

**ಯೋಹಾನ 20:24-29 ಯೇಸು ಬಂದಾಗ ಹನ್ನೆರಡು ಮಂದಿ ಶಿಷ್ಯರೊಳಗೆ ಒಬ್ಬನಾದ ದಿದುಮನೆನಿಸಿಕೊಳ್ಳುವ ತೋಮನು ಅವರ ಸಂಗಡ ಇರಲಿಲ್ಲ. ಆದದರಿಂದ ಉಳಿದ ಶಿಷ್ಯರು - ನಾವು ಸ್ವಾಮಿಯನ್ನು ನೋಡಿದ್ದೇವೆ ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು - ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು.**

**ಎಂಟು ದಿವಸಗಳಾದ ಮೇಲೆ ಆತನ ಶಿಷ್ಯರು ತಿರಿಗಿ ಒಳಗಿದ್ದಾಗ ತೋಮನೂ ಅವರ ಸಂಗಡ ಇದ್ದನು. ಬಾಗಲುಗಳು ಮುಚ್ಚಿದ್ದವು. ಆಗ ಯೇಸು ಬಂದು ನಡುವೆ**

**ನಿಂತು - ನಿಮಗೆ ಸಮಾಧಾನವಾಗಲಿ ಅಂದನು. ಆಮೇಲೆ ತೋಮನಿಗೆ - ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ಹೇಳಿದನು. ತೋಮನು ಆತನಿಗೆ - ನನ್ನ ಸ್ವಾಮೀ, ನನ್ನ ದೇವರು! ಎಂದು ಹೇಳಿದನು. ಯೇಸು ಅವನಿಗೆ - ನೀನು ನನ್ನನ್ನು ನೋಡಿದ್ದರಿಂದ ನಂಬಿದ್ದೀ; ನೋಡದೆ ನಂಬಿದವರು ಧನ್ಯರು ಎಂದು ಹೇಳಿದನು.**

ತಾನು ನೋಡಿದ ಮೇಲೆ ಮತ್ತು ಮುಟ್ಟಿದ ಮೇಲೆ ಮಾತ್ರ ನಂಬುತ್ತೇನೆ ಎಂಬ ತೋಮನ ಬೇಡಿಕೆಯು ನಮಗೆ ಏನು ಮಾಡಬಾರದೆಂಬುದಕ್ಕೆ ಒಂದು ಉದಾಹರಣೆಯಾಗಿದೆ. ಅವನು ಆ ಸಮಯದಿಂದ ಸುವಾರ್ತೆಯ ಅಪೋಸ್ತಲನಾದದ್ದು ನಿಜವೇ ಮತ್ತು ರಕ್ತಸಾಕ್ಷಿಯಾಗಿ ಸತ್ತದ್ದು ನಿಜವೇ.

## ನಂಬಿಕೆಯ ಪ್ರಾರ್ಥನೆ, ಒಮ್ಮನಸ್ಸಿನ ಪ್ರಾರ್ಥನೆ ಮತ್ತು ದೇವರ ವಾಕ್ಯವನ್ನು ಪ್ರಾರ್ಥಿಸುವುದು

ನಮ್ಮ ಪ್ರಾರ್ಥನೆಯು ಪರಿಣಾಮಕಾರಿಯಾಗಬೇಕಾದರೆ ನಂಬಿಕೆಯ ಮೇಲೆ ಆಧಾರಗೊಂಡಿರಬೇಕು. ಇದೇ ಕಾರಣದಿಂದ ನಾವು ನಂಬಿಕೆಯೆಂದರೆ ಏನು ಮತ್ತು ಅದು ಹೇಗೆ ಕಾರ್ಯ ಮಾಡುತ್ತದೆ ಎಂಬುದನ್ನು ಅಧ್ಯಯನ ಮಾಡಲು ಸಮಯವನ್ನು ಕಳೆದಿದ್ದೇವೆ.

### ನಂಬಿಕೆಯ ಪ್ರಾರ್ಥನೆ

ರೋಗಿಯನ್ನು ರಕ್ಷಿಸಬಲ್ಲ ನಂಬಿಕೆಯ ಪ್ರಾರ್ಥನೆಯ ಬಗ್ಗೆ ಯಾಕೋಬನು ಮಾತನಾಡಿದನು. ದೇವರ ವಾಕ್ಯದಲ್ಲಿ ಈ ನಿರ್ದಿಷ್ಟವಾದ ಪ್ರಾರ್ಥನೆಯ ವಿಧವನ್ನು ಒಂದೇ ಬಾರಿ ತಿಳಿಸಲಾಗಿದೆ. ಪ್ರಾರ್ಥನೆಯ ಅವಶ್ಯಕತೆಯಿರುವ ಮನುಷ್ಯನು ಪ್ರಾರ್ಥಿಸಬೇಕೆಂದು ಕೇಳಿಕೊಳ್ಳುವುದನ್ನು ಇಲ್ಲಿ ಗಮನಿಸಬೇಕು. ಇಲ್ಲಿ ಪಾಪವು ಒಳಗೊಂಡಿರಬಹುದು ಮತ್ತು ಅದು ಕ್ಷಮಿಸಲ್ಪಡಬೇಕು ಎಂಬುದನ್ನೂ ಗಮನಿಸತಕ್ಕದ್ದು. ಇಲ್ಲಿ ತಿಳಿಸಲಾಗಿರುವ ಹಿರಿಯರು ಸ್ಥಳೀಯ ಸಭೆಯ ನಾಯಕರುಗಳಾಗಿದ್ದಾರೆ ಮತ್ತು ಅವರು ಬಂದು ನಂಬಿಕೆಯಲ್ಲಿ ಪ್ರಾರ್ಥಿಸುತ್ತಾರೆ.

**ಯಾಕೋಬ 5:14,15 ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು ಸಭೆಯ ಹಿರಿಯರನ್ನು ಕರೇಕಳುಹಿಸಲಿ; ಅವರು ಕರ್ತನ ಹೆಸರಿನಿಂದ ಅವನಿಗೆ ಎಣ್ಣೆಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು; ಕರ್ತನು ಅವನನ್ನು ಎಬ್ಬಿಸುವನು; ಮತ್ತು ಪಾಪಮಾಡಿದವನಾಗಿದ್ದರೆ ಅದು ಪರಿಹಾರವಾಗುವದು.**

ನಂಬಿಕೆಯ ಪ್ರಾರ್ಥನೆ ಎಂದರೇನು? ಅದು ದೇವರ ವಾಗ್ದಾನಗಳ ಮೇಲೆ ಬಲವಾಗಿ ನಿಂತಿರುವ ಹಾಗೂ ನಂಬಿಕೆಯಲ್ಲಿ ಮಾಡಿದ ಪ್ರಾರ್ಥನೆಯಾಗಿದೆ. ಅದು ಇಬ್ಬರು ಅಥವಾ ಹೆಚ್ಚು ಜನರು ಏಕಮನಸ್ಸಿನಿಂದ ಪ್ರಾರ್ಥಿಸುವುದಾಗಿದೆ.

ನಂಬಿಕೆಯ ಪ್ರಾರ್ಥನೆಯು ಮಾಡಲ್ಪಟ್ಟಾಗ ಆ ಕಾರ್ಯವು ನಡೆದಿದೆ ಎಂದು ಪರಿಶುದ್ಧಾತ್ಮನು ಸಾಕ್ಷೀಕರಿಸುತ್ತಾನೆ. ದೇವರ ವಾಕ್ಯದ ಸತ್ಯವು ರೋಗಲಕ್ಷಣಗಳಿಗಿಂತಲೂ ಅಥವಾ ಪರಿಸ್ಥಿತಿಗಳಿಗಿಂತಲೂ ಹೆಚ್ಚು ವಾಸ್ತವವಾದದ್ದು. ಈ ನಂಬಿಕೆಯು ನಮ್ಮ ಆತ್ಮದಿಂದ ಬರುವಂತದ್ದೇ ಹೊರತು

ನಮ್ಮ ಮನಸ್ಸಿನಿಂದಲ್ಲ. ಈ ನಂಬಿಕೆಯು ಬಂದ ಕ್ಷಣದಿಂದ ನಾವು ದೇವರ ವಾಕ್ಯವು ನೆರವೇರಿದೆ ಎಂಬ ನಂಬಿಕೆಯಲ್ಲಿ ನಿಂತುಕೊಳ್ಳುತ್ತೇವೆ.

## ಒಮ್ಮನಸ್ಸಿನ ಬಲ

ಎಬ್ಬರು ಅಥವಾ ಹೆಚ್ಚು ವಿಶ್ವಾಸಿಗಳು ತಮ್ಮ ನಂಬಿಕೆಯನ್ನು ಒಟ್ಟಾಗಿಸಿ ಏಕಮನಸ್ಸಿನಿಂದ ಪ್ರಾರ್ಥಿಸುವಾಗ ಅಧಿಕಾರ ಮತ್ತು ಬಲವು ಹೆಚ್ಚಾಗುತ್ತದೆ.

**ಧರ್ಮೋ 32:30 ಅವರ ಶರಣನು ಅವರನ್ನು ಶತ್ರುಗಳಿಗೆ ಒಪ್ಪಿಸಿಕೊಡದಿದ್ದರೆ ಒಬ್ಬನಿಂದ ಸಾವಿರ ಮಂದಿ ಸೋತುಹೋಗುತ್ತಿದ್ದರೋ? ಯೆಹೋವನು ಕೈಬಿಡದಿದ್ದರೆ ಇಬ್ಬರಿಗೆ ಹೆದರಿ ಹತ್ತುಸಾವಿರ ಮಂದಿ ಓಡಿಹೋಗುತ್ತಿದ್ದರೋ?**

## ಏಕಮನಸ್ಸಿನ ಪ್ರಾರ್ಥನೆ

ಏಕಮನಸ್ಸಿನ ಪ್ರಾರ್ಥನೆಯು ಯೇಸು ಇಬ್ಬರು ಒಮ್ಮನಸ್ಸಿನಿಂದ ದೇವರಲ್ಲಿ ಬೇಡಿಕೊಳ್ಳುವುದರ ಬಗ್ಗೆ ಮಾಡಿದ ಬೋಧನೆಯ ಮೇಲೆ ಆಧರಿತವಾಗಿದೆ.

**ಮತ್ತಾಯ 18:19,20 “ಇದಲ್ಲದೆ ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದೆಂದು ನಿಮಗೆ ಹೇಳುತ್ತೇನೆ. ಯಾಕಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿ ಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು.**

ಏಕಮನಸ್ಸಿನಿಂದ ಪ್ರಾರ್ಥಿಸಬೇಕಾದರೆ ನಾವು ಪರಿಸ್ಥಿತಿಯನ್ನು ತಿಳಿದುಕೊಳ್ಳಬೇಕು ಮತ್ತು ದೇವರ ವಾಕ್ಯದಲ್ಲಿರುವ ಉತ್ತರವನ್ನು ತಿಳಿದುಕೊಳ್ಳಬೇಕು, ನಂತರ ಒಮ್ಮನಸ್ಸಿನಿಂದ ಪ್ರಾರ್ಥಿಸಬೇಕು. ಉದಾಹರಣೆಗೆ, ಪ್ರಾರ್ಥನಾ ಬೇಡಿಕೆಯನ್ನು ಹೇಳದಿರುವ ವ್ಯಕ್ತಿಯೊಂದಿಗೆ ಏಕಮನಸ್ಸಿನಿಂದ ಪ್ರಾರ್ಥಿಸಲು ಸಾಧ್ಯವಿಲ್ಲ.

✱ *ನಮ್ಮ ಪ್ರಾರ್ಥನೆಗಳನ್ನು ಕೇಂದ್ರೀಕರಿಸಬೇಕು*

ಬಹುಶಃ ಏಕಮನಸ್ಸಿನ ಪ್ರಾರ್ಥನೆಯ ಒಂದು ದೊಡ್ಡ ಪ್ರಯೋಜನವೇನೆಂದರೆ ನಾವು ಕೆಲವು ನಿರ್ದಿಷ್ಟವಾದ ಗುರಿಗಳನ್ನಿಟ್ಟುಕೊಂಡು ಪ್ರಾರ್ಥಿಸುವಂತೆ ಅದು ಮಾಡುತ್ತದೆ. ಯೇಸುವನ್ನು ಕೂಗಿ ಕರೆದ ಕುರುಡ ಭಿಕ್ಷುಕರನ್ನು ನೆನಪಿಸಿಕೊಳ್ಳಿರಿ, "ದಾವೀದನ ಕುಮಾರನೇ, ನಮ್ಮನ್ನು ಕರುಣಿಸು!"

ಯೇಸು ಏನು ಪ್ರತ್ಯುತ್ತರವನ್ನು ಕೊಟ್ಟರು? "ನಾನು ನಿಮಗಾಗಿ ಏನು ಮಾಡಬೇಕೆಂದು ನೀವು ಅಪೇಕ್ಷಿಸುತ್ತೀರಿ?"

ಅವರಿಗೆ ಹಣ ಬೇಕಾಗಿತ್ತಾ? ಅವರಿಗೆ ಕೆಲಸ ಬೇಕಾಗಿತ್ತಾ? ಅವರಿಗೆ ಸೌಖ್ಯವಾಗಬೇಕಾಗಿತ್ತಾ? ಅವರ ನಂಬಿಕೆ ಯಾವುದರ ಮೇಲಿತ್ತು?

ನಾವು ನಮ್ಮ ಬೇಡಿಕೆಗಳಲ್ಲಿ ನಿರ್ದಿಷ್ಟವಾಗಿರಬೇಕು ಯಾಕೆಂದರೆ ಅತ್ಯುತ್ತಮವಾದ ಫಲವನ್ನು ಹೊಂದಿಕೊಳ್ಳುವಂತೆ ಇದು ನಮ್ಮ ನಂಬಿಕೆಯನ್ನು ಕೇಂದ್ರೀಕರಿಸಲು ನಮಗೆ ಸಹಾಯ ಮಾಡುತ್ತದೆ.

✱ *ಸಂದೇಹ ಮತ್ತು ಅಪನಂಬಿಕೆಯನ್ನು ತೆಗೆದುಹಾಕಬೇಕು*

ಯೇಸು ಯಾಯಿರನ ಮನೆಗೆ ಬಂದಾಗ ಅವನ ಮಗಳನ್ನು ಮರಣದಿಂದ ಎಬ್ಬಿಸುವದಕ್ಕಿಂತ ಮುಂಚೆ ಸಂದೇಹಪಡುವವರನ್ನು ಹೊರಗೆ ಕಳುಹಿಸಿದರು.

**ಮಾರ್ಕ 5:39-42 ಆತನು ಒಳಕ್ಕೆ ಹೋಗಿ - ನೀವು ಗದ್ದಲ ಮಾಡುವದೂ ಅಳುವದೂ ಯಾಕೆ? ಹುಡುಗಿ ಸತ್ತಿಲ್ಲ; ನಿದ್ದೆಮಾಡುತ್ತಾಳೆ ಅನ್ನಲು ಅವರು ಆತನನ್ನು ಹಾಸ್ಯಮಾಡಿದರು.**

**ಆದರೆ ಆತನು ಎಲ್ಲರನ್ನು ಹೊರಕ್ಕೆ ಕಳುಹಿಸಿ ಆ ಹುಡುಗಿಯ ತಂದೆತಾಯಿಗಳನ್ನೂ ತನ್ನೊಂದಿಗಿದ್ದವರನ್ನೂ ಹುಡುಗಿಯಿದ್ದಲ್ಲಿಗೆ ಕರಕೊಂಡು ಹೋಗಿ ಅವಳ ಕೈಹಿಡಿದು ತಲಿಥಾ ಕೂಮ್ ಅಂದನು. ಆ ಮಾತಿಗೆ - ಅಮ್ಮಣ್ಣೀ, ಏಳನ್ನುತ್ತೇನೆ ಎಂದರ್ಥ.**

**ಕೂಡಲೆ ಆ ಹುಡುಗಿ ಎದ್ದು ನಡೆದಾಡಿದಳು; ಆಕೆಯು ಹನ್ನೆರಡು ವರುಷ ವಯಸ್ಸಿನವಳು.**

✱ *ಒಟ್ಟಾಗಿ ಪ್ರಾರ್ಥಿಸಬೇಕು*

ನಾವು ಈಗಾಗಲೇ ತಿಳಿಸಿದಂತೆ ಕೆಲವು ಪ್ರಾರ್ಥನೆಗಳಿಗೆ ಉತ್ತರ ಸಿಕ್ಕುವುದಿಲ್ಲ ಯಾಕೆಂದರೆ ಪ್ರಾರ್ಥನೆಯೇ ಮಾಡಿರುವುದಿಲ್ಲ. ನಾವು ಏಕಮನಸ್ಸಿನಿಂದ ಪ್ರಾರ್ಥಿಸುವಾಗ ಲಕ್ಷ್ಯವಿಲ್ಲದಿದ್ದರೆ ಹೀಗೆ ಆಗುತ್ತದೆ. ನಾವು ಪರಿಸ್ಥಿತಿಗಳ ಬಗ್ಗೆ ಮಾತನಾಡುತ್ತೇವೆ, ಅದಕ್ಕೆ ಅನ್ವಯಿಸುವ ದೇವರ ವಾಕ್ಯವನ್ನು ಹೇಳುತ್ತೇವೆ ಮತ್ತು ಹೇಗೆ ಪ್ರಾರ್ಥಿಸಬೇಕೆಂದು ಏಕಮನಸ್ಸುಳ್ಳವರಾಗುತ್ತೇವೆ. ಆ ಸಮಯದಲ್ಲಿ ಏಕಮನಸ್ಸುಳ್ಳವರಾಗುತ್ತೇವೆ - ಪರಸ್ಪರವಾಗಿಯೂ ಹಾಗೂ ದೇವರ ಚಿತ್ತಾನುಸಾರವಾಗಿಯೂ ಒಮ್ಮನಸ್ಸುಳ್ಳವರಾಗುತ್ತೇವೆ - ಹೀಗೆ ನಂಬಿಕೆಯ ಐಕ್ಯತೆಯಲ್ಲಿ ಬೇಡಿಕೊಂಡು, ಬೇಡಿದಂತೆಯೇ ನೆರವೇರುವುದು ಎಂದು ನಂಬಬೇಕು.

ಇದರ ಅರ್ಥ ಒಬ್ಬರು ಪ್ರಾರ್ಥಿಸುತ್ತಾರೆ ಮತ್ತು ಇತರರು ಸಮ್ಮತಿಸುತ್ತಾರೆ ಎಂತಲ್ಲ. ಅವರಿಬ್ಬರೂ ಅಥವಾ ಅವರೆಲ್ಲರೂ ಒಮ್ಮನಸ್ಸಿನಿಂದ ಪ್ರಾರ್ಥಿಸಬೇಕು. ಒಬ್ಬರು ಪ್ರಾರ್ಥನೆಯನ್ನು ನಡೆಸುವುದು ಮತ್ತು ಇತರರು ಅದನ್ನು ಕೇಳುವ ಅಥವಾ ಅದಕ್ಕೆ ಸಮ್ಮತಿ ಸೂಚಿಸುವ ಯಾವ ಉದಾಹರಣೆಯೂ ಸತ್ಯವೇದದಲ್ಲಿ ಇಲ್ಲ.

**ದೇವರ ವಾಕ್ಯವನ್ನು ಹೇಳಿ ಪ್ರಾರ್ಥಿಸುವುದು**

✱ *ದೇವರ ವಾಕ್ಯವು ಸಜೀವವಾದದ್ದು*

ಇಬ್ರಿಯರಿಗೆ ಬರೆದ ಗ್ರಂಥಕರ್ತನು ದೇವರ ವಾಕ್ಯವು ಸಜೀವವಾದದ್ದು ಮತ್ತು ಬಲವುಳ್ಳದ್ದು ಎಂದು ಹೇಳುತ್ತಾನೆ.

**ಇಬ್ರಿಯರಿಗೆ 4:12 ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ**

**ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ.**

ಪ್ರವಾದಿಯಾದ ಯೆರೆಮೀಯನು ದೇವರು ತನ್ನ ಮಾತನ್ನು ನೆರವೇರಿಸಲು ಎಚ್ಚರವುಳ್ಳವನಾಗಿದ್ದಾನೆ ಎಂದು ಹೇಳುತ್ತಾನೆ.

**ಯೆರೆಮೀಯನು 1:12 ಆಗ ಯೆಹೋವನು ನನಗೆ - ಸರಿಯಾಗಿ ನೋಡಿದ್ದೀ, ನನ್ನ ಮಾತನ್ನು ನೆರವೇರಿಸುವದಕ್ಕೆ ಎಚ್ಚರಗೊಂಡಿದ್ದೇನೆ ಎಂದು ತಿಳಿದುಕೋ ಎಂಬದಾಗಿ ಹೇಳಿದನು.**

* *ಪರಿಹಾರವನ್ನು ಪ್ರಾರ್ಥಿಸಿರಿ*

ದೇವರ ವಾಕ್ಯವನ್ನು ಪ್ರಾರ್ಥಿಸುವುದು ನಾವು ಸಮಸ್ಯೆಗಳನ್ನೇ ಪ್ರಾರ್ಥಿಸದಂತೆ ನಮ್ಮನ್ನು ತಡೆಯಲು ಇರುವ ಅತ್ಯಂತ ಬಲವುಳ್ಳ ಮಾರ್ಗವಾಗಿದೆ. ಸಮಸ್ಯೆಯ ಬದಲಾಗಿ ನಾವು ಪರಿಹಾರವನ್ನು ಪ್ರಾರ್ಥಿಸುತ್ತೇವೆ.

ದೇವರ ವಾಕ್ಯವು ಹೊರಟು ಬರುವಾಗ ನಡೆಯುವ ಸಂಗತಿಯ ಬಗ್ಗೆ ಪ್ರವಾದಿಯಾದ ಯೆಶಾಯನು ನಮಗೆ ಒಂದು ಆಳವಾದ ನೋಟವನ್ನು ನೀಡುತ್ತಾನೆ.

**ಯೆಶಾಯ 55:11 ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ.**

ದೇವರ ವಾಕ್ಯವು ವ್ಯರ್ಥವಾಗಿ ಹಿಂದಿರುಗುವುದಿಲ್ಲ. ಅದು ಯಾವುದಕ್ಕಾಗಿ ಕಳುಹಿಸಲ್ಪಟ್ಟಿತೋ ಅದನ್ನು ಸಾಧಿಸಿಯೇ ಹಿಂದಿರುಗುವುದು.

ನಾವು ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ದೇವರ ವಾಕ್ಯವನ್ನು ಪ್ರಾರ್ಥಿಸುವಾಗ ಅದಕ್ಕೆ ಅನ್ವಯವಾಗುವ ದೇವರ ವಾಗ್ದಾನಗಳನ್ನು ಹುಡುಕಲು ಸಮಯವನ್ನು ತೆಗೆದುಕೊಳ್ಳಬೇಕು. ವಾಗ್ದಾನ ಪುಸ್ತಕಗಳನ್ನು ಈ ರೀತಿಯಲ್ಲಿ ಉಪಯೋಗಿಸುವುದು ಬಹಳ ಸೂಕ್ತವಾದದ್ದು. ದೇವರ ವಾಗ್ದಾನಗಳನ್ನು ಬರೆದಿಟ್ಟುಕೊಳ್ಳುವುದು ಒಳ್ಳೆಯದು ಯಾಕೆಂದರೆ ನಾವು ಪ್ರಾರ್ಥಿಸುವಾಗ ಅವುಗಳನ್ನು ಹೇಳಬಹುದು. (ನಾವು ಪ್ರಾರ್ಥಿಸುವಾಗ ನಮ್ಮ ಕಣ್ಣುಗಳನ್ನು ಮುಚ್ಚಿಕೊಂಡೇ ಇರಬೇಕೆಂದು ದೇವರು ಎಂದಿಗೂ ಹೇಳಿಲ್ಲ. ನಮ್ಮ ಗಮನ ಬೇರೆಡೆಗೆ ಹೋಗದೆ ದೇವರ ಮೇಲೆ ಕೇಂದ್ರೀಕೃತವಾಗಲಿ ಎಂಬ ಉದ್ದೇಶದಿಂದ ಹಾಗೆ ಮಾಡುತ್ತೇವಷ್ಟೆ).

* *ರೋಗಸೌಖ್ಯಕ್ಕಾಗಿ ಪ್ರಾರ್ಥಿಸುವುದು*

ನಮಗೆ ರೋಗ ಸೌಖ್ಯದ ಅವಶ್ಯವಿದ್ದರೆ, ನಮಗೆ ಎಷ್ಟು ಪ್ರಯಾಸವಾಗುತ್ತಿದೆ ಎಂಬುದನ್ನು ದೇವರಿಗೆ ಹೇಳುವ ಅವಶ್ಯವಿಲ್ಲ, ಅಥವಾ ವೈದ್ಯರು ಏನು ಹೇಳಿದರು ಅಥವಾ ನಾವು ಮಾಡಬೇಕಾದದ್ದನ್ನು ಮಾಡಲಾಗುತ್ತಿಲ್ಲ ಎಂಬುದನ್ನೆಲ್ಲಾ ಹೇಳಬೇಕಾಗಿಲ್ಲ. ನಮ್ಮ ಪ್ರಾರ್ಥನೆಯು ಹೀಗಿರಬೇಕು,

*"ದೇವರೇ, ನಿಮ್ಮ ವಾಕ್ಯ ಹೇಳುವ ಪ್ರಕಾರ ನಮ್ಮ ದ್ರೋಹಗಳ ದೆಸೆಯಿಂದ ಯೇಸುವಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವರು*

*ಜಜ್ಜಲ್ಪಟ್ಟರು, ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವರು ಅನುಭವಿಸಿದರು ಮತ್ತು ಅವರ ಬಾಸುಂಡೆಗಳಿಂದ ನಮಗೆ ಗುಣವಾಯಿತು. ಇದಕ್ಕಾಗಿ ನಿಮಗೆ ವಂದನೆ ದೇವರೇ. ದೇವರೇ, ಯೆರೆಮೀಯನ ಮೂಲಕ ನೀವು ಹೇಳಿದ ಪ್ರಕಾರ ನನ್ನನ್ನು ನೀವು ಗುಣಪಡಿಸಿ ನನ್ನ ಗಾಯಗಳನ್ನು ವಾಸಿಮಾಡುವುದಕ್ಕಾಗಿ ನಿಮಗೆ ವಂದನೆಗಳು. ದೇವರೇ, ನಾನು ಆತ್ಮ ವಿಷಯದಲ್ಲಿ ಅಭಿವೃದ್ಧಿಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಹೊಂದಿ ಸುಕ್ಷೇಮವಾಗಿರಬೇಕೆಂಬುದು ನಿಮ್ಮ ಬಯಕೆಯಾಗಿರುವುದಕ್ಕಾಗಿ ನಿಮಗೆ ವಂದನೆಗಳು! ನಾನು ನಂಬುತ್ತೇನೆ ಮತ್ತು ನನ್ನ ಸೌಖ್ಯವು ಪೂರ್ಣವಾಗಿ ಕಂಡುಬರುವುದನ್ನು ನಾನು ಈಗಲೇ ಸ್ವೀಕರಿಸುತ್ತೇನೆ!"*

**ಯೆಶಾಯ 53:5, ಯೆರೆಮಿಯ 30:17, 3 ಯೋಹಾನ 7*

✻ *ನಮ್ಮ ಪ್ರಿಯ ಪಾತ್ರರಿಗಾಗಿ ಪ್ರಾರ್ಥಿಸುವುದು*

ಬಹುಶಃ ನಮ್ಮ ಪ್ರಿಯಪಾತ್ರರು ಕರ್ತನಿಗೆ ಹತ್ತಿರವಿಲ್ಲದಿರಬಹುದು. ಮತ್ತೊಮ್ಮೆ, ಅವರು ಎಲ್ಲಿದ್ದಾರೆ ಅಥವಾ ಏನು ಮಾಡುತ್ತಿದ್ದಾರೆ ಎಂಬ ವಿಷಯಗಳನ್ನು ದೇವರಿಗೆ ಹೇಳುವ ಯಾವ ಅವಶ್ಯವಿಲ್ಲ. ನಾವು ಅವರಿಗಾಗಿ ಹೇಗೆ ಪ್ರಾರ್ಥಿಸಬೇಕು? ದೇವರ ವಾಕ್ಯವನ್ನು ಪ್ರಾರ್ಥಿಸಬೇಕು.

*"ತಂದೆಯೇ, ನಿನ್ನ ವಾಕ್ಯವು ಹೇಳುವಂತೆ ನೀವು ನಿಮ್ಮ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುವದಿಲ್ಲ ಬದಲಾಗಿ ಯಾವನಾದರೂ ನಾಶವಾಗುವದರಲ್ಲಿ ನೀವು ಇಷ್ಟಪಡದೆ ಎಲ್ಲರೂ ನಿಮ್ಮ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವರಾಗಿದ್ದು ನಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವರಾಗಿದ್ದೀರಿ. ದೇವರೇ ........... ಇವರು ನಾಶವಾಗುವುದು ನಿಮಗೆ ಇಷ್ಟವಿಲ್ಲಪ್ಪಾ. ಅದಕ್ಕಾಗಿ ನಿಮಗೆ ವಂದನೆ ಸಲ್ಲಿಸುತ್ತೇನೆ. ದೇವರೇ ನಾನು ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡುವುದಾದರೆ, ಆಗ ನಾನು ಮತ್ತು ನನ್ನ ಮನೆಯವರೂ ರಕ್ಷಣೆಹೊಂದುವರು ಎಂದು ನನಗೆ ವಾಗ್ದಾನ ಮಾಡಿರುವುದಕ್ಕಾಗಿ ವಂದನೆಗಳು. ನಿಮ್ಮ ವಾಕ್ಯ ಹೇಳುವಂತೆ ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಒಂದು ಮಗುವನ್ನು ಶಿಕ್ಷಿಸು ಆಗ ಮುಪ್ಪಿನಲ್ಲಿಯೂ ಓರೆಯಾಗನು ಎಂದು ಹೇಳಿದ್ದೀರಿ ಅದಕ್ಕಾಗಿ ವಂದನೆಗಳು."*

** 2 ಪೇತ್ರ 3:9, ಅ.ಕೃ. 16:31, ಜ್ಞಾನೋಕ್ತಿ 22:6*

✻ *ನಿಮ್ಮ ಹಣಕಾಸಿನ ವಿಷಯಕ್ಕಾಗಿಪ್ರಾರ್ಥಿಸುವುದು*

ನಿಮ್ಮ ಚೆಕ್ ಬುಕ್ ಹಾಗೂ ನಿಮ್ಮ ಬಿಲ್ಲುಗಳನ್ನು ಮೇಜಿನ ಮೇಲಿಟ್ಟು ಅವುಗಳ ಮೇಲೆ ನಿಮ್ಮ ಕೈಗಳನ್ನಿರಿಸಿ ಹೀಗೆ ಪ್ರಾರ್ಥಿಸಬಹುದು.

*"ತಂದೆಯೇ ಇಲ್ಲಿರುವ ಮತ್ತು ಇನ್ನೂ ಬರಲಿರುವ ಎಲ್ಲಾ ಬಿಲ್ಲುಗಳು ನಿಮಗೆ ಗೊತ್ತಿದೆ. ಅದನ್ನು ಕಟ್ಟಬೇಕಾದ ಕೊನೆಯ ದಿನಾಂಕವೂ ಮತ್ತು ಮೊತ್ತವೂ ನಿಮಗೆ ಗೊತ್ತಿದೆ. ದೇವರೇ ನಿಮ್ಮ ವಾಕ್ಯ ಹೇಳುವಂತೆ ನಾವು ದಶಮಾಂಶವನ್ನು ಆಲಯಕ್ಕೆ ತೆಗೆದುಕೊಂಡು ಬಂದರೆ ನೀವು ಪರಲೋಕದ ದ್ವಾರಗಳನ್ನು ತೆರೆದು ನಮ್ಮಲ್ಲಿ ಸ್ಥಳ ಹಿಡಿಯಲಾಗದಷ್ಟು ಸುವರವನ್ನು ಸುರಿಯುವಿರಿ. ಅದಕ್ಕಾಗಿ ನಿಮಗೆ*

*ವಂದನೆಗಳು. ದೇವರೇ ನೀವು ವಾಗ್ದಾನ ಮಾಡಿದಂತೆ ನುಂಗುವ ಹುಳವನ್ನು ನೀವು ನಮಗಾಗಿ ತಡೆಯುವಿರಿ. ಅದು ನಮ್ಮ ಭೂಮಿಯ ಫಲವನ್ನು ನಾಶಮಾಡದು. ಅದಕ್ಕಾಗಿ ನಿಮಗೆ ವಂದನೆಗಳು. ದೇವರೇ, ನಾನು ಆತ್ಮ ವಿಷಯದಲ್ಲಿ ಅಭಿವೃದ್ಧಿಹೊಂದಿರುವ ಪ್ರಕಾರ ಎಲ್ಲಾ ವಿಷಯಗಳಲ್ಲಿಯೂ ಅಭಿವೃದ್ಧಿಹೊಂದಿ ಸುಕ್ಷೇಮವಾಗಿರಬೇಕೆಂದು ನೀವು ಬಯಸುವುದಕ್ಕಾಗಿ ನಿಮಗೆ ವಂದನೆಗಳು. ತಂದೆಯೇ ನಿಮ್ಮ ವಾಕ್ಯ ಹೇಳುವಂತೆ ನೀವು ನನ್ನ ಕುರುಬನಾಗಿದ್ದೀರಿ ಮತ್ತು ನಾನು ಕೊರತೆಪಡುವುದಿಲ್ಲ. ಅದಕ್ಕಾಗಿ ನಿಮಗೆ ವಂದನೆ ಸಲ್ಲಿಸುತ್ತೇನೆ."*

**ಮಲಾಕಿ 3:10-11, 3 ಯೋಹಾನ 2, ಕೀರ್ತನೆ 23:1*

## ☝ ಸಾರಾಂಶ - ನಂಬಿಕೆಯ ಧ್ವನಿ

ನಾವು ದೇಹ, ಪ್ರಾಣ ಮತ್ತು ಆತ್ಮವಾಗಿದ್ದೇವೆ. ನಾವು ಆತ್ಮದಲ್ಲಿ ಹೊಸದಾಗಿ ಹುಟ್ಟಿದ್ದೇವೆ. ನಾವು ಹೊಸದಾಗಿ ಹುಟ್ಟುವುದಕ್ಕಿಂತ ಮುಂಚೆಯೂ ನಮಗೆ ನಂಬಿಕೆ ಇತ್ತು, ಆದರೆ ಅದು ಸ್ವಾಭಾವಿಕ ವಲಯದಲ್ಲಿದ್ದ ನಂಬಿಕೆಯಾಗಿತ್ತು. ಈಗ ನಾವು ದೇವರ ರಾಜ್ಯದಲ್ಲಿದ್ದೇವೆ ಮತ್ತು ನಮ್ಮ ನಂಬಿಕೆಯು ಅಲೌಕಿಕವಾದದ್ದು. ನಮ್ಮ ನಂಬಿಕೆಯು ದೇವರ ವಾಕ್ಯವು ಏನು ಹೇಳುತ್ತದೆಯೋ ಅದರ ಮೇಲೆ ಆಧರಿಸಿದೆಯೇ ಹೊರತು ನಮ್ಮ ಸುತ್ತಮುತ್ತಲು ಕಾಣುವ ವಿಷಯಗಳ ಮೇಲಲ್ಲ. ನಾವು ಇನ್ನು ಮೇಲೆ ನಕಾರಾತ್ಮಕವಾದ ಸ್ವ-ಚಿತ್ರಣದೊಂದಿಗೆ ಜೀವಿಸುವುದಿಲ್ಲ. ದೇವರು ನಮ್ಮನ್ನು ನೋಡುವಂತೆಯೇ ನಾವು ನಮ್ಮನ್ನು ನೋಡಲಿದ್ದೇವೆ. ಪಾಪ ಮತ್ತು ಅಸತ್ಯವು ನಮ್ಮ ಜೀವಿತಗಳಲ್ಲಿ ಸಂದೇಹವನ್ನು ತರಲು ಇನ್ನು ನಾವು ಬಿಡುವುದಿಲ್ಲ.

ದೇವರು ನಮಗೆ ಕೊಟ್ಟಿರುವ ನಂಬಿಕೆಯನ್ನು ನಾವು ಚಲಾಯಿಸಲಿದ್ದೇವೆ. ನಾವು ದೇವರ ವಾಕ್ಯದಲ್ಲಿ ನಂಬಲಿದ್ದೇವೆ. ನಾವು ಜಯಿಸುವ ನಂಬಿಕೆಯನ್ನು ಹೊಂದಲಿದ್ದೇವೆ. ನಾವು ನಂಬಿಕೆಯ ಮತ್ತು ಏಕಮನಸ್ಸಿನ ಪ್ರಾರ್ಥನೆಗಳಲ್ಲಿ ಇತರರೊಂದಿಗೆ ಸೇರಿ ಪ್ರಾರ್ಥಿಸಲಿದ್ದೇವೆ. ನಾವು ದೇವರ ವಾಕ್ಯವನ್ನು ಹೇಳಿ ಪ್ರಾರ್ಥಿಸಿದ ನಂತರ ದೇವರು ನಮಗಾಗಿ ಮಾಡಲಿರುವ ಅದ್ಭುತಕರ ಸಂಗತಿಗಳನ್ನು ಅನುಭವಿಸಲಿದ್ದೇವೆ!

## ವಿಮರ್ಶೆಗಾಗಿ ಪ್ರಶ್ನೆಗಳು

1. ನಾವು ದೇಹ, ಪ್ರಾಣ ಮತ್ತು ಆತ್ಮದಿಂದ ಕೂಡಿರುವುದರಿಂದ, ನಮ್ಮ ನಂಬಿಕೆಯು ಪ್ರಾಣದಿಂದ (ಮನಸ್ಸು, ಸ್ವ-ಇಚ್ಛೆ ಮತ್ತು ಭಾವನೆಗಳಿಂದ) ಬಂದದ್ದೋ ಅಥವಾ ಆತ್ಮದಿಂದ ಬಂದದ್ದೋ ಎಂದು ನಮಗೆ ಹೇಗೆ ಗೊತ್ತಾಗುತ್ತದೆ?

2. ದೇವರ ರೀತಿಯ ನಂಬಿಕೆಯ ಬಗ್ಗೆ ನಿಮ್ಮ ಸ್ವಂತ ಮಾತುಗಳಲ್ಲಿ ಒಂದು ವ್ಯಾಖ್ಯಾನವನ್ನು ನೀಡಿ.

3. ನಂಬಿಕೆಯ ಪ್ರಾರ್ಥನೆ ಮತ್ತು ಏಕಮನಸ್ಸಿನ ಪ್ರಾರ್ಥನೆಯೆಂದರೇನು?

4. ನೀವು ಕಾಳಜಿವಹಿಸುವ ಯಾರಿಗಾದರೂ ದೇವರ ವಾಕ್ಯವನ್ನು ಹೇಳಿ ಪ್ರಾರ್ಥಿಸುವ ಸಂಕ್ಷಿಪ್ತ ಉದಾಹರಣೆಯನ್ನು ಬರೆಯಿರಿ.

*ಪಾಠ ಎಂಟು*

# ಅಧಿಕಾರದಿಂದ ಪ್ರಾರ್ಥಿಸುವುದು

## ಪೀಠಿಕೆ

ಅನೇಕ ಪ್ರಾರ್ಥನೆಗಳಿಗೆ ಉತ್ತರ ಸಿಗದಿರುವುದಕ್ಕೆ ಕಾರಣ ದೇವರು ನಮಗೆ ಮಾಡಲು ಹೇಳಿರುವುದನ್ನು ದೇವರು ಮಾಡಬೇಕೆಂದು ನಾವು ಬೇಡುತ್ತಿದ್ದೇವೆ. ಆದಮ ಮತ್ತು ಹವ್ವರು ಹೇಗೆ ಈ ಲೋಕದಲ್ಲಿ ಜೀವಿಸಿ ಆಳ್ವಿಕೆ ನಡೆಸುವುದಕ್ಕಾಗಿ ಸೃಷ್ಟಿಸಲ್ಪಟ್ಟರೋ ಹಾಗೆಯೇ ನಾವು ಜೀವಿಸಬೇಕು ಮತ್ತು ಆಳಬೇಕು. ಪ್ರಾರ್ಥನೆಯೆಂದರೆ ಕೇವಲ ಬೇಡುವುದಕ್ಕೆ ಸೀಮಿತವಾದದ್ದು ಎಂಬ ಕಲ್ಪನೆಯನ್ನು ಹೊಂದಿದ್ದೇವೆ, ಆದರೆ ಪ್ರಾರ್ಥನೆಯ ಒಂದು ಮುಖ್ಯ ಭಾಗವು ಕೇಳಿಸಿಕೊಳ್ಳುವುದಾಗಿದೆ. ನಾವು ಕೇಳಿಸಿಕೊಳ್ಳುವಾಗ, ದೇವರು ನಾವು ಏನು ಮಾಡಬೇಕು - ಏನು ಹೇಳಬೇಕು - ಏನು ಆಜ್ಞಾಪಿಸಬೇಕು - ಏನನ್ನು ಮಾತಿನಿಂದ ಅಸ್ತಿತ್ವಕ್ಕೆ ತರಬೇಕು ಎಂಬುದನ್ನು ನಮಗೆ ಹೇಳುತ್ತಾರೆ.

ಪ್ರಾರ್ಥನೆಯೆಂದರೆ ಕೇಳುವುದು - ಕೇಳಿಸಿಕೊಳ್ಳುವುದು - ವಿಧೇಯರಾಗುವುದು. ಒಂದು ಸೇನೆಯಲ್ಲಿರುವ ಜೀವನಕ್ಕೆ ಇದು ಸಮವಾಗಿದೆ. ಅಲ್ಲಿರುವಾಗ ನಾವು ಏನು ಮಾಡಬೇಕೆಂದು ಸೈನ್ಯಾಧಿಕಾರಿಯನ್ನು ಕೇಳುತ್ತೇವೆ, ಅವನು ಕೊಡುವ ಆದೇಶಗಳನ್ನು ಕೇಳಿಸಿಕೊಳ್ಳುತ್ತೇವೆ ನಂತರ ಅವುಗಳಿಗೆ ವಿಧೇಯರಾಗುತ್ತೇವೆ.

ಪಾಠ ಎರಡರಲ್ಲಿ ನಾವು ಮಾನವಕುಲದ ಸೃಷ್ಟಿಯನ್ನು ಮತ್ತು ದೇವರು ಅವರಿಗೆ ವಹಿಸಿದ ಅಧಿಕಾರವನ್ನು ಅಧ್ಯಯನ ಮಾಡಿದೆವು. ಈ ಪಾಠದಲ್ಲಿ ನಾವು ಆ ಅಧಿಕಾರವನ್ನು ನಮ್ಮ ಪ್ರಾರ್ಥನಾ ಜೀವಿತದಲ್ಲಿ ಹೇಗೆ ಕಾರ್ಯಾಚರಣೆಗೆ ತರಬೇಕೆಂಬುದನ್ನು ಕಲಿತುಕೊಳ್ಳೋಣ.

ವಿಶ್ವಾಸಿಗಳು ಈ ಲೋಕದಲ್ಲಿ ಜೀವಿತವನ್ನು ಬದಲಾಯಿಸುವ ಅಧಿಕಾರದಲ್ಲಿ ನಡೆಯುವುದನ್ನು ಪ್ರಾರಂಭಿಸಬೇಕೆಂಬುದು ದೇವರ ಬಯಕೆಯಾಗಿದೆ. ದೇವರು ಸಂಪೂರ್ಣವಾಗಿ ತನ್ನ ನಿಯಂತ್ರಣದಡಿಯಲ್ಲಿ ಅಧಿಕಾರದೊಂದಿಗೆ ನಡೆಯುವಂತಹ ಪುರುಷರನ್ನು ಮತ್ತು ಸ್ತ್ರೀಯರನ್ನು ಹುಡುಕುತ್ತಿದ್ದಾರೆ.

## ಪ್ರಾಯೋಗಿಕ ಹೆಜ್ಜೆಗಳು

ಈ ಪಾಠದಲ್ಲಿ ನಾವು ಅಧಿಕಾರದೊಂದಿಗೆ ನಡೆಯುವ ಪ್ರಾಯೋಗಿಕ ಹಂತಗಳನ್ನು ನೋಡೋಣ. ಅಧಿಕಾರವುಳ್ಳ ಪ್ರಾರ್ಥನೆಗಳನ್ನು ಪ್ರಾರ್ಥಿಸಲು ದೇವರು ಉಪಯೋಗಿಸುವ ವ್ಯಕ್ತಿಗಳು ಯಾರೆಂದರೆ:

✶ **ತಮ್ಮ ಬಯಕೆಗಳನ್ನು ಬರಿದುಮಾಡಿಕೊಂಡಿರುವ ಪಾತ್ರೆಗಳು**

✶ **ಒಬ್ಬ ಸೇವಕನಂತಹ ದೀನ ಹೃದಯವುಳ್ಳವರು**

ಅಧಿಕಾರವುಳ್ಳ ಪ್ರಾರ್ಥನೆಗಳು ಹೀಗಿರುತ್ತವೆ:

✶ **ಪರಿಶುದ್ಧಾತ್ಮನ ಪ್ರಕಟನೆಯ ವರದ ಮೂಲಕ ದೇವರ ಸ್ವರವನ್ನು ಕೇಳುವುದರ ಮೇಲೆ ಅವಲಂಬಿತವಾಗಿದೆ**

✶ **ಪರಿಶುದ್ಧಾತ್ಮನಿಂದ ಕೊಡಲ್ಪಡುವ ನಂಬಿಕೆಯ ವರದ ಮೂಲಕ ಬಲದಿಂದ ಮಾತನಾಡುವುದು**

ಬಲವುಳ್ಳ, ಅಧಿಕಾರವುಳ್ಳ, ರಾಜಾಧಿಕಾರವುಳ್ಳ ಪ್ರಾರ್ಥನೆಗಳು ಎಂದಿಗೂ "ಹೀಗಿದ್ದಿದ್ದರೆ ಚೆನ್ನಾಗಿತ್ತು" ಎನ್ನುವ ಮನೋಭಾವನೆಯಿಂದ ಬರಲು ಸಾಧ್ಯವಿಲ್ಲ. ಉದಾಹರಣೆಗೆ, "ಈ ಭಾನುವಾರ ನಮ್ಮ ಸಭೆಯು ವಿಹಾರಕ್ಕೆ ಹೋಗಬೇಕಾಗಿದೆ, ಮಳೆ ಬರದಿದ್ದರೆ ಚೆನ್ನಾಗಿತ್ತು". ಕೆಲವರು ಹೀಗೂ ಹೇಳುತ್ತಾರೆ, "ಯೇಸುವಿನ ನಾಮದಲ್ಲಿ ಭಾನುವಾರ ಹವಾಮಾನವು ಚೆನ್ನಾಗಿರಬೇಕೆಂದು ನಾನು ಆಜ್ಞಾಪಿಸುತ್ತೇನೆ." ನಿಲ್ಲಿಸಿರಿ! ಅಧಿಕಾರವುಳ್ಳ ಪ್ರಾರ್ಥನೆಯು ಎಂದಿಗೂ ನಮ್ಮ ಸ್ವಂತ ಬಯಕೆಗಳಿಂದ ಅಥವಾ ಸ್ವಚಿತ್ತದಿಂದ ಬರುವುದಿಲ್ಲ. ಎಲೀಯನು ಪ್ರಾರ್ಥನೆಯನ್ನು ನಿಲ್ಲಿಸಿದನು ಮತ್ತು ಅವನು ಮತ್ತೊಮ್ಮೆ ಮಳೆ ಬರಲಿ ಅನ್ನುವವರೆಗೂ ಬರಲಿಲ್ಲ, ಆದರೆ ಅವನು ಸಂಪೂರ್ಣವಾಗಿ ದೇವರ ಮಾರ್ಗದರ್ಶನದ ಅಡಿಯಲ್ಲಿದ್ದನು.

**1 ಅರಸು 17:1 ಗಿಲ್ಯಾದಿನ ಪ್ರವಾಸಿಗಳಲ್ಲಿ ತಿಷ್ಬೀಯನಾದ ಎಲೀಯ ಎಂಬವನು ಅಹಾಬನಿಗೆ - ನಾನು ಸನ್ನಿಧಿಸೇವೆ ಮಾಡುತ್ತಿರುವ ಇಸ್ರಾಯೇಲ್‌ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ ಅಂದನು.**

ಅಪೋಸ್ತಲನಾದ ಯಾಕೋಬನು ಈ ಸಮಯವನ್ನು ಉಲ್ಲೇಖಿಸುತ್ತಾನೆ,
**ಯಾಕೋಬನು 5:17,18 ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ. ತಿರಿಗಿ ಅವನು ಪ್ರಾರ್ಥನೆಮಾಡಲು ಆಕಾಶವು ಮಳೆಗರೆಯಿತು, ಭೂಮಿಯು ಬೆಳೆಯಿತು.**

ಇಲ್ಲಿ ಪ್ರಾರ್ಥನೆ ಹಾಗೂ ಘೋಷಣೆ ಎರಡೂ ಇರುವುದನ್ನು ಗಮನಿಸಿರಿ. ಅವನು ಪ್ರಾರ್ಥಿಸಿದನು, ದೇವರ ಸ್ವರವನ್ನು ಕೇಳಿಸಿಕೊಂಡನು, ನಂತರ ಅಧಿಕಾರದಿಂದ ಘೋಷಿಸಿದನು, "ನಾನು ಹೇಳುವವರೆಗೆ, ಈ ವರ್ಷಗಳಲ್ಲಿ ಮಳೆ ಬರಬಾರದು."

## ಯೇಸು ನಮ್ಮ ಮಾದರಿ

ನಾವು ಮಾಡುವ ಎಲ್ಲಾ ಕಾರ್ಯದಲ್ಲೂ ಕೊನೆಯ ಆದಾಮನಾದ ಯೇಸು ನಮಗೆ ಯಾವಾಗಲೂ ಮಾದರಿಯಾಗಿರಬೇಕು. ಮೊದಲ ಆದಾಮನು ಯಾವುದಕ್ಕಾಗಿ ಸೃಷ್ಟಿಸಲ್ಪಟ್ಟನೋ ಅದನ್ನೆಲ್ಲಾ ಭೂಮಿಯ ಮೇಲೆ ಯೇಸು ಮಾಡಿದರು. "ಯೇಸು ಅದನ್ನು ಮಾಡಿದ್ದರೆ, ನಾವೂ ಸಹ ಅದನ್ನು ಮಾಡಬಲ್ಲೆವು!" ಎಂದು ನಾವು ನಿಜವಾಗಲೂ ಹೇಳಲು ಸಾಧ್ಯ. ನಾವು ಯೇಸುವಿನ ನಾಮದಲ್ಲಿ ಮತ್ತು ಪರಿಶುದ್ಧಾತ್ಮನ ಬಲದಲ್ಲಿ ಅದನ್ನು ಮಾಡಬಹುದು.

### ಪರಿಶುದ್ಧಾತ್ಮನಿಂದ ಬಲಹೊಂದಿ

ಯೇಸು ದೀಕ್ಷಾಸ್ನಾನ ಮಾಡಿಸಿಕೊಂಡು ಪರಿಶುದ್ಧಾತ್ಮನು ಅವರ ಮೇಲೆ ಇಳಿದು ಬರುವವರೆಗೂ ಯಾವ ಅದ್ಭುತಗಳನ್ನು ಮಾಡಲಿಲ್ಲ. ಲೂಕನು ನಮಗೆ ಹೀಗೆ ಹೇಳುತ್ತಾನೆ,

**ಲೂಕನು 4:14-19 ತರುವಾಯ ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ತಿರಿಗಿ ಗಲಿಲಾಯಕ್ಕೆ ಹೋದನು... ಆತನು... ತನ್ನ ವಾಡಿಕೆಯ ಪ್ರಕಾರ ಸಬ್ಬತ್‌ದಿನದಲ್ಲಿ ಸಭಾಮಂದಿರಕ್ಕೆ ಹೋಗಿ ಓದುವದಕ್ಕಾಗಿ ಎದ್ದು ನಿಂತನು.**

**ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರಳಿಯನ್ನು ಆತನ ಕೈಗೆ ಕೊಡಲಾಗಿ ಆತನು ಆ ಸುರಳಿಯನ್ನು ಬಿಚ್ಚಿ ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು; ಆ ಮಾತೇನಂದರೆ ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ ಬಿಡುಗಡೆಯಾಗುವದನ್ನು ಮತ್ತು ಕುರುಡರಿಗೆ ಕಣ್ಣು ಬರುವದನ್ನು ಪ್ರಸಿದ್ಧಿಪಡಿಸುವದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ ಕರ್ತನು ನೇಮಿಸಿರುವ ಶುಭವರ್ಷವನ್ನು ಪ್ರಚುರಪಡಿಸುವದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ ಎಂಬದು.**

ನಾವೂ ಸಹ ಪರಿಶುದ್ಧಾತ್ಮನಿಂದ ಬಲವನ್ನು ಹೊಂದಿಕೊಳ್ಳಬೇಕು.

### ವಿಶ್ವಾಸಿಗಳಿಗೆ ಅಧಿಕಾರವನ್ನು ಕೊಟ್ಟರು

ಯೇಸು ಈ ಭೂಮಿಯ ಮೇಲೆ ಸೇವೆ ಮಾಡುತ್ತಿದ್ದಾಗ ದುರಾತ್ಮಗಳ ಮೇಲೆ, ರೋಗ ಖಾಯಿಲೆಗಳ ಮೇಲೆ, ಮಾನವನ ಶರೀರದ ಮೇಲೆ, ಸೃಷ್ಟಿಯ ಮೇಲೆ, ಮೂಲಧಾತುಗಳ ಮೇಲೆ ಮತ್ತು ಮರಣದ ಮೇಲೂ ಅಧಿಕಾರವುಳ್ಳವರಾಗಿದ್ದರು. ಅವರು ಈ ಅಧಿಕಾರವನ್ನು ನಮಗೆ ಕೊಟ್ಟಿದ್ದಾರೆ.

ಯೋಹಾನನ ಪ್ರಕಾರ ಹೀಗೆ ಹೇಳುತ್ತಾರೆ,
**ಯೋಹಾನ 14:12 "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನನ್ನು ನಂಬುವವನು ನಾನು ನಡಿಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ."**

ಮತ್ತಾಯನ ಪ್ರಕಾರ ಹೀಗೆ ಹೇಳುತ್ತಾರೆ,
**ಮತ್ತಾಯ 10:8 "ರೋಗಿಗಳನ್ನು ಸ್ವಸ್ಥಮಾಡಿರಿ, ಸತ್ತವರನ್ನು ಬದುಕಿಸಿರಿ, ಕುಷ್ಠಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ."**

ಲೂಕನ ಪ್ರಕಾರ ಹೀಗೆ ಹೇಳುತ್ತಾರೆ,

**ಲೂಕ 10:19 "ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನೂ ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡುಮಾಡುವದೇ ಇಲ್ಲ."**

ಸೈತಾನನು ಆದಾಮ ಮತ್ತು ಹವ್ವಳಿಂದ ತೆಗೆದುಕೊಂಡಿದ್ದ ಅಧಿಕಾರವನ್ನು ಯೇಸು ತಿರುಗಿ ಪಡೆದುಕೊಂಡು ಅದನ್ನು ತನ್ನ ಹಿಂಬಾಲಕರಿಗೆ - ಅಂದರೆ ವಿಶ್ವಾಸಿಗಳಿಗೆ - ಅಂದರೆ ನಮಗೆ - ಕೊಟ್ಟಿದ್ದಾರೆ.

* *ದುರಾತ್ಮಗಳ ಮೇಲೆ*

ಯೇಸುವಿಗೆ ದುರಾತ್ಮಗಳ ಮೇಲೆ ಅಧಿಕಾರವಿತ್ತು.

**ಮತ್ತಾಯ 8:31,32 ಆ ದೆವ್ವಗಳು - ನೀನು ನಮ್ಮನ್ನು ಇವರೊಳಗಿಂದ ಹೊರಡಿಸುವದಾದರೆ ಆ ಹಂದಿಯ ಗುಂಪಿನೊಳಗೆ ಕಳುಹಿಸಿಕೊಡು ಎಂದು ಬೇಡಿಕೊಂಡವು. ಆತನು – "ಹೋಗಿರಿ" ಅನ್ನಲು ಅವು ಹೊರಗೆ ಬಂದು ಹಂದಿಗಳೊಳಗೆ ಹೊಕ್ಕವು; ಆ ಕ್ಷಣವೇ ಆ ಗುಂಪೆಲ್ಲಾ ಓಡಿ ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದು ನೀರಿನಲ್ಲಿ ಮುಣುಗಿ ಸತ್ತುಹೋಯಿತು.**

ದೇವರೇ ಈ ದುರಾತ್ಮಗಳನ್ನು ನೀನೇ ನೋಡಿಕೋ ಎಂದು ಯೇಸು ಬೇಡಲಿಲ್ಲ. ಯೇಸು "ಹೋಗಿರಿ" ಅಂದರು.

* *ರೋಗ ಖಾಯಿಲೆಗಳ ಮೇಲೆ*

ಕುಷ್ಟ ರೋಗಿಯು ಯೇಸುವಿನ ಹತ್ತಿರ ಬಂದನು ಮತ್ತು ಅವನು ಶುದ್ಧಮಾಡಲ್ಪಟ್ಟನು.

**ಮಾರ್ಕ 1:40,41 ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು ಆತನ ಮುಂದೆ ಮೊಣಕಾಲೂರಿಕೊಂಡು - ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧಮಾಡಬಲ್ಲೆ ಎಂದು ಬೇಡಿಕೊಳ್ಳಲು ಆತನು ಕನಿಕರಪಟ್ಟು ಕೈನೀಡಿ ಅವನನ್ನು ಮುಟ್ಟಿ - ನನಗೆ ಮನಸ್ಸುಂಟು; ಶುದ್ಧವಾಗು ಅಂದನು.**

ದೇವರೇ ಇವನನ್ನು ಸ್ವಸ್ಥಪಡಿಸು ಎಂದು ಯೇಸು ದೇವರಿಗೆ ಬೇಡಲಿಲ್ಲ. ಯೇಸು "ಶುದ್ಧವಾಗು" ಅಂದರು.

* *ಮಾನವನ ಶರೀರದ ಮೇಲೆ*

ಕೈಬತ್ತಿದ್ದ ಒಬ್ಬ ಮನುಷ್ಯನು ಯೇಸುವಿನ ಹತ್ತಿರಕ್ಕೆ ಬಂದನು.

**ಮಾರ್ಕ 3:3,5b ಆತನು ಕೈಬತ್ತಿದ್ದವನಿಗೆ - ಎದ್ದು ನಡುವೆ ಬಾ ಎಂದು ಹೇಳಿ… ಆ ಮನುಷ್ಯನಿಗೆ - ನಿನ್ನ ಕೈಚಾಚು ಎಂದು ಹೇಳಿದನು. ಅವನು ಚಾಚಿದನು; ಕೈ ವಾಸಿಯಾಯಿತು.**

ಮತ್ತೊಮ್ಮೆ, ದೇವರು ಒಂದು ಸರ್ವಶಕ್ತ ಕಾರ್ಯವನ್ನು ಮಾಡಿ ಆ ವ್ಯಕ್ತಿಯನ್ನು ಅಲೌಕಿಕವಾಗಿ ಸೌಖ್ಯಪಡಿಸಬೇಕೆಂದು ಬೇಡಲಿಲ್ಲ. ಯೇಸು "ನಿನ್ನ ಕೈ ಚಾಚು" ಎಂದು ಹೇಳಿದರು.

✱ *ಸೃಷ್ಟಿಯ ಮೇಲೆ*

ಯೇಸುವಿಗೆ ಸೃಷ್ಟಿಯ ಒಂದು ಭಾಗವಾಗಿದ್ದ ಅಂಜೂರದ ಮರದ ಮೇಲೆ ಅಧಿಕಾರವಿತ್ತು.

**ಮತ್ತಾಯ 21:19** ದಾರಿಯಲ್ಲಿ ಒಂದು ಅಂಜೂರದ ಮರವನ್ನು ಕಂಡು ಅದರ ಹತ್ತಿರಕ್ಕೆ ಹೋಗಿ ಅದರಲ್ಲಿ ಬರೀ ಎಲೆಗಳನ್ನೇ ಹೊರತು ಮತ್ತೇನೂ ಕಾಣದೆ ಅದಕ್ಕೆ - ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆಹೋಗಲಿ ಎಂದು ಹೇಳಿದನು. ಆ ಕ್ಷಣವೇ ಆ ಅಂಜೂರದ ಮರವು ಒಣಗಿಹೋಯಿತು.

✱ *ಮೂಲಧಾತುಗಳ ಮೇಲೆ*

ಯೇಸು ಬಿರುಗಾಳಿ ಮತ್ತು ಸಮುದ್ರದೊಂದಿಗೆ ಮಾತನಾಡಿದರು ಮತ್ತು ಅವುಗಳು ಅವರ ಮಾತಿಗೆ ವಿಧೇಯವಾದವು.

**ಮಾರ್ಕ 4:37-39 ಬೇರೆ ದೋಣಿಗಳೂ ಆತನ ಸಂಗಡ ಇದ್ದವು. ತರುವಾಯ ದೊಡ್ಡ ಬಿರುಗಾಳಿ ಎದ್ದು ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದರಿಂದ ಆ ದೋಣಿ ಆಗಲೇ ತುಂಬುವದಕ್ಕೆ ಬಂದಿತ್ತು. ಆತನು ದೋಣಿಯ ಹಿಂಭಾಗದಲ್ಲಿ ತಲೆಗಿಂಬನ್ನು ಒರಗಿ ನಿದ್ದೆ ಮಾಡುತ್ತಿದ್ದನು. ಅವರು ಆತನನ್ನು ಎಬ್ಬಿಸಿ - ಗುರುವೇ, ನಾವು ಮುಳುಗಿಹೋಗುವದರಲ್ಲಿ ನಿನಗೆ ಚಿಂತೆಯಿಲ್ಲವೇ ಎಂದು ಕೇಳಲು ಆತನು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ - ಸುಮ್ಮನಿರು, ಮೊರೆಯಬೇಡ ಎಂದು ಅಪ್ಪಣೆಕೊಟ್ಟನು. ಕೊಡುತ್ತಲೆ ಗಾಳಿ ನಿಂತು ಹೋಗಿ ಎಲ್ಲಾ ಶಾಂತವಾಯಿತು.**

✱ *ಮರಣದ ಮೇಲೆ*

ಯೇಸು ಲಾಜರನ ಸಮಾಧಿಯ ಎದುರುಗಡೆ ನಿಂತುಕೊಂಡು ಮರಣದ ಮೇಲೆ ಅಧಿಕಾರವನ್ನು ತೆಗೆದುಕೊಂಡರು.

**ಯೋಹಾನ 11:43b,44 ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ - ಲಾಜರನೇ, ಹೊರಗೆ ಬಾ ಎಂದು ಕೂಗಿದನು. ಸತ್ತಿದ್ದವನು ಹೊರಗೆ ಬಂದನು; ಅವನ ಕೈಕಾಲುಗಳು ಬಟ್ಟೆಗಳಿಂದ ಕಟ್ಟಿದ್ದವು, ಅವನ ಮುಖವು ಕೈಪಾವುಡದಿಂದ ಸುತ್ತಿತ್ತು. ಯೇಸು ಅವರಿಗೆ - ಅವನನ್ನು ಬಿಚ್ಚಿರಿ, ಹೋಗಲಿ ಎಂದು ಹೇಳಿದನು.**

## ಅಧಿಕಾರದ ಸ್ವರ

ನಾವು ಕಳೆದ ಪಾಠದಲ್ಲಿ ನಂಬಿಕೆಯ ಸ್ವರದ ಬಗ್ಗೆ ಕಲಿತೆವು. ಈಗ ನಾವು ಅಧಿಕಾರದ ಸ್ವರದ ಬಗ್ಗೆ ನೋಡೋಣ. ಮೇಲಿನ ಉದಾಹರಣೆಗಳಲ್ಲಿ ಯೇಸುವಿನ ಮಾತುಗಳು ಎಷ್ಟು ಸ್ವಲ್ಪವಾಗಿದ್ದವು ಎಂಬುದನ್ನು ನೀವು ಗಮನಿಸಿದಿರೋ?

ಯೇಸು ಹೇಳಿದ್ದು, "ಹೋಗಿರಿ". "ಶುದ್ಧನಾಗು", "ನಿನ್ನ ಕೈಯನ್ನು ಚಾಚು". "ಇನ್ನು ಮೇಲೆ ನಿನ್ನಲ್ಲಿ ಫಲವು ಎಂದೆಂದಿಗೂ ಆಗದೆಹೋಗಲಿ", "ಶಾಂತವಾಗು, ಮೊರೆಯಬೇಡ!" "ಲಾಜರನೇ, ಹೊರಗೆ ಬಾ!"

## ಶತಾಧಿಪತಿ

ಶತಾಧಿಪತಿಯು ಯೇಸುವಿನ ಹತ್ತಿರಕ್ಕೆ ಬಂದು "ನೀನು ಒಂದು ಮಾತು ಹೇಳಿದರೆ ಸಾಕು, ನನ್ನ ಆಳಿಗೆ ಗುಣವಾಗುವುದು" ಎಂದು ಹೇಳಿದನು.

**ಮತ್ತಾಯ 8:8-10  ಆ ಶತಾಧಿಪತಿಯು - ಪ್ರಭುವೇ, ನೀನು ನನ್ನ ಮನೆಗೆ ಬರತಕ್ಕಷ್ಟು ಯೋಗ್ಯತೆ ನನ್ನಲ್ಲಿಲ್ಲ; ನೀನು ಒಂದು ಮಾತು ಹೇಳಿದರೆ ಸಾಕು, ನನ್ನ ಆಳಿಗೆ ಗುಣವಾಗುವದು. ನಾನು ಸಹ ಮತ್ತೊಬ್ಬರ ಕೈಕೆಳಗಿರುವವನು; ನನ್ನ ಕೈಕೆಳಗೆ ಸಿಪಾಯಿಗಳಿದ್ದಾರೆ; ನಾನು ಅವರಲ್ಲಿ ಒಬ್ಬನಿಗೆ ಹೋಗು ಎಂದು ಹೇಳಿದರೆ ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಎಂದು ಹೇಳಿದರೆ ಬರುತ್ತಾನೆ; ನನ್ನ ಆಳಿಗೆ ಇಂಥಿಂಥದನ್ನು ಮಾಡು ಎಂದು ಹೇಳಿದರೆ ಮಾಡುತ್ತಾನೆ ಅಂದನು. ಯೇಸು ಇದನ್ನು ಕೇಳಿ ಆಶ್ಚರ್ಯಪಟ್ಟು, ತನ್ನ ಹಿಂದೆ ಬರುತ್ತಿದ್ದವರಿಗೆ - ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ.**

ಯೇಸುವಿನ ಅಧಿಕಾರವನ್ನು ಶತಾಧಿಪತಿಯು ಗುರುತಿಸಿದನು ಯಾಕೆಂದರೆ ಅವನೂ ಸಹ ಅಧಿಕಾರದಲ್ಲಿದ್ದವನು. ಶತಾಧಿಪತಿಯ ಉದಾಹರಣೆಗಳ ಸಂಕ್ಷಿಪ್ತ ಪದಗಳನ್ನು ಗಮನಿಸಿರಿ - "ಹೋಗು", "ಬಾ", "ಇದನ್ನು ಮಾಡು".

ಸಂಕ್ಷಿಪ್ತವಾಗಿರು

ಅಧಿಕಾರದ ಸ್ವರವು ಸಂಕ್ಷಿಪ್ತವಾಗಿರುತ್ತದೆ. ಅಲ್ಲಿ ವಿವರಣೆಯಿರುವುದಿಲ್ಲ, ಅಲ್ಲಿ ಅರ್ಹತಾ ಪಟ್ಟಿಗಳ ಪ್ರಸ್ತಾಪವಿಲ್ಲ.

ಯೇಸುವಿನ ಮಾತುಗಳನ್ನು ನೆನಪಿಸಿಕೊಳ್ಳಿರಿ:
**ಮತ್ತಾಯ 6:7,8  ಆದರೆ ಪ್ರಾರ್ಥನೆಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮಸುಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ. 8ಆದದರಿಂದ ನೀವು ಅವರ ಹಾಗೆ ಆಗಬೇಡಿರಿ. ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬದು ಆತನಿಗೆ ತಿಳಿದದೆ.**

✳ *ಮಾತುಗಳು ಕೊಂಚವಾಗಿರಲಿ*

ಪ್ರಸಂಗಿಯಲ್ಲಿ ನಾವು ಹೀಗೆ ಓದುತ್ತೇವೆ,
**ಪ್ರಸಂಗಿ 5:2  ಬಾಯಿದುಡುಕಬೇಡ, ದೇವರ ಮುಂದೆ ಮಾತಾಡಲು ನಿನ್ನ ಹೃದಯದಲ್ಲಿ ಆತುರಪಡದಿರು; ದೇವರು ಆಕಾಶದಲ್ಲಿದ್ದಾನಲ್ಲವೆ, ನೀನು ಭೂಮಿಯಲ್ಲಿದ್ದೀ; ಆದಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ.**

✳ *ಸತ್ಯವೇದದಲ್ಲಿರುವ ಉದಾಹರಣೆಗಳು*

- **ದಾನಿಯೇಲನು ಅತ್ಯುತ್ತಮವಾದ ಒಂದು ಸಂಕ್ಷಿಪ್ತ ಪ್ರಾರ್ಥನೆಯನ್ನು ಮಾಡುತ್ತಾನೆ.**

**ದಾನಿಯೇಲ 9:19  "ಸ್ವಾಮೀ, ಕೇಳು! ಸ್ವಾಮೀ, ಕ್ಷಮಿಸು! ಸ್ವಾಮೀ, ಲಾಲಿಸು, ಕಾರ್ಯವನ್ನು ಸಾಧಿಸು! ತಡಮಾಡಬೇಡ! ನನ್ನ ದೇವರೇ, ನಿನ್ನ ಜನವೂ ಪಟ್ಟಣವೂ ನಿನ್ನ ಹೆಸರಿನವುಗಳಾದ ಕಾರಣ ನಿನ್ನ ಹೆಸರನ್ನು ಕಾಪಾಡಿಕೋ!"**

- **ಮೋಶೆಯೂ ಸಹ ಅದ್ಭುತಕರವಾದ ಸಂಕ್ಷಿಪ್ತ ಪ್ರಾರ್ಥನೆಗಳನ್ನು ಮಾಡಿದನು.**

**ಅರಣ್ಯ 10:35,36  ಯೆಹೋವನ ಮಂಜೂಷವು ಹೊರಡುವಾಗ ಮೋಶೆ -**

ಯೆಹೋವನೇ, ಎದ್ದು ಹೊರಡೋಣವಾಗಲಿ; ನಿನ್ನ ವೈರಿಗಳು ಚದರಿಹೋಗಲಿ; ನಿನ್ನ ಹಗೆಗಾರರು ಬೆಂಗೊಟ್ಟು ಓಡಿಹೋಗಲಿ ಎಂದು ಹೇಳುವನು. ಅದು ನಿಂತಾಗ ಅವನು - ಯೆಹೋವನೇ, ಇಸ್ರಾಯೇಲ್ಯರ ಲಕ್ಷಾಂತರ ಕುಟುಂಬಗಳ ಮಧ್ಯದಲ್ಲಿ ತಿರಿಗಿ ಬರೋಣವಾಗಲಿ ಎಂದು ಹೇಳುವನು.

✶ ಸಂಕ್ಷಿಪ್ತ ಪ್ರಾರ್ಥನೆಗೆ ಇನ್ನೊಂದು ಉದಾಹರಣೆಯು ಎಲೀಯನು ಸತ್ತ ಮಗುವನ್ನು ಜೀವದಿಂದ ಎಬ್ಬಿಸಿದಾಗ ಮಾಡಿದ್ದಾಗಿದೆ.

**1 ಅರಸು 17:21,22** ಹುಡುಗನ ಮೇಲೆ ಮೂರು ಸಾರಿ ಬೋರ್ಲಬಿದ್ದು - ನನ್ನ ದೇವರಾದ ಯೆಹೋವನೇ, ಈ ಹುಡುಗನ ಪ್ರಾಣವು ತಿರಿಗಿ ಬರುವಂತೆ ಮಾಡು ಎಂಬದಾಗಿ ಆತನಿಗೆ ಮೊರೆಯಿಟ್ಟನು. ಯೆಹೋವನು ಅವನ ಪ್ರಾರ್ಥನೆಯನ್ನು ಕೇಳಿದದರಿಂದ ಹುಡುಗನ ಪ್ರಾಣವು ತಿರಿಗಿ ಬಂದು ಅವನು ಉಜ್ಜೀವಿಸಿದನು. ಎಲೀಯನು ಆ ಹುಡುಗನನ್ನು ಅಲ್ಲಿಂದ ಕೆಳಗೆ ತೆಗೆದುಕೊಂಡುಹೋಗಿ ಅವನ ತಾಯಿಗೆ ಒಪ್ಪಿಸಿ - ಇಗೋ, ನೋಡು; ನಿನ್ನ ಮಗನು ಜೀವಿಸುತ್ತಾನೆ ಅಂದನು. .

## ಬಾಳನ ಪ್ರವಾದಿಗಳೊಂದಿಗೆ ಎಲೀಯನ ಅನುಭವ

ನಾವು ಪಾಠ ಐದರಲ್ಲಿ ಬಾಳನ ಪ್ರವಾದಿಗಳನ್ನು ಎಲೀಯನು ಎದುರಿಸಿದ್ದರ ಬಗ್ಗೆ ಚರ್ಚಿಸಿದ್ದೇವೆ. ಎಲೀಯನು ನಿಶ್ಚಯವಾಗಲೂ ಅಧಿಕಾರವನ್ನು ಅರ್ಥಮಾಡಿಕೊಂಡ ವ್ಯಕ್ತಿಯಾಗಿದ್ದನು. ಬಾಳನ ಪ್ರವಾದಿಗಳು ಇಡೀ ದಿವಸ ಕುಣಿಯುವುದನ್ನು, ಕೂಗಾಡುವುದನ್ನು, ಗೋಗರೆಯುವುದನ್ನು ಮತ್ತು ತಮ್ಮ ಶರೀರಗಳನ್ನು ಕೊಯ್ದುಕೊಳ್ಳುವುದನ್ನು ಇಸ್ರಾಯೇಲ್ ಜನರು ಕಂಡ ಮೇಲೆ ಏನೂ ಸಂಭವಿಸದಿರುವುದನ್ನು ನೋಡಿದರು.

ಎಲೀಯನು ಯಜ್ಞವೇದಿಯನ್ನು ಮತ್ತು ಯಜ್ಞಬಲಿಯನ್ನು ಸಿದ್ಧಪಡಿಸಿದ ನಂತರ ಅವನು ಹತ್ತಿರಕ್ಕೆ ಬಂದು ... ಎಂದು ಹೇಳಿದನು - ಅವನು ಕೂಗಾಡಲಿಲ್ಲ - ಕುಣಿದಾಡಲಿಲ್ಲ - ಗೋಗರೆಯಲಿಲ್ಲ - ತನ್ನನ್ನು ಕೊಯ್ದುಕೊಳ್ಳಲಿಲ್ಲ - ಅವನು ಅರವತ್ತಾರು ಚಿಕ್ಕ ಪದಗಳನ್ನು ಒಂದು ಬಾರಿ ಪ್ರಾರ್ಥಿಸಿದನು.

**1 ಅರಸುಗಳು 18:36-38** ಸಂಧ್ಯಾನೈವೇದ್ಯದ ಹೊತ್ತಿಗೆ ಪ್ರವಾದಿಯಾದ ಎಲೀಯನು ವೇದಿಯ ಹತ್ತಿರ ಬಂದು - ಅಬ್ರಹಾಮ್ ಇಸಾಕ್ ಇಸ್ರಾಯೇಲ್ಯರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲ್ಯರ ದೇವರಾಗಿರುತ್ತೀ ಎಂಬದನ್ನೂ ನಾನು ನಿನ್ನ ಸೇವಕನಾಗಿರುತ್ತೇನೆಂಬದನ್ನೂ ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬದನ್ನೂ ಈಹೊತ್ತು ತೋರಿಸಿ ಕೊಡು. ಕಿವಿಗೊಡು; ಯೆಹೋವನೇ, ಕಿವಿಗೊಡು; ಯೆಹೋವನಾದ ನೀನೊಬ್ಬನೇ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬದನ್ನು ಇವರಿಗೆ ತಿಳಿಯಪಡಿಸು ಎಂದು ಪ್ರಾರ್ಥಿಸಿದನು. ಕೂಡಲೆ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞಮಾಂಸವನ್ನೂ ಕಟ್ಟಿಗೆಕಲ್ಲು ಮಣ್ಣುಗಳನ್ನೂ ದಹಿಸಿಬಿಟ್ಟು ಕಾಲುವೆಯಲ್ಲಿದ್ದ ನೀರನ್ನೆಲ್ಲಾ ಹೀರಿಬಿಟ್ಟಿತು.”

## ದೀನರನ್ನು

ಮೋಶೆಯು ಫರೋಹನ ಮಗಳ ಪುತ್ರನಾಗಿ ಬೆಳೆದು ಬಂದಿದ್ದನು. ಅವನಿಗೆ ಐಶ್ವರ್ಯ ಮತ್ತು ಅಧಿಕಾರದ ಅರಿವಿತ್ತು. ನಂತರ ಅವನು ಮರುಭೂಮಿಗೆ ಓಡಿಹೋದನು ಮತ್ತು ದೇವರು ಒಂದು ಉರಿಯುವ ಪೊದೆಯೊಳಗೆ ಅವನಿಗೆ ಕಾಣಿಸಿಕೊಂಡರು. ಮೋಶೆಯು ನಿಶ್ಚಯವಾಗಲೂ ಅಧಿಕಾರದೊಂದಿಗೆ ನಡೆದನು. ಅವನು ಈಜಿಪ್ಟಿನ ಮೇಲೆ ಉಪದ್ರವಗಳನ್ನು ತಂದನು. ಅವನು ಕೆಂಪು ಸಮುದ್ರವನ್ನು ಇಬ್ಭಾಗ ಮಾಡಿದನು. ಅವನು ಅಡವಿಯಲ್ಲಿ ಬಂಡೆಯೊಳಗಿಂದ ನೀರನ್ನು ತಂದನು. ಅವನು ಬೆಟ್ಟದ ಮೇಲೆ ದೇವರೊಂದಿಗೆ ಮಾತನಾಡಿದನು. ಅವನ ಮುಖವು ಪ್ರಕಾಶಗೊಳ್ಳುವಷ್ಟು ಹತ್ತಿರದಲ್ಲಿ ಅವನು ದೇವರೊಂದಿಗೆ ನಿಕಟವಾಗಿದ್ದನು. ಬಹುಶಃ ಯಾವಾನಿಗಾದರೂ ತನ್ನ ಬಗ್ಗೆ ಹೆಮ್ಮೆಪಟ್ಟುಕೊಳ್ಳಲು ಕಾರಣವಿದ್ದರೆ ಅದು ಮೋಶೆಯಾಗಿದ್ದನು. ಆದರೂ ಅರಣ್ಯಕಾಂಡದಲ್ಲಿ ನಾವು ಹೀಗೆ ಓದುತ್ತೇವೆ,

**ಅರಣ್ಯಕಾಂಡ 12:3 ಆ ಮೋಶೆ ಭೂಮಿಯ ಮೇಲಿರುವ ಎಲ್ಲಾ ಮನುಷ್ಯರಿಗಿಂತಲೂ ಬಹುಸಾತ್ವಿಕನು.**

ಮೋಶೆಯು ದೀನ ಮನುಷ್ಯನಾಗಿದ್ದರಿಂದ ಅವನು ಬಲವಾದ ಅಲೌಕಿಕ ಅಧಿಕಾರದಲ್ಲಿ ಚಲಿಸಲು ದೇವರು ಅನುವು ಮಾಡಲು ಸಾಧ್ಯವಾಯಿತು.

## ಸೇವಕನನ್ನು

ಯೇಸು ಹೇಳಿದರು,
**ಮತ್ತಾಯ 20:26,27 "ನಿಮ್ಮಲ್ಲಿ ಹಾಗಿರಬಾರದು; ಆದರೆ ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗಿರಬೇಕು."**

## ಕ್ರಿಸ್ತನನ್ನು ಅನುಕರಿಸುವವರನ್ನು

ಅವರು ಕೊನೆಯ ಪಸ್ಕಹಬ್ಬದ ಊಟವನ್ನು ಮುಗಿಸಿದ ನಂತರ - ದೇವರ ಮಗನಾದ ಯೇಸು - ಶಿಲುಬೆಯ ಮೇಲೆ ಭಯಂಕರವಾದ ದ್ರೋಹವನ್ನು ಮತ್ತು ಶಿಲುಬೆಗೇರಿಸಲ್ಪಡುವದನ್ನು ಎದುರಿಸಲಿದ್ದ ಯೇಸು - ಶಿಷ್ಯರ ಕಾಲುಗಳನ್ನು ತೊಳೆದರು. ಯೂದನು ತನಗೆ ಮುಂದಿನ ಕ್ಷಣವೇ ವಿಶ್ವಾಸದ್ರೋಹವನ್ನು ಮಾಡಲಿದ್ದಾನೆ ಎಂಬುದನ್ನು ತಿಳಿದಿದ್ದರೂ ಯೇಸು ಅವನ ಕಾಲುಗಳನ್ನು ತೊಳೆದರು.

ಯೇಸು ತನ್ನ ನ್ಯಾಯತೀರ್ಪಿಗಾಗಿ ಮತ್ತು ಮರಣಕ್ಕಾಗಿ ಮಾನಸಿಕವಾಗಿ ಮತ್ತು ಭಾವನಾತ್ಮಕವಾಗಿ ತನ್ನನ್ನು ಸಿದ್ಧಪಡಿಸಿಕೊಳ್ಳಬೇಕಾಗಿತ್ತು. ಆದರೂ ಯಾಕೆ ಆ ದಿನ ಸಂಜೆ ಯೇಸು ಶಿಷ್ಯರ ಕಾಲುಗಳನ್ನು ತೊಳೆಯಲು ಸಮಯವನ್ನು ತೆಗೆದುಕೊಂಡರು?

ಅವರೇ ಈ ಪ್ರಶ್ನೆಗೆ ಉತ್ತರವನ್ನು ನಮಗೆ ನೀಡಿದ್ದಾರೆ. ಅವರು ಅದನ್ನು ಶಿಷ್ಯರಿಗೆ ಮತ್ತು ನಿಶ್ಚಯವಾಗಲೂ ನಮಗೂ ಸಹ ಮಾದರಿಯನ್ನು ತೋರಿಸಲು ಹಾಗೆ

ಮಾಡಿದರು. ಶಿಷ್ಯರು ಒಬ್ಬರಿಗೊಬ್ಬರು ಸೇವಕರಾಗಿರಬೇಕು. ನಾವೂ ಸಹ ಒಬ್ಬರಿಗೊಬ್ಬರು ಸೇವಕರಾಗಿರಬೇಕು.

**ಯೋಹಾನ 13:3-5,12-15 ಯೇಸು ತನ್ನ ಕೈಯಲ್ಲಿ ತಂದೆ ಎಲ್ಲವನ್ನು ಕೊಟ್ಟಿದ್ದಾನೆಂತಲೂ ತಾನು ದೇವರ ಬಳಿಯಿಂದ ಹೊರಟುಬಂದಿದ್ದು ಮತ್ತೆ ದೇವರ ಬಳಿಗೆ ಹೋಗುತ್ತೇನೆಂತಲೂ ತಿಳುಕೊಂಡವನಾಗಿ ಊಟವನ್ನು ಬಿಟ್ಟು ಎದ್ದು ಹೊದ್ದಿದ್ದ ಮೇಲ್ಹೊದಿಕೆಯನ್ನು ತೆಗೆದಿಟ್ಟು ಕೈಪಾವುಡವನ್ನು ತಕ್ಕೊಂಡು ನಡುವಿಗೆ ಕಟ್ಟಿಕೊಂಡನು. ಆಗ ಬೋಗುಣಿಯಲ್ಲಿ ನೀರು ಹಾಕಿಕೊಂಡು ಶಿಷ್ಯರ ಕಾಲುಗಳನ್ನು ತೊಳೆಯುವದಕ್ಕೂ ನಡುವಿಗೆ ಕಟ್ಟಿಕೊಂಡಿದ್ದ ಕೈಪಾವುಡದಿಂದ ಒರಸುವದಕ್ಕೂ ಪ್ರಾರಂಭಿಸಿದನು.**

**ಆತನು ಅವರ ಕಾಲುಗಳನ್ನು ತೊಳೆದ ಮೇಲೆ ತನ್ನ ಮೇಲ್ಹೊದಿಕೆಯನ್ನು ಹಾಕಿಕೊಂಡು ತಿರಿಗಿ ಕೂತುಕೊಂಡು ಅವರಿಗೆ ಹೇಳಿದ್ದೇನಂದರೆ – "ನಾನು ನಿಮಗೆ ಮಾಡಿದ್ದು ಏನೆಂದು ಗೊತ್ತಾಯಿತೋ? ನೀವು ನನ್ನನ್ನು ಗುರುವೆಂದೂ ಕರ್ತನೆಂದೂ ಕರೆಯುತ್ತೀರಿ; ನೀವು ಕರೆಯುವದು ಸರಿ; ನಾನು ಅಂಥವನೇ ಹೌದು. ಕರ್ತನೂ ಗುರುವೂ ಆಗಿರುವ ನಾನು ನಿಮ್ಮ ಕಾಲುಗಳನ್ನು ತೊಳೆದಿರಲಾಗಿ ನೀವು ಸಹ ಒಬ್ಬರ ಕಾಲನ್ನು ಒಬ್ಬರು ತೊಳೆಯುವ ಹಂಗಿನವರಾಗಿದ್ದೀರಿ. ನಾನು ನಿಮಗೆ ಮಾಡಿದ ಮೇರೆಗೆ ನೀವು ಸಹ ಮಾಡುವಂತೆ ನಿಮಗೆ ಮಾದರಿಯನ್ನು ತೋರಿಸಿದ್ದೇನೆ."**

## ಲಭ್ಯವಿರುವವರು

ನಾವು ಸತ್ಯವೇದದಲ್ಲಿ ಓದುವ ವ್ಯಕ್ತಿಗಳ ಅಥವಾ ಘಟನೆಗಳ ಸುತ್ತಲೂ ದಿವ್ಯಕಾಂತಿಯನ್ನು ಹಾಕುವ ಪ್ರವೃತ್ತಿಯಿದೆ. ನಾವು ಅವರನ್ನು ಭಯಭಕ್ತಿಯಿಂದಲೂ ಮತ್ತು ವಿಸ್ಮಯದಿಂದಲೂ ಕಾಣುತ್ತೇವೆ. ನಾವು ಹೀಗೆ ಮಾಡುವುದನ್ನು ನಿಲ್ಲಿಸಬೇಕು ಯಾಕೆಂದರೆ ನಾವೂ ಸಹ ಅದೇ ರೀತಿಯ ಸಂಗತಿಗಳನ್ನು ಮಾಡುವಂತೆ ನಮ್ಮನ್ನು ಊಹಿಸಿಕೊಳ್ಳುವುದನ್ನು ಅದು ತಡೆಯುತ್ತದೆ. ದೇವರು ನಮಗೆ ಒಂದು ಉದಾಹರಣೆಯಾಗಲಿ ಎಂಬ ಉದ್ದೇಶದಿಂದ ಸತ್ಯವೇದದಲ್ಲಿ ಅವರ ಜೀವಿತಗಳಲ್ಲಿ ಆ ಘಟನೆಗಳನ್ನು ಇರಿಸಿದರು. ನಾವು ಅವರ ದೊಡ್ಡ ವಿಜಯಗಳನ್ನು ಮತ್ತು ಸೋಲುಗಳನ್ನು ಓದುತ್ತೇವೆ, ಯಾಕೆಂದರೆ ಅವರೂ ಸಹ ನಮ್ಮಂತೆಯೇ ಮನುಷ್ಯರಾಗಿದ್ದರೂ ದೇವರ ಶಕ್ತಿಯಲ್ಲಿ ಕಾರ್ಯಮಾಡಿದರು ಎಂಬುದನ್ನು ನಾವು ಕಾಣುವುದಕ್ಕಾಗಿ.

ಎಲೀಯನು ಅತ್ಯಂತ ಬಲವುಳ್ಳ ದೇವಸೇವಕರಲ್ಲಿ ಒಬ್ಬನಾಗಿದ್ದನು, ಆದರೂ ಸಹ ಅವನು ನಮ್ಮಂತಹ ಸ್ವಭಾವವುಳ್ಳ ಒಬ್ಬ ಮನುಷ್ಯನಾಗಿದ್ದನು ಎಂದು ಯಾಕೋಬನು ಪ್ರೋತ್ಸಾಹದ ಮಾತುಗಳನ್ನು ಬರೆಯುತ್ತಾನೆ.

**ಯಾಕೋಬನು 5:17a ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು; ಅವನು ಮಳೆಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರು ವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ.**

### ಸಿದ್ಧವಾದ ಪಾತ್ರೆ

ನಾವು ನಮ್ಮನ್ನೇ ಸಿದ್ಧಪಡಿಸಿಕೊಂಡು ಯಜಮಾನನಿಗೆ ಉಪಯುಕ್ತವಾದ, ಸಕಲ ಸತ್ಕಾರ್ಯಗಳಿಗೆ ಸಿದ್ಧರಾದ ಮಾನ್ಯ ಪಾತ್ರೆಗಳಾಗಬಹುದು.

**2 ತಿಮೊಥಿ 2:20,21 ದೊಡ್ಡ ಮನೆಯಲ್ಲಿ ಬೆಳ್ಳಿಬಂಗಾರದ ಪಾತ್ರೆಗಳಲ್ಲದೆ ಮರದ ಪಾತ್ರೆಗಳೂ ಮಣ್ಣಿನ ಪಾತ್ರೆಗಳೂ ಇರುತ್ತವೆ; ಅವುಗಳಲ್ಲಿ ಕೆಲವು ಉತ್ತಮವಾದ ಬಳಕೆಗೂ ಕೆಲವು ಹೀನವಾದ ಬಳಕೆಗೂ ಬರುತ್ತವೆ.**

### ಯೇಸುವಿನ ಹೆಸರಿನಲ್ಲಿ ಪ್ರಾರ್ಥಿಸಲು ಬಲ

---

### ಎಲ್ಲಾ ಹೆಸರುಗಳಿಗಿಂತ ಉನ್ನತವಾದ ಹೆಸರು

ಎಲ್ಲಾ ಹೆಸರುಗಳಿಗಿಂತ ಉನ್ನತವಾದ ಹೆಸರು ಯೇಸುವಿನ ಹೆಸರಾಗಿದೆ.

**ಫಿಲಿಪ್ಪಿ 2:8-11 ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು.**

### ಆತನ ಹೆಸರಿನಲ್ಲಿರುವ ಅಧಿಕಾರ

ಯೇಸು ಶಿಷ್ಯರಿಗೆ ಕೊಟ್ಟ ಅಧಿಕಾರವು ತನ್ನ ಹೆಸರನ್ನು ಬಳಸಿಕೊಳ್ಳಬೇಕೆಂಬುದಾಗಿದೆ.

**ಮಾರ್ಕ 16:15-18 ಆಮೇಲೆ ಅವರಿಗೆ - ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು. ಇದಲ್ಲದೆ ನಂಬುವವರಿಂದ ಈ ಸೂಚಕಕಾರ್ಯಗಳು ಉಂಟಾಗುವವು; ನನ್ನ ಹೆಸರನ್ನು ಹೇಳಿ ದೆವ್ವಗಳನ್ನು ಬಿಡಿಸುವರು; ಹೊಸಭಾಷೆಗಳಿಂದ ಮಾತಾಡುವರು; ಹಾವುಗಳನ್ನು ಎತ್ತುವರು; ವಿಷಪದಾರ್ಥವನ್ನೇನಾದರೂ ಕುಡಿದರೂ ಅವರಿಗೆ ಯಾವ ಕೇಡೂ ಆಗುವದಿಲ್ಲ; ಅವರು ರೋಗಿಗಳ ಮೇಲೆ ಕೈಯಿಟ್ಟರೆ ಅವರಿಗೆ ಗುಣವಾಗುವದು ಎಂದು ಹೇಳಿದನು."**

### ಆತನ ಹೆಸರಿನಲ್ಲಿ ಕೇಳಿಕೊಳ್ಳಬೇಕು

ನಾವು ಆತನ ಹೆಸರಿನಲ್ಲಿ ಕೇಳಿಕೊಳ್ಳಬೇಕು.

**ಯೋಹಾನ 15:16 "ನೀವು ನನ್ನನ್ನು ಆರಿಸಿ ತೆಗೆದುಕೊಂಡಿಲ್ಲ; ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ ನೀವು ಕೊಡುವ ಫಲವು**

ನಿಲ್ಲುವಂಥದಾಗಬೇಕೆಂತಲೂ ನಿಮ್ಮನ್ನು ನೇಮಿಸಿದ್ದೇನೆ. ಹೀಗಿರಲಾಗಿ ನನ್ನ ಹೆಸರಿನಲ್ಲಿ ತಂದೆಯನ್ನು ಏನೇನು ಬೇಡಿಕೊಳ್ಳುವಿರೋ ಅದನ್ನು ಆತನು ನಿಮಗೆ ಕೊಡುವನು.**

**ಯೋಹಾನ 14:13,14 "ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು; ಹೀಗೆ ಮಗನ ಮೂಲಕವಾಗಿ ತಂದೆಗೆ ಮಹಿಮೆ ಉಂಟಾಗುವದು. ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು."**

## ಆತನ ಹೆಸರಿನಲ್ಲಿ ಆಗುವ ಅದ್ಭುತ

ಯೇಸು ತಂದೆಯ ಬಳಿಗೆ ಹಿಂತಿರುಗಿದ ನಂತರ ಶಿಷ್ಯರು ಮಾಡಿದ ಮೊದಲ ಅದ್ಭುತವು ಆತನ ಹೆಸರಿನಲ್ಲಿ ಮಾಡಿದ ಅದ್ಭುತವಾಗಿದೆ.

**ಅ.ಕೃ. 3:1-8 ಒಂದಾನೊಂದು ದಿವಸ ಪೇತ್ರ ಯೋಹಾನರು ಮಧ್ಯಾಹ್ನದ ಮೇಲೆ ಮೂರು ಘಂಟೆಗೆ ನಡೆಯ ತಕ್ಕ ಪ್ರಾರ್ಥನೆಗಾಗಿ ದೇವಾಲಯಕ್ಕೆ ಹೋಗುತ್ತಿರಲು ಹುಟ್ಟುಕುಂಟನಾಗಿದ್ದ ಒಬ್ಬ ಮನುಷ್ಯನನ್ನು ಯಾರೋ ಹೊತ್ತುಕೊಂಡು ಬಂದರು. ದೇವಾಲಯದೊಳಕ್ಕೆ ಹೋಗುವವರಿಂದ ಭಿಕ್ಷೆಬೇಡುವದಕ್ಕಾಗಿ ಅವನನ್ನು ದೇವಾಲಯದ ಸುಂದರದ್ವಾರವೆಂಬ ಬಾಗಿಲಿನಲ್ಲಿ ದಿನಾಲು ಕೂಡ್ರಿಸುತ್ತಿದ್ದರು. 3ಅವನು ದೇವಾಲಯದೊಳಕ್ಕೆ ಹೋಗುತ್ತಿರುವ ಪೇತ್ರ ಯೋಹಾನರನ್ನು ಕಂಡು ಭಿಕ್ಷಾಕೊಡಬೇಕು ಎಂದು ಕೇಳಲು ಪೇತ್ರ ಯೋಹಾನರಿಬ್ಬರೂ ಅವನನ್ನು ದೃಷ್ಟಿಸಿ ನೋಡಿದರು. ಪೇತ್ರನು - ನಮ್ಮನ್ನು ನೋಡು ಅಂದನು.

ಅವನು ಅವರಿಂದ ಏನಾದರೂ ದೊರಕೀತೆಂದು ನಿರೀಕ್ಷಿಸಿ ಅವರನ್ನು ಲಕ್ಷ್ಯವಿಟ್ಟು ನೋಡಿದನು. ಆಗ ಪೇತ್ರನು - ಬೆಳ್ಳಿಬಂಗಾರವಂತೂ ನನ್ನಲ್ಲಿಲ್ಲ, ನನ್ನಲ್ಲಿರುವದನ್ನು ನಿನಗೆ ಕೊಡುತ್ತೇನೆ. ನಜರೇತಿನ ಯೇಸು ಕ್ರಿಸ್ತನ ಹೆಸರಿನಲ್ಲೇ ಎದ್ದು ನಡೆದಾಡು ಎಂದು ಹೇಳಿ ಅವನನ್ನು ಬಲಗೈಹಿಡಿದು ಎತ್ತಿದನು. ಆ ಕ್ಷಣವೇ ಅವನ ಕಾಲುಗಳಿಗೂ ಹರಡುಗಳಿಗೂ ಬಲಬಂತು; ಅವನು ಹಾರಿ ನಿಂತು ನಡೆದಾಡಿದನು; ನಡೆಯುತ್ತಾ ಹಾರುತ್ತಾ ದೇವರನ್ನು ಕೊಂಡಾಡುತ್ತಾ ಅವರ ಜೊತೆಯಲ್ಲಿ ದೇವಾಲಯದೊಳಗೆ ಹೋದನು.**

ಪೇತ್ರನು ಎಂತಹ ಅಧಿಕಾರದಿಂದ ಮಾತನಾಡಿದನು ಎಂಬುದನ್ನು ಗಮನಿಸಿರಿ, "ಯೇಸುವಿನ ಹೆಸರಿನಲ್ಲಿ ಎದ್ದು ನಡೆದಾಡು". ದೇವರು ಅವನನ್ನು ಸೌಖ್ಯ ಮಾಡಲಿ ಎಂದು ಅವನು ಪ್ರಾರ್ಥಿಸಲಿಲ್ಲ.

## ಎಲ್ಲವನ್ನೂ ಆತನ ಹೆಸರಿನಲ್ಲಿ ಮಾಡಿರಿ

ನಾವು ಮಾಡುವ ಎಲ್ಲಾ ಕಾರ್ಯಗಳನ್ನು ಯೇಸುವಿನ ಹೆಸರಿನಲ್ಲಿ ಮಾಡಬೇಕು.

**ಕೊಲೊಸ್ಸೆ 3:17 ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಿರಿ.**

ಯೇಸು ತಾನು ತಂದೆಯು ಏನು ಮಾಡುವದನ್ನು ಕಾಣುತ್ತಾರೋ ಅದನ್ನು ಮಾತ್ರವೇ ತಾನೂ ಮಾಡುತ್ತಾರೆಂದು ಹೇಳಿದರು.

**ಯೋಹಾನ 5:19 ಅದಕ್ಕೆ ಯೇಸು ಅವರಿಗೆ - ನಿಮಗೆ ನಿಜನಿಜವಾಗಿ ಹೇಳುತ್ತೇನೆ, ತಂದೆಯು ಮಾಡುವದನ್ನು ಕಂಡು ಮಗನು ಮಾಡುತ್ತಾನೆ ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು; ಆತನು ಮಾಡುವದನ್ನೆಲ್ಲಾ ಹಾಗೆಯೇ ಮಗನೂ ಮಾಡುತ್ತಾನೆ.**

ದೇವರು ನಮಗಾಗಿಟ್ಟಿರುವ ಮತ್ತು ಲೋಕಕ್ಕೆ ಅತ್ಯವಶ್ಯವಾಗಿರುವ ಬಲವುಳ್ಳ ಅಧಿಕಾರದಲ್ಲಿ ಕಾರ್ಯ ಮಾಡಬೇಕಾದರೆ ತಂದೆಯು ಹೇಳುವುದನ್ನು ಮಾತ್ರ ನಾವು ಮಾಡಬೇಕು. ನಾವು ನಮ್ಮ ಸ್ವಂತ ಬಯಕೆಗಳನ್ನು ಬದಿಗಿಡಬೇಕು. ನಾವು ದೇವರ ಚಿತ್ತವನ್ನು ಅರಿತುಕೊಳ್ಳದ್ದಂತೆ ಅಡ್ಡಿಪಡಿಸುವ ಎಲ್ಲಾ ವಿಷಯಗಳನ್ನು ಬದಿಗಿಡಲೇಬೇಕು.

ಯೇಸು ಮಾಡಿದಂತೆಯೇ ನಾವೂ ಸಹ ಪರಿಶುದ್ಧಾತ್ಮನ ಬಲದಲ್ಲಿ ಕಾರ್ಯಮಾಡಬೇಕು. ನಾವು ದೇವರ ಚಿತ್ತವೇನೆಂಬುದನ್ನು ತಿಳಿದುಕೊಳ್ಳುವವರೆಗೂ ಆತ್ಮದಲ್ಲಿ ಪ್ರಾರ್ಥಿಸಬೇಕು.

ನಂಬಿಕೆಯ ವಿಷಯದಲ್ಲಿ, ನಾವು ದೇವರ ಚಿತ್ತವನ್ನು ಅಸ್ತಿತ್ವಕ್ಕೆ ತರುವ ರೀತಿಯಲ್ಲಿ ನಂಬಿಕೆಯ ಸ್ವರದಿಂದ ಮಾತನಾಡಬೇಕು.

## ಮೂರು ಎಚ್ಚರಿಕೆಗಳು

ನಾವು ನೆನಪಿಟ್ಟುಕೊಳ್ಳಬೇಕಾದ ಮೂರು ಎಚ್ಚರಿಕೆಗಳಿವೆ:

✶ **ದೇವರು ಎಂದಿಗೂ ಸಹ ತನ್ನ ಬರೆಯಲ್ಪಟ್ಟ ವಾಕ್ಯಕ್ಕೆ ವಿರುದ್ಧವಾದದ್ದನ್ನು ನಾವು ಹೇಳಬೇಕೆಂದು ಅಥವಾ ಮಾಡಬೇಕೆಂದು ನಿಶ್ಚಯವಾಗಲೂ ಹೇಳುವುದಿಲ್ಲ.**

ದೇವರ ವಾಕ್ಯವು ದೇವರಾಗಿದೆ ಮತ್ತು ದೇವರು ಎಂದಿಗೂ ತನಗೆ ವಿರುದ್ಧವಾಗಿ ತಾನೇ ಮಾತನಾಡುವುದಿಲ್ಲ.

**ಯೋಹಾನ 1:1 ಆದಿಯಲ್ಲಿ ವಾಕ್ಯವಿತ್ತು; ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು.**

✶ ದೇವರು ಎಂದಿಗೂ ಸಹ ನಮ್ಮ ಸ್ವಂತ ಮಹಿಮೆಗೋಸ್ಕರ ಅಥವಾ ಲಾಭಕ್ಕೋಸ್ಕರ ಯಾವುದನ್ನಾದರೂ ನಾವು ಹೇಳಬೇಕೆಂದು ಅಥವಾ ಮಾಡಬೇಕೆಂದು ಹೇಳುವುದಿಲ್ಲ.

ಸೈತಾನನು ಯೇಸುವಿಗೆ ತಂದ ಶೋಧನೆಗಳಲ್ಲಿ ಒಂದು ಇದೇ ಆಗಿದೆ. ಯೇಸು ಒಂದೇ ಒಂದು ಕ್ರಿಯೆಯಿಂದ ತಾನು ದೇವರ ಮಗನಾಗಿದ್ದೇನೆ ಎಂಬುದನ್ನು ಸಾಬೀತುಪಡಿಸಬಹುದಾಗಿತ್ತು. ಯೇಸು ಶಿಲುಬೆಯನ್ನು ತಪ್ಪಿಸಿಕೊಳ್ಳಬಹುದಾಗಿತ್ತು ಮತ್ತು ಯಾವುದೇ ತ್ಯಾಗಬಲಿಯಿಲ್ಲದೆ ಇಹಲೋಕದ ಆಳ್ವಿಕೆಯನ್ನು ಪಡೆದುಕೊಳ್ಳಬಹುದಾಗಿತ್ತು.

**ಮತ್ತಾಯ 4:5,6 ಆಗ ಸೈತಾನನು ಆತನನ್ನು ಪರಿಶುದ್ಧ ಪಟ್ಟಣಕ್ಕೆ ಕರಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ - ನೀನು ದೇವರ ಮಗನಾಗಿದ್ದರೆ ಕೆಳಕ್ಕೆ ದುಮುಕು; ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆಕೊಡುವನು; ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು ಎಂಬದಾಗಿ ಬರೆದದೆಯಲ್ಲಾ ಎಂದು ಹೇಳಿದನು.'"**

✶ **ದೇವರು ಎಂದಿಗೂ ಸಹ ಇನ್ನೊಬ್ಬ ವ್ಯಕ್ತಿಯ ಸ್ವ-ಇಚ್ಛೆಯನ್ನು ಹತ್ತಿಕ್ಕಿ ಅವರ ಮೇಲೆ ಅಧಿಕಾರ ನಡೆಸಬೇಕೆಂದು ಹೇಳುವುದಿಲ್ಲ.**

ದೇವರು ಆಗಾಗ್ಗೆ ಒಬ್ಬ ವ್ಯಕ್ತಿಯನ್ನು ನಿಯಂತ್ರಿಸುವ ದುರಾತ್ಮಗಳ ಮೇಲೆ ಅಧಿಕಾರ ನಡೆಸಲು ನಮ್ಮನ್ನು ಅನುಮತಿಸುತ್ತಾರೆ.

**ಪಾತಾಳಲೋಕದ ಬಲವು ಸೋಲಿಸಲಾರದು**

ನಾವು ದುರಾತ್ಮ ಸೇನೆಗಳೊಂದಿಗೆ ಯುದ್ಧದಲ್ಲಿದ್ದೇವೆ. ಯೇಸು ಮೊಟ್ಟಮೊದಲ ಬಾರಿಗೆ "ಸಭೆ" ಎಂಬ ಪದವನ್ನು ಹೇಳಿದಾಗ, ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು ಎಂದು ಹೇಳಿದರು. ಈ ಪಾತಾಳಲೋಕದ ಬಲವು ನರಕದ ಸರ್ಕಾರಗಳನ್ನು ಪ್ರತಿನಿಧಿಸುತ್ತವೆ. ದುರಾತ್ಮ ಸೇನೆಗಳು ದೇವರ ಸಭೆಯ ವಿರುದ್ಧ ಜಯಿಸಲಾರವು ಎಂದು ಯೇಸು ಹೇಳಿದರು.

**ಮತ್ತಾಯ 16:18 "ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ, ಅದೇನಂದರೆ - ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು."**

**ಕಟ್ಟುವುದು ಮತ್ತು ಬಿಚ್ಚುವುದು**

ಯೇಸು ನಮಗೆ ಕಟ್ಟುವ ಮತ್ತು ಬಿಚ್ಚುವ ಬಲವನ್ನು ಕೊಟ್ಟಿದ್ದಾರೆ.

**ಮತ್ತಾಯ 16:19 "ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು."**

ಕಟ್ಟುವುದು ಎಂದರೆ ದೇವರು ನಮ್ಮನ್ನು ನಡೆಸಿರುವ ಆತ್ಮಿಕವಾದ ಯುದ್ಧದಲ್ಲಿರುವಾಗ ಒಂದು ನಿರ್ದಿಷ್ಟವಾದ ಸನ್ನಿವೇಶದ ಮೇಲೆ ಸೈತಾನನು ಅಥವಾ ದುರಾತ್ಮನ ಆಳ್ವಿಕೆಯನ್ನು ಮಿತಿ ಗೊಳಿಸುವುದಾಗಿದೆ. ನಾವು ಬಲಿಷ್ಠ ಮನುಷ್ಯನನ್ನು ಕಟ್ಟಬೇಕು.

**ಮತ್ತಾಯ 12:28,29 "ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ ಬಂತಲ್ಲಾ. ಇದಲ್ಲದೆ ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದು ಹೇಗೆ? ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು."**

ಕಟ್ಟುವುದರ ಮತ್ತು ಬಿಚ್ಚುವದರ ಬಗ್ಗೆ ಯೇಸು ನಮಗೆ ಒಂದು ಉದಾಹರಣೆಯನ್ನು ಕೊಟ್ಟರು.

**ಲೂಕ 13:11,12,16 ಅಲ್ಲಿ ಹದಿನೆಂಟು ವರುಷಗಳಿಂದ ದೆವ್ವ ಬಡಿದು ಮೈಯಲ್ಲಿ ರೋಗವುಳ್ಳ ಒಬ್ಬ ಸ್ತ್ರೀಯು ಇದ್ದಳು. ಆಕೆಯು ನಡುಬೊಗ್ಗಿಹೋಗಿ ಸ್ವಲ್ಪವಾದರೂ ಮೈಯನ್ನು ಮೇಲಕ್ಕೆ ಎತ್ತಲಾರದೆ ಇದ್ದಳು. 12ಯೇಸು ಆಕೆಯನ್ನು ನೋಡಿ ಹತ್ತಿರಕ್ಕೆ ಕರೆದು ಆಕೆಗೆ - ಅಮ್ಮಾ, ನಿನಗೆ ರೋಗ ಬಿಡುಗಡೆಯಾಯಿತು ಎಂದು ಹೇಳಿ ಆಕೆಯ ಮೇಲೆ ತನ್ನ ಕೈಗಳನ್ನಿಟ್ಟನು…**

**ಹಾಗಾದರೆ ಹದಿನೆಂಟು ವರುಷಗಳ ತನಕ ಸೈತಾನನು ಕಟ್ಟಿಹಾಕಿದ್ದವಳೂ ಅಬ್ರಹಾಮನ ವಂಶದವಳೂ ಆಗಿರುವ ಈಕೆಯನ್ನು ಸಬ್ಬತ್‌ದಿನದಲ್ಲಿ ಈ ಕಟ್ಟಿನೊಳಗಿಂದ ಬಿಡಿಸಬಾರದೋ ಎಂದು ಉತ್ತರಕೊಟ್ಟನು.**

ವಿಶ್ವಾಸಿಗಳಾದ ನಮಗೆ ಅಧಿಕಾರದ ಕ್ಷೇತ್ರವು ಕೊಡಲ್ಪಟ್ಟಿದೆ. ನಾವು ಅಲ್ಲಿ ವಾಸಿಸುತ್ತೇವೆ ಮತ್ತು ದೇವರಿಂದ ಕಳುಹಿಸಲ್ಪಟ್ಟಿದ್ದೇವೆ. ನಾವು ಈ ಕ್ಷೇತ್ರಗಳಲ್ಲಿ ಕಟ್ಟುವ ಅಥವಾ ಬಿಚ್ಚುವ ಅಧಿಕಾರವನ್ನು ಹೊಂದಿದ್ದೇವೆ. ಅಧಿಕಾರವುಳ್ಳ ಪ್ರಾರ್ಥನೆಗಳ ಮೂಲಕ ನಾವು ದೇವರ ಬಲ ಮತ್ತು ಸಾಮರ್ಥ್ಯವನ್ನು ಭೂಮಿಯ ಮೇಲೆ ಬಿಡುಗಡೆಗೊಳಿಸುತ್ತೇವೆ.

### ರಾಜತ್ವಗಳ ಮೇಲೆ ಹೋರಾಡುವುದು

ನಮ್ಮ ಯುದ್ಧವು ಮನುಷ್ಯರ ಸಂಗಡವಲ್ಲ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ನಾವು ನರಕದ ಸೇನೆಗಳೊಂದಿಗೆ ಹೋರಾಡುತ್ತೇವೆ.

**ಎಫೆಸ 6:12 ನಾವು ಹೋರಾಡುವದು ಮನುಷ್ಯ ಮಾತ್ರದವರ ಸಂಗಡವಲ್ಲ; ರಾಜತ್ವಗಳ ಮೇಲೆಯೂ ಅಧಿಕಾರಿಗಳ ಮೇಲೆಯೂ ಈ ಅಂಧಕಾರದ ಲೋಕಾಧಿಪತಿಗಳ ಮೇಲೆಯೂ ಆಕಾಶಮಂಡಲದಲ್ಲಿರುವ ದುರಾತ್ಮಗಳ ಸೇನೆಯ ಮೇಲೆಯೂ ನಾವು ಹೋರಾಡುವವರಾಗಿದ್ದೇವೆ.**

### ಕೋಟೆಗಳನ್ನು ಕೆಡವಿಹಾಕುವದು

ನಮ್ಮ ಯುದ್ಧಾಯುಧಗಳು ಯಾವವೆಂದರೆ ಯೇಸುವಿನ ಹೆಸರು, ಯೇಸುವಿನ ರಕ್ತ ಮತ್ತು ದೇವರ ವಾಕ್ಯ. ಇವುಗಳು ಆತ್ಮದ ಆಯುಧಗಳಾಗಿವೆ ಮತ್ತು ಬಲವುಳ್ಳವುಗಳಾಗಿವೆ.

**2 ಕೊರಿಂಥ 10:4,5 ನಾವು ಉಪಯೋಗಿಸುವ ಆಯುಧಗಳು ಲೋಕಸಂಬಂಧವಾದ ಆಯುಧಗಳಲ್ಲ; ಅವು ದೇವರ ಎಣಿಕೆಯಲ್ಲಿ ಬಲವಾಗಿದ್ದು ಕೋಟೆಗಳನ್ನು ಕೆಡವಿಹಾಕುವಂಥವುಗಳಾಗಿವೆ. ನಾವು ವಿತರ್ಕಗಳನ್ನೂ ದೇವಜ್ಞಾನವನ್ನು ವಿರೋಧಿಸುವದಕ್ಕೆ ಏರಿಸಲ್ಪಟ್ಟಿರುವ ಉನ್ನತವಾದ ಎಲ್ಲಾ ಕೊತ್ತಲಗಳನ್ನೂ ಕೆಡವಿಹಾಕಿ ಎಲ್ಲಾ ಯೋಚನೆಗಳನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ಸೆರೆಹಿಡಿದು…**

### ಪರಲೋಕರಾಜ್ಯವನ್ನು ನುಗ್ಗಿ ಸ್ವಾಧೀನಪಡಿಸಿಕೊಳ್ಳುವದು

ನಮ್ಮ ಪ್ರಾರ್ಥನೆಗಳಲ್ಲಿ ನಾವು ದೇವರ ರಾಜ್ಯವನ್ನು ಬಲದಿಂದ ವಿಸ್ತರಿಸಬೇಕು. ನಾವು ಧೈರ್ಯದಿಂದಲೂ ಮತ್ತು ಅಧಿಕಾರದಿಂದಲೂ ಹೀಗೆ ಹೇಳಬೇಕು,

"ಪರಲೋಕದಲ್ಲಿರುವ ಪ್ರಕಾರವೇ ಭೂಲೋಕದಲ್ಲಿಯೂ ನಿನ್ನ ರಾಜ್ಯವು ಬರಲಿ! ನಿನ್ನ ಚಿತ್ತವು ನೆರವೇರಲಿ!" ಇವುಗಳು ರಾಜಾಧಿಕಾರವುಳ್ಳ ಪ್ರಾರ್ಥನೆಗಳಾಗಿವೆ ಮತ್ತು ಪರಲೋಕ ರಾಜ್ಯವನ್ನೂ ದೇವರ ಚಿತ್ತವನ್ನೂ ಭೂಮಿಗೆ ತರುವಂತವುಗಳಾಗಿವೆ. ಪರಲೋಕರಾಜ್ಯವನ್ನು ನುಗ್ಗಿ ಸ್ವಾಧೀನಪಡಿಸಿಕೊಳ್ಳುವ ಬಲಾತ್ಕಾರಿಗಳು ನಾವೇ.

**ಮತ್ತಾಯ 11:12 "ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ."**

**ಯೇಸು ಕಾಯುತ್ತಿದ್ದಾರೆ**

ಕೀರ್ತನೆಯಲ್ಲಿ ದಾವೀದನು ಪ್ರವಾದಿಸಿದನು,
**ಕೀರ್ತನೆ 110:1 ಯೆಹೋವನು ನನ್ನ ಒಡೆಯನಿಗೆ - ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು.**

ಮತ್ತಾಯ, ಮಾರ್ಕ ಮತ್ತು ಲೂಕ ಇವರೆಲ್ಲರೂ ಯೇಸು ಈ ದಾವೀದನ ವಚನಗಳನ್ನು ಉಲ್ಲೇಖಿಸಿದ್ದನ್ನು ದಾಖಲಿಸಿದ್ದಾರೆ.

**ಲೂಕ 20:42,43 "ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು ಎಂಬದಾಗಿ ಕೀರ್ತನಗ್ರಂಥದಲ್ಲಿ ದಾವೀದನೇ ಹೇಳುತ್ತಾನಷ್ಟೆ. '**

ಪಂಚಾಶತ್ತಮ ದಿನದಂದು ಪರಿಶುದ್ಧಾತ್ಮನು ಬಂದ ಮೇಲೆ ಪೇತ್ರನು ತನ್ನ ಮೊದಲ ಪ್ರಸಂಗವನ್ನು ಮಾಡಿದನು ಮತ್ತು 3,000 ಆತ್ಮಗಳು ಸಭೆಗೆ ಸೇರಿಸಲ್ಪಟ್ಟವು. ಈ ಪ್ರಸಂಗದಲ್ಲಿ ಪೇತ್ರನೂ ಸಹ ದಾವೀದನ ಮಾತುಗಳನ್ನು ಉಲ್ಲೇಖಿಸುತ್ತಾನೆ (ಅ.ಕೃ. 2:34,35).

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ದಾವೀದನ ಈ ಪ್ರವಾದನೆಯನ್ನು ಉಲ್ಲೇಖಿಸಿದನು.

**ಇಬ್ರಿಯರಿಗೆ 10:12 ಆದರೆ ಈ ಯಾಜಕನು ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲಗಡೆಯಲ್ಲಿ ಕೂತುಕೊಂಡನು.**

ಆರು ಬಾರಿ ಈ ಒಂದು ಸತ್ಯದ ಕಡೆಗೆ ನಮ್ಮ ಗಮನವನ್ನು ಸೆಳೆಯಲಾಗಿದೆ. ಯಾಕೆ?

ಯೇಸು ನಮ್ಮ ಪರವಾಗಿ ಪರಲೋಕದಲ್ಲಿ ಪ್ರಾರ್ಥಿಸುತ್ತಿದ್ದಾರೆಂದು ನಮಗೆ ಗೊತ್ತಿದೆ, ಆದರೆ ನಾವು ಯಾವುದೋ ಕಾರ್ಯವನ್ನು ಮಾಡಲೆಂದು ಅವರು ಕಾಯುತ್ತಿದ್ದಾರೆ ಎಂಬುದು ನಮಗೆ ತಿಳಿದಿದೆಯೋ? ಅವರು ತನ್ನ ಶತ್ರುಗಳು ತನ್ನ ಪಾದಪೀಠವಾಗಿ ಮಾಡಲ್ಪಡಬೇಕೆಂದು - ಅಂದರೆ ತನ್ನ ಕಾಲ ಕೆಳಗೆ ಹಾಕಲ್ಪಡಬೇಕೆಂದು - ಕಾಯುತ್ತಿದ್ದಾರೆ!

✌ **ಸಾರಾಂಶ -**

**ಶಿಲುಬೆಯ ಮೇಲೆ, ಯೇಸು ಗಟ್ಟಿಯಾದ ಸ್ವರದಿಂದ ಕೂಗಿದರು, "ತೀರಿತು!" ಎಂದು.**
**ಯೇಸು ಮಾನವಕುಲದ ಪಾಪಕ್ಕಾಗಿ ದಂಡವನ್ನು ಕಟ್ಟಿದ್ದಾರೆ.**
**ಯೇಸು ತನ್ನ ರಕ್ತಧಾರೆಯ ಮೂಲಕ ನಮ್ಮನ್ನು ಧರ್ಮಶಾಸ್ತ್ರದ ಶಾಪದಿಂದ ವಿಮೋಚಿಸಿದ್ದಾರೆ.**
**ಯೇಸು ನಮ್ಮ ಅಧಿಕಾರವನ್ನು ಕ್ರಯ ಕೊಟ್ಟು ತಿರುಗಿ ಪಡೆದಿದ್ದಾರೆ.**
**ಈಗ, ನಾವು ಆತನ ಶತ್ರುಗಳನ್ನು ಆತನ ಪಾದಪೀಠವಾಗಿ ಮಾಡಬೇಕೆಂದು ಯೇಸು ಕಾಯುತ್ತಿದ್ದಾರೆ!**
**ಆತನು ನಮಗೆ ತನ್ನ ಹೆಸರನ್ನು ಕೊಟ್ಟಿದ್ದಾರೆ. ಆತನು ನಮಗೆ ಪರಿಶುದ್ಧಾತ್ಮನ ಶಕ್ತಿಯನ್ನು ಕೊಟ್ಟಿದ್ದಾರೆ.**
**ಆತನು ನಮಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಈಗ ಎಲ್ಲವೂ ನಮ್ಮ ಕೈಯಲ್ಲಿದೆ!**
**ಪ್ರಾರ್ಥನೆಯ ಮೂಲಕ ನಾವು ಬಲದಿಂದ ದೇವರ ರಾಜ್ಯವನ್ನು ಭೂಮಿಗೆ ತರಬೇಕು.**

ವಿಮರ್ಶೆಗಾಗಿ ಪ್ರಶ್ನೆಗಳು

1. ಮತ್ತಾಯ 8:8 ರಲ್ಲಿ ಯೇಸು ತನ್ನ ಸೇವಕನನ್ನು ಗುಣಪಡಿಸಲು ತನ್ನ ಮನೆಗೆ ಬರುವ ಅವಶ್ಯವಿಲ್ಲ, ಕೇವಲ ಒಂದು ಮಾತು ಹೇಳೀದರೆ ಸಾಕು ಅವನಿಗೆ ಸೌಖ್ಯವಾಗುವುದು ಎಂದು ಶತಾಧಿಪತಿಯು ಯೇಸುವಿಗೆ ಯಾಕೆ ಹೇಳಿದನು?

2. "ಹೋಗು", "ಬಾ" ಮತ್ತು "ಎದ್ದೇಳು, ಸೌಖ್ಯವಾಗು" ಎಂಬ ಪದಗಳು ಯಾವ ರೀತಿಯ ಪ್ರಾರ್ಥನೆಗಳಾಗಿವೆ?

3. ಅಧಿಕಾರವುಳ್ಳ ಪ್ರಾರ್ಥನೆಯನ್ನು ಪ್ರಾರ್ಥಿಸಲು ದೇವರು ನಿಮ್ಮನ್ನು ಬಿಡುಗಡೆಗೊಳಿಸುತ್ತಿದ್ದಾನೆ ಎಂದು ನಿಮಗೆ ಹೇಗೆ ಗೊತ್ತು?

*ಪಾಠ ಒಂಬತ್ತು*

# ದೇವರ ಆಳವಾದ ಬಯಕೆ

**ಪೀಠಿಕೆ**

ಸತ್ಯವೇದದುದ್ದಕ್ಕೂ ತನ್ನ ಜನರು ಮಧ್ಯಸ್ತಿಕೆ ವಹಿಸಬೇಕೆಂದು ಕರೆಯುವುಅರ ಮೂಲಕ ದೇವರ ಆಳವಾದ ಬಯಕೆಯು ಪ್ರಕಟವಾಗಿದೆ. ದೇವರು ಮಧ್ಯಸ್ತನಾಗಿ ನಿಲ್ಲಬಲ್ಲ ವ್ಯಕ್ತಿಯನ್ನು ಹುಡುಕಿದಾಗ ಯಾರೂ ಸಿಗದ ಸನ್ನಿವೇಶದ ಬಗ್ಗೆ ಯೆಹೆಜ್ಕೇಲನು ಹೀಗೆ ಬರೆಯುತ್ತಾನೆ.

**ಯೆಹೆಜ್ಕೇಲನು 22:30 "ನಾನು ದೇಶವನ್ನು ಹಾಳುಮಾಡದಂತೆ ನನ್ನೆದುರಿಗೆ ದೇಶರಕ್ಷಣೆಗಾಗಿ ಪೌಳಿಯ ಒಡಕಿನಲ್ಲಿ ನಿಲ್ಲುವದಕ್ಕೂ ಗೋಡೆಯನ್ನು ಗಟ್ಟಿಮಾಡುವದಕ್ಕೂ ತಕ್ಕವನನ್ನು ನಾನು ಹುಡುಕಲು ಯಾರೂ ಸಿಕ್ಕಲಿಲ್ಲ."**

ಧರ್ಮೋಪದೇಶಕಾಂಡದಲ್ಲಿ ತನ್ನ ಜನರು ಮಧ್ಯಸ್ಥಿಕೆಯ ಪ್ರಾರ್ಥನೆಯನ್ನು ಮಾಡಬೇಕೆಂದು ದೇವರು ಹಂಬಲಿಸುವುದನ್ನು ಓದುತ್ತೇವೆ. ಅವರು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ಪ್ರಾರ್ಥಿಸಿದರೆ ದೇವರು ಸುಕ್ಷೇಮವನ್ನು ದಯಪಾಲಿಸುವನೆಂದು ದೇವರು ಹೇಳಿದರು.

**2 ಧರ್ಮೋಪದೇಶಕಾಂಡ 7:14 "ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು."**

ಬೆಳೆಯು ಬಹಳ ಆದರೆ ಕೆಲಸಗಾರರು ಕಡಿಮೆ ಎಂದು ಯೇಸು ಶಿಷ್ಯರಿಗೆ ಹೇಳಿದರು. ಅವರು ಅದಕ್ಕಾಗಿ ಏನು ಮಾಡಬೇಕಾಗಿತ್ತು? ಪ್ರಾರ್ಥಿಸಬೇಕಾಗಿತ್ತು!

**ಲೂಕ 10:2 ಅವರಿಗೆ ಹೇಳಿದ್ದೇನಂದರೆ - ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ."**

ಉಳಿದ ಎಲ್ಲಾ ರೀತಿಯ ಪ್ರಾರ್ಥನೆಗಳಿಗಿಂತ ಹೆಚ್ಚಾಗಿ, ಸತ್ಯವೇದದಲ್ಲಿ ಮಧ್ಯಸ್ತಿಕೆ ಪ್ರಾರ್ಥನೆಯ ಬಗ್ಗೆ ಹೆಚ್ಚು ವಚನಗಳಿವೆ. ಮಧ್ಯಸ್ತಿಕೆ ಪ್ರಾರ್ಥನೆಯ ಮೂಲಕ ಬರುವ ಅಲೌಕಿಕವಾದ ತಿಳುವಳಿಕೆಯ ಮೇಲೆ ಅಧಿಕಾರವುಳ್ಳ ಪ್ರಾರ್ಥನೆಗಳು ಆಧಾರಗೊಂಡಿವೆ.

ಯೋಬನ ಪುಸ್ತಕದಿಂದ ಆರಂಭಿಸಿ ಪ್ರಾರ್ಥನೆಯ ಮೊದಲ ಉದಾಹರಣೆಗಳು ಮಧ್ಯಸ್ತಿಕೆ ಪ್ರಾರ್ಥನೆಗಳಾಗಿವೆ. ಮೂಲಪಿತೃಗಳು ತಮ್ಮ ಕುಟುಂಬಗಳಿಗಾಗಿ ಪ್ರಾರ್ಥಿಸಿದರು. ದೇಶದ ದೈವಭಯವುಳ್ಳ ನಾಯಕರು ತಮ್ಮ ದೇಶಕ್ಕಾಗಿ ಮತ್ತು ತಮ್ಮ ಜನರಿಗಾಗಿ ಪ್ರಾರ್ಥಿಸಿದರು. ಯಾಜಕರು ಮಧ್ಯಸ್ತಿಕೆ ಪ್ರಾರ್ಥನೆ

ಮಾಡಿದರು. ಅಪೋಸ್ತಲರು ಮಧ್ಯಸ್ತಿಕೆ ಪ್ರಾರ್ಥನೆ ಮಾಡಿದರು. ನಾವೂ ಸಹ ಕ್ರಿಸ್ತನಂತಹ ಸ್ತ್ರೀ ಪುರುಷರ ಹಾದಿಯಲ್ಲಿ ನಡೆದು ನಮ್ಮ ಕುಟುಂಬಗಳಿಗಾಗಿ, ಸರ್ಕಾರದ ನಾಯಕರುಗಳಿಗಾಗಿ ಮತ್ತು ಕ್ರಿಸ್ತನ ಸಭೆಯಲ್ಲಿರುವ ನಾಯಕರುಗಳಿಗಾಗಿ ಮಧ್ಯಸ್ತಿಕೆ ಪ್ರಾರ್ಥನೆ ಮಾಡಬೇಕು.

**ಮಧ್ಯಸ್ಥಿಕೆ ಪ್ರಾರ್ಥನೆಯ ವ್ಯಾಖ್ಯಾನ**

ಮಧ್ಯಸ್ತಿಕೆ ಪ್ರಾರ್ಥನೆ ಅಂದರೆ ಇನ್ನೊಬ್ಬ ವ್ಯಕ್ತಿಯ ಸ್ಥಳವನ್ನು ತೆಗೆದುಕೊಳ್ಳುವ ಮಟ್ಟಿಗೆ ದೇವರ ಮುಂದೆ ಅವರ ಪರವಾಗಿ ಬರುವುದಾಗಿದೆ. ನಿಜವಾದ ಮಧ್ಯಸ್ತಿಕೆ ಪ್ರಾರ್ಥನೆಯು ನಮ್ಮ ಅಂತರಾತ್ಮದಿಂದ ಬರುತ್ತದೆ. ದೇವರೊಂದಿಗೆ ಅತ್ಯಂತ ನಿಕಟವಾದ ಸಂಬಂಧದಲ್ಲಿರುವಾಗ ನಾವು ಆತನ ಆಲೋಚನೆಗಳನ್ನು, ಆತನ ಬಯಕೆಗಳನ್ನು ತಿಳಿದುಕೊಳ್ಳಬಹುದು. ಅಂತಹ ಸಂಬಂಧದಿಂದ ಮಧ್ಯಸ್ತಿಕೆ ಪ್ರಾರ್ಥನೆಯು ಬರುತ್ತದೆ. ನಂತರ ಆತನು ನಡೆಸುವಂತೆ ಇತರರ ಜೀವಿತಗಳಲ್ಲಿ ಆತನ ಶಕ್ತಿಯನ್ನು ನಾವು ಬಿಡುಗಡೆಗೊಳಿಸಬಹುದು.

ಮಧ್ಯಸ್ತಿಕೆ ಪ್ರಾರ್ಥನೆಯು ಜನರಿಗಾಗಿ ಮಾಡಲ್ಪಡುತ್ತದೆ ಮತ್ತು ಪ್ರತಿಯೊಬ್ಬ ವಿಶ್ವಾಸಿಗೂ ಕೊಡಲ್ಪಟ್ಟಿರುವ ಯಾಜಕನ ಕೆಲಸವಾಗಿದೆ.

ವಿಲ್ಸನ್ ಮಂಬೊಲಿಯೊ ಹೀಗೆ ಬರೆದರು, ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು ದೇವರ ಮತ್ತು ಮಧ್ಯಸ್ಥಿಕೆ ಅಗತ್ಯವಿರುವ ವ್ಯಕ್ತಿ ಅಥವಾ ಜನರ ಗುಂಪಿನ ನಡುವೆ ನಿಲ್ಲುತ್ತಾರೆ. ಅವರು ತಮ್ಮ ಸ್ವಂತ ಅಗತ್ಯಗಳನ್ನು ಮರೆತು ತಾವು ಪ್ರಾರ್ಥಿಸುತ್ತಿರುವ ವ್ಯಕ್ತಿ ಅಥವಾ ಗುಂಪಿನ ಕ್ಷೇಮದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ. ಅವರು ಇನ್ನೊಬ್ಬರ ನೋವುಗಳನ್ನು ತಮ್ಮದೇ ಎಂಬಂತೆ ಅನುಭವಿಸುತ್ತಾರೆ. ಇತರ ಜನರ ಅಗತ್ಯಗಳಿಗಾಗಿ ಪ್ರಾರ್ಥಿಸುವುದು ಅವರಿಗೆ ಸಂತೋಷವಾಗಿದೆ. ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು ಇತರರಿಗಾಗಿ ಪ್ರಾರ್ಥಿಸುವಾಗ ಅವರ ಹೃದಯದಲ್ಲಿ ಬಹಳಷ್ಟು ಸಂತೋಷವಿದೆ. ಅವರ ಹೃದಯಗಳು ಆಂತರಿಕ ಆತ್ಮಿಕ ಶಕ್ತಿಯನ್ನು ಪಡೆಯುತ್ತವೆ. ದೇವರು ಅವರ ಬಗ್ಗೆ ಸಂತೋಷಪವುಳ್ಳವರಾಗಿದ್ದಾರೆ. ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು ಯಾರೆಂದರೆ, ದೇವರು ಒಂದು ಕುಟುಂಬಕ್ಕಾಗಿ, ಸಭೆಗಾಗಿ ಮತ್ತು ದೇಶಕ್ಕಾಗಿ ತನ್ನ ರಹಸ್ಯಗಳನ್ನು ಮತ್ತು ಯೋಜನೆಗಳನ್ನು ಪ್ರಕಟಪಡಿಸುವ ಸ್ತ್ರೀಪುರುಷರಾಗಿದ್ದಾರೆ.

*ಮೀಟೀಂಗ್ ವಿತ್ ಗಾಡ್ - ಪ್ರೆಯರ್ಸ್ ಡೀಪೆಸ್ಟ್ ಮೀನಿಂಗ್ ನಿಂದ ತೆಗೆದುಕೊಳ್ಳಲಾಗಿದೆ. ಪ್ರೆಯರ್ ಅಂಡ್ ವರ್ಡ್ ಪ್ರಕಾಶನ, ನೈರೋಬಿ, ಕೀನ್ಯಾ, ಆಫ್ರಿಕಾ.*

**ಮಧ್ಯಸ್ಥಿಕೆ ಪ್ರಾರ್ಥನೆಯ ಹಂತಗಳು**

ನೀವು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ ನೆನಪಿಟ್ಟುಕೊಳ್ಳಬಹುದಾದ ಆರು ಮೂಲಭೂತ ಹಂತಗಳು:

✶ **ನಿರ್ದಿಷ್ಟವಾಗಿ ಪ್ರಾರ್ಥಿಸಿರಿ, ಗೊತ್ತು ಗುರಿ ಇಲ್ಲದವರಂತಲ್ಲ.**

✶ **ಆ ಅವಶ್ಯಕ್ಕೆ ಸೂಕ್ತವಾದ ದೇವರ ವಾಗ್ದಾನಗಳನ್ನು ಕಂಡುಹಿಡಿಯಿರಿ ಮತ್ತು ಅವುಗಳ ಮೇಲೆ ನಿಮ್ಮ ಪ್ರಾರ್ಥನೆಯನ್ನು ಆಧರಿಸಿ. ಇದು ನಿಮ್ಮ ಪ್ರಾರ್ಥನೆಗಳನ್ನು ದೇವರ ಚಿತ್ತಕ್ಕನುಸಾರವಾಗಿ ಇಡುವುದು.**

**✶ ಪರಿಶುದ್ಧಾತ್ಮನು ನಿಮ್ಮ ಮೂಲಕ ಪ್ರಾರ್ಥಿಸಲು ಅನುವು ಮಾಡಿಕೊಡಿರಿ.**

**✶ ನಿಮ್ಮ ಪ್ರಾರ್ಥನೆಯನ್ನು ಒಬ್ಬ ವ್ಯಕ್ತಿಯ ಒಳ್ಳೆಯತನದ ಮೇಲೆ ಆಧಾರಿಸಬಾರದು. ಅವರಿಗೆ ತಮ್ಮ ಸ್ವಂತವಾದ ಒಳ್ಳೆತನವು ಯಾವುದೂ ಇಲ್ಲ. ನೀತಿವಂತಿಕೆಯು ಕ್ರಿಸ್ತನಲ್ಲಿ ಒಬ್ಬ ವಿಶ್ವಾಸಿಗೆ ಸಿಕ್ಕ ಸ್ಥಾನವಾಗಿದೆ. ಯಾವಾಗಲೂ ದೇವರ ಕೃಪೆ ಮತ್ತು ಕರುಣೆಗಳ ಆಧಾರದ ಮೇಲೆ ಪ್ರಾರ್ಥಿಸಿರಿ.**

**✶ ಪ್ರಾರ್ಥನೆಯಲ್ಲಿ ಯಾವ ವ್ಯಕ್ತಿಯನ್ನೂ ನಿಯಂತ್ರಿಸಲು ನೋಡಬೇಡಿರಿ ಅಥವಾ ಅವರ ಪರವಾಗಿ ನೀವು ತೀರ್ಮಾನಗಳನ್ನು ಮಾಡಬೇಡಿರಿ. ದೇವರು ಎಂದಿಗೂ ಅವರಿಗೆ ನೀಡಿರುವ ಸ್ವ-ಇಚ್ಛೆಯನ್ನು ಉಲ್ಲಂಘಿಸುವುದಿಲ್ಲ ಮತ್ತು ನೀವೂ ಸಹ ಹಾಗೆ ಮಾಡುವಂತಿಲ್ಲ.**

**✶ ಸತತವಾಗಿ ಪ್ರಾರ್ಥಿಸಿರಿ - ಬಿಟ್ಟುಬಿಡಬೇಡಿರಿ!**

### ಸೈತಾನನ ತಂತ್ರ

ದೇವರು ನಡೆಸುವ ಮಧ್ಯಸ್ಥಿಕೆ ಪ್ರಾರ್ಥನೆಯಲ್ಲಿ ಪ್ರವೇಶಿಸುವ ಪ್ರತಿಯೊಬ್ಬ ವಿಶ್ವಾಸಿಯ ಮೇಲೆ ಸೈತಾನನು ದಾಳಿ ಮಾಡುವ ಯೋಜನೆಯನ್ನು ಹೊಂದಿದ್ದಾನೆ. ದೇವರು ಪ್ರಕಟಿಸುವುದನ್ನು ಅವನು ತಿರುಚಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು ನಾಯಕರುಗಳನ್ನು ದೇವರ ಹಾದಿಗೆ ತರಬೇಕೆಂದು ಉಪದೇಶಿಸಬೇಕೆನ್ನುವ ಅನ್ನಿಸಿಕೆಯನ್ನು ಕೊಡುತ್ತಾನೆ. ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು ನಾಯಕತ್ವ ಸ್ಥಾನದ ದುರ್ಬಳಕೆ ಮಾಡುವಂತೆ ಅಥವಾ ನಿಯಂತ್ರಿಸುವಂತೆ ವಂಚಿಸಲು ಯತ್ನಿಸುತ್ತಾನೆ.

ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು ನಿರಂತರವಾಗಿ ನ್ಯಾಯತೀರ್ಪಿನ ಮಾನೋಭಾವನೆಯ ಮತ್ತು ಖಂಡಿಸುವ ಅಥವಾ ನಿಯಂತ್ರಿಸುವ ಆತ್ಮದ ಬಗ್ಗೆ ಎಚ್ಚರವಾಗಿರಬೇಕು.

## ಮಧ್ಯಸ್ಥಿಕೆ ಪ್ರಾರ್ಥನೆಯ ಬಗ್ಗೆ ಸತ್ಯವೇದದ ಉದಾಹರಣೆಗಳು

ಮಧ್ಯಸ್ಥಿಕೆ ಪ್ರಾರ್ಥನೆಯನ್ನು ಹೇಗೆ ಮಾಡಬೇಕೆಂಬುದನ್ನು ಕಲಿಯಲು ಇರುವ ಒಂದು ಉತ್ತಮವಾದ ಮಾರ್ಗವು ಸತ್ಯವೇದದ ಉದಾಹರಣೆಗಳನ್ನು ಕಲಿಯುವುದರ ಮೂಲಕವಾಗಿದೆ.

### ಯೇಸು ನಮಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದರು

ಯೇಸು ಯಾವಾಗಲೂ ನಮ್ಮ ಅತ್ಯುತ್ತಮವಾದ ಉದಾಹರಣೆಯಾಗಿದ್ದಾರೆ

✷ *ನಮ್ಮ ಪ್ರಧಾನ ಯಾಜಕನು*

ಹಳೆ ಒಡಂಬಡಿಕೆಯ ಯಾಜಕರು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರ ಒಂದು ಚಿತ್ರಣವಾಗಿದ್ದರು. ಅವರು ದೇವರ ಮತ್ತು ಜನರ ನಡುವೆ ನಿಂತುಕೊಂಡು ಅವರ ಪಾಪಗಳಿಗಾಗಿ ಬಲಿಗಳನ್ನು ಅರ್ಪಿಸುತ್ತಿದ್ದರು. ಯೇಸು ನಮ್ಮ ಪ್ರಧಾನ ಯಾಜಕನಾಗಿದ್ದಾನೆ ಮತ್ತು ಈಗಲೂ ಆತನು ಜೀವಿಸುತ್ತಿರುವುದರಿಂದಲೂ ಮತ್ತು

ಮಧ್ಯಸ್ಥಿಕೆ ಪ್ರಾರ್ಥನೆ ಮಾಡುತ್ತಿರುವುದರಿಂದಲೂ ನಾವು ಇತರರಿಗಾಗಿ ಪ್ರಾರ್ಥಿಸಲು ಆತನು ನಮಗೆ ಮಾದರಿಯಾಗಿದ್ದಾನೆ.

**ಇಬ್ರಿಯರಿಗೆ 7:25 ಆದಕಾರಣ ಆತನು ತನ್ನ ಮೂಲಕ ದೇವರ ಬಳಿಗೆ ಬರುವವರನ್ನು ಸಂಪೂರ್ಣವಾಗಿ ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ; ಅವರಿಗೋಸ್ಕರ ವಿಜ್ಞಾಪನೆಮಾಡುವದಕ್ಕೆ ಯಾವಾಗಲೂ ಬದುಕುವವನಾಗಿದ್ದಾನೆ.**

* *ನಮ್ಮ ಪ್ರತಿವಾದಿ ಅಥವಾ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರು*

ಡಿಕ್ಷನರಿ ಅಥವಾ ನಿಘಂಟಿನ ಪ್ರಕಾರ ಒಬ್ಬ ವಕೀಲನು ಇನ್ನೊಬ್ಬನ ಪರವಾಗಿ ಮಾತನಾಡುವ, ಮನವಿ ಮಾಡುವ ಅಥವಾ ಪರವಾಗಿ ವಾದಿಸುವ; ಇನ್ನೊಬ್ಬರ ಪರವಾಗಿ ಮನವಿ ಮಾಡುವ; ಬೆಂಬಲಿಸುವ ಅಥವಾ ಪ್ರತಿವಾದಿಸುವ ವ್ಯಕ್ತಿಯಾಗಿದ್ದಾನೆ. ಯೇಸು ನಮಗೆ ಇವೆಲ್ಲವೂ ಮತ್ತು ಅದಕ್ಕಿಂತಲೂ ಹೆಚ್ಚಿನವರಾಗಿದ್ದಾರೆ.

**1 ಯೋಹಾನ 2:1 ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ.**

* *ದೇವರ ಆಳವಾದ ಬಯಕೆಯನ್ನು ವ್ಯಕ್ತಪಡಿಸಿದರು*

ಯೇಸುವಿನ ಮೂಲಕ ದೇವರ ಎರಡು ಆಳವಾದ ಬಯಕೆಯನ್ನು ತೋರಿಸುವ ಎರಡು ಉದಾಹರಣೆಗಳು ನಮಗಿವೆ. ಮೊದಲನೆಯದು ಯೇಸು ಯೆರುಸಲೇಮಿನ ಜನರಿಗಾಗಿ ಕಣ್ಣೀರಿಟ್ಟಿದ್ದು.

**ಲೂಕ 13:34 "ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು!"**

ಯೇಸು ಅವರನ್ನು ಅಷ್ಟು ಆಳವಾಗಿ ಪ್ರೀತಿಸಿದರೂ ಅವರನ್ನು ನಿಯಂತ್ರಿಸಲು ಹೋಗಲಿಲ್ಲ ಎಂಬುದನ್ನು ಇಲ್ಲಿ ಗಮನಿಸಿರಿ. "ಆದರೆ ನಿನಗೆ ಮನಸ್ಸಿರಲಿಲ್ಲ" ಎಂದು ಅವರು ಹೇಳಿದರು.

ಎರಡನೆಯ ದೊಡ್ಡ ಉದಾಹರಣೆಯು ಯೇಸು ಶಿಲುಬೆಯ ಮೇಲೆ ತೂಗಿದಾಗ ನಡೆದ ಸಂಗತಿಯಾಗಿದೆ.

**ಲೂಕ 23:33a,34a ಅವರು ಕಪಾಲವೆಂಬ ಸ್ಥಳಕ್ಕೆ ಬಂದಾಗ ಅಲ್ಲಿ ಆತನನ್ನೂ ಆ ದುಷ್ಕರ್ಮಿಗಳನ್ನೂ ಶಿಲುಬೆಗೆ ಹಾಕಿದರು... ಯೇಸು - ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು ಅಂದನು.**

ಯಾರಿಗಾದರೂ ಖಂಡಿಸುವ ಹಕ್ಕಿದ್ದರೆ ಅದು ನಿಜವಾಗಲೂ ಯೇಸುವಿಗೆ ಇತ್ತು. ಯೆರುಸಲೇಮಿನ ಜನರು ಪ್ರವಾದಿಗಳನ್ನು ಕೊಂದಿದ್ದರು ಮತ್ತು ದೇವಸಂದೇಶಕರನ್ನು ಕಲ್ಲೆಸೆದು ಕೊಂದಿದ್ದರು ಆದರೆ ಯೇಸುವಿನ ಒಂದೇ ಒಂದು

ಬಯಕೆಯು ಅವರನ್ನು ತನ್ನ ಸುರಕ್ಷಿತವಾದ ರೆಕ್ಕೆಯಡಿಯಲ್ಲಿ ಮರೆಮಾಡುವುದಾಗಿತ್ತು. ಜನರು ಆತನನ್ನು ಶಿಲುಬೆಗೇರಿಸಿದಾಗಲೂ ಆತನ ಪ್ರಾರ್ಥನೆಯು "ತಂದೆಯೇ, ಇವರನ್ನು ಕ್ಷಮಿಸು" ಎಂಬುದಾಗಿತ್ತು.

ನಾವು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ ಸೈತಾನನ ತಂತ್ರಗಳಲ್ಲಿ ಸಿಕ್ಕಿಕೊಳ್ಳದಿರುವುದು ಬಹಳ ಪ್ರಾಮುಖ್ಯವಾದದ್ದು. ದೇವರು ನಮಗೆ ಎಷ್ಟು ತಪ್ಪುಗಳನ್ನು ತೋರಿಸಿದರೂ ನಾವು ನ್ಯಾಯತೀರಿಸುವುದನ್ನಾಗಲಿ ಅಥವಾ ಖಂಡಿಸುವುದನ್ನಾಗಲಿ ಮಾಡಬಾರದು ಬದಲಾಗಿ ಆ ಅಂಶಕ್ಕಾಗಿ ಮಧ್ಯಸ್ಥಿಕೆ ಪ್ರಾರ್ಥನೆಯನ್ನು ಮಾಡಬೇಕು.

**ಯೋಬನು ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು**

ಯೋಬನ ಗ್ರಂಥವು ಸತ್ಯವೇದದಲ್ಲಿರುವ ಅತ್ಯಂತ ಹಳೆಯ ಪುಸ್ತಕವಾಗಿದೆ ಮತ್ತು ಯೋಬನು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವನಾಗಿದ್ದನು.

ಯೋಬನ ಮೇಲೆ ವಿಪತ್ತುಗಳು ಬಂದಾಗ ಅವನ ಸ್ನೇಹಿತರು ಬಂದರು ಆದರೆ ಅವರು ಅವನ ಬಗ್ಗೆ ಕೆಟ್ಟದ್ದನ್ನು ಆಲೋಚಿಸಿದರು, ಅವನನ್ನು ಟೀಕಿಸಿದರು ಮತ್ತು ಅಂತಹ ಭಯಂಕರ ಸಂಗತಿಗಳು ಯಾಕೆ ನಡೆದವು ಎಂಬುದಕ್ಕೆ ತಮ್ಮ ಮನಸ್ಸಿಗೆ ತೋಚಿದ ಕಾರಣಗಳನ್ನು ನೀಡಿದರು. ಅವರು ಅವನ ಕಾಳಜಿ ಇದ್ದುದ್ದರಿಂದ ಬಂದರೂ ಅವನನ್ನು ಖಂಡಿಸುತ್ತಲೇ ನಿಂತರು.

ಪರೀಕ್ಷೆಯ ಸಮಯ ಮುಗಿದಾಗ ದೇವರು ಅವರಿಗೆ ದಹನಬಲಿಯನ್ನು ಅರ್ಪಿಸಲು ಹೇಳಿದರು. ನಂತರ ತಮ್ಮನ್ನು ತಗ್ಗಿಸಿಕೊಂಡೂ ತಾವು ಟೀಕೆ ಮಾಡಿದವನ ಬಳಿಗೆ ಹೋಗಿ ತಮಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಬೇಕೆಂದು ಕೇಳಿಕೊಳ್ಳಲು ಹೇಳಿದರು.

**ಯೋಬ 42:8-10 ಈಗ ಏಳು ಹೋರಿಗಳನ್ನೂ ಏಳು ಟಗರುಗಳನ್ನೂ ತೆಗೆದುಕೊಂಡು ನನ್ನ ದಾಸನಾದ ಯೋಬನ ಬಳಿಗೆ ಹೋಗಿ ನಿಮ್ಮ ದೋಷಪರಿಹಾರಕ್ಕಾಗಿ ಹೋಮಮಾಡಿರಿ; ನನ್ನ ದಾಸನಾದ ಯೋಬನು ನಿಮ್ಮ ಪಕ್ಷವಾಗಿ ಪ್ರಾರ್ಥನೆ ಮಾಡುವನು; ನಾನು ಅವನ ವಿಜ್ಞಾಪನೆಯನ್ನು ಲಾಲಿಸಿ ನಿಮ್ಮ ಮೂರ್ಖತನಕ್ಕೆ ತಕ್ಕ ದಂಡನೆಯನ್ನು ನಿಮಗೆ ವಿಧಿಸುವದಿಲ್ಲ. ನನ್ನ ದಾಸನಾದ ಯೋಬನು ನನ್ನ ವಿಷಯವಾಗಿ ಸತ್ಯವನ್ನು ನುಡಿದಂತೆ ನೀವು ನುಡಿಯಲಿಲ್ಲ ಎಂದು ಹೇಳಿದನು.**

**ಆಗ ತೇಮಾನ್ಯನಾದ ಎಲೀಫಜನೂ ಶೂಹ್ಯನಾದ ಬಿಲ್ದದನೂ ನಾಮಾಥ್ಯನಾದ ಚೋಫರನೂ ಹೋಗಿ ಯೆಹೋವನು ತಮಗೆ ಆಜ್ಞಾಪಿಸಿದ ಪ್ರಕಾರ ಮಾಡಲು ಯೆಹೋವನು ಯೋಬನ ವಿಜ್ಞಾಪನೆಯನ್ನು ಲಾಲಿಸಿದನು.**

**ಯೋಬನು ತನ್ನ ಸ್ನೇಹಿತರಿಗೋಸ್ಕರ ಪ್ರಾರ್ಥಿಸಿದ ಬಳಿಕ ಯೆಹೋವನು ಅವನ ದುಸ್ಥಿತಿಯನ್ನು ಹೋಗಲಾಡಿಸಿ ಅವನ ಸೊತ್ತನ್ನು ಮೊದಲಿಗಿಂತ ಎರಡರಷ್ಟಾಗಿ ಹೆಚ್ಚಿಸಿದನು..**

ಯೋಬನು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರ ಒಂದು ಒಳ್ಳೆಯ ಮಾದರಿಯಾಗಿದ್ದಾನೆ. ಅವನು ತನ್ನ ಕುಟುಂಬಕ್ಕಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು. ಕಠಿಣವಾದ ಸಮಯ ಬಂದಾಗ ಅವನು ದೇವರ ಕಾರ್ಯಗಳನ್ನು ಅರ್ಥಮಾಡಿಕೊಳ್ಳಲು ಆಗಲಿಲ್ಲ ಆದರೂ ದೇವರನ್ನು ಬಿಗಿಯಾಗಿ ಹಿಡಿದುಕೊಂಡನು. ಈ ಸಮಯದಲ್ಲಿ ಅವನು ಹೀಗೆ ಬರೆದನು,

**ಯೋಬ 13:15 ಆಹಾ, ಆತನು ನನ್ನನ್ನು ಕೊಲ್ಲುವನು, ಅದಕ್ಕಾಗಿ ಕಾದಿರುತ್ತೇನೆ, ಆದರೂ ನನ್ನ ನಡತೆಯ ಒಳ್ಳೇತನವನ್ನು ಆತನ ಮುಂದೆ ಸ್ಥಾಪಿಸುವೆನು.**

ಅವನ ಸ್ನೇಹಿತರು ತನ್ನ ಜೀವನದ ಕೆಟ್ಟ ಪರಿಸ್ಥಿತಿಯಲ್ಲಿ ತನ್ನನ್ನು ದೂಷಿಸಿದರೂ ಅವನು ಅವರನ್ನು ಕ್ಷಮಿಸಿ ಅವರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು. ಆಗ ದೇವರು ಅವನಿಗಿದ್ದದೆಲ್ಲವನ್ನು ಎರಡರಷ್ಟಾಗಿ ಹಿಂತಿರುಗಿ ಕೊಟ್ಟನು.

ಯೋಬನು ತನಗೆ ದೊಡ್ಡ ಆಶೀರ್ವಾದಗಳು ಸಿಗಲೆಂದು ತನ್ನ ಸ್ನೇಹಿತರನ್ನು ಕ್ಷಮಿಸಲಿಲ್ಲ. ಆದರೂ ದೇವರ ವಾಕ್ಯವು ಹೇಳುತ್ತದೆ ಅವನು ತನ್ನ ಸ್ನೇಹಿತರಿಗಾಗಿ ಪ್ರಾರ್ಥಿಸಿದಾಗ ದೇವರು ಅವನು ಕಳೆದುಕೊಂಡಿದ್ದೆಲ್ಲವನ್ನೂ ಎರಡರಷ್ಟಾಗಿ ಹಿಂದಿರುಗಿಸಿದನು. ನಮಗೆ ವಿರುದ್ಧವಾಗಿ ತಪ್ಪು ಮಾಡಿದವರನ್ನು ನಾವು ಕ್ಷಮಿಸುವಾಗ ಮತ್ತು ಅವರಿಗಾಗಿ ನಾವು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ ದೊಡ್ಡ ಆಶೀರ್ವಾದಗಳು ನಮಗೆ ಒದಗಿ ಬರುತ್ತವೆ.

## ಅಬ್ರಹಾಮನು ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು

ದೇವರು ಸೊದೊಮ್ ಮತ್ತು ಗೊಮೊರವನ್ನು ನಾಶಮಾಡಬೇಕೆಂದಿದ್ದಾಗ ಮೊದಲು ಅಬ್ರಹಾಮನ ಬಳಿಗೆ ಬಂದನು.

**ಆದಿಕಾಂಡ 18:17,18 ಆಗ ಯೆಹೋವನು ತನ್ನೊಳಗೆ - ನಾನು ಮಾಡಬೇಕೆಂದಿರುವ ಕಾರ್ಯವನ್ನು ಅಬ್ರಹಾಮನಿಗೆ ಮರೆಮಾಡುವದು ಸರಿಯೋ? ಅವನಿಂದ ಬಲಿಷ್ಠವಾದ ಮಹಾಜನಾಂಗವು ಹುಟ್ಟಬೇಕಲ್ಲಾ; ಅವನ ಮೂಲಕ ಭೂಮಿಯ ಎಲ್ಲಾ ಜನಾಂಗಗಳಿಗೂ ಆಶೀರ್ವಾದ ಉಂಟಾಗುವದಲ್ಲಾ... "**

ನಂತರ ಯೆಹೋವನು ತನ್ನ ಸ್ವಂತ ಪ್ರಶ್ನೆಯನ್ನು ತಾವೇ ಉತ್ತರಿಸುತ್ತಾರೆ.

**ಆದಿಕಾಂಡ 18:19-21 ಅವನು ತನ್ನ ಪುತ್ರಪೌತ್ರರಿಗೆ - ನೀವು ನ್ಯಾಯನೀತಿಗಳನ್ನು ನಡಿಸಿ ಯೆಹೋವನ ಮಾರ್ಗವನ್ನು ಅನುಸರಿಸಬೇಕೆಂದು ಬೋಧಿಸುವಂತೆ ಅವನನ್ನು ನಾನು ಆದುಕೊಂಡೆನಲ್ಲಾ; ಅವನು ಹೀಗೆ ಮಾಡುವದರಿಂದ ಯೆಹೋವನಾದ ನನ್ನ ವಾಗ್ದಾನವು ನೆರವೇರುವದು ಅಂದುಕೊಂಡನು.**

**ಇದಲ್ಲದೆ ಯೆಹೋವನು - ಸೊದೋಮ್ ಗೊಮೋರಗಳ ವಿಷಯವಾಗಿ ಎಷ್ಟೋ ದೊಡ್ಡ ಮೊರೆ ನನಗೆ ಮುಟ್ಟಿತು; ಆ ಊರಿನವರ ಮೇಲೆ ಹೊರಿಸಿರುವ ಪಾಪವು ಎಷ್ಟೋ ಘೋರವಾದದ್ದು; ನಾನು ಇಳಿದು ಹೋಗಿ ನನಗೆ ಮುಟ್ಟಿದ**

**ಮೊರೆಯಂತೆಯೇ ಅವರು ಮಾಡಿದರೋ ಇಲ್ಲವೋ ಎಂದು ನೋಡಿ ತಿಳುಕೊಳ್ಳುತ್ತೇನೆ ಅಂದನು.**

ಅಬ್ರಹಾಮನು ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು - "ಕರ್ತನೇ ಈ ಪಟ್ಟಣದಲ್ಲಿ ಐವತ್ತು ಜನ ನೀತಿವಂತರಿದ್ದರೆ ಅದನ್ನು ಉಳಿಸುವಿಯೋ - ನಾಲ್ವತ್ತೈದು ಜನ ನೀತಿವಂತರಿದ್ದರೆ - ನಾಲ್ವತ್ತು - ಮೂವತ್ತು - ಇಪ್ಪತ್ತು - ಹತ್ತು ಜನರಿದ್ದರೆ?

ಅದಕ್ಕೆ ದೇವರು ಒಪ್ಪಿಕೊಂಡರು "ಹತ್ತು ಜನ ನೀತಿವಂತರಿದ್ದರೆ ನಾನು ನಾಶಮಾಡುವುದಿಲ್ಲ."

ದೇವರು ಯಾಕೆ ಆ ಪಟ್ಟಣಗಳನ್ನು ನಾಶಮಾಡುವುದಕ್ಕಿಂತ ಮುಂಚೆ ಅಬ್ರಹಾಮನೊಂದಿಗೆ ಮಾತನಾಡಿದರು? ವಾಸ್ತವದಲ್ಲಿ ದೇವರು ತನ್ನ ಅಧಿಕಾರದಲ್ಲಿ ಕಾರ್ಯ ಮಾಡುತ್ತಿದ್ದ ಒಬ್ಬ ಮನುಷ್ಯನಿಗೆ ಪಟ್ಟಣಗಳು ನಾಶವಾಗಬಾರದಾದರೆ ಅದಕ್ಕೆ ಇರಬೇಕಾದ ಮಾನದಂಡವನ್ನು ನೇಮಿಸಲು ಅನುಮತಿಸಿದರು - ಕನಿಷ್ಠ ಹತ್ತು ನೀತಿವಂತ ಜನರಿರಬೇಕು ಎಂಬುದಾಗಿ.

ಅಬ್ರಹಾಮನ ಮಧ್ಯಸ್ಥಿಕೆ ಪ್ರಾರ್ಥನೆಯ ಮಹತ್ವವನ್ನು ದೇವದೂತನ ಮಾತುಗಳಲ್ಲಿ ಕಾಣುತ್ತೇವೆ.

**ಆದಿಕಾಂಡ 19:22a** **"ಬೇಗ ಅಲ್ಲಿಗೆ ಹೋಗಿ ತಪ್ಪಿಸಿಕೋ; ನೀನು ಅಲ್ಲಿಗೆ ಮುಟ್ಟುವ ತನಕ ನಾನೇನೂ ಮಾಡುವದಕ್ಕಾಗುವದಿಲ್ಲ ಅಂದನು.**

✱ *ನಮ್ಮ ಮಾದರಿ*

ಅನೇಕ ವರ್ಷಗಳ ಹಿಂದೆ ಅಬ್ರಹಾಮನು ಮತ್ತು ಲೋಟರು ಬೇರ್ಪಟ್ಟರು. ಲೋಟನ ಕಡೆಯವರು ಅಬ್ರಹಾಮನ ಕಡೆಯವರೊಂದಿಗೆ ಜಗಳವಾಡಿದ್ದರು. ಲೋಟನಿಗೆ ಒಂದು ಆಯ್ಕೆ ಕೊಡಲಾಯಿತು ಮತ್ತು ಅವನು ತನಗಾಗಿ ಅತ್ಯುತ್ತಮವಾದುದ್ದನ್ನು ಆರಿಸಿಕೊಂಡನು. ಲೋಟನು ಸೊದೊಮ್ ಮತ್ತು ಗೊಮೊರ ಎಂಬ ಪಾಪದಿಂದ ತುಂಬಿದ್ದ ಪಟ್ಟಣಗಳಲ್ಲಿ ಜೀವಿಸಲು ಆರಿಸಿಕೊಂಡಿದ್ದನು. ಲೋಟನಿಗೆ ಸಂಭವಿಸಿದ್ದು ಅವನ ಸ್ವಂತ ತಪ್ಪಾಗಿತ್ತು. ಅದು ಅವನ ತೀರ್ಮಾನಗಳ ಫಲವಾಗಿತ್ತು. ಆದರೆ ಅಬ್ರಹಾಮನು ಇದನ್ನು ಪರಿಗಣಿಸಿದನೋ ಅಥವಾ ಲೋಟನಿಗಾಗಿ ಮತ್ತು ಆ ಎರಡು ಪಟ್ಟಣಗಳಲ್ಲಿ ವಾಸಿಸಿದ ಜನರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನೋ?

## ಮೋಶೆಯು ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು

ಮೋಶೆಯು ದೇವರೊಂದಿಗೆ ಬೆಟ್ಟದ ಮೇಲಿದ್ದಾಗ ಇಸ್ರಾಯೇಲ್ ಜನರು ಒಂದು ಮಹಾಪಾಪವನ್ನು ಮಾಡಿದರು. ಅವರು ಬಂಗಾರದ ಬಸವ ಮಾಡಿ ಅದನ್ನು ತಮ್ಮ ದೇವರೆಂದು ಹೇಳಿ ಅದಕ್ಕೆ ಅಡ್ಡಬಿದ್ದು ಆರಾಧಿಸಿದರು.

**ವಿಮೋ 32:7-10 ಹೀಗಿರಲಾಗಿ ಯೆಹೋವನು ಮೋಶೆಗೆ - ನೀನು ಬೆಟ್ಟದಿಂದ ಇಳಿದುಹೋಗು; ಐಗುಪ್ತದೇಶದಿಂದ ನೀನು ಕರಕೊಂಡು ಬಂದ ನಿನ್ನ ಜನರು ಕೆಟ್ಟು ಹೋದರು. ನಾನು ಅವರಿಗೆ ಆಜ್ಞಾಪಿಸಿದ ಮಾರ್ಗವನ್ನು ಅವರು ಬೇಗನೆ ಬಿಟ್ಟುಹೋಗಿ ತಮಗೆ ಲೋಹದ ಬಸವನನ್ನು ಮಾಡಿಸಿಕೊಂಡು ಅದಕ್ಕೆ ಅಡ್ಡಬಿದ್ದು ಯಜ್ಞಗಳನ್ನು ಅರ್ಪಿಸಿ - ಇಸ್ರಾಯೇಲ್ಯರೇ, ನೋಡಿರಿ; ಇದೇ ನಿಮ್ಮನ್ನು**

**ಐಗುಪ್ತದೇಶದಿಂದ ಕರಕೊಂಡು ಬಂದ ದೇವರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಹೇಳಿದನು. ಅದಲ್ಲದೆ ಯೆಹೋವನು ಮೋಶೆಗೆ - ಈ ಜನರ ಸ್ವಭಾವವನ್ನು ನಾನು ನೋಡಿದ್ದೇನೆ; ಇವರು ನನ್ನ ಆಜ್ಞೆಗೆ ಬೊಗ್ಗದವರಾಗಿದ್ದಾರೆ...**

ದೇವರು ಅವರನ್ನು ಇನ್ನು ಮುಂದೆ ತನ್ನ ಜನರೆಂದು ಕರೆಯಲಿಲ್ಲ ಎಂಬುದನ್ನು ಇಲ್ಲಿ ಗಮನಿಸಿರಿ.

**"ಆದಕಾರಣ ನೀನು ನನ್ನನ್ನು ತಡೆಯಬೇಡ; ನನ್ನ ಕೋಪಾಗ್ನಿ ಉರಿಯಲಿ, ಅವರನ್ನು ಭಸ್ಮಮಾಡುವೆನು. ತರುವಾಯ ನಿನ್ನಿಂದಲೇ ಬೇರೆ ಒಂದು ದೊಡ್ಡ ಜನಾಂಗವುಂಟಾಗುವಂತೆ ಮಾಡುವೆನು ಎಂದು ಹೇಳಿದನು**

"ಮೋಶೆ, ನಾನು ಈ ಜನರನ್ನು ನಾಶಮಾಡದಂತೆ ನನ್ನನ್ನು ತಡೆಯಬೇಡ". ದೇವರು ಯಾಕೆ "ನನ್ನನ್ನು ತಡೇಯಬೇಡ" ಎಂದು ಹೇಳಿದರು?

ದೇವರ ತನ್ನ ಶಾಶ್ವತವಾದ ಉದ್ದೇಶದಲ್ಲಿ ಮಾನವರನ್ನು ತನ್ನ ಸ್ವರೂಪದಲ್ಲಿ ಸೃಷ್ಟಿಸಿದರು ಮತ್ತು ಅವರಿಗೆ ಭೂಮಿಯ ಮೇಲೂ ಮತ್ತು ಅದರಲ್ಲಿರುವ ಎಲ್ಲಾದರ ಮೇಲೂ ಅವರಿಗೆ ದೊರೆತನವನ್ನು ಕೊಟ್ಟರು. ದೇವರು ಜನರನ್ನು ನಾಶಮಾಡದಂತೆ ಮೋಶೆಯು ತಡೆದನು. ಒಬ್ಬ ಮಧ್ಯಸ್ಥಿಕೆ ಪ್ರಾರ್ಥನಾಗಾರನಾಗಿ ಮೋಶೆಯು ಇಸ್ರಾಯೇಲ್ ಜನರಿಗಾಗಿ ಪ್ರಾರ್ಥಿಸುವ ವಿಷಯದಲ್ಲಿ ದೇವರು ಕೊಟ್ಟ ಅಧಿಕಾರವನ್ನು ಬಳಸುತ್ತಾ ದೇವರನ್ನು ತಡೆದನು.

✷ *ಮೋಶೆಯ ಹೃದಯದ ಕೂಗು*

**✶ ನಿನ್ನ ಜೀವಿತರ ಪುಸ್ತಕದಿಂದ ನನ್ನ ಹೆಸರನ್ನು ಅಳಿಸಿಬಿಡು**

ದೇವರು ಇಸ್ರಾಯೇಲ್ ಜನರನ್ನು ನಾಶಮಾಡುವೆನೆಂದು ಹೇಳಿದರು. ಈ ಸಂದರ್ಭದಲ್ಲಿ ಮೋಶೆ ಉಂಟಾದ ಸಂಕಟವು ನಮ್ಮಲ್ಲಿ ಅನೇಕರಿಗೆ ಗ್ರಹಿಕೆಗೆ ಮೀರಿದ್ದಾಗಿದೆ. ಅವನ ಹೃದಯದ ಕೂಗು ಏನಾಗಿತ್ತು? "ಕರ್ತನೇ, ನೀನು ಅವರನ್ನು ಕ್ಷಮಿಸದಿದ್ದರೆ ನಿನ್ನ ಪುಸ್ತಕದಲ್ಲಿ ನನ್ನ ಹೆಸರನ್ನು ಅಳಿಸಿಬಿಡು."

**ವಿಮೋ 32:32 'ಇಲ್ಲವಾದರೆ ನೀನು ಬರೆದಿರುವ [ಜೀವಿತರ] ಪಟ್ಟಿಯಿಂದ ನನ್ನ ಹೆಸರನ್ನೂ ಅಳಿಸಿಬಿಡಬೇಕೆಂದು ಕೇಳಿಕೊಳ್ಳುತ್ತೇನೆ ಎಂದು ಪ್ರಾರ್ಥಿಸಿದನು."**

ದೇವರು ಇಸ್ರಾಯೇಲ್ ಜನರನ್ನು ಜೀವದಿಂದುಳಿಸಲು ಒಪ್ಪಿಕೊಂಡರು. ಆದರೆ "ನಾನು ನಿಮ್ಮ ಸಂಗಡ ಹೋಗುವುದಿಲ್ಲ" ಎಂದು ದೇವರು ಹೇಳಿದರು.

**ವಿಮೋ 33:2a,3b "ನಾನು ನಿನ್ನ ಮುಂದುಗಡೆಯಲ್ಲಿ ದೂತನನ್ನು [ಕಳುಹಿ ಸುವೆನು]... ಆದರೆ ನಾನೇ ನಿಮ್ಮ ಸಂಗಡ ಬರುವದಿಲ್ಲ; ನೀವು ನನ್ನ ಆಜ್ಞೆಗೆ ಬೊಗ್ಗದವರಾದ್ದರಿಂದ ನಾನು ದಾರಿಯಲ್ಲಿ ನಿಮ್ಮನ್ನು ಸಂಹರಿಸೇನು ಅಂದನು.."**

**✶ "ನಮ್ಮನ್ನು ಇಲ್ಲಿಂದ ಹೋಗಗೊಡಿಸಬೇಡ"**

ದೇವರು ತನ್ನ ಪ್ರಸನ್ನತೆಯು ಇನ್ನು ಮುಂದೆ ಅವರೊಂದಿಗೆ ಹೋಗುವುದಿಲ್ಲವೆಂದು ಹೇಳಿದಾಗ ಮೋಶೆಯ ಹೃದಯದ ಕೂಗು ಏನಾಗಿತ್ತು, "ಹಾಗಿದ್ದರೆ, ನಮ್ಮನ್ನು ಇಲ್ಲಿಂದ ಹೋಗಗೊಡಿಸಬೇಡ!" ಮೋಶೆಯು ದೇವರ ಪ್ರಸನ್ನತೆಯಿಲ್ಲದೆ ಮುಂದೆ ಹೋಗಲು ಬಯಸಲಿಲ್ಲ.

**ವಿಮೋ 33:15 ಅದಕ್ಕೆ ಮೋಶೆ - ನೀನೇ ನಮ್ಮಸಂಗಡ ಬಾರದೆ ಹೋದರೆ ನಮ್ಮನ್ನು ಇಲ್ಲಿಂದ ಹೋಗಗೊಡಿಸಬಾರದು.."**

✳ *ನಮ್ಮ ಮಾದರಿ*

ಮೋಶೆಯು ಮಧ್ಯಸ್ಥಿಕೆ ಪ್ರಾರ್ಥನೆಯ ಬಗ್ಗೆ ನಮಗೆ ಎಂತಹ ಒಂದು ಅದ್ಭುತವಾದ ಮಾದರಿಯಾಗಿದ್ದಾನೆ! ಜನರು ಅವನ ನಾಯಕತ್ವದ ವಿರುದ್ಧ ಮಾತನಾಡಿದ್ದರು. ಜನರು ತಮಗೆ ಸಿಕ್ಕ ಪ್ರತಿಯೊಂದು ಅವಕಾಶದಲ್ಲೂ ದೂರುಗಳನ್ನು ಹೇಳಿದ್ದರು. ಅವರು ಮೋಶೆಯನ್ನು ಕೊಲ್ಲುವುದಾಗಿ ಸಹ ಬೆದರಿಕೆ ಹಾಕಿದ್ದರು. ಈಗ ದೇವರೇ ಅವರನ್ನು ನಾಶ ಮಾಡುವುದಾಗಿ ಹೇಳಿದ್ದರು! ಮೋಶೆಯ ಸಂತತಿಯ ಮೂಲಕ ಒಂದು ಹೊಸ ರಾಷ್ಟ್ರವನ್ನು ತರುತ್ತೇನೆಂದು ಹೇಳಿದರು. ಆಗ ಮೋಶೆಯ ಸಂತತಿಯವರು ದೇವರ ಆಯ್ದ ಜನರಾಗುತ್ತಿದ್ದರು. ಅವನ ಮಕ್ಕಳು ಮತ್ತು ಮೊಮ್ಮಕ್ಕಳು ಇಸ್ರಾಯೇಲ್ ದೇಶವಾಗುತ್ತಿದ್ದರು. ಪಾಪಿಷ್ಟ ಜನರನ್ನು ನಾಶ ಮಾಡಿದರೆ ತಾನು ದೇವರ ಸ್ವರವನ್ನು ಕೇಳುತ್ತಿದ್ದದ್ದು ಮತ್ತು ನಾಯಕನಾಗಿದ್ದದ್ದು ಸಾಬೀತಾಗುತ್ತಿತ್ತು. ಪ್ರತಿಯೊಂದು ಸನ್ನಿವೇಶದಲ್ಲೂ ಮೋಶೆ ಸರಿಯಾಗಿದ್ದನು ಎಂಬುದು ಸಾಬೀತಾಗುತ್ತಿತ್ತು.

ಇವೆಲ್ಲವನ್ನೂ ಅಂಗೀಕರಿಸುವುದರ ಬದಲು ಮೋಶೆಯು ಜನರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆಯನ್ನು ಮಾಡುತ್ತಾನೆ ಮತ್ತು ಅವನ ಮಧ್ಯಸ್ಥಿಕೆ ಪ್ರಾರ್ಥನೆಯ ನಿಮಿತ್ತ ದೇವರು ಜನರನ್ನು ಜೀವದಿಂದುಳಿಸಿದರು.

**ಯೆಹೆಜ್ಕೇಲನ ದೋಷಾರೋಪಣೆ**

ಯೆಹೆಜ್ಕೇಲನ ಕಾಲದಲ್ಲಿ, ದೇವರು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವದಕ್ಕಾಗಿ ಒಬ್ಬ ಮನುಷ್ಯನನ್ನು ಹುಡುಕಿದರು - ಒಡಕಿನಲ್ಲಿ ನಿಲ್ಲುವುದಕ್ಕಾಗಿ ಒಬ್ಬನನ್ನು ಹುಡುಕಿದರು - ಆದರೆ ಯಾರೊಬ್ಬನೂ ಸಿಗಲಿಲ್ಲ. ಯೆಹೆಜ್ಕೇಲನ ಮೂಲಕ ಯೆಹೋವನು ಇಸ್ರಾಯೇಲ್ ಜನರ ವಿರುದ್ಧ ಒಂದು ಮಹಾ ದೋಷಾರೋಪಣೆಯನ್ನು ಮಾಡಿದರು, ಅದು ಇಂದಿಗೂ ನಮ್ಮ ಕಾಲಕ್ಕೆ ಬಹಳ ಸತ್ಯವಾಗಿರುವುದರಿಂದ ನಾವು ಅವೆಲ್ಲವನ್ನೂ ಇಲ್ಲಿ ನಮೂದಿಸಿದ್ದೇವೆ.

**ಯೆಹೆಜ್ಕೇಲ 22:23-31 ಯೆಹೋವನು ಈ ವಾಕ್ಯವನ್ನು ನನಗೆ ದಯಪಾಲಿಸಿದನು - ನರಪುತ್ರನೇ, ಆ ನಾಡಿಗೆ ಹೀಗೆ ಹೇಳು - ದೇವರ ಕೋಪದ ಈ ದಿನದಲ್ಲಿ ನೀನು ಶುದ್ಧಿಯಾಗದ ದೇಶ, ಮಳೆಯಿಲ್ಲದ ದೇಶ.**

✳ *ಪ್ರವಾದಿಗಳ ಒಳಸಂಚು*

**ಆ ನಾಡಿನೊಳಗೆ ಪ್ರವಾದಿಗಳು ಒಳಸಂಚುಮಾಡಿಕೊಂಡಿದ್ದಾರೆ, ಬೇಟೆಯನ್ನು ಸೀಳುತ್ತಾ ಗರ್ಜಿಸುವ ಸಿಂಹದಂತಿದ್ದಾರೆ, ನರಪ್ರಾಣಿಗಳನ್ನು ನುಂಗಿದ್ದಾರೆ, ಆಸ್ತಿಯನ್ನೂ ಅಮೂಲ್ಯವಸ್ತುಗಳನ್ನೂ ದೋಚಿಕೊಂಡಿದ್ದಾರೆ; ದೇಶದಲ್ಲಿ ಬಹುಮಂದಿಯನ್ನು ವಿಧವೆಯರನ್ನಾಗಿ ಮಾಡಿದ್ದಾರೆ.**

* *ಯಾಜಕರು ವಿಧಿಗಳನ್ನು ಭಂಗ ಮಾಡಿದರು, ಪರಿಶುದ್ಧವಸ್ತುಗಳನ್ನು ಹೊಲೆ ಮಾಡಿದರು, ಪರಿಶುದ್ಧವಾದದ್ದನ್ನು ಬೋಧಿಸಲಿಲ್ಲ ಮತ್ತು ಅಪರಿಶುದ್ಧರಾಗಿದ್ದಾರೆ*

**ಅಲ್ಲಿನ ಯಾಜಕರು ನನ್ನ ವಿಧಿಗಳನ್ನು ಭಂಗಮಾಡಿದ್ದಾರೆ, ನನ್ನ ಪರಿಶುದ್ಧವಸ್ತುಗಳನ್ನು ಹೊಲೆಮಾಡಿದ್ದಾರೆ; ಮೀಸಲಾದದ್ದಕ್ಕೂ ಮೀಸಲಲ್ಲದ್ದಕ್ಕೂ ಭೇದವೆಣಿಸಲಿಲ್ಲ, ಶುದ್ಧಾಶುದ್ಧವಿವೇಚನೆಯನ್ನು ಬೋಧಿಸಲಿಲ್ಲ; ನಾನು ನೇಮಿಸಿದ ಸಬ್ಬತ್ ದಿನಗಳಿಗೆ ವಿಮುಖರಾಗಿದ್ದಾರೆ; ಇದರಿಂದ ನಾನು ಅವರ ಮಧ್ಯದಲ್ಲಿ ಅಪಕೀರ್ತಿಗೆ ಗುರಿಯಾಗಿದ್ದೇನೆ.**

* *ರಾಜಕೀಯ ನಾಯಕರುಗಳು ತೋಳಗಳಂತಿದ್ದಾರೆ*

**ಅಲ್ಲಿನ ಪ್ರಧಾನರು ಸುಲಿಗೆಗಾಗಿ ರಕ್ತಸುರಿಸಿ ನರಪ್ರಾಣಿಗಳನ್ನು ನುಂಗುವವರಾಗಿ ಬೇಟೆಯನ್ನು ಸೀಳುವ ತೋಳಗಳಂತಿದ್ದಾರೆ.**

* *ಪ್ರವಾದಿಗಳು ಸುಳ್ಳುದರ್ಶನಗಳು ಕಾಣುತ್ತಿದ್ದಾರೆ, ಕಣಿ ಕೇಳುತ್ತಿದ್ದಾರೆ*

**ಅಲ್ಲಿನ ಪ್ರವಾದಿಗಳು ಇವರಿಗಾಗಿ ಮಿಥ್ಯಾದರ್ಶನವನ್ನೂ ಸುಳ್ಳು ಕಣಿಯನ್ನೂ ಕಂಡು ಯೆಹೋವನು ಮಾತಾಡದಿದ್ದರೂ ಕರ್ತನಾದ ಯೆಹೋವನು ಇಂತೆನ್ನುತ್ತಾನೆ ಎಂದು ನುಡಿಯುತ್ತಾ ಮೇಲೆ ಮೇಲೆ ಸುಣ್ಣ ಬಳಿದಿದ್ದಾರೆ.**

* *ಜನರು ದುಷ್ಟರಾಗಿದ್ದಾರೆ*

**ಸಾಧಾರಣರು ಹಿಂಸಿಸಿ ಸೂರೆಮಾಡಿದ್ದಾರೆ, ದೀನದರಿದ್ರರನ್ನು ಬಾಧಿಸಿ ವಿದೇಶಿಗಳನ್ನು ಅನ್ಯಾಯವಾಗಿ ಅರೆದು ಬಿಟ್ಟಿದ್ದಾರೆ.**

* *ದೇವರು ಒಬ್ಬ ಮನುಷ್ಯನನ್ನು ಹುಡುಕಿದರು*

**ನಾನು ದೇಶವನ್ನು ಹಾಳುಮಾಡದಂತೆ ನನ್ನೆದುರಿಗೆ ದೇಶರಕ್ಷಣೆಗಾಗಿ ಪೌಳಿಯ ಒಡಕಿನಲ್ಲಿ ನಿಲ್ಲುವದಕ್ಕೂ ಗೋಡೆಯನ್ನು ಗಟ್ಟಿಮಾಡುವದಕ್ಕೂ ತಕ್ಕವನನ್ನು ನಾನು ಹುಡುಕಲು ಯಾರೂ ಸಿಕ್ಕಲಿಲ್ಲ. ಆದಕಾರಣ ನಾನು ನನ್ನ ಕೋಪವನ್ನು ಅವರ ಮೇಲೆ ಸುರಿಸಿ ನನ್ನ ರೋಷಾಗ್ನಿಯಿಂದ ಅವರನ್ನು ಧ್ವಂಸಮಾಡಿ ಅವರ ದುರ್ನಡತೆಯನ್ನು ಅವರ ತಲೆಗೇ ಕಟ್ಟಿದ್ದೇನೆ; ಇದು ಕರ್ತನಾದ ಯೆಹೋವನ ನುಡಿ.**

ಅಬ್ರಹಾಮನು ಸೊದೊಮ್ ಮತ್ತು ಗೊಮೊರ ಪಟ್ಟಣಗಳಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು. ಮೋಶೆಯು ಇಸ್ರಾಯೇಲ್ ಜನರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಿದನು. ಆದರೆ ಯೆಹೆಜ್ಕೇಲನ ಕಾಲದಲ್ಲಿ ದೇವರು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವುದಕ್ಕಾಗಿ - ತನ್ನ ದೇಶಕ್ಕಾಗಿ ಒಡಕಿನಲ್ಲಿ ನಿಲ್ಲಲು - ಒಬ್ಬ ಮನುಷ್ಯನನ್ನು ಹುಡುಕಿದರು, ಆದರೆ ಯಾರೂ ಸಿಗಲಿಲ್ಲ. ದೇವರು ಈಗಲೂ ಸಹ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವವರನ್ನು ಹುಡುಕುತ್ತಿದ್ದಾರೆ - ತಮ್ಮ

ಪ್ರಿಯಪಾತ್ರರಿಗಾಗಿ, ಸಭೆಗಳಿಗಾಗಿ, ತಮ್ಮ ಪ್ರವಾದಿಗಳಿಗಾಗಿ ಮತ್ತು ಯಾಜಕರುಗಳಿಗಾಗಿ, ತಮ್ಮ ರಾಜಕೀಯ ನಾಯಕರುಗಳಿಗಾಗಿ ಒಡಕಿನಲ್ಲಿ ನಿಲ್ಲುವ ಜನರನ್ನು ಹುಡುಕುತ್ತಿದ್ದಾರೆ.

## ಮಧ್ಯಸ್ಥಿಕೆ ಪ್ರಾರ್ಥನೆ - ನಮ್ಮ ಸೌಭಾಗ್ಯ ಮತ್ತು ಜವಾಬ್ದಾರಿ

### ಆತ್ಮಿಕ ನಾಯಕರುಗಳಿಗಾಗಿ

ನಾವು ಸುವಾರ್ತಾ ಸೇವಕರುಗಳಿಗಾಗಿ ಪ್ರಾರ್ಥಿಸಬೇಕು. ಒಬ್ಬ ನಾಯಕನು ಬೀಳುವಾಗ ಸೈತಾನನು ಅನೇಕರಿಗೆ ಗಾಯವನ್ನುಂಟುಮಾಡಲು ಸಾಧ್ಯವಾಗಿರುವುದರಿಂದ ಅವರ ವಿರುದ್ಧದ ಹೋರಾಟವು ಬಲವಾಗಿರುತ್ತದೆ. ನಾವು ನಮ್ಮ ಆತ್ಮಿಕ ನಾಯಕರಿಗಳಿಗಾಗಿ ಪ್ರತಿದಿನ ಕ್ರಮವಾಗಿ ಪ್ರಾರ್ಥಿಸಬೇಕು.

✳ *ಧೈರ್ಯವಾಗಿ ಸೇವೆ ಮಾಡಲು*

ಪೌಲನು ತಾನು ಧೈರ್ಯವಾಗಿ ಮಾತನಾಡುವಂತೆ ಎಫೆಸದ ವಿಶ್ವಾಸಿಗಳು ಪ್ರಾರ್ಥಿಸಬೇಕೆಂದು ಕೇಳಿಕೊಂಡನು. ನಾವು ನಮ್ಮ ನಾಯಕರುಗಳಿಗಾಗಿಯೂ ಅದನ್ನೇ ಪ್ರಾರ್ಥಿಸಬೇಕು.

**ಎಫೆಸ 6:19 ನನಗೋಸ್ಕರ ಸಹ ಪ್ರಾರ್ಥನೆಮಾಡಿರಿ. ನಾನು ಬಾಯಿ ತೆರೆಯುವಾಗ ಪೂರ್ವಕಾಲದಲ್ಲಿ ಗುಪ್ತವಾಗಿದ್ದ ಸುವಾರ್ತಾಸತ್ಯಾರ್ಥವನ್ನು ಭಯವಿಲ್ಲದೆ ತಿಳಿಸುವದಕ್ಕೆ ಬೇಕಾದ ಮಾತನ್ನು ದೇವರು ನನಗೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿರಿ.**

✳ *ಬಾಗಿಲುಗಳು ತೆರೆಯಲ್ಪಡಲು*

ಬಾಗಿಲುಗಳು ತೆರೆಯಲ್ಪಡಲು (ಅನುಕೂಲವಾದ ಸಂದರ್ಭಕ್ಕಾಗಿ) ಕೊಲೊಸ್ಸೆಯ ವಿಶ್ವಾಸಿಗಳು ತನಗಾಗಿ ಪ್ರಾರ್ಥಿಸಬೇಕೆಂದು ಪೌಲನು ಕೇಳಿಕೊಂಡನು. ನಾವು ಈಗಲೂ ಸಹ ಆ ಪ್ರಾರ್ಥನೆಯನ್ನು ಮಾಡಬಹುದು.

**ಕೊಲೊಸ್ಸೆ 4:3 ಇದಲ್ಲದೆ ನಮಗೋಸ್ಕರವೂ ಪ್ರಾರ್ಥನೆ ಮಾಡಿರಿ. ಕ್ರಿಸ್ತನ ವಿಷಯದಲ್ಲಿ ದೇವರು ತಿಳಿಯಪಡಿಸಿದ ಸತ್ಯಾರ್ಥವನ್ನು ಪ್ರಸಂಗಿಸುವದಕ್ಕೆ ಆತನು ಅನುಕೂಲವಾದ ಸಂದರ್ಭವನ್ನು ನಮಗೆ ದಯಪಾಲಿಸಿ ನಾನು ಅದನ್ನು ಹೇಳಬೇಕಾದ ರೀತಿಯಲ್ಲಿ ತಿಳಿಸುವಂತೆ ಅನುಗ್ರಹಮಾಡಬೇಕೆಂದು ಬೇಡಿಕೊಳ್ಳಿರಿ.**

✳ *ಕರ್ತನ ವಾಕ್ಯವು ಪ್ರಖ್ಯಾತಿ ಹೊಂದಲು*

*ದುಷ್ಟಜನರ ಕೈಯಿಂದ ತಪ್ಪಿಸಲು*

ಕರ್ತನ ವಾಕ್ಯವು ತಮ್ಮ ಮೂಲಕ ಬೇಗನೆ ಹಬ್ಬುವಂತೆಯೂ ಮತ್ತು ಪ್ರಖ್ಯಾತಿ ಹೊಂದುವಂತೆಯೂ ಮತ್ತು ಮೂರ್ಖರಾದ ದುಷ್ಟಜನರ ಕೈಯಿಂದ ದೇವರು ತಮ್ಮನ್ನು ತಪ್ಪಿಸುವಂತೆಯೂ ಪ್ರಾರ್ಥಿಸಿರಿ ಎಂದು ಪೌಲನು ಥೆಸಲೋನಿಕದವರಿಗೆ ಕೇಳಿಕೊಳ್ಳುತ್ತಾನೆ. ನಮ್ಮ ಆತ್ಮಿಕ ನಾಯಕರುಗಳಿಗಾಗಿ ನಾವು ಈ ರೀತಿಯಲ್ಲಿಯೂ ಪ್ರಾರ್ಥಿಸಬಹುದು.

**2 ಥೆಸಲೋನಿಕದವರಿಗೆ 3:1,2a ಕಡೇ ಮಾತೇನಂದರೆ, ಸಹೋದರರೇ, ನಮಗೋಸ್ಕರ ಪ್ರಾರ್ಥನೆಮಾಡಿರಿ. ಕರ್ತನ ವಾಕ್ಯವು ನಿಮ್ಮಲ್ಲಿ ಹಬ್ಬಿದ ಪ್ರಕಾರ ಎಲ್ಲೆಲ್ಲಿಯೂ ಬೇಗನೆ ಹಬ್ಬಿ ಪ್ರಖ್ಯಾತಿ ಹೊಂದುವ ಹಾಗೆಯೂ ದೇವರು ನಮ್ಮನ್ನು ಮೂರ್ಖರಾದ ದುಷ್ಟಜನರ ಕೈಯಿಂದ ತಪ್ಪಿಸುವ ಹಾಗೆಯೂ ಪ್ರಾರ್ಥಿಸಿರಿ...**

∗ *ಸಜ್ಜನರಾಗಿ ಜೀವಿಸಲು*

ಇಬ್ರಿಯರಿಗೆ ಬರೆದ ಪತ್ರಿಕೆಯ ಗ್ರಂಥಕರ್ತನು ತಾವು ಸಜ್ಜನರಾಗಿ ಒಳ್ಳೆಯ ಮನಸ್ಸಾಕ್ಷಿಯೊಂದಿಗೆ ಜೀವಿಸುವಂತೆ ಪ್ರಾರ್ಥಿಸಿರಿ ಎಂದು ಕೇಳಿಕೊಂಡನು. ಇಂದಿಗೂ ಸಹ ನಾವು ಈ ಪ್ರಾರ್ಥನೆಯನ್ನು ಮಾಡಬೇಕಾಗಿದೆ

**ಇಬ್ರಿಯರಿಗೆ 13:18 ನಮಗೋಸ್ಕರ ಪ್ರಾರ್ಥಿಸಿರಿ. ನಾವು ಎಲ್ಲಾ ವಿಷಯಗಳಲ್ಲಿ ಸಜ್ಜನರಾಗಿ ನಡೆದುಕೊಳ್ಳಬೇಕೆಂದು ಅಪೇಕ್ಷಿಸುವವರಾಗಿದ್ದು ನಮ್ಮ ಮನಸ್ಸಿನಿಂದ ಒಳ್ಳೇ ಸಾಕ್ಷಿ ಹೊಂದಿದ್ದೇವೆಂದು ನಿಶ್ಚಯಿಸಿಕೊಂಡಿದ್ದೇವೆ.**

∗ *ನಮ್ಮ ಜವಾಬ್ದಾರಿ*

ಕ್ರಿಸ್ತನ ಸಭೆಯಲ್ಲಿ ಒಬ್ಬ ನಾಯಕನು ಪಾಪದಲ್ಲಿ ಬಿದ್ದಿದ್ದ ಸುದ್ದಿಯು ನ್ಯೂಸ್ ನಲ್ಲಿ ಬಂದಿತ್ತು. ಜನರು ನಮಗೆ ಆ ಪರಿಸ್ಥಿತಿಯ ಬಗ್ಗೆ ಕೇಳುತ್ತಿದ್ದರು. ಅವರಿಗೆ ನಿರಾಶೆಯಾಗಿತ್ತು - ನೋವಾಗಿತ್ತು. ನಾನು ಕರ್ತನೊಂದಿಗೆ ಅದರ ಬಗ್ಗೆ ಮಾತನಾಡುತ್ತಿದ್ದೆ. ಇಂತಹ ಸಂದರ್ಭದಲ್ಲಿ ನಾವು ಜನರಿಗೆ ಹೇಗೆ ಸಹಾಯ ಮಾಡಲು ಸಾಧ್ಯ? ದೇವರು ಅವರಿಗಾಗಿ ಮತ್ತು ನನಗಾಗಿ ಒಂದೇ ಒಂದು ಉತ್ತರವನ್ನು ಕೊಟ್ಟರು. "ನೀನು ಅವನನ್ನು ಮಾದರಿಯಾಗಿ ಕಂಡೆ. ನೀನು ಅವನಿಂದ ಹೊಂದಿಕೊಂಡೆ, ಆದರೆ ನೀನು ಎಷ್ಟು ಬಾರಿ ಅವನಿಗಾಗಿ ಪ್ರಾರ್ಥಿಸಿದೆ?" ದೇವರು ಈ ಮಾತುಗಳನ್ನು ನನಗೆ ಹೇಳಿ ಅನೇಕ ವರ್ಷಗಳು ಕಳೆದಿವೆ ಆದರೂ ನಾನು ಅದನ್ನು ಮರೆತಿಲ್ಲ. ಕ್ರಿಸ್ತನ ಸಭೆಯಲ್ಲಿರುವ ನಾಯಕರುಗಳಿಗಾಗಿ ನಾವು ಪ್ರಾರ್ಥಿಸುವ ಜವಾಬ್ದಾರಿಯನ್ನು ಹೊಂದಿದ್ದೇವೆ.

ರಾಜಕೀಯ ನಾಯಕರುಗಳಿಗಾಗಿ

ನಾವು ಸುಖದಿಂದಲೂ ಸಮಾಧಾನಕರವಾಗಿಯೂ ಜೀವಿಸುವಂತೆ ನಮ್ಮ ನಾಯಕರುಗಳಿಗಾಗಿ ಪ್ರಾರ್ಥಿಸಬೇಕು.

**1 ತಿಮೊಥಿ 2:1-4 ಎಲ್ಲಾದಕ್ಕಿಂತ ಮೊದಲು ಮನುಷ್ಯರೆಲ್ಲರಿಗೋಸ್ಕರ ದೇವರಿಗೆ ವಿಜ್ಞಾಪನೆಗಳನ್ನೂ ಪ್ರಾರ್ಥನೆಗಳನ್ನೂ ಮನವಿಗಳನ್ನೂ ಕೃತಜ್ಞತಾಸ್ತುತಿಗಳನ್ನೂ ಮಾಡಬೇಕೆಂದು ಬೋಧಿಸುತ್ತೇನೆ. ನಮಗೆ ಸುಖಸಮಾಧಾನಗಳು ಉಂಟಾಗಿ ನಾವು ಪೂರ್ಣಭಕ್ತಿಯಿಂದಲೂ ಗೌರವದಿಂದಲೂ ಕಾಲಕ್ಷೇಪ ಮಾಡುವಂತೆ ಅರಸುಗಳಿಗಾಗಿಯೂ ಎಲ್ಲಾ ಅಧಿಕಾರಿಗಳಿಗಾಗಿಯೂ ವಿಜ್ಞಾಪನೆಗಳನ್ನು ಮಾಡಬೇಕು. ಹಾಗೆ ಮಾಡುವದು ನಮ್ಮ ರಕ್ಷಕನಾದ ದೇವರ ಸನ್ನಿಧಿಯಲ್ಲಿ ಮೆಚ್ಚಿಕೆಯಾಗಿಯೂ ಯೋಗ್ಯವಾಗಿಯೂ ಅದೆ. ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ ಚಿತ್ತವಾಗಿದೆ.**

ತನ್ನ ದೇಶಕ್ಕಾಗಿ ಪ್ರಾರ್ಥಿಸುವ ಬಂಧವನ್ನು ಇಟ್ಟುಕೊಳ್ಳುವ ಸ್ತ್ರೀ ಅಥವಾ ಪುರುಷನು ಸರ್ಕಾರದಲ್ಲಿರುವವರಿಗಿಂತ ಹೆಚ್ಚಿನದ್ದನ್ನು ಸಾಧಿಸಬಹುದಾಗಿದೆ. ದೇವರು ತನ್ನ ಜನರ ಸ್ವರವನ್ನು ಕೇಳಿಸಿಕೊಳ್ಳುವನು.

**2 ಪೂರ್ವ 7:13,14 ನಾನು ಆಕಾಶವನ್ನು ಮಳೆಗರೆಯದಂತೆ ಮುಚ್ಚುವಾಗಲೂ ದೇಶವನ್ನು ತಿಂದುಬಿಡುವದಕ್ಕೆ ಮಿಡಿತೆಗಳನ್ನು ಕಳುಹಿಸುವಾಗಲೂ ನನ್ನ ಪ್ರಜೆಯ ಮೇಲೆ ಘೋರ ವ್ಯಾಧಿಯನ್ನು ಬರಮಾಡುವಾಗಲೂ ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟ ನಡತೆಯನ್ನು ಬಿಟ್ಟು ತಿರುಗಿಕೊಂಡು ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು.**

### ನಾವು ಜೀವಿಸುವ ಪಟ್ಟಣಗಳಿಗಾಗಿ

ನಾವು ವಾಸಿಸುವ ಪಟ್ಟಣಗಳ ಶಾಂತಿ ನೆಮ್ಮದಿಗಾಗಿ ಪ್ರಾರ್ಥಿಸಬೇಕು ಯಾಕೆಂದರೆ ಆಗ ನಮಗೂ ಶಾಂತಿಯಿಂದ ಜೀವಿಸಲು ಸಾಧ್ಯವಾಗುತ್ತದೆ.

**ಯೆರೆಮೀಯ 29:7 ನಾನು ಯಾವ ಪಟ್ಟಣಕ್ಕೆ ನಿಮ್ಮನ್ನು ಸಾಗಿಸಿದೆನೋ ಅದರ ಕ್ಷೇಮವನ್ನು ಹಾರೈಸಿ ಅದಕ್ಕಾಗಿ ಯೆಹೋವನನ್ನು ಪ್ರಾರ್ಥಿಸಿರಿ; ಅದರ ಕ್ಷೇಮವೇ ನಿಮ್ಮ ಕ್ಷೇಮ.**

### ನಮ್ಮನ್ನು ಹಿಂಸಿಸುವ ಜನರಿಗಾಗಿ

ನಮಗೆ ಕೇಡು ಮಾಡಿದವರಿಗಾಗಿ ನಾವು ಪ್ರಾರ್ಥಿಸುವಾಗ ನಾವು ನಿಜವಾಗಲೂ ಅವರನ್ನು ಕ್ಷಮಿಸಿದ್ದೇವೆಂಬುದು ನಮಗೆ ಗೊತ್ತಾಗುತ್ತದೆ.

**ಮತ್ತಾಯ 5:44 "ಆದರೆ ನಾನು ನಿಮಗೆ ಹೇಳುವದೇನಂದರೆ - ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ."**

**ಲೂಕ 6:28 "ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದಮಾಡಿರಿ; ನಿಮ್ಮನ್ನು ಬಯ್ಯುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ."**

### ರಾಷ್ಟ್ರಗಳ ಸುಗ್ಗಿಗಾಗಿ

ಯೇಸು ಕೆಲಸದವರಿಗಾಗಿ ಪ್ರಾರ್ಥಿಸಬೇಕೆಂದು ಶಿಷ್ಯರಿಗೆ ಹೇಳಿದರು, ನಂತರ ಅವರನ್ನು ಬೆಳೆ ಕೊಯ್ಯುವುದಕ್ಕಾಗಿ ಕಳುಹಿಸಿಕೊಟ್ಟರು. ನಾವು ಒಂದು ಅಗತ್ಯತೆಗಾಗಿ ಶ್ರದ್ಧೆಯಿಂದ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ ಅನೇಕ ಬಾರಿ ದೇವರು ನಮ್ಮ ಮೂಲಕ ಉತ್ತರವನ್ನು ಕಳುಹಿಸಿಕೊಡುತ್ತಾರೆ.

**ಲೂಕ 10:2 ಅವರಿಗೆ ಹೇಳಿದ್ದೇನಂದರೆ - ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು - ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ.**

**ಕೀರ್ತನೆ 2:8  ನೀನು ಕೇಳಿಕೊಂಡರೆ ನಾನು ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು; ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ತ್ಯವಾಗಿ ಕೊಡುವೆನು.**

ಇಸ್ರಾಯೇಲ್ ದೇಶಕ್ಕಾಗಿ

ದೇವರು ಆಯ್ದುಕೊಂಡಿರುವ ಜನರಿಗಾಗಿ ಪ್ರಾರ್ಥಿಸುವುದರಲ್ಲಿ ವಿಶೇಷವಾದ ಆಶೀರ್ವಾದವಿದೆ ಮತ್ತು ದೇವರು ಅವರಿಗಾಗಿ ಹೊಂದಿರುವ ಉದ್ದೇಶಗಳು ತ್ವರಿತವಾಗಿ ನೆರವೇರುವಂತೆ ಮಾಡುತ್ತವೆ.

**ಕೀರ್ತನೆ 122:6,7  ಯೆರೂಸಲೇಮಿನ ಶುಭಕ್ಕೋಸ್ಕರ ಪ್ರಾರ್ಥಿಸಿರಿ. [ಯೆರೂಸಲೇಮೇ,] ನಿನ್ನನ್ನು ಪ್ರೀತಿಸುವವರಿಗೆ ಸೌಭಾಗ್ಯವುಂಟಾಗಲಿ. ನಿನ್ನ ಪೌಳಿಗೋಡೆಗಳೊಳಗೆ ಶುಭವುಂಟಾಗಲಿ; ನಿನ್ನ ಅರಮನೆಗಳಲ್ಲಿ ಸೌಭಾಗ್ಯವಿರಲಿ."**

ಹೊಸ ವಿಶ್ವಾಸಿಗಳಿಗಾಗಿ

ನಾವು ಕ್ರಿಸ್ತನ ಕಡೆಗೆ ನಡೆಸುವ ಜನರಿಗಾಗಿ ಪ್ರಾರ್ಥಿಸಬೇಕು.

**1 ಥೆಸಲೋನಿಕ 3:9,10  ನಿಮ್ಮ ನಿಮಿತ್ತ ನಮ್ಮ ದೇವರ ಮುಂದೆ ನಮಗಿರುವ ಎಲ್ಲಾ ಸಂತೋಷಕ್ಕಾಗಿ ದೇವರಿಗೆ ತಕ್ಕಷ್ಟು ಸ್ತೋತ್ರಮಾಡುವದು ನಮ್ಮಿಂದ ಹೇಗಾದೀತು? ನಿಮ್ಮ ಮುಖವನ್ನು ನೋಡುವದಕ್ಕೂ ನಿಮ್ಮ ನಂಬಿಕೆಯ ಕೊರತೆಗಳನ್ನು ನೀಗುವದಕ್ಕೂ ನಮಗೆ ಅನುಕೂಲವಾಗಬೇಕೆಂದು ನಾವು ಹಗಲಿರುಳು ದೇವರನ್ನು ಅತ್ಯಂತವಾಗಿ ಬೇಡುವವರಾಗಿದ್ದೇವೆ.**

ಎಲ್ಲಾ ಭಕ್ತರಿಗಾಗಿ

ಪ್ರಪಂಚದಾದ್ಯಂತ ರಕ್ಷಣೆ ಹೊಂದಿರುವ ಜನರಿಗಾಗಿ ನಾವು ಪ್ರಾರ್ಥಿಸಬೇಕು.

**ಎಫೆಸ 6:18  ನೀವು ಪವಿತ್ರಾತ್ಮಪ್ರೇರಿತರಾಗಿ ಎಲ್ಲಾ ಸಮಯಗಳಲ್ಲಿ ಸಕಲವಿಧವಾದ ಪ್ರಾರ್ಥನೆಯಿಂದಲೂ ವಿಜ್ಞಾಪನೆಯಿಂದಲೂ ದೇವರನ್ನು ಪ್ರಾರ್ಥಿಸಿರಿ. ಇದರಲ್ಲಿ ಪೂರ್ಣ ಸ್ಥಿರಚಿತ್ತರಾಗಿದ್ದು ದೇವಜನರೆಲ್ಲರ ವಿಷಯದಲ್ಲಿ ವಿಜ್ಞಾಪನೆಮಾಡುತ್ತಾ ಎಚ್ಚರವಾಗಿರ್ರಿ.**

ಪರಸ್ಪರವಾಗಿ

ನಾವು ಪರಸ್ಪರ ಒಬ್ಬರಿಗೊಬ್ಬರು ಪ್ರಾರ್ಥಿಸಬೇಕು ಮತ್ತು ಪಾಪಗಳನ್ನು ಅರಿಕೆ ಮಾಡಬೇಕೆಂದು ಯಾಕೋಬನು ನಮ್ಮನ್ನು ಇತರರೊಂದಿಗೆ ಸಂಬಂಧ ಬೆಳೆಸಿಕೊಳ್ಳಲು ಉತ್ತೇಜಿಸುತ್ತಾನೆ.

**ಯಾಕೋಬ  5:16  ಹೀಗಿರಲು ನೀವು ಸ್ವಸ್ಥವಾಗಬೇಕಾದರೆ ನಿಮ್ಮ ಪಾಪಗಳನ್ನು ಒಬ್ಬರಿಗೊಬ್ಬರು ಅರಿಕೆ ಮಾಡಿ ಒಬ್ಬರಿಗೋಸ್ಕರ ಒಬ್ಬರು ದೇವರನ್ನು ಪ್ರಾರ್ಥಿಸಿರಿ; ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ.**

ಖಾಯಿಲೆಯಲ್ಲಿ ಇರುವವರಿಗಾಗಿ

**ಯಾಕೋಬ  5:14,15  ನಿಮ್ಮಲ್ಲಿ ಅಸ್ವಸ್ಥನಾಗಿರುವವನು ಇದ್ದಾನೋ? ಅವನು ಸಭೆಯ ಹಿರಿಯರನ್ನು ಕರೇಕಳುಹಿಸಲಿ; ಅವರು ಕರ್ತನ ಹೆಸರಿನಿಂದ ಅವನಿಗೆ**

**ಎಣ್ಣೆಹಚ್ಚಿ ಅವನಿಗೋಸ್ಕರ ದೇವರನ್ನು ಪ್ರಾರ್ಥಿಸಲಿ. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ರೋಗಿಯನ್ನು ರಕ್ಷಿಸುವದು; ಕರ್ತನು ಅವನನ್ನು ಎಬ್ಬಿಸುವನು; ಮತ್ತು ಪಾಪಮಾಡಿದವನಾಗಿದ್ದರೆ ಅದು ಪರಿಹಾರವಾಗುವದು.**

ಹಿಂಜಾರುವವರಿಗಾಗಿ

ಬಿದ್ದು ಹೋಗುವ ಜನರನ್ನು ಟೀಕಿಸುವುದರ, ತೀರ್ಪು ಮಾಡುವುದರ ಅಥವಾ ಸಂತಾಪ ತೋರಿಸುವುದರ ಬದಲಾಗಿ ಅವರಿಗಾಗಿ ನಾವು ಪ್ರಾರ್ಥಿಸಬೇಕು.

**ಗಲಾತ್ಯ 6:1,2 ಸಹೋದರರೇ, ನಿಮ್ಮಲ್ಲಿ ಯಾರಾದರೂ ಯಾವದೋ ಒಂದು ದೋಷದಲ್ಲಿ ಸಿಕ್ಕಿದರೆ ಅಂಥವನನ್ನು ಆತ್ಮನಿಂದ ನಡಿಸಿಕೊಳ್ಳುವ ನೀವು ಶಾಂತಭಾವದಿಂದ ತಿದ್ದಿ ಸರಿಮಾಡಿರಿ. ನೀನಾದರೋ ದುಷ್ಪ್ರೇರಣೆಗೆ ಒಳಗಾಗದಂತೆ ನಿನ್ನ ವಿಷಯದಲ್ಲಿ ಎಚ್ಚರಿಕೆಯಾಗಿರು. ಒಬ್ಬರು ಮತ್ತೊಬ್ಬರ ಭಾರವನ್ನು ಹೊತ್ತುಕೊಳ್ಳಲಿ; ಹೀಗೆ ಕ್ರಿಸ್ತನ ನಿಯಮವನ್ನು ನೆರವೇರಿಸಿರಿ.**

ಸೆರೆಮನೆಯಲ್ಲಿರುವವರಿಗಾಗಿ

ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ನಾವು ಸೆರೆಯಲ್ಲಿರುವವರನ್ನು ಸ್ವತಃ ನಾವೇ ಅವರೊಂದಿಗೆ ಸೆರೆಮನೆಯಲ್ಲಿದ್ದಂತೆ ಅವರನ್ನು ನೆನಪಿಸಿಕೊಳ್ಳಬೇಕೆಂದು ಓದುತ್ತೇವೆ. ಅದು ಸುಮ್ಮನೆ ಮಾಡುವ ಪ್ರಾರ್ಥನೆಯಲ್ಲ.

**ಇಬ್ರಿಯರಿಗೆ 13:3 ಸೆರೆಯವರ ಸಂಗಡ ನೀವೂ ಜೊತೆ ಸೆರೆಯವರೆಂದು ಭಾವಿಸಿಕೊಂಡು ಅವರನ್ನು ಜ್ಞಾಪಕಮಾಡಿಕೊಳ್ಳಿರಿ. ನಿಮಗೂ ಅನ್ಯಾಯ ಸಂಭವಿಸೀತೆಂದು ತಿಳಿದು ಅನ್ಯಾಯ ಅನುಭವಿಸುವವರನ್ನು ನೆನಸಿರಿ.**

ನಮಗಾಗಿ

ನಮಗಾಗಿ ಪ್ರಾರ್ಥಿಸಿಕೊಳ್ಳುವುದರಲ್ಲಿ ಸ್ವಾರ್ಥವಿಲ್ಲ, ಯಾಕೆಂದರೆ ನಾವು ಆಶೀರ್ವಾದಗಳನ್ನು ಹೊಂದಿಕೊಳ್ಳುವಾಗ ಇತರರಿಗೂ ಆಶೀರ್ವಾದವಾಗುತ್ತೇವೆ.

**1 ಪೂರ್ವ 4:10 ಯಾಬೇಚನು ಇಸ್ರಾಯೇಲ್ ದೇವರಿಗೆ - ನೀನು ನನ್ನನ್ನು ವಿಶೇಷವಾಗಿ ಆಶೀರ್ವದಿಸಿ ನನ್ನ ಪ್ರಾಂತವನ್ನು ವಿಸ್ತರಿಸಿ ನಿನ್ನ ಹಸ್ತದಿಂದ ನನ್ನನ್ನು ಹಿಡಿದು ಯಾವ ವೇದನೆಯೂ ಉಂಟಾಗದಂತೆ ನನ್ನನ್ನು ರಕ್ಷಿಸಬಾರದೇ ಎಂದು ಮೊರೆಯಿಡಲು ದೇವರು ಅವನ ಮೊರೆಯನ್ನು ಲಾಲಿಸಿದನು.**

## ✍ ಸಾರಾಂಶ – ದೇವರ ಆಳವಾದ ಬಯಕೆ

ದೇವರು ಪ್ರತಿಯೊಬ್ಬ ಪುರುಷನನ್ನು, ಸ್ತ್ರೀಯನ್ನು ಮತ್ತು ಮಗುವನ್ನು ಪ್ರೀತಿಸುತ್ತಾರೆ. ಎಲ್ಲರೂ ಆತನನ್ನು ತಿಳಿದುಕೊಳ್ಳಬೇಕೆಂಬುದೇ ಆತನ ಬಯಕೆಯಾಗಿದೆ. ನಾವು ಆತನನ್ನು ಹೆಚ್ಚಾಗಿ ತಿಳಿದುಕೊಂಡತ್ತೆಲ್ಲಾ ಮತ್ತು ಆತನೊಂದಿಗೆ ಹೆಚ್ಚು ಸಮಯ ಕಳೆದಂತೆಲ್ಲಾ ನಮ್ಮ ಸುತ್ತಲಿರುವ ಜನರಿಗಾಗಿ ಆತನ ಹೃದಯದ ಕೂಗು ಏನಾಗಿದೆ ಎಂಬುದನ್ನು ಅರ್ಥಮಾಡಿಕೊಳ್ಳುತ್ತೇವೆ.

ಮಧ್ಯಸ್ಥಿಕೆ ಪ್ರಾರ್ಥನೆಯು ಯೋಬನಿಂದ ಪ್ರಾರಂಭಗೊಂಡಿತು. ಅದು ಅಬ್ರಹಾಮನೊಂದಿಗೆ, ಮೋಶೆಯೊಂದಿಗೆ ಮತ್ತು ಯೆಹೆಜ್ಕೇಲನೊಂದಿಗೆ ಮುಂದುವರೆಯಿತು (ಕೆಲವರ ಹೆಸರನ್ನು ಮಾತ್ರ ತಿಳಿಸುವುದಾದರೆ). ಇಂದು

ಯೇಸು ನಮಗಾಗಿ ಮಧ್ಯಸ್ಥಿಕೆ ಪ್ರಾರ್ಥನೆಯನ್ನು ಮಾಡುತ್ತಿದ್ದಾರೆ. ಅವರು ನಮ್ಮ ಪ್ರಧಾನ ಯಾಜಕರಾಗಿದ್ದಾರೆ, ನಮ್ಮ ವಕೀಲರಾಗಿದ್ದಾರೆ ಮತ್ತು ಯಾವಾಗಲೂ ನಮಗೆ ಒಂದು ಅತ್ಯುತ್ತಮವಾದ ಮಾದರಿಯಾಗಿದ್ದಾರೆ.

ದೈವೀಕ ಸ್ತ್ರೀ ಪುರುಷರು ತಮ್ಮ ಕುಟುಂಬಗಳಿಗಾಗಿ, ತಮ್ಮ ಸ್ನೇಹಿತರುಗಳಿಗಾಗಿ, ತಮ್ಮ ಸಭೆಗಳಿಗಾಗಿ, ತಮ್ಮ ನೆರೆಹೊರೆಗಳಿಗಾಗಿ, ತಮ್ಮ ನಗರಗಳು, ರಾಜ್ಯಗಳು ಮತ್ತು ದೇಶಗಳಿಗೆ ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವ ಅವಶ್ಯಕತೆಯು ಬದಲಾಗಿಲ್ಲ. ನಾವೆಲ್ಲರೂ ದೇವರ ಆಳವಾದ ಬಯಕೆಗೆ ಉತ್ತರಿಸಬೇಕು ಮತ್ತು ಪಾಪಿಗಳಿಗಾಗಿ ಒಡಕಿನಲ್ಲಿ ನಿಂತು, ದೇವರ ಶಕ್ತಿಯನ್ನು ಅವರ ಜೀವಿತಗಳಲ್ಲಿ ಬಿಡುಗಡೆಗೊಳಿಸಬೇಕು.

ನಾವು ಎಲ್ಲಾ ಸಮಯದಲ್ಲೂ, ಸತತವಾಗಿ, ನಮ್ಮ ಸುತ್ತಲಿರುವ ಅಗತ್ಯತೆಗಳಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಲು ಸಮಯ ತೆಗೆದುಕೊಳ್ಳಬೇಕು. ಇಂದು ಕ್ರಿಸ್ತನ ದೇಹಕ್ಕೆ ನೀಡಲಾಗಿರುವ ದೊಡ್ಡ ಕರೆಗಳಲ್ಲಿ ಇದು ಒಂದಾಗಿದೆ - ನಮ್ಮ ಸುತ್ತಲಿರುವ ಜನರ ಬಗ್ಗೆ ಕಾಳಜಿಯಿರಬೇಕು, ಅವರಿಗಾಗಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಾಬೇಕು. ಅವರಿಗಾಗಿ ಪರಿಶುದ್ಧಾತ್ಮನಲ್ಲಿ ಪ್ರಾರ್ಥಿಸಿರಿ, ನಂತರ ನಿಮ್ಮ ಸ್ವಾಭಾವಿಕ ಭಾಷೆಯಲ್ಲಿ ದೇವರು ನಡೆಸುವಂತೆ ಪ್ರಾರ್ಥಿಸಿರಿ.

**ವಿಮರ್ಶೆಗಾಗಿ ಪ್ರಶ್ನೆಗಳು**

1. ಮಧ್ಯಸ್ಥಿಕೆ ಪ್ರಾರ್ಥನೆಯ ಬಗ್ಗೆ ನಿಮ್ಮ ವ್ಯಾಖ್ಯಾನವನ್ನು ಬರೆಯಿರಿ.

2. ಮಧ್ಯಸ್ಥಿಕೆ ಪ್ರಾರ್ಥನೆಯ ಆರು ಪ್ರಾಯೋಗಿಕ ಹಂತಗಳು ಯಾವುವು?

3. ದೇವರು ನಿಮ್ಮನ್ನು ಯಾವ ಮೂರು ಕ್ಷೇತ್ರಗಳಲ್ಲಿ ಮಧ್ಯಸ್ಥಿಕೆ ಪ್ರಾರ್ಥನೆ ಮಾಡಲು ಪ್ರೇರೇಪಿಸುತ್ತಿದ್ದಾರೆ ಎಂಬುದನ್ನು ತಿಳಿಸಿರಿ. ನೀವು ಯಾವ ದೇವರ ವಾಗ್ದಾನಗಳ ಮೇಲೆ ನಿಂತಿದ್ದೀರಿ ಎಂಬುದನ್ನು ತಿಳಿಸಿರಿ.

*ಪಾಠ ಹತ್ತು*

# “ನೀವು ನನ್ನಲ್ಲಿ ನೆಲೆಗೊಳ್ಳುವುದಾದರೆ”

ಯೇಸು ಹೇಳಿದರು,

**ಯೋಹಾನ 15:7 ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು.**

ಇದು ನಮ್ಮ ಪ್ರಾರ್ಥನೆಗಳಿಗೆ ಸಂಬಂಧಿಸಿದಂತೆ ದೇವರು ಮಾಡಿರುವ ಒಂದು ಅದ್ಭುತವಾದ ವಾಗ್ದಾನವಾಗಿದ್ದರೂ ಅದು ಷರತ್ತುಬದ್ಧವಾಗಿದೆ. ನಾವು ಬಯಸುವುದನ್ನು ಏನನ್ನಾದರೂ ಬೇಡಿಕೊಳ್ಳುವದಕ್ಕಿಂತ ಮುಂಚೆ ನಾವು ಆತನಲ್ಲಿ ನೆಲೆಗೊಳ್ಳಬೇಕು ಮತ್ತು ಆತನ ವಾಕ್ಯವು ನಮ್ಮಲ್ಲಿ ನೆಲೆಗೊಳ್ಳಬೇಕು. ನಾವು ಒಂದು ಹೆಜ್ಜೆ ಹಿಂದಕ್ಕೆ ಹೋಗಿ ಈ ಅದ್ಭುತವಾದ ವಾಗ್ದಾನದೊಂದಿಗೆ ಕೊನೆಗೊಳ್ಳುವ ವಚನಭಾಗವನ್ನು ಓದಿಕೊಳ್ಳೋಣ.

**ಯೋಹಾನ 15:4-7 ನೀವು ನನ್ನಲ್ಲಿ ನೆಲೆಗೊಂಡಿರ್ರಿ, ನಾನೂ ನಿಮ್ಮಲ್ಲಿ ನೆಲೆಗೊಂಡಿರುವೆನು. ಕೊಂಬೆಯು ಬಳ್ಳಿಯಲ್ಲಿ ನೆಲೆಗೊಂಡಿರದಿದ್ದರೆ ಹೇಗೆ ತನ್ನಷ್ಟಕ್ಕೆ ತಾನೇ ಫಲಕೊಡಲಾರದೋ ಹಾಗೆಯೇ ನೀವು ನನ್ನಲ್ಲಿ ನೆಲೆಗೊಂಡಿರದಿದ್ದರೆ ಫಲಕೊಡಲಾರಿರಿ.**

**ನಾನು ದ್ರಾಕ್ಷೇ ಬಳ್ಳಿ, ನೀವು ಕೊಂಬೆಗಳು; ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲಕೊಡುವನು; ನೀವು ನನ್ನನ್ನು ಬಿಟ್ಟು ಏನೂ ಮಾಡಲಾರಿರಿ.**

**ಯಾವನು ನನ್ನಲ್ಲಿ ನೆಲೆಗೊಂಡಿರುವದಿಲ್ಲವೋ ಅವನು ಆ ಕೊಂಬೆಯಂತೆ ಹೊರಕ್ಕೆ ಬಿಸಾಡಲ್ಪಟ್ಟು ಒಣಗಿಹೋಗುವನು; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟುಹೋಗುತ್ತವೆ.**

**ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು.**

ನಾವು ವಾಸ್ತವಿಕವಾಗಿ ಹೇಗೆ ಯೇಸುವಿನಲ್ಲಿ ನೆಲೆಗೊಳ್ಳುತ್ತೇವೆ? ಪ್ರತಿದಿನವೂ ಇದನ್ನು ಸಾಧಿಸುವುದು ಹೇಗೆ?

## ಆತನಲ್ಲಿ ನೆಲೆಗೊಳ್ಳುವುದು

ಮೋಶೆಯು ದೇವರನ್ನು ತಿಳಿದಿದ್ದನು. ಮೋಶೆಯು ದೇವರ ಸ್ನೇಹಿತನಾಗಿದ್ದನು. ಇಸ್ರಾಯೇಲಿನ ಜನರು ಇನ್ನೊಂದು ದೇವರನ್ನು - ಬಂಗಾರದ ಬಸವವನ್ನು - ಆರಾಧಿಸಿ ಮಾಡಿದ ಮಹಾಪಾಪದ ನಂತರ ಮೋಶೆಯು ಮಾಡಿದ ಕ್ರಿಯೆಗಳಿಂದ ಅನೇಕ ವಿಷಯಗಳನ್ನು ನಾವು ಕಲಿತುಕೊಳ್ಳಬಹುದು. ಅವನಿಗೆ ಜನರ ಮೇಲಿದ್ದ ಮನೋಭಾವನೆಯು ಖಂಡನೆಯಾಗಿರಲಿಲ್ಲ - ಬದಲಾಗಿ ನಮ್ಮ ತಿಳುವಳಿಕೆಗೆ ಮೀರಿದ ಸಂಕಟವಾಗಿತ್ತು.

ಪಾಪದ ನಿಮಿತ್ತ ದೇವರ ಮಹಿಮೆಯು ಇಸ್ರಾಯೇಲರ ಪಾಳೆಯವನ್ನು ಬಿಟ್ಟು ಹೋಯಿತು. ದೇವರು ಅವರ ಮಧ್ಯೆ ಇರಲು ಆಗಲಿಲ್ಲ, ಒಂದು ವೇಳೆ ಇದ್ದಿದ್ದರೆ ಅವರನ್ನು ಭಸ್ಮ ಮಾಡುತ್ತಿದ್ದರು. ದೇವರು ಬದಲಾಗಿಲ್ಲ. ದೇವರು ಮತ್ತು ಪಾಪವು ಒಟ್ಟಾಗಿರಲು ಸಾಧ್ಯವಿಲ್ಲ. ಅದು ಅವರ ಗುಣಸ್ವಭಾವಕ್ಕೆ ವಿರುದ್ಧವಾಗಿದೆ.

ಕೃಪೆಯಿಂದ ನಮ್ಮ ಪಾಪಗಳು ಮುಚ್ಚಲ್ಪಟ್ಟಿವೆ ಎಂದು ಎಷ್ಟು ಜನರು ತಮ್ಮನ್ನು ಹಾಗೂ ಇತರರನ್ನು ವಂಚಿಸಿಕೊಂಡಿದ್ದಾರೆ? ಅವರು ಏನು ಮಾಡಿದರೂ ಸಹ ದೇವರು ಅವುಗಳನ್ನು ಕ್ಷಮಿಸುತ್ತಾರೆ ಮತ್ತು ಎಲ್ಲವೂ ಮುಂಚಿದ್ದಂತೆಯೇ ನಡೆದುಕೊಂಡು ಹೋಗುತ್ತದೆ ಎಂದುಕೊಳ್ಳುತ್ತಾರೆ. ಇದು ಸತ್ಯವಲ್ಲ. ಯೇಸು ಹೀಗೆ ಹೇಳಿದರು,

**ಮತ್ತಾಯ 6:24a  ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರಮಾಡುವನು.**

**ಪಾಳೆಯದ ಹೊರಗೆ ಬನ್ನಿರಿ**

ಜನರ ಪಾಪದ ನಿಮಿತ್ತ ದೇವರು ಅವರನ್ನು ಬಿಟ್ಟು ಹೋದನು, ತಕ್ಷಣವಾಗಿ ಮೋಶೆಯು ಹಾಗೆಯೇ ಮಾಡಿದನು. ಅವನು ತನ್ನ ಡೇರೆಯನ್ನು ಪಾಳೆಯದ ಹೊರಗೆ ಸ್ಥಳಾಂತರಿಸಿದನು. ಅವನು ತನ್ನನ್ನು ಪಾಪದ ಒಂದು ಭಾಗವಾಗಲು ಅನುಮತಿಸಲಿಲ್ಲ. ಅವನು ಜನರನ್ನು ಪ್ರೀತಿಸದ ಕಾರಣ ಸ್ಥಳಾಂತರಗೊಳ್ಳಲಿಲ್ಲ. ಅವನು ತನ್ನ ನಿತ್ಯಜೀವವನ್ನೇ ಅವರಿಗಾಗಿ ಅಪಾಯಕ್ಕೆ ಗುರಿಮಾಡಿಕೊಂಡಿದ್ದನು. ಅವನು ಸ್ಥಳಾಂತರಗೊಂಡದ್ದಕ್ಕೆ ಕಾರಣ ದೇವರೊಂದಿಗೆ ಮುಕ್ತವಾಗಿ ಮಾತನಾಡಲು ಸಾಧ್ಯವಾಗಲೆಂದು.

**ವಿಮೋ. 33:7a,9.11a  ಮೋಶೆ ಡೇರೆಯನ್ನು ಪಾಳೆಯದ ಹೊರಗೆ ದೂರವಾಗಿ ಹಾಕಿಸುತ್ತಿದ್ದನು.**

**ಮೋಶೆ ಆ ಡೇರೆಯೊಳಕ್ಕೆ ಹೋದ ಕೂಡಲೆ ಮೇಘಸ್ತಂಭವು ಇಳಿದು ಆ ಡೇರೆಯ ಬಾಗಲಲ್ಲಿ ನಿಲ್ಲುತ್ತಿತ್ತು. ಆಗ ಯೆಹೋವನು ಮೋಶೆಯ ಸಂಗಡ ಮಾತಾಡುವನು.**

**ಮನುಷ್ಯರೊಳಗೆ ಒಬ್ಬನು ತನ್ನ ಸ್ನೇಹಿತನೊಡನೆ ಹೇಗೆ ಮಾತಾಡುವನೋ ಹಾಗೆಯೇ ಯೆಹೋವನು ಮೋಶೆಯ ಸಂಗಡ ಮುಖಾಮುಖಿಯಾಗಿ ಮಾತಾಡುತ್ತಿದ್ದನು.**

ಇಂದು ಪಾಪದ ನಿಮಿತ್ತ ದೇವರ ಮಹಿಮೆಯು ಅನೇಕ ವ್ಯಕ್ತಿಗಳನ್ನು, ಕ್ರೈಸ್ತ ಸೇವೆಗಳನ್ನು ಮತ್ತು ಸಭೆಗಳನ್ನು ಬಿಟ್ಟು ಹೋಗಿದೆ. ಮೋಶೆಯ ಹಾಗೆಯೇ ಪಾಳೆಯದ ಹೊರಗೆ ಬರಲು ಇಚ್ಛಿಸುವ ಜನರನ್ನು ದೇವರು ಹುಡುಕುತ್ತಿದ್ದಾರೆ. ದೇವರು ಯಾರು ಎಂಬುದನ್ನು ಅರ್ಥಮಾಡಿಕೊಳ್ಳುವವರನ್ನು, ಪ್ರಾರ್ಥಿಸುವವರನ್ನು ಮತ್ತು ಆತನನ್ನು ಆರಾಧಿಸುವವರನ್ನು ದೇವರು ಹುಡುಕುತ್ತಿದ್ದಾರೆ. ಓಟವನ್ನು ಓಡುವುದಕ್ಕಾಗಿ ಅಡ್ಡಿಪಡಿಸುವಂತಹ ಎಲ್ಲಾ ವಿಷಯಗಳನ್ನು ಬದಿಗಿಟ್ಟಿರುವ ಜನರನ್ನು ದೇವರು ಹುಡುಕುತ್ತಿದ್ದಾರೆ.

**ಇಬ್ರಿಯರಿಗೆ 12:1-4  ಆದಕಾರಣ ಇಷ್ಟುಮಂದಿ ಸಾಕ್ಷಿಯವರು ಮೇಘದೋಪಾದಿಯಲ್ಲಿ ನಮ್ಮ ಸುತ್ತಲು ಇರುವದರಿಂದ ನಮಗೆ ಅಭ್ಯಂತರ**

ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನೂ ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷ್ಯ ಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ.

ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು. ನೀವು ಪಾಪಕ್ಕೆ ವಿರೋಧವಾಗಿ ಹೋರಾಡುವದರಲ್ಲಿ ಪ್ರಾಣಾಪಾಯದ ತನಕ ಇನ್ನೂ ಅದನ್ನು ಎದುರಿಸಲಿಲ್ಲ..

ಒಂದು ಕ್ರಯವನ್ನು ಕಟ್ಟಬೇಕು

ನಾವು ಹೊಸದಾಗಿ ಹುಟ್ಟುವಾಗ ದೇವರೊಂದಿಗೆ ಒಂದೇ ಆತ್ಮವಾಗುತ್ತೇವೆ.

**1 ಕೊರಿಂಥ 6:17** ಕರ್ತನ ಸಂಸರ್ಗದಲ್ಲಿರುವವನಾದರೋ ಆತನೊಂದಿಗೆ ಒಂದೇ ಆತ್ಮವಾಗಿದ್ದಾನೆ.

ದೇವರೊಂದಿಗೆ ಒಂದೇ ಆತ್ಮವಾಗುವುದಕ್ಕೆ ಒಂದು ಕ್ರಯವನ್ನು ಕಟ್ಟಬೇಕು - ಆತನಲ್ಲಿ ನೆಲೆಗೊಳ್ಳುವುದು.

ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ ಎಂದು ಅಪೋಸ್ತಲನಾದ ಪೌಲನು ಹೇಳುತ್ತಾನೆ.

**2 ಕೊರಿಂಥ 6:16,17** ದೇವರ ಮಂದಿರಕ್ಕೂ ವಿಗ್ರಹಗಳಿಗೂ ಒಪ್ಪಿಗೆ ಏನು? ನಾವು ಜೀವಸ್ವರೂಪನಾದ ದೇವರ ಮಂದಿರವಾಗಿದ್ದೇವಲ್ಲಾ. ಇದರ ಸಂಬಂಧವಾಗಿ ದೇವರು ನಾನು ಅವರಲ್ಲಿ ವಾಸಿಸುತ್ತಾ ತಿರುಗಾಡುವೆನು, ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು ಎಂದು ಹೇಳಿದ್ದಾನೆ. ಆದದರಿಂದ ಅನ್ಯಜನರ ಮಧ್ಯದಲ್ಲಿಂದ ಹೊರಟು ಬಂದು ಪ್ರತ್ಯೇಕವಾಗಿರಿ; ಅಶುದ್ಧವಾದ ಯಾವದನ್ನೂ ಮುಟ್ಟದಿರಿ ಎಂದು ಕರ್ತನು ಹೇಳುತ್ತಾನೆ.”

ಪ್ರಾರ್ಥನೆಯ ಮಾದರಿಯೇನು? ನಾವು ಸತತವಾಗಿ ಪ್ರಾರ್ಥಿಸುವುದನ್ನು ಹಾಗೂ ನಮ್ಮ ಮಾತುಗಳು ಕೊಂಚವಾಗಿಟ್ಟುಕೊಳ್ಳುವದನ್ನು ಒಟ್ಟಿಗೆ ಹೇಗೆ ಮಾಡುವುದು? ನಾವು ನಿಂತುಕೊಳ್ಳಬೇಕೋ, ಮೊಣಕಾಲೂರಬೇಕೋ, ಕಣ್ಣುಗಳನ್ನು ಮುಚ್ಚಿಕೊಳ್ಳಬೇಕೋ? "ಕರ್ತನೇ, ನಾವು ಹೇಗೆ ಪ್ರಾರ್ಥನೆ ಮಾಡಬೇಕೆಂಬುದನ್ನು ನೀವೇ ನಮಗೆ ತೋರಿಸಿಕೊಡಿರಿ!"

## ದೈಹಿಕ ಭಂಗಿ

ನಮ್ಮ ದೈಹಿಕ ಭಂಗಿಯು ಮುಖ್ಯವಲ್ಲ. ನಾವು ನಿಂತುಕೊಳ್ಳಬಹುದು, ಹೆಜ್ಜೆ ಹಾಕಬಹುದು, ಮೊಣಕಾಲೂರಬಹುದು ಅಥವಾ ಅಡ್ಡಬೀಳಬಹುದು. ನಾವು ಕಣ್ಣುಗಳನ್ನು ಮುಚ್ಚಿಕೊಳ್ಳಬಹುದು ಅಥವಾ ತೆರೆಯಬಹುದು. ನಾವು ನಮ್ಮ ನೋಟ್ ಬುಕ್ ನೊಂದಿಗೆ ಮೇಜಿನ ಮುಂದೆ ಕುಳಿತುಕೊಳ್ಳಬಹುದು. ನಾವು ಕತ್ತಲೆ ಕೋಣೆಗೆ ಹೋಗಬಹುದು. ನಾವು ಗಟ್ಟಿಯಾದ ಸ್ವರದಿಂದ ಪ್ರಾರ್ಥಿಸಬಹುದು. ನಾವು ಮೌನವಾಗಿ ಪ್ರಾರ್ಥಿಸಬಹುದು. ನಾವು ಗಂಟೆಗಟ್ಟಲೆ ಅಥವಾ ಕೆಲವು ನಿಮಿಷಗಳು ಪ್ರಾರ್ಥಿಸಬಹುದು.

ದೇವರು ವಿಭಿನ್ನತೆಯ ದೇವರಾಗಿದ್ದಾರೆ! ನನಗೆ ಸರಿ ಕಾಣುವುದು ನಿಮಗೆ ಸರಿ ಕಾಣದೆ ಇರಬಹುದು. ಇಂದು ಸರಿ ಅನ್ನಿಸುವಂತದ್ದು ನಾಳೆ ಸರಿ ಅನ್ನಿಸದೆ ಇರಬಹುದು. ನಾವು ಮಧ್ಯಸ್ಥಿಕೆ ಪ್ರಾರ್ಥನೆ ಮಾಡುವಾಗ ಒಂದು ಭಂಗಿಯು ಸೂಕ್ತವೆನಿಸಬಹುದು ಆದರೆ ಯುದ್ಧದ ಪ್ರಾರ್ಥನೆ ಮಾಡುವಾಗ ಇನ್ನೊಂದು ಭಂಗಿ ಸೂಕ್ತವೆನಿಸಬಹುದು.

ನಿಮ್ಮನ್ನು ನೀವೇ ಒಂದು ಪೆಟ್ಟಿಗೆಯೊಳಗೆ ಕೂಡಿ ಹಾಕಬೇಡಿರಿ! ನಿಮಗೆ ಕೋಣೆಯೊಳಗೆ ಮಾತ್ರ ಪ್ರಾರ್ಥಿಸುವ ರೂಢಿಯಿರುವುದಾದರೆ ಒಂದು ವೇಳೆ ಟ್ರಾಫಿಕ್ ನಲ್ಲಿ ಸಿಲುಕಿಕೊಂಡಾಗ ಅಥವಾ ಮನೆಯನ್ನು ಶುಚಿಗೊಳಿಸುವಾಗ ಸಿಕ್ಕುವ ಆ ಅದ್ಭುತವಾದ ಪ್ರಾರ್ಥನಾ ಸಮಯವನ್ನು ಕಳೆದುಕೊಳ್ಳುವಿರಿ.

ನಮ್ಮ ಪೂರ್ಣ ಹೃದಯದಿಂದ ಪ್ರಾರ್ಥಿಸುವ ಉದ್ದೇಶಕ್ಕಾಗಿ ನಮ್ಮ ದೈಹಿಕ ಭಂಗಿಯು ಮುಖ್ಯವಷ್ಟೆ. ನಮ್ಮ ದೇಹವು ನಮ್ಮ ಆತ್ಮಗಳನ್ನು ಆಳಲು ಬಿಡಬಾರದು.

## ಆತನ ಪ್ರಸನ್ನತೆಯಲ್ಲಿ ಪ್ರವೇಶಿಸಿರಿ

ನಾವು ಆರಾಧನೆಯಲ್ಲಿ ಪ್ರವೇಶಿಸುವಂತೆಯೇ ಪ್ರಾರ್ಥನೆಯಲ್ಲಿ ಪ್ರವೇಶಿಸುತ್ತೇವೆ - ನಾವು ದೇವಾಲಯವನ್ನು ನಮ್ಮ ಮಾದರಿಯಾಗಿಸಿಕೊಂಡು ಆತನ ಸನ್ನಿಧಾನಕ್ಕೆ ಬರುತ್ತೇವೆ. ದಾವೀದನು ದೇವರ ಸನ್ನಿಧಾನಕ್ಕೆ ಬರುವ ಹೆಜ್ಜೆಗಳನ್ನು ವರ್ಣಿಸುತ್ತಾನೆ.

**ಕೀರ್ತನೆ 100:4 ಕೃತಜ್ಞತಾಸ್ತುತಿಯೊಡನೆ ಆತನ ಮಂದಿರದ್ವಾರಗಳಿಗೂ ಕೀರ್ತನೆಯೊಡನೆ ಆತನ ಅಂಗಳಗಳಿಗೂ ಬನ್ನಿರಿ. ಆತನ ಉಪಕಾರ ಸ್ಮರಿಸಿರಿ; ಆತನ ನಾಮವನ್ನು ಕೊಂಡಾಡಿರಿ.**

ನಾವು ಕೃತಜ್ಞತಾಸ್ತುತಿಯೊಡನೆ ಆತನ ಮಂದಿರದ ದ್ವಾರಗಳ ಬಳಿಯಲ್ಲಿ ನಿಂತುಕೊಳ್ಳಬಹುದು ಅಥವಾ ಕೀರ್ತನೆಯೊಡನೆ ಆತನ ಅಂಗಳಕ್ಕೆ ಪ್ರವೇಶಿಸಬಹುದು. ನಾವು ಆತನ ನಾಮವನ್ನು ಕೊಂಡಾಡುವಾಗ ದೇವರ ಸಿಂಹಾಸನವಿರುವ ಅತೀ ಪರಿಶುದ್ಧ ಸ್ಥಳವನ್ನೂ ಪ್ರವೇಶಿಸಬಹುದು. ನಮ್ಮ ವಿಜ್ಞಾಪನೆಗಳು, ನಮ್ಮ ಅಗತ್ಯತೆಗಳು, ನಮ್ಮ ಬಿನ್ನಹಗಳು ನಾವು ಆತನಿಗೆ ಕೃತಜ್ಞತೆಯನ್ನು ಸಲಿಸುವಾಗಲೂ ಮತ್ತು ಸ್ತುತಿ ಮಾಡುವಾಗಲೂ ನಮ್ಮ ಮನಸ್ಸಿನಲ್ಲಿಯೇ ಇರುತ್ತವೆ ಆದರೆ ನಾವು ದೇವರ ಸಿಂಹಾಸನದ ಮುಂದೆ ಬರುವಾಗ ಆತನು ಯಾರಾಗಿದ್ದಾನೋ ಅದನ್ನು ನೆನಸಿ ಆತನನ್ನು ಆರಾಧಿಸುವಾಗ ನಮ್ಮ ಅಗತ್ಯತೆಗಳೆಲ್ಲಾ ಮರೆತುಹೋಗುತ್ತದೆ.

ನಾವು ದೇವರ ಸನ್ನಿಧಾನದಲ್ಲಿ ಎಷ್ಟು ಸಮೀಪ ಬರಲು ಬಯಸಿದರೂ ಬರಬಹುದಾಗಿದೆ - ಆದರೆ ಆತನ ಪ್ರಸನ್ನತೆಯಲ್ಲಿ ಪಾಪವಿರಲಾರದು.

ನಾವು ಹೇಗೆ ಕೃತಜ್ಞತಾಸ್ತುತಿಯನ್ನು ಸಲ್ಲಿಸಬಹುದು? ನಾವು ಹೇಗೆ ಸ್ತುತಿ ಕೀರ್ತನೆಯನ್ನು ಸಲ್ಲಿಸುವುದು? ನಾವು ಹೇಗೆ ಆತನನ್ನು ಆರಾಧಿಸುವುದು? ನೀವು ಮುಂದಿನ ಭಾಗಗಳನ್ನು ಅಧ್ಯಯನ ಮಾಡುವಾಗ ನಿಮ್ಮ ಆತ್ಮವು ದೇವರನ್ನು ಸಮೀಪಿಸಲಿ. ಕೃತಜ್ಞತೆ, ಸ್ತುತಿ ಮತ್ತು ಆರಾಧನೆಯನ್ನು ಅನುಭವಿಸುವುದರ ಮೂಲಕ ಕಲಿತುಕೊಳ್ಳಿರಿ.

**ಕೃತಜ್ಞತಾ ಸ್ತುತಿ**

ಕೃತಜ್ಞತಾ ಸ್ತುತಿ ಅಂದರೆ ವಂದನೆಯನ್ನು ಹೇಳುವುದು; ಉಪಕಾರವನ್ನು ನೆನಪಿಸಿಕೊಳ್ಳುವುದು; ದೇವರು ಮಾಡಿರುವಂತದಕ್ಕಾಗಿ ಉಪಕಾರಸ್ತುತಿ ಮಾಡುವುದು. ಅದು ದೇವರು ತಮ್ಮ ಮೇಲೆ ಹಾಗೂ ಇತರೆ ವಿಶ್ವಾಸಿಗಳ ಮೇಲೆ ಸುರಿಸಿರುವ ಎಲ್ಲಾ ಉಪಕಾರಗಳಿಗಾಗಿ ಮತ್ತು ಆಶೀರ್ವಾದಗಳಿಗಾಗಿ ಹೃದಯ ತುಂಬಿ ಉಕ್ಕುವ ಆನಂದವಾಗಿದೆ. ಕೃತಸ್ತುತಿ ಮಾಡುವುದು ಒಂದು ರೀತಿಯಲ್ಲಿ ದೇವರಲ್ಲಿ ನೆಲೆಗೊಳ್ಳುವಂತದ್ದಾಗಿದೆ.

ಕೃತಜ್ಞತಾಸ್ತುತಿ ಮಾಡುವುದು ದೇವರನ್ನು ಹಗುರವಾಗಿ ತೆಗೆದುಕೊಳ್ಳುವುದಲ್ಲ. ಯಾರೋ ಒಬ್ಬ ವಿಶ್ವಾಸಿಯು ಹೀಗೆ ಹೇಳಿದ್ದಾರೆ, "ಪ್ರಾರ್ಥನೆಗೆ ಉತ್ತರ ಸಿಕ್ಕುವಾಗ ಸ್ತುತಿಸಲು ಮತ್ತು ಕೃತಜ್ಞತೆ ಸಲ್ಲಿಸಲು ಮರೆಯಬೇಡ. ಮೇಲ್ನೋಟಕ್ಕೆ ಜಯಿಸಲ್ಪಟ್ಟಿರುವ ವೈರಿಯು ಕೃತಜ್ಞತೆಯಿಲ್ಲದ ಹೃದಯದ ಬಾಗಿಲ ಬಳಿ ಮತ್ತೊಮ್ಮೆ ಬಂದು ನಿಂತಿರುತ್ತಾನೆ!"

ಅಪೋಸ್ತಲನಾದ ಪೌಲನು ಹೀಗೆ ಬರೆದನು,
**2 ಕೊರಿಂಥ 9:15** ವರ್ಣಿಸಲಶಕ್ಯವಾದ ದೇವರ ವರಕ್ಕಾಗಿ ಆತನಿಗೆ ಸ್ತೋತ್ರ!

ದಾವೀದನೊಂದಿಗೆ ಕೃತಜ್ಞತೆಯುಳ್ಳವರಾಗಿರ್ರಿ. ಅವನು ಹೀಗೆ ಬರೆದನು,
**ಕೀರ್ತನೆ 118:1 ಯೆಹೋವನಿಗೆ ಕೃತಜ್ಞತಾಸ್ತುತಿಮಾಡಿರಿ; ಆತನು ಒಳ್ಳೆಯವನು. ಆತನ ಕೃಪೆಯು ಶಾಶ್ವತವು.**

**ಕೀರ್ತನೆ 107:8 ಅವರು ಯೆಹೋವನ ಕೃಪೆಗೋಸ್ಕರವೂ ಆತನು ಮಾನವರಿಗಾಗಿ ನಡಿಸಿದ ಅದ್ಭುತಗಳಿಗೋಸ್ಕರವೂ ಆತನನ್ನು ಕೊಂಡಾಡಲಿ!**

ನಾವು ದುಃಖದ ಸಮಯದಲ್ಲಿ ದೇವರ ಕೃಪೆಯ ಮೂಲಕ ಆತನಿಗೆ ಕೃತಜ್ಞತೆ ಸಲ್ಲಿಸಬಹುದು. ನಾವು ಕಷ್ಟಕರವಾದ ಶೋಧನೆಗಳನ್ನು ಎದುರಿಸುವಾಗ ಯೇಸುವನ್ನು ಸ್ತುತಿಸಬಹುದು ಮತ್ತು ಯೇಸುವಿಗೆ ಕೃತಜ್ಞತೆ ಸಲ್ಲಿಸಬಹುದು. ಅಪೋಸ್ತಲನಾದ ಪೇತ್ರನು ಹೀಗೆ ಬರೆದನು,

**1 Peter 1:6,7** ನೀವು ಸದ್ಯಕ್ಕೆ ಸ್ವಲ್ಪಕಾಲ ದೇವರ ಚಿತ್ತಾನುಸಾರ ನಾನಾ ಕಷ್ಟಗಳಲ್ಲಿದ್ದು ದುಃಖಿಸುವವರಾಗಿದ್ದರೂ ಆ ಪದವಿಯನ್ನು ಆಲೋಚಿಸಿ ಹರ್ಷಿಸುವವರಾಗಿದ್ದೀರಿ. 7ಬಂಗಾರವು ನಾಶವಾಗುವಂಥದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟಾಹಾಕಿ ಶೋಧಿಸುವದುಂಟಷ್ಟೆ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟುಮಾಡುವದು.

ಕೃತಜ್ಞತೆ ಸಲ್ಲಿಸುವುದು ನಮ್ಮನ್ನು ನಂಬಿಕೆಯಿಂದಲೂ ಧೈರ್ಯದಿಂದಲೂ ತುಂಬಿಸುತ್ತದೆ. ಕೃತಜ್ಞತಾಸ್ತುತಿಯಲ್ಲಿ ಸಮಯ ಕಳೆಯಲು ಇರುವ ಒಂದು ಉತ್ತಮವಾದ ಮಾರ್ಗವು ಕೀರ್ತನೆಗಳನ್ನು ದೇವರಿಗೆ ಪ್ರಾರ್ಥನೆಗಳಾಗಿ ಓದಿರಿ.

## ಸ್ತುತಿ

ದೇವರಲ್ಲಿ ನೆಲೆಗೊಳ್ಳಲು ಇರುವ ಇನ್ನೊಂದು ಮಾರ್ಗವು ಆತನಿಗೆ ಸ್ತುತಿಯನ್ನು ಸಲ್ಲಿಸುವುದಾಗಿದೆ. ಸ್ತುತಿಯು - ಮೆಚ್ಚುಗೆ, ಹೊಗಳಿಕೆ, ಪ್ರಶಂಸೆಯನ್ನು ವ್ಯಕ್ತಪಡಿಸುವುದಾಗಿದೆ. ದೇವರು ಮಾಡಿರುವ ಕಾರ್ಯಗಳಿಗಾಗಿ ಆತನನ್ನು ಘನಪಡಿಸುವುದು ಅಥವಾ ಮಹಿಮೆಪಡಿಸುವುದು ಎಂದರ್ಥ.

ಸ್ತುತಿಯು ಎಷ್ಟು ಪ್ರಾಮುಖ್ಯವಾದದ್ದೆಂಬುದನ್ನು ದಾವೀದನು ಅರ್ಥಮಾಡಿಕೊಂಡಿದ್ದನು ಯಾಕೆಂದರೆ ಅವನು ದೇವರನ್ನು ಸ್ತುತಿಸುವವನಾಗಿದ್ದನು. ಈಗ ನಾವು ದಾವೀದನೊಂದಿಗೆ ದೇವರನ್ನು ಸ್ತುತಿಸುವುದರಲ್ಲಿ ಸಮಯವನ್ನು ಕಳೆಯೋಣ,

**ಯಾಹುವಿಗೆ ಸ್ತೋತ್ರ!**

**ಯೆಹೋವನಾಮವನ್ನು ಸ್ತುತಿಸಿರಿ.**

**ಯೆಹೋವನ ಸೇವಕರೇ, ಯೆಹೋವನ ಮಂದಿರದಲ್ಲಿಯೂ ನಮ್ಮ ದೇವರ ಆಲಯದ ಅಂಗಳಗಳಲ್ಲಿಯೂ ಸೇವೆಮಾಡುವವರೇ, ಆತನನ್ನು ಕೀರ್ತಿಸಿರಿ. ಕೀರ್ತನೆ 135:1**

**ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು; ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು. ಕೀರ್ತನೆ 34:1**

**ನಾವೋ ಇಂದಿನಿಂದ ಸದಾಕಾಲವೂ ಯಾಹುವನ್ನು ಕೊಂಡಾಡುವೆವು. ಯಾಹುವಿಗೆ ಸ್ತೋತ್ರ! ಕೀರ್ತನೆ 115:18**

ಅವರು ಯೆಹೋವನ ಕೃಪೆಗೋಸ್ಕರವೂ ಆತನು ಮಾನವರಿಗಾಗಿ ನಡಿಸಿದ ಅದ್ಭುತಗಳಿಗೋಸ್ಕರವೂ ಆತನನ್ನು ಕೊಂಡಾಡಲಿ. ನೆರೆದ ಸಭೆಯಲ್ಲಿ ಆತನನ್ನು ಕೀರ್ತಿಸಲಿ; ಹಿರಿಯರ ಕೂಟದಲ್ಲಿ ಕೊಂಡಾಡಲಿ. **ಕೀರ್ತನೆ 107:31,32**

ಭೂಮ್ಯಾಕಾಶಗಳೂ ಸಮುದ್ರಗಳೂ ಜಲಚರಗಳೂ ಆತನನ್ನು ಕೊಂಡಾಡಲಿ. **ಕೀರ್ತನೆ 69:34**

ಯಾಹುವಿಗೆ ಸ್ತೋತ್ರ!
ಆಕಾಶಮಂಡಲದಿಂದ ಯೆಹೋವನಿಗೆ ಸ್ತುತಿಯುಂಟಾಗಲಿ;
ಮಹೋನ್ನತದಲ್ಲಿ ಆತನ ಸ್ತೋತ್ರವು ಕೇಳಿಸಲಿ.
ಆತನ ಎಲ್ಲಾ ದೂತರೇ, ಆತನನ್ನು ಸ್ತುತಿಸಿರಿ;
ಆತನ ಎಲ್ಲಾ ಸೈನ್ಯಗಳೇ, ಆತನನ್ನು ಸ್ತುತಿಸಿರಿ.
ಸೂರ್ಯಚಂದ್ರರೇ, ಆತನನ್ನು ಸ್ತುತಿಸಿರಿ;
ಹೊಳೆಯುವ ಎಲ್ಲಾ ನಕ್ಷತ್ರಗಳೇ, ಆತನನ್ನು ಸ್ತುತಿಸಿರಿ.
ಉನ್ನತೋನ್ನತವಾದ ಆಕಾಶವೇ,
ಅದರ ಮೇಲಿರುವ ಜಲರಾಶಿಗಳೇ, ಆತನನ್ನು ಸ್ತುತಿಸಿರಿ.
ಅವು ಯೆಹೋವನ ನಾಮವನ್ನು ಸ್ತುತಿಸಲಿ;
ಆತನು ಅಪ್ಪಣೆಕೊಡಲು ಅವು ಉಂಟಾದವು. **ಕೀರ್ತನೆ 148:1-5**

ಯಾಹುವಿಗೆ ಸ್ತೋತ್ರ!
ದೇವರನ್ನು ಆತನ ಪರಿಶುದ್ಧಾಲಯದಲ್ಲಿ ಸ್ತುತಿಸಿರಿ;
ಆತನ ಶಕ್ತಿಪ್ರದರ್ಶಕವಾದ ಆಕಾಶಮಂಡಲದಲ್ಲಿ ಆತನನ್ನು ಸ್ತುತಿಸಿರಿ.
ಆತನ ಮಹತ್ಕಾರ್ಯಗಳಿಗಾಗಿ ಆತನನ್ನು ಸ್ತುತಿಸಿರಿ;
ಆತನ ಮಹಾಪ್ರಭಾವಕ್ಕೆ ಸರಿಯಾಗಿ ಆತನನ್ನು ಸ್ತುತಿಸಿರಿ.
ಕೊಂಬೂದುತ್ತಾ ಆತನನ್ನು ಸ್ತುತಿಸಿರಿ;
ಸ್ವರಮಂಡಲಕಿನ್ನರಿಗಳಿಂದ ಆತನನ್ನು ಸ್ತುತಿಸಿರಿ.
ದಮ್ಮಡಿಬಡಿಯುತ್ತಾ ಕುಣಿಯುತ್ತಾ ಆತನನ್ನು ಸ್ತುತಿಸಿರಿ;
ತಂತೀವಾದ್ಯಗಳಿಂದಲೂ ಕೊಳಲುಗಳಿಂದಲೂ ಆತನನ್ನು ಸ್ತುತಿಸಿರಿ.
ತಾಳದಿಂದ ಆತನನ್ನು ಸ್ತುತಿಸಿರಿ;
ಝಲ್ಲರಿಯಿಂದ ಆತನನ್ನು ಸ್ತುತಿಸಿರಿ.
ಶ್ವಾಸವಿರುವದೆಲ್ಲವೂ ಯೆಹೋವನನ್ನು ಸ್ತುತಿಸಲಿ;
ಯಾಹುವಿಗೆ ಸ್ತೋತ್ರ! **ಕೀರ್ತನೆ 150:1-6**

ಆರಾಧನೆ ಎಂದರೆ ಈ ಭೂಮಿಯಲ್ಲಿ ನಾವು ಸಾಧ್ಯವಾದಷ್ಟು ಉನ್ನತ ಮಟ್ಟಕ್ಕೆ ಆತನಲ್ಲಿ ನೆಲೆಗೊಳ್ಳುವುದಾಗಿದೆ. ನಾವು ದೇವರ ಸನ್ನಿಧಿಗೆ ಬರುವುದೇ ಆರಾಧನೆಯಾಗಿದೆ. ಆತನ ಸಿಂಹಾಸನದ ಮುಂದೆ ಬರುವುದೇ ಆರಾಧನೆ.

ಆರಾಧನೆ ಅಂದರೆ ನಮ್ಮ ಅಂತರಾತ್ಮವು ಅತ್ಯಂತ ದೀನತೆಯಿಂದ ಹಾಗೂ ಭಯಭಕ್ತಿಯಿಂದ ದೇವರ ಮುಂದೆ ತಲೆಬಾಗುವುದಾಗಿದೆ. ನಿಜವಾದ ಆರಾಧನೆಯು ಪ್ರೀತಿ ತುಂಬಿದ ಹೃದಯದಿಂದಲೂ ಹಾಗೂ ದೇವರು ಯಾರಾಗಿದ್ದಾನೆ ಎಂಬದನ್ನು ಗೌರವಿಸುವ ಹೃದಯದಿಂದಲೂ ಬರುವಂತದ್ದಾಗಿದೆ.

ನಾವು ದೇವರನ್ನು ಆರಾಧಿಸುವಾಗ ದೇವರ ಯೋಗ್ಯತೆಗೆ ಮತ್ತು ಆತನ ಸರ್ವಶ್ರೇಷ್ಠ ಮಾಲ್ಯಕ್ಕೆ ಭಯಭಕ್ತಿಯನ್ನು ಸಲ್ಲಿಸುವವರಾಗಿದ್ದೇವೆ. ನಾವು ದೇವರನ್ನು ಆರಾಧಿಸುವಾಗ, ಆತನ ಗುಣವನ್ನು ಕೊಂಡಾಡುತ್ತೇವೆ ಮತ್ತು ಆತನ ಹೆಸರಿನ ಘನತೆಯನ್ನು ಸನ್ಮಾನಿಸುತ್ತೇವೆ. ದಾವೀದನು ಬರೆದದ್ದನ್ನು ನಾವು ಒಪ್ಪುತ್ತೇವೆ,

**ಕೀರ್ತನೆ 34:1,3 ನಾನು ಯೆಹೋವನನ್ನು ಎಡೆಬಿಡದೆ ಕೊಂಡಾಡುವೆನು; ಆತನ ಸ್ತೋತ್ರವು ಯಾವಾಗಲೂ ನನ್ನ ಬಾಯಲ್ಲಿ ಇರುವದು... ನನ್ನೊಡನೆ ಯೆಹೋವನನ್ನು ಕೊಂಡಾಡಿರಿ; ನಾವು ಒಟ್ಟಾಗಿ ಆತನ ಹೆಸರನ್ನು ಘನಪಡಿಸೋಣ.**

**ಕೀರ್ತನೆ 148:13 ಯೆಹೋವನನ್ನು ಕೊಂಡಾಡಲಿ. ಆತನ ನಾಮವೊಂದೇ ಮಹತ್ವವುಳ್ಳದ್ದು; ಆತನ ಪ್ರಭಾವವು ಭೂಮ್ಯಾಕಾಶಗಳಲ್ಲಿ ಮೆರೆಯುತ್ತದೆ.**

**ಕೀರ್ತನೆ 8:1 ನಮ್ಮ ಕರ್ತನಾದ ಯೆಹೋವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು. ಆಕಾಶಮಂಡಲದಲ್ಲಿ ನಿನ್ನ ವೈಭವವನ್ನು ಪ್ರಕಾಶಪಡಿಸಿದ್ದೀ!**

ಆರಾಧನೆಯು ಬಹಳ ಮಧುರವಾಗಿರಲು ಸಾಧ್ಯವಿದೆ. ನಾವು ಕರ್ತನಾದ ಯೇಸುವಿಗೆ ಸ್ತುತಿಗಳನ್ನು ಅರ್ಪಿಸಬಹುದು, ಆತನು ತನ್ನ ಅತ್ಯಮೂಲ್ಯವಾದ ರಕ್ತದಿಂದ ನಮ್ಮನ್ನು ದೇವರಿಗಾಗಿ ವಿಮೋಚಿಸಿದರು. ನಾವು ಆತನನ್ನು ಆರಾಧಿಸುವಾಗ ಪರಲೋಕಸೈನ್ಯದೊಂದಿಗೆ ನಾವೂ ಸಹ ಆತನ ಮುಂದೆ ಅಡ್ಡಬಿದ್ದು ಇದನ್ನು ಹೇಳಬಹುದು,

**ಪ್ರಕಟನೆ 5:12b "ವಧಿತನಾದ ಕುರಿಯಾದಾತನು ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ ಮಾನ ಪ್ರಭಾವ ಸ್ತೋತ್ರಗಳನ್ನು ಹೊಂದುವದಕ್ಕೆ ಯೋಗ್ಯನು!"**

ನಾವು ಮಾತಿಲ್ಲದೆಯೂ ದೇವರನ್ನು ಆರಾಧಿಸಬಹುದು. ನಾವು ಮೌನವಾಗಿದ್ದು ದೇವರ ಶ್ರೇಷ್ಠತೆಯನ್ನು ಮತ್ತು ಘನತೆಯನ್ನು ಧ್ಯಾನಿಸಬಹುದು! ಯೋಬನ ಗ್ರಂಥದಲ್ಲಿ ಹೀಗೆ ಓದುತ್ತೇವೆ,

**ಯೋಬ 37:14 "ಯೋಬನೇ, ಇದನ್ನು ಕೇಳು! ಸುಮ್ಮನೆ ನಿಂತು ದೇವರ ಅದ್ಭುತಕಾರ್ಯಗಳನ್ನು ಧ್ಯಾನಿಸು."**

ನಾವು ದೇವರ ಸೃಷ್ಟಿಯ ಅದ್ಭುತಗಳ ಮೂಲಕ ಆತನನ್ನು ಆರಾಧಿಸಬಹುದು. ಬಲವಾದ ಪರ್ವತಗಳು, ಸಮುದ್ರದ ಘರ್ಜಿಸುವ ಅಲೆಗಳು, ರಾತ್ರಿಯ ಆಕಾಶವನ್ನು ಅಲಂಕರಿಸುವ ನಕ್ಷತ್ರಗಳ ಸೈನ್ಯಗಳನ್ನು ಕಂಡು ನಾವು ಆಶ್ಚರ್ಯಪಡಬಹುದು, ಅದರ ಅಂದ ಎಷ್ಟು ಅದ್ಭುತವಾಗಿದೆಯೆಂದರೆ ಈ ಜಗತ್ಪ್ರಸಿದ್ಧವಾದ ಹಾಡನ್ನು ಅದು ಪ್ರೇರೇಪಿಸಿದೆ,

*O Lord my God,*
*When I in awesome wonder,*
*Consider all the world Thy hands have made;*
*I see the stars,*
*I hear the roaring thunder,*
*Thy power throughout the universe displayed,*
*Then sings my soul, my Savior God to Thee;*
*How Great Thou art! How great Thou art!*

*ಕೃತಜ್ಞತಾಸ್ತುತಿ ಮತ್ತು ಆರಾಧನೆಯ ಮೇಲಿನ ಭಾಗಗಳನ್ನು ಭಾಗಶಃವಾಗಿ **ಮೀಟಿಂಗ್ ವಿತ್ ಗಾಡ್ - ಪ್ರೆಯರ್ಸ್ ಡೀಪೆಸ್ಟ್ ಮೀನಿಂಗ್, ವಿಲ್ಲಿಯಮ್ ಮಾಂಬೊಲಿಯೊ** - ದಿಂದ ತೆಗೆದುಕೊಳ್ಳಲಾಗಿದೆ.*

## ಪ್ರಾರ್ಥನೆ ಮತ್ತು ಸ್ತುತಿಯ ಬಲ

ನಾವು ಎರಡು ವಿಷಯಗಳನ್ನು ನಿರಂತರವಾಗಿ ಮಾಡಬೇಕೆಂದು ಆಜ್ಞಾಪಣೆ ಹೊಂದಿದ್ದೇವೆ. ನಾವು ನಿರಂತರವಾಗಿ ಪ್ರಾರ್ಥಿಸಬೇಕು ಮತ್ತು ನಿರಂತರವಾಗಿ ದೇವರನ್ನು ಸ್ತುತಿಸಬೇಕು.

ಯೇಸು ಹೀಗೆ ಹೇಳಿದರು,
**ಲೂಕ 18:1b ... ಬೇಸರಗೊಳ್ಳದೆ ಯಾವಾಗಲೂ ಪ್ರಾರ್ಥನೆ ಮಾಡುತ್ತಿರಬೇಕೆಂಬದಕ್ಕೆ ...**

**ಲೂಕ 21:36a … ಎಲ್ಲಾ ಕಾಲದಲ್ಲಿಯೂ ದೇವರಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತಾ ಎಚ್ಚರವಾಗಿರ್ರಿ ...**

ಪೌಲನು ಹೀಗೆ ಬರೆದನು,
**ರೋಮಾ 1:9b ... ನಾನು ಪ್ರಾರ್ಥನೆ ಮಾಡುವಾಗೆಲ್ಲಾ ತಪ್ಪದೆ ನಿಮಗೋಸ್ಕರ ವಿಜ್ಞಾಪನೆಮಾಡಿ …**

**1 ಥೆಸಲೋನಿಕ 2:13a … ನಾವಂತೂ ಎಡೆಬಿಡದೆ ದೇವರಿಗೆ ಕೃತಜ್ಞತಾಸ್ತುತಿ ಮಾಡುತ್ತೇವೆ.**

**2 ತಿಮೊಥಿ 1:3b ... ನಾನು ಹಗಲಿರುಳು ನನ್ನ ಪ್ರಾರ್ಥನೆಗಳಲ್ಲಿ ನಿನ್ನನ್ನು ತಪ್ಪದೆ ಜ್ಞಾಪಿಸಿಕೊಳ್ಳುತ್ತೇನೆ.**

**2 ಥೆಸಲೋನಿಕ 1:11a … ನಿಮಗೋಸ್ಕರ ಯಾವಾಗಲೂ ಪ್ರಾರ್ಥನೆಮಾಡಿ ...**

**1 ಥೆಸಲೋನಿಕ 5:16-18 ಯಾವಾಗಲೂ ಸಂತೋಷಿಸಿರಿ; ಎಡೆಬಿಡದೆ ಪ್ರಾರ್ಥನೆಮಾಡಿರಿ; ಎಲ್ಲಾದರಲ್ಲಿಯೂ ಕೃತಜ್ಞತಾಸ್ತುತಿಮಾಡಿರಿ; ಇದೇ ನಿಮ್ಮ ವಿಷಯವಾಗಿ ಕ್ರಿಸ್ತ ಯೇಸುವಿನಲ್ಲಿ ತೋರಿ ಬಂದ ದೇವರ ಚಿತ್ತ.**

ನಾವು ಏಕಕಾಲದಲ್ಲಿ ಎರಡು ವ್ಯತ್ಯಾಸವಾದ ಕೆಲಸಗಳನ್ನು ಹೇಗೆ ಮಾಡಲು ಸಾಧ್ಯ?

ನಾವು ಪ್ರತಿದಿನ ಬೆಳಿಗ್ಗೆ ವ್ಯಾಯಾಮ ಮಾಡಿದರೆ, ನಮ್ಮ ಚಯಾಪಚಯವು ವೇಗಗೊಳ್ಳುತ್ತದೆ ಮತ್ತು ನಾವು ನಮ್ಮ ಮೇಜುಗಳಲ್ಲಿ ಕುಳಿತಾಗಲೂ ಸಹ, ನಮ್ಮ ದೇಹವು ಆ ವ್ಯಾಯಾಮದ ಪ್ರಯೋಜನಗಳನ್ನು ಪಡೆಯುತ್ತಲೇ ಇರುತ್ತದೆ ಎಂದು ನಮಗೆ ತಿಳಿಸಲಾಗಿದೆ. ಪ್ರಾರ್ಥನೆ ಮತ್ತು ಸ್ತುತಿ ನಮ್ಮ ಆತ್ಮಗಳಲ್ಲಿ ಒಂದೇ ಉಳಿದ ಪರಿಣಾಮವನ್ನು ಬೀರುತ್ತವೆ. ನಾವು ಪ್ರಾರ್ಥನೆಗೆ ಮತ್ತು ಸ್ತುತಿಗೆ ಒಂದು ಸಮಯವನ್ನು ಮೀಸಲಿಟ್ಟರೆ, ನಮ್ಮ ಆತ್ಮಗಳು ಇಡೀ ದಿನ ಪ್ರಾರ್ಥನೆ ಮತ್ತು ಸ್ತುತಿಯಲ್ಲಿ ಮುಂದುವರೆಯುತ್ತಾ ಹೋಗುತ್ತವೆ.

**ಯೆಹೋಷಾಫಾಟನು ಮೂರು ದೇಶದ ಸೇನೆಗಳನ್ನು ಎದುರಿಸಿದ್ದು**

ಯೆಹೋಷಾಫಾಟನು ನಮಗೆ ಪ್ರಾರ್ಥನೆ ಮತ್ತು ಸ್ತುತಿಯ ಬಲಕ್ಕೆ ಒಂದು ಅದ್ಭುತವಾದ ಉದಾಹರಣೆಯಾಗಿದ್ದಾನೆ. ಮೂರು ದೇಶಗಳ ರಾಜರುಗಳು ಅವನ ವಿರುದ್ಧ ಯುದ್ಧಕ್ಕೆ ಬಂದಿದ್ದರು ಮತ್ತು ಸ್ವಾಭಾವಿಕವಾಗಿ ಅವನು ಒಂದು ದಿಕ್ಕಿಲ್ಲದ ಸ್ಥಿತಿಯಲ್ಲಿದ್ದನು. ಆದರೆ ಯೆಹೋಷಾಫಾಟನು ಯೆಹೋವನನ್ನು ಹುಡುಕಿದನು ಮತ್ತು ಉಪವಾಸ ಪ್ರಾರ್ಥನೆ ಮಾಡಿದನು.

✳ *ಅವನು ಪ್ರಾರ್ಥಿಸಿದನು*

**2 ಪೂರ್ವ 20:3,5-12 ಯೆಹೋಷಾಫಾಟನು ಹೆದರಿ ಯೆಹೋವನನ್ನೇ ಆಶ್ರಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡು ಯೆಹೂದ್ಯರೆಲ್ಲರೂ ಉಪವಾಸಮಾಡಬೇಕೆಂದು ಪ್ರಕಟಿಸಿದನು.**

**ಯೆಹೂದ್ಯರೂ ಯೆರೂಸಲೇಮಿನವರೂ ಯೆಹೋವನ ಆಲಯದ ಹೊಸ ಪ್ರಾಕಾರದಲ್ಲಿ ಸಭೆಯಾಗಿ ನೆರೆದು ಬಂದಾಗ ಯೆಹೋಷಾಫಾಟನು ಅದರ ಮುಂಗಡೆಯಲ್ಲಿ ನಿಂತು - ಯೆಹೋವನೇ, ನಮ್ಮ ಪಿತೃಗಳ ದೇವರೇ, ಪರಲೋಕದಲ್ಲಿ ದೇವರಾಗಿರುವಾತನು ನೀನಲ್ಲವೋ? ನೀನು ಜನಾಂಗಗಳ ಎಲ್ಲಾ ರಾಜ್ಯಗಳನ್ನು ಆಳುವವನಾಗಿರುತ್ತೀ. ನಿನ್ನ ಹಸ್ತದಲ್ಲಿ ಬಲಪರಾಕ್ರಮಗಳಿರುತ್ತವೆ; ನಿನ್ನೆದುರಿನಲ್ಲಿ ಯಾರೂ ನಿಲ್ಲಲಾರರು.**

**ನಮ್ಮ ದೇವರಾದ ನೀನು ನಿನ್ನ ಪ್ರಜೆಗಳಾದ ಇಸ್ರಾಯೇಲ್ಯರ ಎದುರಿನಿಂದ ಈ ದೇಶದ ನಿವಾಸಿಗಳನ್ನು ಹೊರಡಿಸಿ ದೇಶವನ್ನು ನಿನ್ನ ಸ್ನೇಹಿತನಾದ ಅಬ್ರಹಾಮನ ಸಂತಾನದವರಿಗೆ ಶಾಶ್ವತ ಸ್ವಾಸ್ಥ್ಯವನ್ನಾಗಿ ಕೊಟ್ಟೆಯಲ್ಲಾ. ಅವರು ಈ ದೇಶದಲ್ಲಿ ಇಳುಕೊಂಡು ಇದರಲ್ಲಿ ನಿನ್ನ ಹೆಸರಿಗೋಸ್ಕರ ಪವಿತ್ರಾಲಯವನ್ನು ಕಟ್ಟಿ - ತಮ್ಮ ಮೇಲೆ ಖಡ್ಗವಿಧಿ ಘೋರವ್ಯಾಧಿ ಕ್ಷಾಮ ಮೊದಲಾದ ಆಪತ್ತುಗಳು ಬರುವಾಗ ತಾವು ನಿನ್ನ ನಾಮಮಹತ್ತು ಇರುವ ಈ ಆಲಯದ ಮುಂದೆಯೂ ನಿನ್ನ ಮುಂದೆಯೂ ನಿಂತು ತಮ್ಮ ಇಕ್ಕಟ್ಟಿನಲ್ಲಿ ನಿನಗೆ ಮೊರೆಯಿಡುವದಾದರೆ ನೀನು ಕೇಳಿ ರಕ್ಷಿಸುವಿ ಎಂದುಕೊಂಡರಷ್ಟೆ.**

**ಈ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯೀರ್ ಪರ್ವತಪ್ರದೇಶದವರನ್ನೂ ನೋಡು; ಇಸ್ರಾಯೇಲ್ಯರು ಐಗುಪ್ತದೇಶದಿಂದ ಬರುತ್ತಿದ್ದಾಗ ಇವರ ದೇಶದಲ್ಲಿ ನುಗ್ಗಬಾರದೆಂದು ನಿನ್ನಿಂದ ಅಪ್ಪಣೆಹೊಂದಿ ಇವರನ್ನು ಸಂಹರಿಸದೆ ವಾರೆಯಾಗಿ ಹೋದರಲ್ಲಾ. ಈಗ ಇವರು ಉಪಕಾರಕ್ಕೆ ಅಪಕಾರಮಾಡಿ ನೀನು ನಮಗೆ ಅನುಗ್ರಹಿಸಿದ ಸ್ವಾಸ್ತ್ಯದೊಳಗಿಂದ ನಮ್ಮನ್ನು ಹೊರಪಡಿಸುವದಕ್ಕೋಸ್ಕರ ನಮ್ಮ ಮೇಲೆ ಯುದ್ಧಕ್ಕೆ ಬಂದಿರುತ್ತಾರೆ.**

**ನಮ್ಮ ದೇವರೇ, ಅವರನ್ನು ದಂಡಿಸದೆ ಬಿಡುವಿಯೋ? ನಮ್ಮ ಮೇಲೆ ಬಂದ ಈ ಮಹಾ ಸಮೂಹದ ಮುಂದೆ ನಿಲ್ಲುವದಕ್ಕೆ ನಮ್ಮಲ್ಲಿ ಬಲವಿಲ್ಲ, ಏನು ಮಾಡಬೇಕೆಂಬದೂ ತಿಳಿಯದು; ನಮ್ಮ ಕಣ್ಣುಗಳು ನಿನ್ನನ್ನೇ ನೋಡುತ್ತವೆ ಎಂದು ಪ್ರಾರ್ಥಿಸಿದನು.**

ಯೆಹೋಷಾಫಾಟನ ಪ್ರಾರ್ಥನೆಯ ಪ್ರಗತಿಯನ್ನು ಗಮನಿಸಿರಿ. ದೇವರು ಯಾರು ಮತ್ತು ದೇವರು ಏನು ಮಾಡಿದ್ದಾನೆ ಎಂಬುದನ್ನು ಗುರುತಿಸುವುದರ ಮೂಲಕ ಅವನು ಪ್ರಾರಂಭಿಸುತ್ತಾನೆ. "ದೇವರೇ ನೀನು ನಮಗೆ ಈ ದೇಶವನ್ನು ಕೊಟ್ಟೆ. ನಾವು ನಿಮ್ಮ ಮಾತಿಗೆ ವಿಧೇಯರಾಗಿ ಈ ನಿವಾಸಿಗಳನ್ನು ಜೀವದಿಂದುಳಿಸಿದೆವು" ಎಂದು ಅವನು ದೃಢೀಕರಿಸುತ್ತಾನೆ. ನಂತರ ಒಂದು ಯಥಾರ್ಥವಾದ ಅರಿಕೆಯೊಂದಿಗೆ ಕೊನೆಗೊಳಿಸುತ್ತಾನೆ, "ನಮಗೆ ಏನು ಮಾಡಬೇಕೆಂಬುದು ತಿಳಿಯುತ್ತಿಲ್ಲ, ಆದರೆ ನಮ್ಮ ಕಣ್ಣುಗಳು ನಿಮ್ಮನ್ನೇ ನೋಡುತ್ತವೆ."

✳ *ದೇವರು ಉತ್ತರಿಸಿದರು*

ನಂತರ ದೇವರು ಯೆಗೀಯೇಲನ ಮೂಲಕವಾಗಿ ಉತ್ತರಿಸಿದರು.

**2 ಪೂರ್ವ 20:15b-17 "ಅವನು - ಎಲ್ಲಾ ಯೆಹೂದ್ಯರೇ, ಯೆರೂಸಲೇಮಿನವರೇ, ಅರಸನಾದ ಯೆಹೋಷಾಫಾಟನೇ, ಯೆಹೋವನು ಹೇಳುವದನ್ನು ಕೇಳಿರಿ! ಈ ಮಹಾಸಮೂಹದ ನಿಮಿತ್ತವಾಗಿ ಕಳವಳಗೊಳ್ಳಬೇಡಿರಿ, ಹೆದರಬೇಡಿರಿ, ಯುದ್ಧವು ನಿಮ್ಮದಲ್ಲ, ದೇವರದೇ. ನಾಳೆ ಬೆಳಿಗ್ಗೆ ಅವರಿಗೆ ವಿರೋಧವಾಗಿ ಹೊರಡಿರಿ; ಇಗೋ ಅವರು ಹಚ್ಚೀಚ್ ಗಟ್ಟದ ಮಾರ್ಗವಾಗಿ ಬರುತ್ತಾರೆ. ಯೆರೂವೇಲ್ ಅರಣ್ಯದ ಮುಂದಿರುವ ಕಣಿವೆಯ ತುದಿಯಲ್ಲಿ ಅವರನ್ನು ಸಂಧಿಸುವಿರಿ. ಈ ಸಾರಿ ನೀವು ಯುದ್ಧಮಾಡುವದು ಅವಶ್ಯವಿಲ್ಲ. ಯೆಹೂದ್ಯರೇ, ಯೆರೂಸಲೇಮಿನವರೇ, ಸುಮ್ಮನೆ ನಿಂತುಕೊಂಡು ಯೆಹೋವನು ನಿಮಗೋಸ್ಕರ ನಡಿಸುವ ರಕ್ಷಣಾಕಾರ್ಯವನ್ನು ನೋಡಿರಿ; ಹೆದರಬೇಡಿರಿ, ಕಳವಳಗೊಳ್ಳಬೇಡಿರಿ. ನಾಳೆ ಅವರೆದುರಿಗೆ ಹೊರಡಿರಿ, ಯೆಹೋವನು ನಿಮ್ಮ ಸಂಗಡ ಇರುವನು ಎಂದು ಹೇಳಿದನು."**

✳ *ಸುಮ್ಮನೆ ನಿಂತುಕೊಂಡು*

ಯೆಗೀಯೇಲನು ಹೇಳಿದನು "ಸುಮ್ಮನೆ ನಿಂತುಕೊಂಡು ಯೆಹೋವನು ನಿಮಗೋಸ್ಕರ ಮಾಡುವ ರಕ್ಷಣಾ ಕಾರ್ಯವನ್ನು ನೋಡಿರಿ" ಎಂದು ಹೇಳಿದನು. ಅವರು ನೆಲದ ಮಟ್ಟಿಗೆ ತಲೆ ಬಾಗಿಸಿ ಯೆಹೋವನನ್ನು ಆರಾಧಿಸಿದರು ಮತ್ತು ಯೆಹೋವನನ್ನು ಮಹಾಸ್ವರದಿಂದ ಕೀರ್ತಿಸಿದರು.

**2 ಪೂರ್ವ 20:18,19** ಆಗ ಯೆಹೋಷಾಫಾಟನು ನೆಲದ ಮಟ್ಟಿಗೂ ತಲೆಬಾಗಿಸಿದನು. ಎಲ್ಲಾ ಯೆಹೂದ್ಯರೂ ಯೆರೂಸಲೇಮಿನವರೂ ಯೆಹೋವನ ಮುಂದೆ ಅಡ್ಡ ಬಿದ್ದು ನಮಸ್ಕರಿಸಿದರು. ಆಮೇಲೆ ಲೇವಿಯರಲ್ಲಿ ಕೆಹಾತ್ಯರೂ ಕೋರಹಿಯರೂ ಎದ್ದು ಇಸ್ರಾಯೇಲ್‌ದೇವರಾದ ಯೆಹೋವನನ್ನು ಮಹಾಸ್ವರದಿಂದ ಕೀರ್ತಿಸಿದರು.

✳ *ಯೆಹೋವನಲ್ಲಿ ನಂಬಿಕೆಯಿಡಿರಿ*

ಮರುದಿನ ಬೆಳಿಗ್ಗೆ ಯೆಹೋಷಾಫಾಟನು ದೇವರ ವಾಕ್ಯವನ್ನು ಘೋಷಿಸಿದನು. ಅವನು ಸಮಸ್ಯೆಯ ಬಗ್ಗೆ ಮತ್ತೊಮ್ಮೆ ಮಾತನಾಡಲು ಹೋಗಲಿಲ್ಲ. ಜನರು ಯೆಹೋವನಲ್ಲಿ ಭರವಸವಿಡಬೇಕೆಂದು ಅವರನ್ನು ಪ್ರೋತ್ಸಾಹಿಸಿದನು ಮತ್ತು ಗಾಯನ ಮಾಡುವವರನ್ನು ಸ್ತುತಿ ಮಾಡುವವರನ್ನು ಸೈನ್ಯದ ಮುಂದೆ ಕಳುಹಿಸಿದನು.

**2 ಪೂರ್ವ 20:20,21** ಅವರು ಮರುದಿನ ಬೆಳಿಗ್ಗೆ ಎದ್ದು ತೆಕೋವ ಅರಣ್ಯಕ್ಕೆ ಹೊರಟರು. ಅವರು ಹೊರಡುವಾಗ ಯೆಹೋಷಾಫಾಟನು ನಿಂತು ಅವರಿಗೆ - ಯೆಹೂದ್ಯರೇ, ಯೆರೂಸಲೇಮಿನವರೇ, ನನ್ನ ಮಾತನ್ನು ಕೇಳಿರಿ. ಯೆಹೋವನಲ್ಲಿ ಭರವಸವಿಡಿರಿ, ಆಗ ಸುರಕ್ಷಿತರಾಗಿರುವಿರಿ; ಆತನ ಪ್ರವಾದಿಗಳನ್ನು ನಂಬಿರಿ, ಆಗ ಸಾರ್ಥಕರಾಗುವಿರಿ ಎಂದು ಹೇಳಿದನು.

✳ *ಕರ್ತನಿಗೆ ಹಾಡಿರಿ ಮತ್ತು ಸ್ತುತಿ ಮಾಡಿರಿ*

ಆಮೇಲೆ ಅವನು ಜನರ ಸಮ್ಮತಿಯಿಂದ ಯೆಹೋವನಿಗೋಸ್ಕರ ಗಾಯನಮಾಡುವದಕ್ಕಾಗಿ ಕೆಲವರನ್ನು ಆರಿಸಿಕೊಂಡು ಅವರಿಗೆ - ಪರಿಶುದ್ಧತ್ವವೆಂಬ ಭೂಷಣದೊಡನೆ ಭಟರ ಮುಂದೆ ಹೋಗುತ್ತಾ - ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ, ಆತನ ಕೃಪೆಯು ಶಾಶ್ವತವಾಗಿದೆ ಎಂದು ಭಜಿಸಿರಿ ಎಂಬದಾಗಿ ಆಜ್ಞಾಪಿಸಿದನು."

ಅವರು ಯೆಹೋವನನ್ನು ಸ್ತುತಿಸಿ ಹಾಡುಗಳನ್ನು ಹಾಡುತ್ತಿದ್ದಂತೆ ದೇವರು ಶತ್ರುವಿನ ವಿರುದ್ಧ ಹೊಂಚುಹಾಕುವವರನ್ನು ಇರಿಸಿದ್ದನು. ಶತ್ರುಸೈನ್ಯವು ಪರಸ್ಪರ ಯುದ್ಧ ಮಾಡಿಕೊಂಡು ತಮ್ಮನ್ನು ತಾವೇ ಸಂಹರಿಸಿಕೊಂಡರು.

✳ *ಶತ್ರುಗಳು ತಮ್ಮನ್ನು ತಾವೇ ಸಂಹರಿಸಿಕೊಂಡರು*

**2 ಪೂರ್ವ 20:22,24** ಅವರು ಉತ್ಸಾಹ ಧ್ವನಿಯಿಂದ ಕೀರ್ತಿಸುವದಕ್ಕೆ ಪ್ರಾರಂಭಿಸಲು ಯೆಹೋವನು ಯೆಹೂದ್ಯರಿಗೆ ವಿರೋಧವಾಗಿ ಬಂದ ಅಮ್ಮೋನಿಯರನ್ನೂ ಮೋವಾಬ್ಯರನ್ನೂ ಸೇಯೀರ್ ಪರ್ವತದವರನ್ನೂ ನಶಿಸುವದಕ್ಕೋಸ್ಕರ ಅವರಲ್ಲಿ ಹೊಂಚುಹಾಕುವವರನ್ನು ಇರಿಸಿದ್ದರಿಂದ ಅಮ್ಮೋನಿಯರೂ ಮೋವಾಬ್ಯರೂ ಸೇಯೀರ್ ಪರ್ವತದವರ ಮೇಲೆ ಬಿದ್ದು ಅವರನ್ನು ಪೂರ್ಣವಾಗಿ ಸಂಹರಿಸಿಬಿಟ್ಟರು.

ಯೆಹೂದ್ಯರು ಅರಣ್ಯದಲ್ಲಿನ ಬುರುಜಿಗೆ ಬಂದು ಆ ಸಮೂಹವಿದ್ದ ಕಡೆಗೆ ನೋಡಿದಾಗ ನೆಲದ ಮೇಲೆ ಬಿದ್ದಿರುವ ಹೆಣಗಳು ಹೊರತಾಗಿ ಜೀವದಿಂದುಳಿದವರು ಯಾರೂ ಕಾಣಿಸಲಿಲ್ಲ.

## ಎಲೀಯನು ಮತ್ತು ಬಾಳನ ಪ್ರವಾದಿಗಳು

ಪರಲೋಕದಿಂದ ಬೆಂಕಿಯು ಬಿದ್ದು ಎಲೀಯನ ಯಜ್ಞಬಲಿಯನ್ನು ದಹಿಸಿದಾಗ ದೇವರ ಶಕ್ತಿಯು ಅತ್ಯಂತ ಬಲವಾಗಿ ಪ್ರಕಟವಾಯಿತು. ಎಲೀಯನು ಬಾಳನ ಪ್ರವಾದಿಗಳೊಂದಿಗೆ ಹೋರಾಡಿದಾಗ ಮಾಡಿದ ಪ್ರಾರ್ಥನೆಯು ನೆನಪಿದೆಯೋ?

**1 ಅರಸು 18:36b,37 "ಅಬ್ರಹಾಮ್ ಇಸಾಕ್ ಇಸ್ರಾಯೇಲ್ಯರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲ್ಯರ ದೇವರಾಗಿರುತ್ತೀ ಎಂಬದನ್ನೂ ನಾನು ನಿನ್ನ ಸೇವಕನಾಗಿರುತ್ತೇನೆಂಬದನ್ನೂ ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬದನ್ನೂ ಈಹೊತ್ತು ತೋರಿಸಿ ಕೊಡು. ಕಿವಿಗೊಡು; ಯೆಹೋವನೇ, ಕಿವಿಗೊಡು; ಯೆಹೋವನಾದ ನೀನೊಬ್ಬನೇ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬದನ್ನು ಇವರಿಗೆ ತಿಳಿಯಪಡಿಸು ಎಂದು ಪ್ರಾರ್ಥಿಸಿದನು."**

ಎಲೀಯನು ದೇವರು ಯಾರು ಎಂಬುದನ್ನು ಗುರುತಿಸುತ್ತಾ ತಾನು ವಿಧೇಯತೆಯಲ್ಲಿ ನಡೆಯುತ್ತಿದ್ದೇನೆಂದು ದೇವರಿಗೆ ಜ್ಞಾಪಿಸಿದನು. ಅವನು ತನಗೆ ವಿರೋಧವಾಗಿದ್ದ ಇತರೆ ಯಾಜಕರುಗಳ ಬಗ್ಗೆ ಒಂದು ಮಾತನ್ನೂ ಹೇಳಲಿಲ್ಲ. ಅವನು ಸಮಸ್ಯೆಯ ಬಗ್ಗೆ ಪ್ರಾರ್ಥನೆ ಮಾಡಲಿಲ್ಲ. ಆಕಾಶದಿಂದ ಬೆಂಕಿಯು ಬಿದ್ದು ಬಲಿಯನ್ನು ದಹಿಸಲೆಂದೂ ಸಹ ಅವನು ಬೇಡಿಕೊಳ್ಳಲಿಲ್ಲ. ಎಲೀಯನಿಗೆ ದೇವರ ಮೇಲೆ ಎಷ್ಟು ನಂಬಿಕೆಯಿತ್ತೆಂದರೆ ದೇವರಿಗೆ ಅವೆಲ್ಲವೂ ತಿಳಿದಿದೆ ಎಂಬುದು ಅವನಿಗೆ ಗೊತ್ತಿತ್ತು. ಎಲೀಯನ ಮೇಲ್ಕಂಡ ಸರಳವಾದ ಪ್ರಾರ್ಥನೆಯನ್ನು ಮಾಡಿದನು ಮತ್ತು ದೇವರು ಉತ್ತರಿಸಿದರು.

## ಮೀನಿನ ಹೊಟ್ಟೆಯೊಳಗಿಂದ ಕೃತಜ್ಞತಾಸ್ತುತಿ

ಯೋನನು ಮೀನಿನ ಹೊಟ್ಟೆಯೊಳಗಿಂದ ಮಾಡಿದ ಪ್ರಾರ್ಥನೆಯು ನಮಗೆ ಗೊತ್ತಿದೆ. ಇದು ನಾವು ಓದುವ ಎಲ್ಲಾ ಪ್ರಾರ್ಥನೆಗಳಲ್ಲಿ ಅತ್ಯಂತ ಯಥಾರ್ಥವಾದ ಹಾಗೂ ಹೃದಯಕ್ಕೆ ಮುಟ್ಟುವ ಪ್ರಾರ್ಥನೆಯಾಗಿದೆ. ಯೋನನು ಪ್ರಾರ್ಥಿಸಿದಾಗ ದೇವರು ಅವನನ್ನು ಕಳುಹಿಸಿದ್ದ ದೇಶದ ದಡದಲ್ಲಿ ಮೀನು ಕಾರಿ ಬಿಟ್ಟಿತು.

**ಯೋನ 2:1-9  ಯೋನನು ಆ ಮೀನಿನ ಹೊಟ್ಟೆಯೊಳಗೆ ಇದ್ದುಕೊಂಡು ತನ್ನ ದೇವರಾದ ಯೆಹೋವನಿಗೆ ಹೀಗೆ ಪ್ರಾರ್ಥನೆ ಮಾಡಿದನು. ಇಕ್ಕಟ್ಟಿನಲ್ಲಿ ನಾನು ಯೆಹೋವನಿಗೆ ಮೊರೆಯಿಟ್ಟೆನು; ಆತನು ನನಗೆ ಸದುತ್ತರವನ್ನು ದಯಪಾಲಿಸಿದನು; ಪಾತಾಳದ ಗರ್ಭದೊಳಗಿಂದ ಕೂಗಿಕೊಂಡೆನು, ಆಹಾ, ನನ್ನ ಧ್ವನಿಯನ್ನು ಲಾಲಿಸಿದಿ.**

**ನನ್ನನ್ನು ಸಮುದ್ರದ ಉದರದಲ್ಲಿ, ಅಗಾಧಸ್ಥಳದಲ್ಲಿ ಎಸೆದುಬಿಟ್ಟೆಯಲ್ಲಾ; ಪ್ರವಾಹವು ನನ್ನನ್ನು ಸುತ್ತಿಕೊಂಡಿತು; ಲೆಕ್ಕವಿಲ್ಲದ ನಿನ್ನ ಅಲೆಗಳೂ ತೆರೆಗಳೂ ನನ್ನ ಮೇಲ್ಗಡೆ ಹಾದುಹೋಗುತ್ತಿದ್ದವು. ನಿನ್ನ ಸಾನ್ನಿಧ್ಯದಿಂದ ಬಿಸಾಡಲ್ಪಟ್ಟಿದ್ದೇನೆ ಅಂದುಕೊಂಡೆನು; ಆದರೂ ನಿನ್ನ ಪರಿಶುದ್ಧಾಲಯವನ್ನು ಪುನಃ ದರ್ಶನಮಾಡುವೆನು. ಜಲರಾಶಿಯು ನನ್ನನ್ನು ಮುತ್ತಿ ನನ್ನ ಪ್ರಾಣಕ್ಕೆ ಬಂದಿತ್ತು, ಮಹಾಸಾಗರವು ನನ್ನನ್ನು ಆವರಿಸಿತು, ಪಾಚಿಯು ನನ್ನ ತಲೆಯನ್ನು ಸುತ್ತಿಕೊಂಡಿತು.**

**ಪರ್ವತಗಳ ಬುಡದ ತನಕ ಇಳಿದೆನು, ಭೂಲೋಕದ ಅಗುಳಿಗಳು ಎಂದಿಗೂ ತೆಗೆಯದ ಹಾಗೆ ನನ್ನ ಹಿಂದೆ ಹಾಕಲ್ಪಟ್ಟವು; ನನ್ನ ದೇವರಾದ ಯೆಹೋವನೇ, ನೀನು ನನ್ನ ಪ್ರಾಣವನ್ನು ಅಧೋಲೋಕದೊಳಗಿಂದ ಉದ್ಧರಿಸಿದಿ.**

**ನನ್ನ ಆತ್ಮವು ನನ್ನಲ್ಲಿ ಕುಂದಿದಾಗ ಯೆಹೋವನಾದ ನಿನ್ನನ್ನು ಸ್ಮರಿಸಿದೆನು; ನನ್ನ ಬಿನ್ನಹವು ನಿನಗೆ ಮುಟ್ಟಿತು, ನಿನ್ನ ಪರಿಶುದ್ಧಾಲಯಕ್ಕೆ ಸೇರಿತು ಸುಳ್ಳು ವಿಗ್ರಹಗಳನ್ನು ಅವಲಂಬಿಸಿದವರು ತಮ್ಮ ಕರುಣಾನಿಧಿಯನ್ನು ತೊರೆದುಬಿಡುವರು.**

**ನಾನಾದರೋ ಸ್ತೋತ್ರಧ್ವನಿಯಿಂದ ನಿನಗೆ ಯಜ್ಞವನ್ನರ್ಪಿಸುವೆನು, ಮಾಡಿಕೊಂಡ ಹರಕೆಯನ್ನು ಸಲ್ಲಿಸುವೆನು. ರಕ್ಷಣೆಯು ಯೆಹೋವನಿಂದಲೇ ಉಂಟಾಗುವದು.**

ಅವನು "ನಾನು ಯೆಹೋವನಿಗೆ ಮೊರೆಯಿಟ್ಟೆನು" ಎಂದು ಆರಂಭಿಸಿ "ನನ್ನ ದೇವರಾದ ಯೆಹೋವನೇ" ಎಂಬುದಕ್ಕೆ ಪ್ರಗತಿಯಾಗುವುದನ್ನು ಗಮನಿಸಿರಿ. ಮೀನಿನ ಹೊಟ್ಟೆಯೊಳಗಿಂದಲೂ ಅವನು ಒಂದು ಪ್ರವಾದನಾತ್ಮಕ ಹೇಳಿಕೆಯನ್ನು ಕೊಟ್ಟನು. "ನಿನ್ನ ಸಾನಿಧ್ಯದಿಂದ ಬಿಸಾಡಲ್ಪಟ್ಟಿದ್ದೇನೆ ಅಂದುಕೊಂಡೆನು; ಆದರೂ ನಿನ್ನ ಪರಿಶುದ್ಧಾಲಯವನ್ನು ಪುನಃ ದರ್ಶನ ಮಾಡುವೆನು". ಮೀನಿನ ಹೊಟ್ಟೆಯೊಳಗಿಂದಲೇ ಇದನ್ನೂ ಹೇಳಿದನು, "ನಾನಾದರೋ ಸ್ತೋತ್ರಧ್ವನಿಯಿಂದ ನಿನಗೆ ಯಜ್ಞವನ್ನರ್ಪಿಸುವೆನು".

**ದಾವೀದನು ಸ್ತುತಿಯೊಂದಿಗೆ ಪ್ರಾರ್ಥನೆಯನ್ನು ಧಾರಾಳವಾಗಿ ಬೆರೆಸಿದನು**

ಯಾರೂ ಅರಿಯದ ಒಬ್ಬ ಸಣ್ಣ ಕುರಿ ಮೇಯಿಸುವ ಹುಡುಗನು ಬೆಳೆದು ದೈತ್ಯಶರೀರವುಳ್ಳ ಮನುಷ್ಯನನ್ನು ಸಂಹರಿಸಿದನು, ನಂತರ ದೇಶವಾದ ಮೇಲೆ ದೇಶಗಳನ್ನು ವಶಪಡಿಸಿಕೊಳ್ಳುತ್ತಾ ಇಸ್ರಾಯೇಲ್ ದೇಶದ ಅರಸನಾದನು. ದಾವೀದನ ಜೀವನವು ಸ್ತುತಿಯ ಜೀವಿತವಾಗಿತ್ತು ಮತ್ತು ನಿಶ್ಚಯವಾಗಲೂ ಬಲದಿಂದ ಕೂಡಿದ ಜೀವಿತವಾಗಿತ್ತು. ದಾವೀದನು ದೇವರಿಂದ ಪ್ರೀತಿಸಲ್ಪಟ್ಟ ಮನುಷ್ಯನಾಗಿದ್ದನು. ಕೀರ್ತನೆಯ ಪುಸ್ತಕವು ಸ್ತುತಿ ಮತ್ತು ಪ್ರಾರ್ಥನೆಗಳಿಂದ ತುಂಬಿದ ಪುಸ್ತಕವಾಗಿದೆ. ನಾವು ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ನಮೂದಿಸಲು ಸಾಧ್ಯ.

* *ಅಬ್ಷಾಲೋಮನು ಅವನ ವಿರುದ್ಧ ಬಂದಾಗ*

**ಕೀರ್ತನೆ 3:3-5 ಆದರೂ ಯೆಹೋವನೇ, ನೀನು ನನ್ನನ್ನು ಕಾಯುವ ಗುರಾಣಿ; ನೀನು ನನ್ನ ಗೌರವಕ್ಕೆ ಆಧಾರನೂ ನನ್ನ ತಲೆಯನ್ನು ಎತ್ತುವಂತೆ ಮಾಡುವವನೂ ಆಗಿದ್ದೀ. ನಾನು ಯೆಹೋವನಿಗೆ ಮೊರೆಯಿಡುವಾಗ ಆತನು ತನ್ನ ಪರಿಶುದ್ಧಪರ್ವತದಿಂದ ಸದುತ್ತರವನ್ನು ಅನುಗ್ರಹಿಸುತ್ತಾನೆ. ಸೆಲಾ.**

**ಯೆಹೋವನು ನನ್ನನ್ನು ಕಾಪಾಡುವವನಾದ್ದರಿಂದ ನಾನು ಮಲಗಿಕೊಂಡು ನಿದ್ದೆಮಾಡಿ ಸುಖವಾಗಿ ಎಚ್ಚರಗೊಂಡೆನು**

* *ಸದುತ್ತರವನ್ನು ದಯಪಾಲಿಸು*

**ಕೀರ್ತನೆ 4:1 ನ್ಯಾಯವನ್ನು ಸ್ಥಾಪಿಸುವ ನನ್ನ ದೇವರೇ, ನಿನಗೆ ಮೊರೆಯಿಡುತ್ತೇನೆ; ಸದುತ್ತರವನ್ನು ದಯಪಾಲಿಸು. ನನ್ನನ್ನು ಇಕ್ಕಟ್ಟಿನಿಂದ ಬಿಡಿಸಿ**

ಇಂಬಾದ ಸ್ಥಳದಲ್ಲಿ ಸೇರಿಸಿದಾತನೇ, ನನ್ನನ್ನು ಕರುಣಿಸಿ ನನ್ನ ಪ್ರಾರ್ಥನೆಯನ್ನು ಅಂಗೀಕರಿಸು.

✳ *ನನ್ನ ಮಾತುಗಳಿಗೆ ಕಿವಿಗೊಡು*

**ಕೀರ್ತನೆ 5:1-3** ಯೆಹೋವನೇ, ನನ್ನ ಮಾತುಗಳಿಗೆ ಕಿವಿಗೊಡು; ನನ್ನ ಧ್ಯಾನವನ್ನು ಲಕ್ಷ್ಯಕ್ಕೆ ತಂದುಕೋ. ನನ್ನ ಅರಸೇ, ನನ್ನ ದೇವರೇ, ನಿನ್ನನ್ನೇ ಪ್ರಾರ್ಥಿಸುವೆನು; ನನ್ನ ಮೊರೆಯನ್ನು ಆಲೈಸು. ಯೆಹೋವನೇ, ಉದಯಕಾಲದಲ್ಲಿ ನನ್ನ ಸ್ವರವು ನಿನಗೆ ಕೇಳಿಸುವದು; ಉದಯಕಾಲದಲ್ಲಿಯೇ [ಪ್ರಾರ್ಥನೆಯನ್ನು] ಸಮರ್ಪಿಸಿ ಸದುತ್ತರವನ್ನು ಎದುರುನೋಡುತ್ತಿರುವೆನು.

✳ *ನನ್ನನ್ನು ಕಾಪಾಡು*

**ಕೀರ್ತನೆ 7:1** ಯೆಹೋವನೇ, ನನ್ನ ದೇವರೇ, ನಿನ್ನ ಮರೆಹೊಕ್ಕಿದ್ದೇನೆ; ಹಿಂದಟ್ಟುವವರೆಲ್ಲರಿಂದ ತಪ್ಪಿಸಿ ನನ್ನನ್ನು ಕಾಪಾಡು.

✳ *ನನಗೆ ಆಶಾಭಂಗಪಡಿಸಬೇಡ*

**ಕೀರ್ತನೆ 25:1-5** ಯೆಹೋವನೇ, ನಿನ್ನಲ್ಲಿ ಮನಸ್ಸಿಟ್ಟಿದ್ದೇನೆ; ನನ್ನ ದೇವರೇ, ನಿನ್ನನ್ನೇ ನಂಬಿದ್ದೇನೆ, ನನಗೆ ಆಶಾಭಂಗಪಡಿಸಬೇಡ. ಶತ್ರುಗಳ ಉತ್ಸಾಹಕ್ಕೆ ಆಸ್ಪದಮಾಡಬೇಡ. ವೃಥಾದ್ರೋಹಿಗಳಿಗೆ ಆಶಾಭಂಗವಾಗಬೇಕೇ ಹೊರತು ನಿನ್ನನ್ನು ನಿರೀಕ್ಷಿಸಿದವರಿಗೆ ಎಂದಿಗೂ ಆಗಬಾರದು. ಯೆಹೋವನೇ, ನಿನ್ನ ಮಾರ್ಗವನ್ನು ನನಗೆ ತಿಳಿಸು; ನೀನು ಒಪ್ಪುವ ದಾರಿಯನ್ನು ತೋರಿಸು. ನಿನ್ನ ಸತ್ಯಾನುಸಾರವಾಗಿ ನನ್ನನ್ನು ನಡಿಸುತ್ತಾ ಉಪದೇಶಿಸು; ನೀನೇ ನನ್ನನ್ನು ರಕ್ಷಿಸುವ ದೇವರು; ಹಗಲೆಲ್ಲಾ ನಿನ್ನನ್ನೇ ನಿರೀಕ್ಷಿಸುವವನಾಗಿದ್ದೇನೆ.

**ಕೀರ್ತನೆ 31:1-3** ಯೆಹೋವನೇ, ನಿನ್ನ ಮರೆಹೊಕ್ಕಿದ್ದೇನೆ; ನನಗೆ ಎಂದಿಗೂ ಆಶಾಭಂಗಪಡಿಸಬೇಡ. ನಿನ್ನ ನೀತಿಗನುಸಾರವಾಗಿ ನನ್ನನ್ನು ರಕ್ಷಿಸು. ಕಿವಿಗೊಟ್ಟು ಕೇಳಿ ಬೇಗ ನನ್ನನ್ನು ಬಿಡಿಸು; ನನ್ನನ್ನು ರಕ್ಷಿಸುವ ಆಶ್ರಯಗಿರಿಯೂ ದುರ್ಗಸ್ಥಾನವೂ ಆಗಿರು. ನೀನೇ ನನ್ನ ಬಂಡೆಯೂ ಕೋಟೆಯೂ ಆಗಿದ್ದೀಯಲ್ಲಾ; ಆದದರಿಂದ ನಿನ್ನ ಹೆಸರಿನ ನಿಮಿತ್ತ ದಾರಿತೋರಿಸಿ ನನ್ನನ್ನು ನಡಿಸು.

✳ *ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು*

**ಕೀರ್ತನೆ 40:1-3** ನಾನು ಯೆಹೋವನಿಗೋಸ್ಕರ ನಿರೀಕ್ಷಿಸಿಯೇ ನಿರೀಕ್ಷಿಸಿದೆನು; ಆತನು ನನ್ನ ಮೊರೆಗೆ ಕಿವಿಗೊಟ್ಟು ಲಕ್ಷಿಸಿದನು. ನನ್ನನ್ನು ನಾಶನದ ಗುಂಡಿಯೊಳಗಿಂದ ಎತ್ತಿದನು; ಕೆಸರಿನೊಳಗಿಂದ ನನ್ನನ್ನು ತೆಗೆದು ಬಂಡೆಯ ಮೇಲೆ ನಿಲ್ಲಿಸಿ ನಾನು ದೃಢವಾಗಿ ಹೆಜ್ಜೆಯಿಡುವಂತೆ ಮಾಡಿದನು. ಆತನು ನನ್ನ ಬಾಯಲ್ಲಿ ನೂತನಕೀರ್ತನೆಯನ್ನು ಹುಟ್ಟಿಸಿದ್ದಾನೆ; ಅದು ನಮ್ಮ ದೇವರ ಸ್ತೋತ್ರವೇ. ಆತನ ಮಹತ್ಕಾರ್ಯಗಳನ್ನು ನೋಡಿದ ಅನೇಕರು ಭಯಭಕ್ತಿಯುಳ್ಳವರಾಗಿ ಯೆಹೋವನಲ್ಲಿ ನಂಬಿಕೆಯಿಡುವರು.

✳ *ಮನವು ನಿನ್ನನ್ನು ಬಯಸುತ್ತದೆ*

**ಕೀರ್ತನೆ 42:1,2** ದೇವರೇ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ನನ್ನ ಮನವು ನಿನ್ನನ್ನು ಬಯಸುತ್ತದೆ. ನನ್ನ ಮನಸ್ಸು

**ದೇವರಿಗಾಗಿ, ಚೈತನ್ಯ ಸ್ವರೂಪನಾದ ದೇವರಿಗಾಗಿ ಹಾರೈಸುತ್ತದೆ; ನಾನು ಯಾವಾಗ ಹೋಗಿ ದೇವರ ಸನ್ನಿಧಿಯಲ್ಲಿ ಸೇರುವೆನೋ?**

✱ *ದೇವರೇ, ಕರುಣಿಸು*

**ಕೀರ್ತನೆ 57:1-3  ದೇವರೇ, ಕರುಣಿಸು, ನನ್ನನ್ನು ಕರುಣಿಸು. ನೀನೇ ನನ್ನ ಆಶ್ರಯಸ್ಥಾನವಲ್ಲವೇ! ಆಪತ್ತುಗಳು ಕಳೆದುಹೋಗುವ ತನಕ ನಿನ್ನ ರೆಕ್ಕೆಗಳ ಮರೆಯನ್ನು ಆಶ್ರಯಿಸಿಕೊಳ್ಳುವೆನು. ಪರಾತ್ಪರನಾದ ದೇವರಿಗೆ ಮೊರೆಯಿಡುವೆನು, ನನ್ನ ಕಾರ್ಯವನ್ನು ಸಿದ್ಧಿಗೆ ತರುವ ದೇವರನ್ನು ಕೂಗಿಕೊಳ್ಳುವೆನು. ಆತನು ಪರಲೋಕದಿಂದ ಸಹಾಯಮಾಡಿ ನಿಂದಕರ ಬಾಯಿಗೆ ನನ್ನನ್ನು ತಪ್ಪಿಸುವನು; ಸೇಲಾ. ತನ್ನ ಕಾರುಣ್ಯವನ್ನೂ ಸತ್ಯತೆಯನ್ನೂ ತೋರ್ಪಡಿಸುವನು.**

✱ *ಪಾರುಮಾಡು*

**ಕೀರ್ತನೆ 71:1-3  ಯೆಹೋವನೇ, ನಿನ್ನ ಮರೆ ಹೊಕ್ಕಿದ್ದೇನೆ; ಎಂದಿಗೂ ಆಶಾಭಂಗಪಡಿಸಬೇಡ. ನೀತಿಸ್ಥಾಪಕನಾದ ನೀನು ನನ್ನನ್ನು ಬಿಡಿಸಿ ಪಾರುಮಾಡು; ನನ್ನ ಪ್ರಾರ್ಥನೆಗೆ ಕಿವಿಗೊಟ್ಟು ಉದ್ಧರಿಸು. ನಾನು ಯಾವಾಗಲೂ ಮರೆಹೊಗುವ ಆಶ್ರಯಗಿರಿಯಾಗಿರು; ನನ್ನ ರಕ್ಷಣೆಗೋಸ್ಕರ ಆಜ್ಞಾಪಿಸಿದ್ದೀಯಲ್ಲವೇ. ನೀನೇ ನನ್ನ ಬಂಡೆಯೂ ಕೋಟೆಯೂ ಆಗಿದ್ದೀಯಲ್ಲಾ..**

**ಪರಾತ್ಪರನ ಮೊರೆ ಹೊಕ್ಕಿರುವುದು**

ನಾವು ಕ್ರಿಸ್ತನಲ್ಲಿ ನೆಲೆಗೊಳ್ಳುವಾಗ ದೇವರ ಆರಾಧಕರಾಗುತ್ತೇವೆ. ನಾವು ಆತನ ಅತೀ ಪರಿಶುದ್ಧ ಸ್ಥಳದಲ್ಲಿರುವ ಪ್ರಸನ್ನತೆಯೊಂದಿಗೆ ನಿಕಟವಾಗಿ ಜೀವಿಸುವಾಗ ಪರಾತ್ಪರನ ಮೊರೆಹೊಕ್ಕುತ್ತೇವೆ.

**ಕೀರ್ತನೆ 91:1  ಪರಾತ್ಪರನ ಮರೆಹೊಕ್ಕಿರುವವನು ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತನಾಗಿರುವನು.**

ನಾವು ಆರಾಧನೆಯ ಜೀವನಶೈಲಿಯೊಂದಿಗೆ ಆತನ ಸಿಂಹಾಸನದ ಮುಂದೆ ತಲೆಬಾಗುವಾಗ ಸರ್ವಶಕ್ತನ ಆಶ್ರಯದಲ್ಲಿ ಸುರಕ್ಷಿತವಾಗಿರುತ್ತೇವೆ. ನಾವು ಈ ಸ್ಥಳದಲ್ಲಿಯೇ ಆತನಲ್ಲಿ ಉಲ್ಲಾಸಿಸುತ್ತೇವೆ. ಈ ಸ್ಥಳದಲ್ಲಿಯೇ ಆತನ ಚಿತ್ತವು ನಮ್ಮ ಬಯಕೆಗಳಾಗುತ್ತವೆ.

**ಕೀರ್ತನೆ 40:8  ನನ್ನ ದೇವರೇ, ನಿನ್ನ ಚಿತ್ತವನ್ನು ಅನುಸರಿಸುವದೇ ನನ್ನ ಸಂತೋಷವು; ನಿನ್ನ ಧರ್ಮೋಪದೇಶವು ನನ್ನ ಅಂತರಂಗದಲ್ಲಿದೆ.**

**ಕೀರ್ತನೆ 37:4  ಆಗ ಯೆಹೋವನಲ್ಲಿ ಸಂತೋಷಿಸುವಿ; ಮತ್ತು ಆತನು ನಿನ್ನ**

**ಇಷ್ಟಾರ್ಥಗಳನ್ನು ನೆರವೇರಿಸುವನು.**

ನಾವು ಆತನೊಂದಿಗೆ ಒಂದು ಆಳವಾದ ಮತ್ತು ನಿಕಟವಾದ ಅನ್ಯೋನತೆಯಲ್ಲಿ ನೆಲೆಗೊಳ್ಳುವಾಗ ಆತನ ಚಿತ್ತವೇ ನಮ್ಮ ಚಿತ್ತವಾಗಿ ಮಾರ್ಪಡುತ್ತದೆ. ಆಗ ನಾವು ಸುಮ್ಮನೇ ಕೇಳುತ್ತೇವೆ ಮತ್ತು ಆತನು ನಮ್ಮ ಹೃದಯದ ಮಾರ್ಪಟ್ಟ ಬಯಕೆಗಳನ್ನು ಹಾಗೆಯೇ ಕೊಡುತ್ತಾನೆ.

ಯೇಸು ಏನು ಹೇಳಿದರು?

**ಯೋಹಾನ 15:7  ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲೆಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು.**

**ಸಾರಾಂಶ - "ನೀವು ನನ್ನಲ್ಲಿ ನೆಲೆಗೊಳ್ಳುವುದಾದರೆ"**

ದೇವರ ಸ್ತ್ರೀ-ಪುರುಷರೇ, ನಮಗಿರುವ ಸೌಭಾಗ್ಯವು ಎಷ್ಟು ಅದ್ಭುತವಾದದ್ದು - ಎಷ್ಟು ಅದ್ಭುತವಾದ ಜವಾಬ್ದಾರಿ. ನಾವು ಪಾಳೆಯದ ಹೊರಗೆ ಬರೋಣ. ನಾವು ದೇವರ ಪ್ರಸನ್ನತೆಯೊಳಗೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗೋಣ. ನಾವು ಮುಂಜಾನೆ, ಮಧ್ಯಾಹ್ನ ಮತ್ತು ರಾತ್ರಿ ಆತನಿಗೆ ಕೃತಜ್ಞತೆ ಸಲ್ಲಿಸುವುದನ್ನು ಕಲಿತುಕೊಳ್ಳೋಣ. ನಾವು ಆತನ ಪಾದದ ಬಳಿಯಲ್ಲಿ ಕುಳಿತುಕೊಂಡು ಆತನನ್ನು ಆರಾಧಿಸಲು ಕಲಿತುಕೊಳ್ಳೋಣ ಆಗ ನಾವು ಆತನ ಸ್ವರೂಪಕ್ಕೆ ಹೆಚ್ಚು ಹೆಚ್ಚಾಗಿ ಮಾರ್ಪಾಡು ಹೊಂದಲು ಸಾಧ್ಯವಾಗುತ್ತದೆ. ನಾವು ಜಯಕ್ಕಾಗಿ ನಮ್ಮ ಸ್ಥಾನವನ್ನು ತೆಗೆದುಕೊಳ್ಳೋಣ! ನಮ್ಮ ಭೂಮಿಯಲ್ಲಿ ಆತನ ಚಿತ್ತವು ಅಸ್ತಿತ್ವಕ್ಕೆ ಬರುವಂತೆ ಪ್ರಾರ್ಥಿಸೋಣ. ನಾವು ಪರಲೋಕವನ್ನು ಭೂಲೋಕಕ್ಕೆ ತರೋಣ!

**ವಿಮರ್ಶೆಗಾಗಿ ಪ್ರಶ್ನೆಗಳು**

1. ಪ್ರಾರ್ಥನೆಯನ್ನು ಪ್ರವೇಶಿಸುವ ಮಾದರಿ ಏನು?

2 2 ಪೂರ್ವಕಾಲವೃತ್ತಾಂತ 20: 18 ರಲ್ಲಿ, ದೇವರು ಯೆಹೋಷಾಫಾಟನಿಗೆ ವಿಜಯಕ್ಕಾಗಿ ಸಿದ್ಧಗೊಳ್ಳುವಂತೆ ಹೇಳಿದನು. ಯೆಹೋಷಾಫಾಟನು ಏನು ಮಾಡಿದನು?

3. ವಿಶ್ವಾಸಿಗಳು ಬಿಟ್ಟುಬಿಡದೆ ಯಾವಾಗಲೂ ಪ್ರಾರ್ಥಿಸಬೇಕು ಮತ್ತು ಸ್ತುತಿಸಬೇಕು ಎಂದು ದೇವರು ಯಾಕೆ ಹೇಳಿದರು?

4. ಪ್ರಾರ್ಥನೆಗೆ ನಿಮ್ಮದೇ ಆದ ವ್ಯಾಖ್ಯಾನವನ್ನು ಬರೆಯಿರಿ.